ಬೆಳ್ಳಿ ಮಾಲಿಕೆ



ಗದಗ ಜಿಲ್ಲೆಯ

# ಜನಪದ ಕಲಾವಿದರು

ಪ್ರೊ. ಸಿದ್ದಣ್ಣ ಎಫ್. ಜಕಬಾಳ



ಗದಗ ಜಿಲ್ಲೆಯ

# ಜನಪದ ಕಲಾವಿದರು

ಪ್ರೊ. ಸಿದ್ದಣ್ಣ ಎಫ್. ಜಕಬಾಳ

ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

**GADAGA JILLA JANAPADA KALAVIDARU**
Written by **Pro. Siddanna F. Jakabala**

Published by: Dr. S. Prasadaswamy
Registrar
Karnataka Janapada Academy
Kannada Bhavan, J.C. Road
Bangalore - 02

Page : x + 118
Price: Rs. 60/-
Rights: Author

ಪ್ರತಿಗಳು: 500

ಪ್ರಕಾಶಕರು: ಡಾ. ಎಸ್. ಪ್ರಸಾದಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ: 080-22215509

ಮುದ್ರಕರು:
ಅವಿರತ ಪುಸ್ತಕ, ನಂ. 70, 9ನೇ ಕ್ರಾಸ್
1ನೇ ಮುಖ್ಯರಸ್ತೆ, ಆವಲಹಳ್ಳಿ
ಬಿಡಿಎ ಲೇಔಟ್, ಬೆಂಗಳೂರು - 85

# ಅಧ್ಯಕ್ಷರ ನುಡಿ

ಅಕಾಡೆಮಿ ಈ ಅವಧಿಯಲ್ಲಿ ಮಹತ್ವದ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಜಾನಪದದ ಬೌದ್ಧಿಕ ಅಧ್ಯಯನ ಹಾಗೂ ಪ್ರದರ್ಶನ, ಸಂರಕ್ಷಣೆಗಳು ಈ ಯೋಜನೆಯ ಹಿನ್ನೆಲೆಯಾಗಿವೆ. ಪ್ರಕಟಣೆಗೆ ಒತ್ತು ನೀಡುವ ಅಗತ್ಯ-ಸಂದರ್ಭಗಳ ಕಾರಣದಿಂದ ತ್ರೈಮಾಸಿಕ, ಮಹಾಪ್ರಬಂಧ, ಅಪ್ರಕಟಿತ ಲೇಖನ ಸಂಗ್ರಹಗಳ ಪ್ರಕಟಣೆಯ ಜೊತೆ ಜಾನಪದಕ್ಕಾಗಿ ದುಡಿವ, ಬದುಕನ್ನು ಮುಡಿಪಾಗಿಟ್ಟಿರುವ ಕಲಾವಿದರ ಪರಿಚಯದ ಕೃತಿಗಳು ಈ ದಿಸೆಯಲ್ಲಿ ಮುಖ್ಯವಾದುವು.

'ಜಾನಪದ ತಲೆಮಾರು' ಮಾಲಿಕೆಯ ಐದನೆ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ. ಇದರೊಡನೆ ಕನ್ನಡ, ಇಂಗ್ಲಿಷ್‌ನಲ್ಲಿ ಜಾನಪದ ಕುರಿತ ಗ್ರಂಥವೊಂದರ ಪ್ರಕಟಣೆಯ ಯೋಜನೆಯಿದೆ.

ಗದಗ ಜಿಲ್ಲೆಯ ಕಲಾವಿದರ ಪರಿಚಯದ ಈ ಕೃತಿ ಮಾಹಿತಿಯುಕ್ತ. ಸರಳತೆ, ಸ್ಪಷ್ಟತೆ ಇದರ ಗುಣ. ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಈ ಪ್ರಯತ್ನ ಜನಪದರ ಅಸ್ತಿತ್ವದ ಗುರುತೂ ಹೌದು. 'ಬೆಳ್ಳಿಮಾಲಿಕೆ'ಯ ಈ ಕೃತಿಯನ್ನು ರೂಪಿಸಿದ ಪ್ರೊ : ಸಿದ್ದಣ್ಣ ಎಫ್. ಜಕಬಾಳ ಅವರಿಗೆ, ಸಹಕರಿಸುವ ಅಕಾಡೆಮಿ ಸದಸ್ಯರಿಗೆ, ರಿಜಿಸ್ಟ್ರಾರ್ ಅವರಿಗೆ, ಕಛೇರಿ ಸಿಬ್ಬಂದಿಗೆ ಮತ್ತು ಓದುಗರಿಗೆ ಕೃತಜ್ಞತೆಗಳು.

**ಗೊ.ರು.ಚನ್ನಬಸಪ್ಪ**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

# ಕೆಲಮಾತು

ಅಕಾಡೆಮಿಗೆ ಇಪ್ಪತ್ತೈದು ವರ್ಷ ತುಂಬಿದ ನೆನಪಿನ 'ಬೆಳ್ಳಿ ಮಾಲಿಕೆ'ಯಲ್ಲಿ ಈಗಾಗಲೇ ಹತ್ತು ಪುಸ್ತಕ ಹೊರಬಂದಿವೆ. ಈಗಿನ ನಾಲ್ಕು ಸೇರಿದಲ್ಲಿ ಹದಿನಾಲ್ಕು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅಕಾಡೆಮಿ ಮಹತ್ವದ ಹೆಜ್ಜೆಗುರುತುಗಳನ್ನು ದಾಖಲಿಸಿದೆ. ಈ ಹಿಂದಿನ ಅಧ್ಯಕ್ಷರು ಒಂದೊಂದು ಆಯಾಮ ಜೋಡಿಸಿ ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಬಹುಮುಖಿ ಹಾಗೂ ಜನಮುಖಿತ್ವಗಳನ್ನು ಕಲ್ಪಿಸಿರುವುದು ವೇದ್ಯ.

ಮಾನ್ಯ ಗೊ.ರು.ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಅಕಾಡೆಮಿ ಇನ್ನಷ್ಟು ಕ್ರಿಯಾಶೀಲವಾಗಿದೆ. 'ಜನಪದ ಜಗಲಿ', 'ಜಾನಪದ ಸಂಭ್ರಮ', 'ಗ್ರಾಮೀಣ ಚಿತ್ರಕಲಾ ಪ್ರದರ್ಶನ' ಮೊದಲಾದ ಹಲವು ಹತ್ತು ಯೋಜನೆಗಳು ಕಾರ್ಯಗತವಾಗುತ್ತಲಿವೆ. ಅಂತೆಯೇ 'ಜಾನಪದ ತಲೆಮಾರು' ಮಾಲಿಕೆಯ ಐದನೇ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲಾ ಕಲಾವಿದರ ಪರಿಚಯ ಮಾಲಿಕೆ ಯೋಜನೆ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಗ್ರಾಮೀಣ ಪ್ರತಿಭೆಗಳ ಅನಾವರಣಕ್ಕೆ, ಪರಿಚಯಕ್ಕೆ ಉತ್ತಮ ವೇದಿಕೆಯಾಗಿರುವ ಈ ಯೋಜನೆಗೆ ಅಕಾಡೆಮಿ ಮರುಚಾಲನೆ ನೀಡಿದೆ.

'ಬೆಳ್ಳಿ ಮಾಲಿಕೆ'ಯ ಸರಣಿಗೆ ಈ ಕೃತಿ ಹೊಸ ಸೇರ್ಪಡೆ. ಗದಗ ಜಿಲ್ಲೆಯ ಜಾನಪದ ಕಲಾವಿದರನ್ನು ಕುರಿತ ಈ ಕೃತಿ ಮಾಹಿತಿಗಳ ತೌರಾಗಿದೆ. ಕನ್ನಡ ಸಂಸ್ಕೃತಿ ಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುತ್ತಿರುವ ಈ ಅಪೂರ್ವ ಕಲಾವಿದರ ಮಾಹಿತಿ ನೀಡುವ ಈ ಕೃತಿ ಅಕಾಡೆಮಿಯ ಹೆಮ್ಮೆಯ ಪ್ರಕಟಣೆಯಾಗಿದೆ.

ಈ ಕಲಾವಿದರ ಮಾಹಿತಿಯನ್ನು ಕಲೆಹಾಕಿ, ಸಂಗ್ರಹಗೊಳಿಸಿ, ಸೂಕ್ತ ಪ್ರಸ್ತಾವನೆ ನೀಡಿರುವ ಪ್ರೊ : ಸಿದ್ದಣ್ಣ ಎಫ್. ಜಕಬಾಳ ಅವರಿಗೆ, ಅಂತೆಯೇ ಅಕಾಡೆಮಿ ಸದಸ್ಯರಿಗೆ ಮತ್ತು ಸ್ಥಾಯಿಸಮಿತಿ ನೀಡಿದ ಸಹಕಾರಕ್ಕಾಗಿ ವಿಶೇಷ ನೆನೆಕೆಗಳು.

ಅಕಾಡೆಮಿಯ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್.ಜಯರಾಮರಾಜೇ ಅರಸು

ಅವರಿಗೆ, ಆಗಾಗ ಸೂಕ್ತ ಸಲಹೆಗಳ ಮೂಲಕ ಅಕಾಡೆಮಿಯ ಕಾರ್ಯಗಳಿಗೆ ನಿರ್ದಿಷ್ಟತೆಯನ್ನು ಒದಗಿಸಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೆ ವಂದನೆಗಳು.

ಅಕಾಡೆಮಿಯ ಸಿಬ್ಬಂದಿಗಳಾದ ಪ್ರಕಾಶ್, ನಾಗರತ್ನ, ಶಿವಲಿಂಗಯ್ಯ, ಕಲ್ಪನಾ ಅವರ ಸಹಕಾರ ಅಪೂರ್ವವಾದುದು.

ಈ ಕೃತಿಯ ಕರಡು ತಿದ್ದಿ, ಪುಸ್ತಕದ ಸೊಗಸಿಗೆ ಕಾರಣರಾಗಿರುವ ಸಂಗ್ರಹಕಾರರಾದ ಪ್ರೊ : ಸಿದ್ದಣ್ಣ ಎಫ್. ಜಕಬಾಳ ಅವರಿಗೆ, ಸುಂದರವಾಗಿ ಮುದ್ರಿಸಿರುವ ಬೆಂಗಳೂರಿನ ಅವರಿಗೆ ಪುಸ್ತಕದವರಿಗೆ, ಓದುವ ಸಹೃದಯರಿಗೆ ಅನಂತ ನಮನಗಳು.

**ಡಾ. ಎಸ್. ಪ್ರಸಾದಸ್ವಾಮಿ**<br>
ರಿಜಿಸ್ಟ್ರಾರ್<br>
ಕರ್ನಾಟಕ ಜಾನಪದ ಅಕಾಡೆಮಿ<br>
ಬೆಂಗಳೂರು

# ಗದಗ ಜಿಲ್ಲೆಯ ಜನಪದ ಕಲಾವಿದರು


- ಪ್ರಸ್ತಾವನೆ 1
- ಮಲ್ಲಿಕಾರ್ಜುನ ನಾಗಪ್ಪ ಪೂಜಾರ 5
- ರಾಮಣ್ಣ ಸಿದ್ದಪ್ಪ ಜೋಗೆರ 6
- ರಾಮಪ್ಪ ದ್ಯಾಮಪ್ಪ ಕೊರವರ 10
- ರಾಮಪ್ಪ ಬಸಪ್ಪ ಕಡ್ಡಿ 12
- ವೀರಪ್ಪ ಮಹದೇವಪ್ಪ ಹಿಂಜೆಡಿ 14
- ಹನಮಪ್ಪ ಸತ್ಯಪ್ಪ ಮರ್ಲಾಪುರ 18
- ಮಾರುತೆಪ್ಪ ಬಲವಂತಪ್ಪ ಭಜಂತ್ರಿ 20
- ಶರಣಪ್ಪ ವಿರುಪಾಕ್ಷಪ್ಪ ಭಜಂತ್ರಿ 22
- ಯಲ್ಲಪ್ಪ ಈರಪ್ಪ ತಾಳಿ 24
- ಬಸವಂತಪ್ಪ ಸಂಗಪ್ಪ ಕರ್ಕಿಕಟ್ಟಿ 27
- ಹುಲಗಪ್ಪ ಮುದಕಪ್ಪ ಬಜಂತ್ರಿ 29
- ವಿರುಪಾಕ್ಷಪ್ಪ ಬಸಪ್ಪ ಕೊಳ್ಳಿ 32
- ಚನ್ನಪ್ಪ ವೀರಪ್ಪ ಅಂಗಡಿ 35
- ಹನಮಪ್ಪ ಯಮನಪ್ಪ ರಂಗಣ್ಣವರ 39
- ಯಲ್ಲಪ್ಪ ದುರಗಪ್ಪ ವಿಭೂತಿ 42
- ವೀರಪ್ಪ ದೊಡ್ಡದುರಗಪ್ಪ ಗಡ್ಡದ 44
- ರಾಮಪ್ಪ ಲಕ್ಷ್ಮಪ್ಪ ಸಣ್ಣದಾಸರು 45
- ಹುಲಗಪ್ಪ ಗಂಗಪ್ಪ ಸಣ್ಣದಾಸರು 47
- ನಾಗಪ್ಪ ಮಾರೆಪ್ಪ ದುರಗಮರ್ಗಿ 49
- ಯಲ್ಲಪ್ಪ ಮಾರೆಪ್ಪ ದುರಗಮರ್ಗಿ 50
- ಲಕ್ಷ್ಮವ್ವ ಗಿರಿಯಪ್ಪ ಗೌಳಿ 52
- ಸುಲೋಚನಾ ವಿಶ್ವನಾಥ ಅರಸಿದ್ಧಿ 54
- ಈರಣ್ಣ ವಿರುಪಾಕ್ಷಪ್ಪ ಐಲಿ 56
- ಈಶ್ವರಪ್ಪ ಬಸಪ್ಪ ಕುರ್ತಕೋಟಿ 58

- ಉಮೇಶಪ್ಪ ಜಗನ್ನಾಥಪ್ಪ ಅಂಬ್ರದ 60
- ಗಣಪತಸಾ ರೇವಣಸಾ ಅರವಟಗಿ 62
- ಜಗನ್ನಾಥ ಶಿವಪ್ಪ ಅಂಬ್ರದ 63
- ಪುಂಡಲೀಕಪ್ಪ ರಾಮಚಂದ್ರಪ್ಪ ಬಣ್ಣದ 66
- ಫಕೀರಪ್ಪ ವಿರುಪಾಕ್ಷಪ್ಪ ಕೆಂಚಗೊಂಡಿ 68
- ಫಕೀರಪ್ಪ ಹನಮಪ್ಪ ತುರಾಯದ 69
- ಬಡೆಸಾಬ ಹುಚ್ಚುಸಾಬ ನದಾಫ. 70
- ಬಸಪ್ಪ ದುಡಮಪ್ಪ ಸರಲಾ 72
- ಬಾಬುಸಾಬ ಹುಸೇನಸಾಬ ಯಮನೂರ 74
- ಮಾರುತೆಪ್ಪ ಪರಮೇಶ್ವರಪ್ಪ ಇಂಡಿ 76
- ಯಮನೂರಸಾಬ ಜಂದಿಸಾಬ ನದಾಫ 77
- ರಾಮಣ್ಣ ನಾಗಪ್ಪ ಶೆಡ್ಡಿ 78
- ಲಕ್ಷ್ಮಪ್ಪ ವೀರಪ್ಪ ಗಡಾದ 80
- ವೆಂಕಣ್ಣ ನರಸಪ್ಪ ಕಾಮಾರ್ತಿ 83
- ಶರಣಪ್ಪ ಹನಮಪ್ಪ ಕಬ್ಬೇರ (ಬೆನಕಲ್) 85
- ಶೇಖಪ್ಪ ಹನಮಪ್ಪ ರಂಗಣ್ಣವರ 87
- ಹನಮಪ್ಪ ಭೀಮಪ್ಪ ಕರಿ 90
- ಹನಮಪ್ಪ ರಂಗಪ್ಪ ಕೆಳಗಡಿ 94
- ಹಸನಸಾಬ ಫಕೀರಸಾಬ ನದಾಫ್ 96
- ಹುಚ್ಚಪ್ಪ ನಾಗಪ್ಪ ಗೊಟೂರ 99
- ಹುಸೇನಸಾಬ ರಾಜಾಸಾಬ ಬಾಲೇಸಾಬನವರ 100
- ವೀರಪ್ಪ ಕಾಳಪ್ಪ ಮನವಾಚಾರಿ 102
- ಸಾಲವ್ವ ಹನಮಪ್ಪ ಲಮಾಣಿ 104
- ರಾಮಪ್ಪ ಹಾಮಪ್ಪ ಲಮಾಣಿ 106
- ದೇವಕ್ಕ ಗುರುಬಸಪ್ಪ ಈಟಿ 108
- ಸುಬ್ಬವ್ವ ಭೀಮಸಿಂಗ ಕಾರಬಾರಿ 110
- ಕಲಾವಿದರ ವಿಳಾಸಗಳು. 112

# ಪ್ರಸ್ತಾವನೆ

ಉತ್ತರ ಕರ್ನಾಟಕದ ಬಯಲು ಸೀಮೆಯ ಬಿಸಿಲು-ಬರಗಾಲದ ನಾಡೆಂದೇ ಪ್ರಸಿದ್ಧವಾದ ಗದಗ ಜಿಲ್ಲೆಯೂ ಸಾಂಸ್ಕೃತಿಕ ಸಿರಿವಂತಿಕೆಗೂ ಅಷ್ಟೇ ಪ್ರಸಿದ್ಧವಾಗಿದೆ. ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ, ಆಧ್ಯಾತ್ಮಿಕತೆ ಹಾಗೂ ಭೌಗೋಳಿಕವಾಗಿ ತನ್ನದೇಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಅಷ್ಟೇ ಅಲ್ಲದೇ ತನ್ನದೆಆದ ವೈವಿಧ್ಯಮಯ ಜನಪದ ಸಂಸ್ಕೃತಿಯನ್ನು ಸದಾ ಬೆಳೆಸುತ್ತ ಉತ್ತಮೋತ್ತಮ ಪ್ರದರ್ಶನಗಳನ್ನು ನೀಡುತ್ತ ಬಂದಿರುವುದು ಈ ಸೀಮೆಯ ವಿಶೇಷವೆಂದೆ ಹೇಳಬೇಕು.

ನರಗುಂದ, ರೋಣ, ಗದಗ, ಶಿರಹಟ್ಟಿ ಮತ್ತು ಮುಂಡರಗಿ ತಾಲೂಕುಗಳನ್ನೊಳಗೊಂಡ ನಮ್ಮ ಗದಗ ಜಿಲ್ಲೆಯು ಕುಮಾರವ್ಯಾಸ, ಚಾಮರಸರಂತಹ ಶಿಷ್ಟಕವಿಗಳನ್ನು; ನಯಸೇನ, ದುರ್ಗಸಿಂಹರಂತಹ ಜನಪದ ಕವಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದೆ. ಇಂಥ ಮಹಾಕವಿಗಳ ನಾಡಾದ ಗದಗ ಜಿಲ್ಲೆಯ ಜನತೆ ತಮ್ಮ ಸಾಂಸ್ಕೃತಿಕ ಪರಂಪರೆಗೆ ಸಂಬಂಧಿಸಿದಂತೆ ಆಚರಣೆ, ಸಂಪ್ರದಾಯ, ನಂಬಿಕೆ ಹಾಗೂ ನಡಾವಳಿಕೆಗಳನ್ನು ಹಾಡಾಗಿ, ಕುಣಿತಗಳಾಗಿ, ವಾದ್ಯಮೇಳಗಳಾಗಿ, ಕಥೆ, ಗಾದೆ-ಒಗಟು-ಒಡಪುಗಳ ಮೂಲಕ ತಮ್ಮ ಮೌಖಿಕ ಪರಂಪರೆಯನ್ನು ಯಥಾವತ್ತಾಗಿ ಕಾಯ್ದುಕೊಂಡು ಬಂದಿರುವುದು ನಮ್ಮ ಜನಪದ ಸಂಸ್ಕೃತಿಯ ಸಿರಿವಂತಿಕೆಗೆ ಸಾಕ್ಷಿಯಾಗಿದೆ.

ಡೊಳ್ಳು ಕುಣಿತ, ವೀರಭದ್ರನ ಕುಣಿತ, ಗೊರವರ ಕುಣಿತ, ಹೋಳಿ ಕುಣಿತ, ಲಂಬಾಣಿ ಕುಣಿತ, ಚೌಡಕಿ ಮೇಳ, ಗೊಂದಲಿಗರ ಮೇಳ, ಕರಡಿ ಮೇಳ, ಹೆಜ್ಜೆ ಮೇಳ, ಹಂತಿಪದ, ಸೋಬಾನಪದ, ಭಜನೆಪದಗಳು, ದೊಡ್ಡಾಟ, ಸಣ್ಣಾಟ, ಮೋಡಿ ಆಟ ಹೀಗೆ ಹತ್ತು ಹಲವಾರು ಜನಪದ ಕಲೆಗಳನ್ನು ತಲೆಮಾರಿನಿಂದ ತಲೆಮಾರಿಗೆ ನೆಲೆಯೂರತ್ತ, ನಮ್ಮ ಜನಪದ ಸಂಸ್ಕೃತಿಯ ಸಿರಿವಂತಿಕೆಯನ್ನು ಉಳಿಸಿ-ಬೆಳೆಸುವಲ್ಲಿ ಈ ಭಾಗದ ಹಿರಿಯ ಜನಪದ ಕಲಾವಿದರು ತೋರಿದ ಆದರ್ಶ ಅಪಾರವಾದ ಗೌರವವನ್ನು ಪಡೆದಿದೆ.

ನಮ್ಮ ಈ ನೆಲದಲ್ಲಿ ಅಪರಿಮಿತವಾದ ಜನಪದ ಸಾಹಿತ್ಯ ಹಾಗೂ ಸಂಸ್ಕೃತಿ ಹುದುಗಿಕೊಂಡಿದೆ. ಹಾಡು, ಗಾದೆ, ಕಥೆಗಳು, ರ್‍ವಾಣಗಳು, ಜನಪದ ಖಂಡ ಹಾಗೂ ಮಹಾಕಾವ್ಯಗಳು ಮೌಖಿಕವಾಗಿ ರಾರಾಜಿಸುತ್ತಿವೆ. ಆದರೆ ಅವುಗಳ ಸಂಗ್ರಹ ಹಾಗೂ ಸಂಶೋಧನೆಯ ಕಾರ್ಯ ಇನ್ನೂ ನಡೆಯಬೇಕಾಗಿದೆ. ಅದರ ಜೊತೆಜೊತೆಯಲ್ಲಿಯೇ ಜನಪದ ಹಾಡುಗಳ ತಾಳ, ಲಯ ಹಾಗೂ ಸಂಗೀತ ಸಂಯೋಜನೆಯ ಕಾರ್ಯ ಶಾಸ್ತ್ರೀಯ ಸಂಗೀತದ ಹಿನ್ನೆಲೆಯಲ್ಲಿ ನಡೆಯುವುದು ತುಂಬಾ ಅವಶ್ಯಕವೆನಿಸುತ್ತದೆ. ಏಕೆಂದರೆ ನಮ್ಮ ಸೋಬಾನದ ಹಾಡುಗಳು ದೇಶರಾಗದ ಛಾಯೆಯನ್ನು ಪಡೆದುಕೊಂಡರೆ, ಚೌಡಕಿ ಪದಗಳು ದುರ್ಗಾರಾಗದ ಛಾಯೆಯನ್ನು ಪಡೆಯುತ್ತವೆ, ಹೀಗಾಗಿ ನಮ್ಮ ಪ್ರತಿಯೊಂದು ಹಾಡುಗಳು ತಮ್ಮ ಮೂಲದಾಟಿಯೊಂದಿಗೆ ಒಂದೊಂದು ರಾಗದ ಛಾಯೆಯನ್ನು ಪಡೆಯುವುದರಿಂದ ಮೂಲದಾಟಿಯ ಹಾಡುಗಳಿಗೆ ನೊಟೆಶನ್ ಹಾಕಿ; ರಾಗ-ತಾಳಗಳನ್ನು ಗುರುತಿಸಿ ಪ್ರಕಟಿಸಿದರೆ ಮುಂಬರುವ ಹಾಡುಗಾರರಿಗೆ ಅಂಥಾ ಹಾಡುಗಳನ್ನು ಅವುಗಳ ಮೂಲದಾಟಿಯಲ್ಲಿಯೇ ಹಾಡಲು ಸಹಾಯಕವಾದರೂ ಆಗಬಹುದು.

ನಮ್ಮ ಜನಪದ ಕಲಾವಿದರು ಜನಪದ ಕಲಾಪರಂಪರೆಯನ್ನು ಉಳಿಸಿ-ಬೆಳೆಸಿದ ಜಂಗಮ ಜನಾರ್ಧನರು. ಇವರ ಮತ್ತೊಂದು ಹಿರಿಯ ಗುಣವೆಂದರೆ ತಾವು ಕಲಿತ ಕಲೆ ತಮ್ಮಿಂದಲೇ ಕೊನೆಯಾಗದಿರಲೆಂದು, ತಮ್ಮ ಹಳ್ಳಿಯ ಗುಡಿ-ಗುಂಡಾರಗಳಲ್ಲಿ, ಇಲ್ಲವೆ ಬಣ್ಣದ ಮನೆಗಳಲ್ಲಿ ಆಸಕ್ತಿಯಿದ್ದ ಹಳ್ಳಿಯ ಯುವಕರನ್ನು ಕಲೆಹಾಕಿ ತಮ್ಮ ದಿನದ ಬಿಡುವಿನ ವೇಳೆಯಲ್ಲಿ ಅವರಿಗೆ ಕಲಿಸುವ ಪರಿಪಾಠವನ್ನು ಇಟ್ಟುಕೊಂಡಿರುತ್ತಿದ್ದರು. ಒಂದು ವೇಳೆ ತಮ್ಮ ಊರಿನಲ್ಲಿ ಒಂದು ಜನಪದ ಕಲೆ ಇರದಿದ್ದರೆ ಅಂಥ ಒಂದು ಕಲೆಯನ್ನು ತಮ್ಮದಾಗಿಸಿಕೊಳ್ಳಲು ಬೇರೆ ಹಳ್ಳಿಯಲ್ಲಿರುವ ಕಲಾಪರಿಣಿತರನ್ನು ಗುರುತಿಸಿ, ತಿಂಗಳಿಗೆ ಇಂತಿಷ್ಟು ಪಗಾರವೆಂದು ಗೊತ್ತುಪಡಿಸಿ, ಬೇರೆ ಬೇರೆ ಜನಪದ ಕಲೆಗಳನ್ನು ಕಲಿಯುವ ಹಟಮಾರಿತನ ನಮ್ಮ ಜನಪದ ಕಲಾವಿದರಲ್ಲಿತ್ತು. ಆದರೆ ಈವತ್ತಿನ ದಿನಮಾನದಲ್ಲಿ ಒಬ್ಬ ಹಳ್ಳಿಯ ಹಿರಿಯ ಕಲಾವಿದ ತನ್ನ ಕಲೆಯನ್ನು ಪುಕ್ಕಟೆಯಾಗಿ ಕಲಿಸುತ್ತೇನೆ ಎಂದು ಹೇಳಿದರೂ ಹಳ್ಳಿಯ ಯಾವೊಬ್ಬ ಯುವಕನು ಮುಂದೆ ಬರದಿರುವುದು ಶೋಚನೀಯ.

ನಮ್ಮ ಜನಪದ ಕಲಾವಿದರ ಪಟ್ಟಿ ಸುದೀರ್ಘವಾದುದು. ಅವರ ಪರಿಚಯಾತ್ಮಕ ವಿಷಯ ಸಂಗ್ರಹನೆಗೆಂದು ಗದಗ ಜಿಲ್ಲೆಯ ಸುಮಾರು ಹಳ್ಳಿಗಳಿಗೆ ಹೋದ ವೇಳೆಯಲ್ಲಿ ಅಲ್ಲಿಯ ಹಿರಿಯ ಕಲಾವಿದರು ತಮ್ಮ ಹಳೆಯ ನೆನಪುಗಳನ್ನು ನೆನಪಿಸಿಕೊಂಡು

ಆನಂದಿಸಿದರೆ, ಇನ್ನೂ ಕೆಲವರು ತಮ್ಮ ಕಲಾಸೇವೆಗೆ ಸಿಗಬೇಕಾದ ಮನ್ನಣೆ–ಪುರಸ್ಕಾರ ದೊರೆಯದೇ ಇರುವುದಕ್ಕೆ ತಮ್ಮ ನಿರಾಸೆಯನ್ನು ವ್ಯಕ್ತಪಡಿಸಿದರು. ಇಂಥ ಹಲವಾರು ಜನಪದ ಕಲಾವಿದರು ತಮ್ಮ ಜೀವನವನ್ನೆ ಕಲೆಗಾಗಿ ಮುಡಿಪಾಗಿಟ್ಟು ಕಲೆಯನ್ನು ಉಳಿಸಿ–ಬೆಳೆಸಿಕೊಂಡು ಬಂದಿರುವುದು ನಮ್ಮ ಸುದೈವ. ಇಂಥ ಕಲಾವಿದರ ಪರಿಚಯಾತ್ಮಕ ಗ್ರಂಥವೊಂದನ್ನು ಬರೆಯಲು ಅನುವುಮಾಡಿಕೊಟ್ಟ ಅಕಾಡೆಮಿಯ ಹಿಂದಿನ ಅಧ್ಯಕ್ಷರಿಗೆ, ಸದಸ್ಯ ಬಳಗಕ್ಕೂ, ಈಗಿನ ಅಧ್ಯಕ್ಷರಾದ ಶ್ರೀ ಗೊ.ರು.ಚನ್ನಬಸಪ್ಪ ನವರಿಗೂ ಹಾಗೂ ಸರ್ವ ಸದಸ್ಯರಿಗೂ, ರಿಜಿಸ್ಟ್ರಾರ್ ಡಾ. ಎಸ್. ಪ್ರಸಾದಸ್ವಾಮಿ ಮತ್ತು ಸಿಬ್ಬಂದಿ ವರ್ಗಕ್ಕೂ ನಮ್ಮ ಜಿಲ್ಲೆಯ ಹಿರಿಯ ಜನಪದ ಕಲಾವಿದರ ಪರವಾಗಿ ತುಂಬಾ ಋಣಿಯಾಗಿದ್ದೇನೆ. ನಾನು ಕ್ಷೇತ್ರಕಾರ್ಯಕ್ಕೆಂದು ಹಳ್ಳಿಗಳಿಗೆ ಹೋದ ವೇಳೆಯಲ್ಲಿ ನನ್ನೊಡನೆ ಸಹಕರಿಸಿ, ತಮ್ಮ ಪರಿಚಯಾತ್ಮಕ ವಿವರಗಳನ್ನು ನೀಡಿದ ಹಿರಿಯ ಜನಪದ ಕಲಾವಿದರಿಗೂ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಗ್ರಂಥವನ್ನು ಸಿದ್ಧಪಡಿಸುವಲ್ಲಿ ಸಹಾಯ ಮಾಡಿದ ಮಿತ್ರರಾದ ಡಾ. ಎಸ್. ಎನ್. ವೆಂಕಟಾಪೂರ, ಡಾ.ಎನ್, ಎಮ್.ಅಂಬಲಿಯವರಿಗೂ ಹಾಗೂ ನನ್ನೊಡನಿದ್ದು ಲೇಖನಗಳನ್ನು ಸಿದ್ಧ ಪಡಿಸುವುದರಲ್ಲಿ ಸಹಕರಿಸಿದ ನನ್ನ ಧರ್ಮಪತ್ನಿಯಾದ ಪ್ರೊ. ಶ್ರೀಮತಿ ಅನಿತಾ ಜಕಬಾಳ ಅವರಿಗೂ ವಂದನೆಗಳು.

**ಡಾ. ಸಿದ್ದಣ್ಣ ಎಫ್, ಜಕಬಾಳ**
ಪ್ರಾಧ್ಯಾಪಕರು ಮತ್ತು ಸಂಶೋಧನಾ ಮಾರ್ಗದರ್ಶಕರು
ಕೆ.ಎಸ್.ಎಸ್.ಮಹಾವಿದ್ಯಾಲಯ–ಗದಗ.

# ಮಲ್ಲಿಕಾರ್ಜುನ ನಾಗಪ್ಪ ಪೂಜಾರ

ಬಹುಮುಖ ಪ್ರತಿಭೆಯುಳ್ಳ ಮಲ್ಲಿಕಾರ್ಜುನ ಪೂಜಾರಿಯವರು ಗದುಗಿನ ಹಾತಲಗೇರಿ ಗ್ರಾಮದವರು. ತಮ್ಮ ಹಳ್ಳಿಯ ಹಲವಾರು ಜನಪದ ಕಲೆಗಳನ್ನು ಕರಗತ ಮಾಡಿಕೊಂಡವರು. ತಂದೆ ನಾಗಪ್ಪ, ತಾಯಿ ಶಂಕ್ರಮ್ಮನವರ ಮಗನಾಗಿ 1952 ಜೂನ್ ಒಂದರಂದು ಜನಿಸಿದರು. ವಾಲ್ಮೀಕಿ ಸಮುದಾಯಕ್ಕೆ ಸೇರಿದ ಇವರು ಹಳ್ಳಿಯ ಪರಿಸರದಲ್ಲಿಯೆ ಬೆಳೆದರು. ಜನಪದ ಕಲೆಗಳಾದ ಡೊಳ್ಳಿನ ಹಾಡು, ಭಜನಾಪದ ಹಾಗೂ ದೊಡ್ಡಾಟದ ಪದಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದಾರೆ. ಎಸ್.ಎಸ್.ಎಲ್.ಸಿ.ಯವರೆಗೆ ಓದಿದ ಇವರು ಮನೆಯ ಆರ್ಥಿಕ ತೊಂದರೆಯಿಂದಾಗಿ ಮುಂದೆ ಓದಲಾಗದೆ ಜನಪದ ಕಲೆಗಳಿಗೆ ಮಾರುಹೋಗಿ ತಮ್ಮೂರಿನ ಬೇವಿನಮರದ ಸತ್ಯಮ್ಮದೇವಿಯ ಗುಡಿಯಲ್ಲಿ ವಾರಕ್ಕೊಮ್ಮೆ ಹಾಡುತ್ತಿದ್ದ ಡೊಳ್ಳಿನ ಮೇಳದವರ ಹಾಡುಗಳನ್ನು ಕೇಳಿ "ನಾ ಈ ಹಾಡುಗಳನ್ನು ಕಲಿತು ಏಕೆ ಹಾಡಬಾರದು" ಎಂಬ ಆಸೆ ಮೂಡಿ, ಛಲದಿಂದ ಕಲಿತು, ಡೊಳ್ಳಿನ ಹಾಡುಗಳನ್ನು ಮತ್ತು ಭಜನಾಪದಗಳನ್ನು ಹೇಳಲು ಪ್ರಾರಂಭಿಸಿದರು. ಗುರುಗಳಿಲ್ಲದೆ ಸ್ವತಃ ನೋಡಿ, ಕೇಳಿ ಹಾಡುವುದನ್ನು ಕಲಿತ ಇವರನ್ನು ಹವ್ಯಾಸಿ ಜನಪದ ಕಲಾವಿದರೆಂದು ಗುರುತಿಸಬಹುದು.

ಹಾತಲಗೇರಿಯ ಬೇವಿನಮರದ ಸತ್ಯಮ್ಮನ ಜಾತ್ರೆಯಲ್ಲಿ ಡೊಳ್ಳಿನ ಮೇಳದವರನ್ನು ಕೂಡಿಕೊಂಡು ಒಂದು ರಾತ್ರಿ-ಬೆಳತನಕ ಹಾಡಬಲ್ಲವರಾಗಿದ್ದಾರೆ. ಅಲ್ಲದೆ ಭಜನೆ ಪದಗಳನ್ನು ಸಹ ಒಂದು ರಾತ್ರಿ-ಬೆಳತನಕ ಹಾಡಬಲ್ಲರು. ಓದು-ಬರಹಬಲ್ಲವರಾದ ಇವರು ಕೆಲವು ಸ್ವಂತ ಡೊಳ್ಳಿನ ಪದಗಳನ್ನು ಹಾಗೂ ಭಜನಾ ಪದಗಳನ್ನು ರಚಿಸಿದ್ದಾರೆ. ಗದಗ ತಾಲೂಕ ಪಂಚಾಯತಿಯವರು ತಾಲೂಕು ಮಟ್ಟದ ಡೊಳ್ಳಿನ ಹಾಡುಗಳ ಸ್ಪರ್ಧೆಯನ್ನು ಗದಗದಲ್ಲಿ ಏರ್ಪಡಿಸಿದ್ದರು. ಆ ಸ್ಪರ್ಧೆಯಲ್ಲಿ ಭಾಗವಹಿಸಿ, ಇಂಪಾಗಿ ಹಾಡುಗಳನ್ನು ಹಾಡಿ ಪ್ರಥಮ ಸ್ಥಾನವನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಹೀಗೆ ತಮ್ಮ ಬಗ್ಗೆ ತಮಗೆ ವಿಶ್ವಾಸ ಮೂಡುತ್ತ ಬಂದಂತೆ, ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಡೊಳ್ಳಿನ ಹಾಡುಗಳನ್ನು ಹಾಗೂ ಭಜನಾ ಪದಗಳನ್ನು ಪ್ರದರ್ಶಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಇವರ ಪ್ರತಿಭೆಯನ್ನು ಕಂಡ ಜನರು ಮೆಚ್ಚಿ ಕರತಾಡನದಿಂದ ಪ್ರೋತ್ಸಾಹಿಸಿದ್ದಾರೆ. ಒಳ್ಳೆಯ ಡೊಳ್ಳಿನ ಪದ ಮತ್ತು ಭಜನಾ ಪದಗಳನ್ನು ಹಾಡುವ ತಂಡದವರು ಸಿಕ್ಕರೆ ಸಾಕು ಅವರಿಂದ ಹೊಸ ಹೊಸ ಹಾಡುಗಳನ್ನು ಕಲಿತು, ಕಂಠಪಾಟ ಮಾಡಿ

ಮುಂಬರುವ ಸಮಾರಂಭಗಳಿಗೆ ಅಣಿಗೊಳ್ಳುವುದು ಇವರ ಹವ್ಯಾಸ. ಡೊಳ್ಳಿನ ಇಲ್ಲವೆ ಭಜನೆಯ ಪದಗಳಿಗೆ ತಮಟೆ ಅಥವಾ ಡಗ್ಗಾದ ತಾಳಿನಗತ್ತಿಗೆ ಸರಿಯಾಗಿ ಹಾಡಿ ಜನರ ಪ್ರೀತಿಗೆ–ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರು ಬರೆದಿಟ್ಟ ಡೊಳ್ಳಿನ ಹಾಗೂ ಭಜನೆಯ ನೂರಾರು ಪದಗಳು ಇವರಲ್ಲಿ ಸಿಕ್ಕುತ್ತವೆ. ಇದರಿಂದ ಇವರ ಜನಪದದ ಬಗೆಗಿನ ಕಾಳಜಿ ಕಂಡುಬರುತ್ತದೆ.

ಉತ್ತರ ಕರ್ನಾಟಕದ ವಿವಿಧ ಜನಪದ ಕಲೆಗಳನ್ನು ಬಲ್ಲವರಾದ ಇವರು ಜನಪದ ಶೈಲಿಯಲ್ಲಿಯೆ ಹಲವಾರು ತ್ರಿಪದಿಗಳನ್ನು, ಡೊಳ್ಳಿನ ಹಾಡುಗಳನ್ನು, ಭಜನಾ ಪದಗಳನ್ನು ರಚಿಸಿದ್ದಾರೆ. ಬಾಲ್ಯದಿಂದಲೂ ಜನಪದ ಕಲೆಗಳ ಬಗ್ಗೆ ಅಪಾರ ಅಭಿಮಾನವುಳ್ಳ ಇವರು ಗ್ರಾಮದ ಜನಪದ ಕಲೆಗಳನ್ನು ಉಳಿಸಿ–ಬೆಳೆಸಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ಸುದೀರ್ಘ ಸೇವೆಯನ್ನು ಜನಪದ ಕಲೆಯ ಉಳಿವಿಗಾಗಿ ಮುಡಿಪಾಗಿಟ್ಟಿದ್ದಾರೆ. ಇಂಥ ಅಪೂರ್ವಕಲಾವಿದನ ಜನಪದ ಕಲಾಸೇವೆಯನ್ನು ಗುರುತಿಸಿ ಸಂಘ–ಸಂಸ್ಥೆಗಳು ಮಾನ–ಸನ್ಮಾನಗಳನ್ನು ನೀಡಿ ಗೌರವಿಸಿವೆ.

## ರಾಮಣ್ಣ ಸಿದ್ದಪ್ಪ ಜೋಗೇರ

ರಾಮಣ್ಣ ಜೋಗೇರ ಗದಗ ಜಿಲ್ಲೆಯ ಗದಗ ತಾಲೂಕಿನ ಮುಳಗುಂದ ಗ್ರಾಮದವರು. ರಾಮಣ್ಣನವರ ಮನೆಯ ಹೆಸರು ಜೋಗೇರ ಎಂದಿದ್ದರೂ ಅವರನ್ನು ಜನರು ರೂಢಿಯಲ್ಲಿ ರ್‍ವಾಣಗಾರ ರಾಮಣ್ಣ ಅಥವಾ ಜೋಗಿ ರಾಮಣ್ಣ ಎಂದು ಕರೆಯುವುದುಂಟು. 1947ರಲ್ಲಿ ಜನಿಸಿದ ಇವರು ಮನೆಯ ಬಡತನ ಸ್ಥಿತಿಯಿಂದಾಗಿ ಕೇವಲ ನಾಲ್ಕನೆಯ ತರಗತಿಯವರೆಗೆ ಮಾತ್ರ ಓದಿದರು. ಮುಂದೆ ಓದಲಿಕ್ಕೆ ತಂದೆ ಬಿಡಲಿಲ್ಲ. ಕುರಿಕಾಯಲು ಹಚ್ಚಿದರು. ಬಾಲಕ ರಾಮಣ್ಣ ಶಾಲೆ ಬಿಟ್ಟರು ಸಹ ಕುರುಕಾಯುತ್ತ ಓದಲು ಬರೆಯಲು ಕಲಿತರು. ಕುರಿ ಹಿಂಡಿನಲ್ಲಿಯೇ ಬೆಳೆದ ರಾಮಣ್ಣ ಯುವಕನಾದಾಗ ಮನೆಯ ಪಕ್ಕದಲ್ಲಿಯೇ ಇದ್ದ ಬೀರದೇವರ ಗುಡಿಯಲ್ಲಿ ಪ್ರತಿ ರವಿವಾರ, ಗುರುವಾರ ಹಾಗೂ ಹುಣ್ಣಿಮೆ–ಅಮವಾಸ್ಯೆಯ ದಿನಗಳಲ್ಲಿ ದಿಮ್ಮಿನೊಂದಿಗೆ ಹಾಡುತ್ತಿದ್ದ ಡೊಳ್ಳಿನ ಹಾಡುಗಳನ್ನು ತಮ್ಮ ಬಾಲ್ಯದಿಂದಲೆ ಕೇಳುತ್ತ ಬಂದಿದ್ದರಿಂದ. ಒಂದು ದಿನ ತಾಳಬಾರಿಸುವುದು ಮತ್ತೊಂದು ದಿನ ಬಿಡುವಿನ ವೇಳೆಯಲ್ಲಿ ದಿಮ್ಮಿನ ಕೈಪೆಟ್ಟು ಬಾರಿಸುವುದನ್ನು ಕಲಿಯಲು ಪ್ರಾರಂಭಿಸಿದರು. ಬಾಲಕನ ಪ್ರತಿಭೆ ಆಸಕ್ತಿಯನ್ನು ಕಂಡ ಡೊಳ್ಳುವಾದನದಲ್ಲಿ ಹಾಗೂ ಹಾಡುಗಾರಿಕೆಯಲ್ಲಿ

ಪಂಡಿತರೆನಿಸಿದ ಯಲ್ಲಪ್ಪ ಪೂಜಾರ, ತಮಗೆ ತಿಳಿದ ಡೊಳ್ಳಿನ ಕೈಪೆಟ್ಟು, ಹಾಡು ಹಾಗೂ ರ್‍ವಾಣಗಳನ್ನು ದಿನನಿತ್ಯ ಸಂಜೆಯ ವೇಳೆ ಬೀರದೇವರ ಗುಡಿಯಲ್ಲಿ ಕುಳ್ಳಿರಿಸಿಕೊಂಡು ಕಲಿಸಿದರು. ಇವರನ್ನು ಒಬ್ಬ ಡೊಳ್ಳಿನ ಹಾಡುಗಾರಿಕೆಯ ಪಂಡಿತನನ್ನಾಗಿ ಮಾಡಲು ಶ್ರಮಿಸಿದರು. ದಿನಗಳೆದಂತೆ ರಾಮಣ್ಣ ಬೇರೆ ಬೇರೆ ಮಾರ್ಗದ, ವಾರಿಯ ಪದಗಳನ್ನು ಹಾಗೂ ರ್‍ವಾಣಗಳನ್ನು ಸಹ ಕಲಿತರು. ಅಲ್ಲದೆ ವಾಲಗ ಬಡಿಯುವುದರಲ್ಲಿ ಪಳಗಿದವರಾದರು.

ಬೀರದೇವರ ಗುಡಿಯಲ್ಲಿ ಕಲಿಕೆ ಆರಂಭವಾಯಿತು ಅಷ್ಟೇಅಲ್ಲ ಅವರ ಕಲೆಯ ಪ್ರದರ್ಶನದ ವೇದಿಕೆಯು ಅಲ್ಲಿಂದಲೆ ಆರಂಭವಾಯಿತು ಎಂದರೆ ತಪ್ಪಾಗಲಾರದು. ಪ್ರತಿರವಿವಾರ-ಗುರುವಾರ, ಅಮವಾಸ್ಯೆ-ಹುಣ್ಣಿಮೆಯಂದು ಗುಡಿಯ ಜಗಲಿಕಟ್ಟೆಯ ಮೇಲೆ ಕಂಬಳಿಯನ್ನು ಹಾಸಿ, ಅದರ ಮೇಲೆ ದಿಮ್ಮಿನ ಡೊಳ್ಳನ್ನು ಇಟ್ಟು, ತಮ್ಮ ಜೊತೆಗಾರರಾದ ಸಿದ್ಧಪ್ಪ ಪೂಜಾರ, ನೀಲಪ್ಪ ಜಂಪಾಳ, ನಿಂಗಪ್ಪ ಮಾವಿನಕಾಯಿ ಮತ್ತು ನೀಲಪ್ಪ ಹರ್ತಿ ಹಿಮ್ಮೇಳದವರೊಂದಿಗೆ ನಾಗಪ್ಪ ಜೋಗಿಯವರನ್ನು ಜೊತೆಗೂಡಿಸಿಕೊಂಡು ಒಂದು ಕೈ ದಿಮ್ಮಿ ಬಾರಿಸಿ, ರೇ ಸ್ವರದೊಂದಿಗೆ "ಸ್ವಾಮಿ ನಮ್ಮ ದೇವರSS ಬಂದಾವ ಬನ್ನಿರೆSS ಗುರುವ ರೇವಣ ಸಿದ್ದರಿಗೆ ಶರಣನೆನ್ನುವೆವೊSS" ಎಂದು ಹಾಡನ್ನು ಪ್ರಾರಂಭಿಸಿದರೆ ಸಾಕು ಗುಡಿಯಲ್ಲಿ ಕುಳಿತ, ಪರಸಿಯಲ್ಲಿ ಕುಳಿತ ಜನರೆಲ್ಲ ಎದ್ದು ಬಂದು ಇವರ ಎದುರಿಗೆ ಕುಳಿತು ಶಾಂತ ಚಿತ್ತದಿಂದ ಹಾಡನ್ನು ಕೇಳುತ್ತಿದ್ದರು. ಒಂದು ಹಾಡು ಮುಗಿದ ನಂತರ ಕೇಳುಗರು ಮುಂದೆ ಬಂದು ಬೀರದೇವರ ಪದವನ್ನೊ, ಬರಮದೇವರ ಸಂಧನ್ನೊ ಮಾಯಮ್ಮನ ಸಂಧನ್ನೊ ಹಾಡುವಂತೆ ಕೇಳಿಕೊಳ್ಳುತ್ತಿದ್ದರು. ಕೇಳುಗರ ಇಚ್ಛೆಯಂತೆ ಇಂಪಾಗಿ ಹಾಡಿ ಅವರಿಂದ ಮೆಚ್ಚುಗೆಯ ಮಾತುಗಳನ್ನು ಕೇಳಿ ಆನಂದಿಸುತ್ತಿದ್ದರು. ಹೀಗೆ ಊರ ಜನರ ಪ್ರೋತ್ಸಾಹದಿಂದ ಸ್ಫೂರ್ತಿಗೊಂಡು ತಮ್ಮಲ್ಲಿರುವ ಕಲೆಯನ್ನು ಮತ್ತಷ್ಟು ಇಮ್ಮಡಿಗೊಳಿಸುತ್ತ, ಆತ್ಮವಿಶ್ವಾಸ ಹೆಚ್ಚಿದಂತೆ ನೆರೆಯ ಊರುಗಳಿಗೂ ತಮ್ಮದೇ ಮೇಳದ ಪ್ರದರ್ಶನ ನೀಡಲು ಪ್ರಾರಂಭಿಸಿದರು.

ಉತ್ತರ ಕರ್ನಾಟಕದ ಕೆಲವೊಂದು ಹಳ್ಳಿಗಳಲ್ಲಿ ಕುರುಬರು, ದನಗರರು ಮಹಾನವಮಿಯ ಅಮವಾಸ್ಯೆಯ ಮರುದಿನ ಘಟಕ್ಕೆ ಹಾಕುವುದು ಒಂದು ಸಂಪ್ರದಾಯ, ಅದರಂತೆ ಮುಳಗುಂದದ ಕುರುಬ ಜನಾಂಗದವರು ಪರ್‍ಯಾಣದಲ್ಲಿ ಮಣ್ಣು ತುಂಬಿ ಅದರಲ್ಲಿ ಪಂಚ ಧಾನ್ಯಗಳನ್ನು ಹಾಕಿ, ಅದಕ್ಕೆ ನೀರು ಹಾಕಿ ಅದನ್ನು ಒಯ್ದು ದೇವರ ಜಗಲಿಯ ಮುಂದೆ ಇಟ್ಟು ಪೂಜೆ ಮಾಡಿ, ನಂದಾದೀಪವನ್ನೂ

ಹಚ್ಚಿ ಒಂಬತ್ತು ದಿನ ರಾತ್ರಿ ಬೆಳತನಕ ಆ ದೀಪವನ್ನು ಆರದಂತೆ ಕಾಯುತ್ತಾರೆ. ಅದಕ್ಕಾಗಿ ರಾತ್ರಿಯಲ್ಲಿ ಜಾಗರಣೆ ಮಾಡುತ್ತಾರೆ. ಜಾಗರಣೆ ಮಾಡುವ ಮನೆಯವರು ಡೊಳ್ಳಿನ ಮೇಳಗಳನ್ನು ಕರೆಸುವುದು ವಾಡಿಕೆ. ಹೀಗಾಗಿ ಆ ವೇಳೆಯಲ್ಲಿ ರಾಮಣ್ಣ ಮತ್ತು ಅವರ ಸಂಗಡಿಗರಿಗೆ ಎಲ್ಲಿಲ್ಲದ ಬೇಡಿಕೆ. ಘಟ್ಟಕ್ಕೆ ಹಾಕಿದ ಹಳ್ಳಿಯ ಜನರು ಇವರಿಗೆ ವಿಳ್ಯೆವ ಕೊಟ್ಟು ಒಂದೊಂದು ದಿನ ಗೊತ್ತು ಮಾಡಿ ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಹೀಗೆ ಒಂಬತ್ತು ದಿನವೂ ಒಂದೊಂದು ಮನೆಗೆ ಹೋಗಿ ರಾತ್ರಿ-ಬೆಳತನಕ ದಿಮ್ಮಿಟ್ಟು ಹಾಡುತ್ತಾರೆ. ಹೀಗೆ ಹಾಡುವಾಗ ಒಂದು ಮನೆಯಲ್ಲಿ ಹಾಡಿದ ಹಾಡನ್ನು ಮತ್ತೊಂದು ಮನೆಯಲ್ಲಿ ಹಾಡುವಂತಿಲ್ಲ. ಹಾಡುವಾಗ ಘಟ್ಟ ಹಾಕಿದ ಮನೆಯ ಅಕ್ಕ-ಪಕ್ಕದ ಮನೆಯವರು ಅಲ್ಲದೆ ಆ ಓಣಿಯ ಜನರೆಲ್ಲ ಇವರ ಹಾಡನ್ನು ಕೇಳಲಿಕ್ಕೆ ಬಂದು ಕೂಡುತ್ತಾರೆ. ಹೀಗಾಗಿ ಒಂದು ಮನೆಯಲ್ಲಿ ಹಾಡಿದ ಹಾಡನ್ನು ಮತ್ತೊಂದು ಮನೆಯಲ್ಲಿ ಹಾಡಿ ಕೇಳುಗರಿಗೆ ಬೇಸರ ಮೂಡಿಸಬಾರದೆಂದು, ಪ್ರತಿನಿತ್ಯವು ಬೇರೆ ಬೇರೆ ಹಾಡುಗಳನ್ನು ಹಾಡುತ್ತ ಜನರ ಮೆಚ್ಚುಗೆಯನ್ನು ಗಳಿಸುತ್ತಿದ್ದರು. ಕೇಳುಗರ ಇಚ್ಛೆಯನ್ನು ಅರಿತು ಕಥಾ ಪ್ರಸಂಗಗಳನ್ನು ಆಯ್ಕೆ ಮಾಡಿಕೊಂಡು ಹಾಡುತ್ತಿದ್ದರು. ಕೆಲವೊಮ್ಮೆ ಬೇರೆ ಬೇರೆ ಕಥಾ ಪ್ರಸಂಗಗಳ ಮೇಲೆ ಅಲ್ಲಿಯೇ ಹಾಡುಕಟ್ಟಿ ದಿಮ್ಮಿನ ಲಯದೊಂದಿಗೆ ಹಾಡಿದ್ದು ಉಂಟು. ಇವರ ಹಾಡುಗಳನ್ನು ಕೇಳಿ ಇವರ ಪ್ರತಿಭೆಯನ್ನು ಮೆಚ್ಚಿ ಸಂತೋಷಭರಿತರಾಗಿ ಜನರು ಹಣ-ಬಟ್ಟೆಗಳನ್ನು ನೀಡಿ ಮಾನ-ಸನ್ಮಾನಗಳೊಂದಿಗೆ ಬೀಳ್ಕೊಡುತ್ತಿದ್ದರು.

ಪ್ರತಿಭೆಗೆ ಮನ್ನಣೆ ಸಿಕ್ಕಲ್ಲಿ ವ್ಯಕ್ತಿಯ ಸಾಧನೆಯ ಕ್ಷೇತ್ರವು ವಿಸ್ತಾರಗೊಳ್ಳುತ್ತ ಹೋಗುತ್ತದೆ. ರಾಮಣ್ಣನ ವಿಚಾರದಲ್ಲಿಯೂ ಇದು ನಿಜವಾಯಿತು. ಅವರು ಕೇವಲ ಹಾಡುವದರಲ್ಲಿ ಅಷ್ಟೇ ಅಲ್ಲದೆ ವಾಲಗ ಕಟ್ಟುವುದನ್ನು ಕಲಿತರು ಮತ್ತು ಅದರಲ್ಲಿ ಪ್ರವಿಣ್ಯತೆ ಪಡೆದರು. ವಾಲಗದಲ್ಲಿ ಸಿಡಿ ಹೊಡೆಯುವುದು ಸಾಮಾನ್ಯ ಆದರೆ ರಾಮಣ್ಣವರು ಸಿಡಿಹೊಡೆಯುವುದು ಇನ್ನೂ ವಿಶೇಷ. ಗದಗ ಸುತ್ತಮುತ್ತಲಿನ ಊರುಗಳಾದ ಅಣ್ಣಿಗೇರಿ, ಕುರ್ತಕೋಟಿ, ಲಕ್ಕುಂಡಿ ಮುಂತಾದ ಊರುಗಳಿಗೆ ತಮ್ಮ ವಾಲಗದ ಡೊಳ್ಳುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಅದರಲ್ಲೂ ವರ್ಷಕ್ಕೊಮ್ಮೆ ನಡೆಯುವ ಅಣ್ಣಿಗೇರಿಯ ಅಮೃತೇಶ್ವರ ಜಾತ್ರೆಗೆ ಹಾಗೂ ಮೂರು ವರ್ಷಕ್ಕೊಮ್ಮೆ ನಡೆಯುವ ಗದುಗಿನ ದುರ್ಗಾದೇವಿ ಜಾತ್ರೆಗೆ ತಪ್ಪದೆ ವಾಲಗದ ಡೊಳ್ಳು ತೆಗೆದುಕೊಂಡು ಬರುತ್ತಿದ್ದರು. ಇವರಷ್ಟೆ ಅಲ್ಲದೆ ಬೇರೆ ಬೇರೆ ಊರುಗಳಿಂದ ವಾಲಗದ ಡೊಳ್ಳಿನ ಮೇಳಗಳು ಸಹ ಅಲ್ಲಿಗೆ ಬರುತ್ತಿದ್ದವು. ಹೀಗೆ ಬಂದಾಗ ವಾಲಗ-ವಾಲಗದವರ ನಡುವೆ ಸ್ಪರ್ಧಾತ್ಮಕ ಮನೋಭಾವನೆ ಮೂಡುತ್ತಿತ್ತು ಯಾವ

ವಾಲಗದ ತಂಡದವರು ವಾಲಗ ಬಾರಿಸುವದರಲ್ಲಿ ನಿಸ್ಸೀಮರು ಎಂದು. ಇಂಥ ವೇಳೆಯಲ್ಲಿ ರಾಮಣ್ಣನವರು ನಡಕ್ಕೆ ಡೊಳ್ಳು, ಕಾಲಿಗೆ ಮರಗಾಲು ಕಟ್ಟಿಕೊಂಡು ಬಾಯಿಂದ ನೀರು ತುಂಬಿದ ಕೊಡವನ್ನು ಮೇಲಕ್ಕೆತ್ತುವುದು, ಅಲ್ಲದೆ ಅಡಾರ್ಕಿ ಒಗೆಯುತ್ತ ಹಿಂದಕ್ಕೆ ಬಗ್ಗಿ ಬಾಯಿಂದ ಒಂದು ರೂಪಾಯಿಯ ಗಟ್ಟಿಯನ್ನು ಇಲ್ಲವೆ ಹತ್ತು-ಇಪ್ಪತ್ತರ ನೋಟನ್ನು ಡೊಳ್ಳು ಬಾರಿಸುತ್ತ ತೆಗೆದುಕೊಳ್ಳುತ್ತಿದ್ದರು. ಈ ದೃಶ್ಯವನ್ನು ನೋಡಲು ಜನ ತಾಕಲಾಡುತ್ತಿದ್ದರು. ಇವರ ಇನ್ನೊಂದು ವಾಲಗದ ವಿಶೇಷವೆಂದರೆ ಕಾಲಿಗೆ ಮರಗಾಲ ಕಟ್ಟದೆ ವಾಲಗದ ಸ್ಥಳದಲ್ಲಿ ಸ್ಥಳಿಯರು ಬಂದು ಒಂದು ಬೋಕೆ (ಸಣ್ಣ ತಗ್ಗು) ತೋಡಿ ಅದರಲ್ಲಿ ಒಂದು ರೂಪಾಯಿಯ ಗಟ್ಟಿಯನ್ನು ಇಡುತ್ತಿದ್ದರು. ವಾಲಗದ ಡೊಳ್ಳು ಬಡಿಯುವವನು ಒಬ್ಬನೆ ಬಂದು ಆ ಬೋಕೆಯ ಹತ್ತಿರ ಮಂಡೆಯನ್ನು ಊರಿ ಡೊಳ್ಳಿನ ಬಲವನ್ನು ಗುಣಿಯಿಂದ ವಾಲಗದ ಪೆಟ್ಟಿಗೆ ತಕ್ಕಂತೆ ಬಾರಿಸುತ್ತ ಸಿಡಿ ಹೊಡೆಯುತ್ತ ಬೋಕೆಯಲ್ಲಿದ್ದ ಒಂದರ ಗಟ್ಟಿ ಮೇಲೆಳುವಂತೆ ಮಾಡಬೇಕು. ಇದರಲ್ಲಿ ರಾಮಣ್ಣನರು ನಿಸ್ಸೀಮರು. ಸಿಡಿಹೊಡೆಯುವ ತಮ್ಮ ಸರತಿ ಬಂತೆಂದರೆ ಹೆಜ್ಜೆಹಾಕುತ್ತ ಬೋಕೆಯ ಹತ್ತಿರ ಬಂದು ಮಂಡೆಯೂರಿ ಸಿಡಿಹೊಡೆದರೆ ಸಾಕು ಬೋಕೆಯಲ್ಲಿದ್ದ ಗಟ್ಟಿನಾಣ್ಯ ಮೇಲೆ ಬಂದು ಬೀಳುತ್ತಿತ್ತು. ಹೀಗೆ ರಾಮಣ್ಣನವರು ಹಾಡುವುದರಲ್ಲಿ ಅಷ್ಟೇ ಅಲ್ಲದೆ ವಾಲಗ ಬಾರಿಸುವುದರಲ್ಲಿಯೂ ಬಹಳ ಪ್ರಸಿದ್ಧಿ ಪಡೆದವರಾಗಿದ್ದಾರೆ.

ಕಲೆಗೆ ಜಾತಿ-ಮತದ ಬೇಧ-ಭಾವವಿರುವುದಿಲ್ಲ ಉತ್ತಮ ಕಲೆ-ಪ್ರತಿಭೆಗೆ ಸರ್ವಕಾಲದಲ್ಲಿಯೂ ಮನ್ನಣೆ ಇದ್ದೇ ಇದೆ. ಅಂತೆಯೇ ಬ್ರಾಹ್ಮಣರು ಸಹ ತಮ್ಮ ಮನೆಯಲ್ಲಿ ನಡೆಯುವ ದೇವಿ ಆರಾಧನೆಯ ವೇಳೆಯಲ್ಲಿ ರಾಮಣ್ಣವರಿಗೆ ವಿಳ್ಯವ ಕೊಟ್ಟು ಕರೆದುಕೊಂಡು ಹೋಗುತ್ತಾರೆ. ಆ ದಿನ ರಾತ್ರಿ ರಾಮಣ್ಣನವರು ಎಲ್ಲಮ್ಮದೇವಿಯ ಮಂಟಪ ಹಾಕಿ ಯಲ್ಲಮ್ಮದೇವಿಯ ಸದರು ಮಾಡಿ ತಮ್ಮ ಹಿಮ್ಮೇಳದವರೊಂದಿಗೆ ಚೌಡಕಿಯನ್ನು ಬಾರಿಸುತ್ತ ಬೆಳತನಕ ಚೌಡಕಿ ಹಾಡಿನ ದಾಟಿಯಲ್ಲಿ ಎಲ್ಲಮ್ಮದೇವಿಯ ಕಥಾ ಸಾರವನ್ನು ಹೇಳುತ್ತಾರೆ. ಇದಲ್ಲದೆ ತಾವೇ ಸ್ವತಃ ಕಟ್ಟಿದ ರ್‍ವಾಣಗಳನ್ನು ಹಾಗೂ ಒಡಗತಿಗಳನ್ನು ಹೇಳುತ್ತಾರೆ. ಅವರ ಕೆಲ ಒಡಗತಿಗಳನ್ನು ಹೀಗೆ ಉದಹರಿಸಬಹುದು.

1) ಮಲಿಯಿಲ್ಲದ ಮಕ್ಕಳಾ ಜ್ವಾಪಾನ ಮಾಡ್ತಾಳ

-ಕೋಳಿ

2) ಹೊಟ್ಟೆ ತುಂಬಾ ಊಟಾ ಮಾಡಿ

ಹೊಟ್ಟೆ ಮ್ಯಾಲ ಕಲ್ಲಾಕೊಂಡು ಮಕ್ಕೊತಾಳ —ಹಗೆ

3) ಅಂತರ್ಲೆ ಹಾರುದು ಗಿಡಗ
ಗಿಡಗನ ಹೊಟ್ಯಾಗ ಬೆಳ್ಳಿಕಡಗ
ಒಡದ ಹೋಗಲೆ ಹಳ್ಳಿ ಹುಡುಗ
– ತೆಂಗಿನಕಾಯಿ

4) ಹಸರ ಐತಿ ರಸಾ ಇಲ್ಲ
–ಹಸರ ಬಳಿ

5) ಗಿಡದಲ್ಲಿ ಗಿಡಾ ಹುಟ್ಟಿ
ಮರದಲ್ಲಿ ಮರಾ ಹುಟ್ಟಿ
ತಿನ್ನಾಕ ಬಾರದ ಹಣ್ಣ ಬಲು ರುಚಿ
–ಕೂಸು ಕಂದಮ್ಮ

ಹೀಗೆ ಸಾವಿರಾರು ಒಡಗತಿಗಳನ್ನು ಸ್ವತಃ ಕಟ್ಟಿ ಹೇಳುತ್ತಾರೆ. ಒಡಗತಿಗಳನ್ನು ಒಡೆಯುವುದರಲ್ಲಿಯೂ ಅಷ್ಟೇ ಚತುರರು.

ರಾಮಣ್ಣ ಒಬ್ಬ ಅಭಿಜಾತ ಜನಪದ ಕಲಾವಿದ. ಪುರಾಣ, ಭಾಗವತ, ಮಹಾಭಾರತ, ರಾಮಾಯಣ ಮುಂತಾದ ಭಾರತದ ಸಂಸ್ಕೃತಿಯ ಬಗ್ಗೆ ಅಪಾರ ಜ್ಞಾನವುಳ್ಳವರು. ಡೊಳ್ಳಿನ ಹಾಡು, ರ್‍ವಾಣಿ, ಒಡಗತಿ, ಚೌಡಕಿ ಪದಗಳನ್ನು ಹಾಡಬಲ್ಲ ಜಾನಪದ ಪಂಡಿತ. ತನ್ನಲ್ಲಿರುವ ಎಲ್ಲ ಕಲೆಯ ಜ್ಞಾನವನ್ನು ಯುವ ಪೀಳಿಗೆಗೆ ಕಲಿಸಿಕೊಡುವ ಕಾಯಕವನ್ನು ಮಾಡುತ್ತಿದ್ದಾರೆ. ರಾಜ್ಯಮಟ್ಟದ ಅನೇಕ ಜಾನಪದ ಸಮ್ಮೇಳನದಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾರೆ. ಮತ್ತು ಜನಪದ ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ.

## ರಾಮಪ್ಪ ದ್ಯಾಮಪ್ಪ ಕೊರವರ

ರ್‍ವಾಣಿಗಾರ ರಾಮಪ್ಪನೆಂದೆ ಪ್ರಸಿದ್ಧರಾದ ರಾಮಪ್ಪ ಕೊರವರ ಇವರು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡೋಣಿ ಗ್ರಾಮದವರು. ದ್ಯಾಮಪ್ಪನವರ ಹಿರಿಯ ಮಗನಾಗಿ 1940ರಲ್ಲಿ ಜನಿಸಿದರು. ತಮ್ಮ ಜೀವನದಲ್ಲಿ ಒಮ್ಮೆಯೂ ಶಾಲೆಗೆ ಹೋಗಲಿಲ್ಲ. ಮಗನು ಬೆಳೆದು ದೊಡ್ಡವನಾದಂತೆ ದ್ಯಾಮಪ್ಪನವರು ಕುರುಬರ ಸಿದ್ಧಪ್ಪ ಗಾಂಜಿಯವರ ಮನೆಯಲ್ಲಿ ಕುರಿ ಕಾಯಲಿಕ್ಕೆ ಕಟ್ಟಾಳಿನಂತೆ ಇಟ್ಟರು. ಬಾಲಕನಾದ ರಾಮಪ್ಪನಿಗೆ

ಶಾಲೆಗೆ ಹೋಗಬೇಕೆಂಬ ಹಂಬಲವಿದ್ದರೂ ಅನಿವಾರ್ಯವಾಗಿ ಕುರಿ ಕಾಯಲಿಕ್ಕೆ ಹೋಗಬೇಕಾಯಿತು. ಕುರಿ ಕಾಯುವ ವೇಳೆಯಲ್ಲಿ ಗಾಂಜಿ ಸಿದ್ಧಪ್ಪನವರು ಹುಡುಗನಿಗೆ ಬೇಸರವಾಗದಿರಲೆಂದು ಹಾಸ್ಯಭರಿತವಾದ ರ್‍ವಾಣಗಳನ್ನು ಹೇಳುತ್ತಿದ್ದರು. ಅವರು ಹೇಳುವ ರ್‍ವಾಣಗಳನ್ನು ಹುಡುಗ ರಾಮಪ್ಪ ಲಕ್ಷಗೊಟ್ಟು ಕೇಳಿ ನೆನಪಿಟ್ಟುಕೊಂಡು ಕೆಲವೊಮ್ಮೆ ತಾನೇ ಹೇಳುತ್ತಿದ್ದ. ಹೀಗೆ ಸಿದ್ಧಪ್ಪ ಗಾಂಜಿಯವರಿಂದ ಡೊಳ್ಳಿನ ಹಾಡುಗಳನ್ನು ಮತ್ತು ಡೊಳ್ಳು ಬಾರಿಸುವುದನ್ನು ಕಲಿತುಕೊಂಡರು. ಅಲ್ಲದೆ ಸ್ವತಃ ತಾವೆ ಡೊಳ್ಳಿನ ಹಾಡುಗಳನ್ನು ಹಾಗೂ ರ್‍ವಾಣಗಳನ್ನು ಕಟ್ಟಿ ಹಾಡುತ್ತಾರೆ.

ರಾಮಪ್ಪನವರು ಓದು–ಬರಹ ಕಲಿಯದಿದ್ದರೂ ಸಹ ಸತತ ಮೂರು ರಾತ್ರಿ–ಬೆಳತನಕ ಹಾಡುವಷ್ಟು ಡೊಳ್ಳಿನ ಹಾಡುಗಳನ್ನು ಮತ್ತು ರ್‍ವಾಣಗಳನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ. ತಮ್ಮೂರಾದ ದೋಣಿಯಲ್ಲಿ ನಡೆಯುವ ಬೀರದೇವರ ಜಾತ್ರೆ ಮತ್ತು ಹಾಲಸ್ವಾಮಿಯ ಜಾತ್ರೆಗಳಲ್ಲಿ, ದಿಮ್ಮಿ (ಸಣ್ಣಡೊಳ್ಳು)ನ ಮುಂದೆ ಕುಳಿತು ತಮ್ಮ ಸಂಗಡಿಗರೊಂದಿಗೆ ಡೊಳ್ಳಿನ ಹಾಡುಗಳನ್ನು ಹಾಡಲು ಪ್ರಾರಂಭಿಸಿದರೆ ಸಾಕು, ಕೂಡಿದ ಜನರು ಹುಬ್ಬೇರಿಸಿ ಇವರ ಹಾಡುಗಳನ್ನು ಕೇಳುತ್ತ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಮತ್ತೊಂದು, ಮಗದೊಂದು ಹಾಡುಗಳನ್ನು ಕೇಳಿ ಹಾಡಿಸುತ್ತಿದ್ದರು. ಹಾಡುಗಳು ಸಾಕೆನಿಸಿದಾಗ ರ್‍ವಾಣಗಳನ್ನು ಹೇಳಲು ಒತ್ತಾಯಿಸುತ್ತಿದ್ದರು. ತಮ್ಮ ಸಂಗಡಿರಾದ ಶೇಖಪ್ಪ ಗಾಂಜಿಯವರೊಂದಿಗೆ ಎದ್ದು ನಿಂತು ರ್‍ವಾಣಗಳನ್ನು ಹೇಳಲು ಪ್ರಾರಂಭಿಸುತ್ತಿದ್ದರು.

ರಾಮಪ್ಪ: ಹುಲ್ಲಿಲಿಗೆಪ್ಪ ಹುಲ್ಲಲಿಗ್ಯೊ

ಶೇಖಪ್ಪ: ಹುಲ್ಲಿಲಿಗೆಪ್ಪ ಹುಲ್ಲಲಿಗ್ಯೊ

ರಾಮಪ್ಪ: ಕಟ್ಟಿರಿವಿ ಕಟ್ಟಿತ್ತು ಏಳಕೊಡಾ ಹಾಲ ಹಿಂಡಿತ್ತು ಅಟ್ಟದ ವ್ಯಾಲಿಟ್ರ್ರ ಅಟ್ಟ ಮುರಕೊಂಡ ಬಿತ್ತು ಇದೇನ ಸೋಜಿಗಂತ್ಹೇಳಿ............

ಶೇಖಪ್ಪ: ಇದೇನ ಸೋಜಿಗಂತ್ಹೇಳಿ

ರಾಮಪ್ಪ: ಇಜಾಪೂರದೌರು ತಗಣಿಗೆ ಮುಗದಾನ ಹಾಕೊಂಡ ನೋಡಾಕ ಬಂದ್ರಲೆ ಹುಡುಗಾ

ಶೇಖಪ್ಪ: ತಗಣಿಗೆ ಮುಗದಾನ ಹಾಕೊಂಡ ನೋಡಾಕ ಬಂದ್ರಲೆ ಹುಡುಗ

ಹೀಗೆ ತಮಾಷೆಯಾಗಿ ಮುಂದುವರೆಯುವ ರ್‍ವಾಣಗಳು ಕೇಳುಗರ ಹೊಟ್ಟೆ ಹುಣ್ಣಾಗಿಸುವಂತೆ ನಗಿಸುತ್ತ, ಮೂರ್‍ನಾಲ್ಕು ರ್‍ವಾಣಗಳನ್ನು ಹೇಳಿ ಮುಗಿಸುವುದೇ ತಡ, ಕೇಳುಗರಲ್ಲಿ ಕೆಲವರು ಚಿಲ್ಲರೆ ನಾಣ್ಯಗಳನ್ನು ತಂದು ಇವರ ಪಾವಡಾದ ಮೇಲೆ ಸುರಿಯುತ್ತಿದ್ದರು. ಇನ್ನೂ ಕೆಲವರಂತು ನೋಟಿನ ಸರವಾಲೆ ಮಾಡಿಕೊಂಡುಬಂದು, ಇವರ ಕೊರಳಿಗೆ ಹಾಕಿ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ಇವರು ಡೊಳ್ಳಿನ ಮೇಳ ತೆಗೆದುಕೊಂಡು ಯಾವುದೇ ಊರಿಗೆ ಹೋಗಲಿ ಅಲ್ಲಿಯೂ ಸಹ ಇವರಿಗೆ ಇದೇ ರೀತಿಯ ಮಾನ-ಸನ್ಮಾನಗಳು ದೊರೆಯುತ್ತಿದ್ದವು. ಇವರ ಇನ್ನೊಂದು ವಿಶೇಷವೆಂದರೆ ವಾಲಗದ ಡೊಳ್ಳು ಬಾರಿಸುವುದು, ಅಲ್ಲದೆ ಆ ವಾಲಗದ ಡೊಳ್ಳಿನ ಪೆಟ್ಟುಗಳಿಗೆ ತಕ್ಕಂತೆ ತಾಳಗಳನ್ನು ನುಡಿಸುವುದು.

ಡೊಳ್ಳಿನ ಹಾಡುಗಳಲ್ಲಿ ಎರಡ್ಮೂರು ತೆರನಾದ ಹಾಡುಗಳು ಬರುತ್ತವೆ. ಅವುಗಳಲ್ಲಿ ಇವರು ನಿರಹಂಕಾರ ಪದ, ಭೀರಪ್ಪ, ಮಾಳಿಂಗರಾಯ, ಮಾಯವ್ವ, ಸೂರಮ್ಮದೇವಿ ಮುಂತಾದ ಮಾರ್ಗದ ಪದಗಳನ್ನು ಮತ್ತು ಶಿವಶರಣರ ಪದಗಳನ್ನು ಸರಾಗವಾಗಿ ರಾತ್ರಿ ಬೆಳತನಕ ಹಾಡುತ್ತಾರೆ. ಹೀಗೆ ಡೊಳ್ಳು ಬಾರಿಸುವುದರಲ್ಲಿ, ಡೊಳ್ಳಿನ ಹಾಡುಗಳನ್ನು ಹಾಡುವುದರಲ್ಲಿ ಹಾಗೂ ಹಾಸ್ಯದ ವಿವಿಧ ರ್‍ವಾಣಗಳನ್ನು ಹೇಳುವುದರಲ್ಲಿ ಅಪಾರ ಪ್ರತಿಭೆಯನ್ನು ಹೊಂದಿದ ರಾಮಪ್ಪನವರು ತಮ್ಮ ಐವತ್ತಾರನೆಯ ವಯಸ್ಸಿನಲ್ಲಿಯೂ ಉತ್ಸಾಹದಿಂದ ಹಾಡುತ್ತಿದ್ದಾರೆ. ಈ ಕಲೆಯ ಬಗ್ಗೆ ಅಪಾರ ಕಾಳಜಿಯುಳ್ಳ ಇವರು, ಈ ಕಲೆಯು ಉಳಿಯಬೇಕು-ಬೆಳೆಯಬೇಕು ಎಂಬ ಉತ್ಕಟ ಆಸೆಯಿಂದ ತಮ್ಮೂರಿನ ಯುವಕರಿಗೆ ಕಲಿಸಿಕೊಡುತ್ತಿದ್ದಾರೆ.

## ರಾಮಪ್ಪ ಬಸಪ್ಪ ಕಡ್ಡಿ

ಡೊಳ್ಳಿನ ಹಾಡುಗಾರರೆಂದೆ ಪ್ರಸಿದ್ಧಿಯನ್ನು ಪಡೆದ ರಾಮಪ್ಪ ಕಡ್ಡಿಯವರು ಗದಗ ಜಿಲ್ಲೆಯ ನರಗುಂದ ತಾಲೂಕಿನ ಕೊಣ್ಣೂರು ಗ್ರಾಮದವರು. ಕುರುಬ ಸಮುದಾಯಕ್ಕೆ ಸೇರಿದ ಇವರು 1943ರಲ್ಲಿ ಜನಿಸಿದರು. ಶಾಲೆಯ ಮೆಟ್ಟಿಲನ್ನೆ ಏರದ ರಾಮಪ್ಪನವರು ತಂದೆ ಬಸಪ್ಪನವರೊಂದಿಗೆ ಮನೆತನದ ಮುಖ್ಯ ಉದ್ಯೋಗವಾದ ಕಮತಮಾಡಲು ತೊಡಗಿದರು. ಬಾಲ್ಯದಿಂದಲೇ ತಮ್ಮ ಗ್ರಾಮದ ಜನಪದ ಕಲೆಗಳಾದ ಕೋಲಾಟ, ಭಜನೆ, ಕರಡಿಮಜಲು, ಡೊಳ್ಳಿನ ಪದ, ಡೊಳ್ಳುಬಾರಿಸುವುದನ್ನು ನೋಡುತ್ತ ಬೆಳೆದ ರಾಮಪ್ಪನರಿಗೆ ಅವುಗಳಲ್ಲಿ ಆಸಕ್ತಿ

ಮೂಡಿ ತಾವು ಅವುಗಳನ್ನು ಕಲಿಯಬೇಕೆಂಬ ಬಯಕೆ ಚಿಗುರೊಡೆಯಿತು. ತಮ್ಮ ಗ್ರಾಮದ ಬೀರದೇವರ ಗುಡಿಯಲ್ಲಿ ಅಮವಾಸ್ಯೆ-ಹುಣ್ಣಿಮೆ, ಗುರುವಾರ-ರವಿವಾರ ಡೊಳ್ಳಿನ ಹಾಡುಗಳನ್ನು, ಭಜನೆಯ ಪದಗಳನ್ನು ಹಾಡುತ್ತಿದ್ದುದನ್ನು ಆಸಕ್ತಿಯಿಂದ ಕೇಳಿ, ತಾವು ಅವರೊಂದಿಗೆ ಗುಣುಗುಟ್ಟುತ್ತ ಒಂದೊಂದಾಗಿ ಡೊಳ್ಳಿನ ಪದಗಳನ್ನು ಕಲಿಯತೊಡಗಿದರು. ಜೊತೆಯಲ್ಲೆ ಡೊಳ್ಳುವಾದನವನ್ನು ಸಹ ಕಲಿತರು. ಅದಕ್ಕೆ ತಕ್ಕಂತೆ ಹಾಡಲು ಪ್ರಾರಂಭಿಸಿದರು.

ಗ್ರಾಮದೇವರ ಹಬ್ಬ-ಹರಿದಿನಗಳಲ್ಲಿ ಮತ್ತು ಜಾತ್ರ ಮಹೋತ್ಸವಗಳಲ್ಲಿ ಗುಡಿಯ ಮುಂದಿನ ಪರಸಿಯಲ್ಲಿ ಕರಿಯ ಕಂಬಳಿಯನ್ನು ಹಾಸಿ ದಿಮ್ಮಿನ ಮುಂದೆ ಕುಳಿತು ಸಂಗಡಿಗರೊಂದಿಗೆ

**ಸ್ವಾಮಿ ನಮss ದೇವರss ಬಂದಾsವ ಬನ್ನಿರೆss**
**ಗುರುವಾ ರೇವಣ ಸಿದ್ಧಗss ಶರಣೆಂಬುವೆವೊss**

ಎಂದು ಡೊಳ್ಳನ್ನು ಮುಟ್ಟಿ ನಮಸ್ಕರಿಸಿ ಹಾಡಲು ಪ್ರಾರಂಭಿಸಿದರೆ ಇವರ ಇಂಪಾದ ಧ್ವನಿಯಿಂದ ಹೊರಡುವ ಹಾಡುಗಳನ್ನು ಕೂಡಿದ ಜನರು ಪುಳಕಿತರಾಗಿ ಆಲಿಸುತ್ತಿದ್ದರು. ಜನರ ಬೇಡಿಕೆಯಂತೆ ಮಾಯವ್ವನ ಸಂಧ, ಬೀರದೇವರ ಸಂಧ, ರೇವಣ ಸಿದ್ಧನ ಸಂಧ, ಮಾಳಿಂಗರಾಯನ ಸಂಧ, ಕರಿಮಲ್ಲಿಗೆ ಸಂಧ, ಸೂರಮ್ಮ ದೇವಿಯ ಸಂಧ ಹೀಗೆ ಮುಂತಾದ ಕುರುಬ ಜನಾಂಗಕ್ಕೆ ಸೇರಿದ ದೇವರುಗಳ ಚರಿತ್ರೆಯನ್ನು ಬಿಂಬಿಸುವ ಮಾರ್ಗದ ಪದಗಳನ್ನು ರಾತ್ರಿ-ಬೆಳತನಕ ಹಾಡಿ ಜನರ ಮೆಚ್ಚುಗೆಯನ್ನು ಪಡೆಯುತ್ತಿದ್ದರು. ಒಮ್ಮೊಮ್ಮೆ ಇವರ ಹಾಡುಗಳನ್ನು ಮೆಚ್ಚಿಕೊಂಡು ಜನರು ಇವರಿಗೆ ಆಯಾರು ಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಲಯದಿಂದಲೂ, ಗೇಯತೆಯಿಂದಲೂ, ಡೊಳ್ಳಿನ ಮೂಲಪೆಟ್ಟುಗಳಿಂದ ಇಂಪಾಗಿ ಬರುವ ಈ ಮಾರ್ಗದ ಪದಗಳನ್ನು ಹಾಡುವವರು ಈಗ ತೀರಾ ಕಡಿಮೆ, ಇಂಥ ಮಾರ್ಗದ ಪದಗಳನ್ನು ಹಾಡಬಲ್ಲ ಹಿರಿಯ ಜನಪದ ಕಲಾವಿದರಲ್ಲಿ ರಾಮಣ್ಣ ಕಡ್ಡಿಯವರು ಒಬ್ಬರು.

ಇವತ್ತಿನ ಆಧುನಿಕರಣದ ಯುಗದಲ್ಲಿ ಡೊಳ್ಳಿನ ಹಾಡುಗಳ ಮೂಲ ಸತ್ವವನ್ನು ಬಿಟ್ಟು ಚಿತ್ರಗೀತೆಗಳ ಚಾಲದಲ್ಲಿಯೆ ಹಾಡನ್ನು ಹಾಡುವ ಕಲಾವಿದರೆ ಬಹಳ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲೂ ಈ ಮೂಲವನ್ನು ಬಿಡದೆ ಹೊಸತನಕ್ಕೆ ಮಾರು ಹೋಗದೆ ಪರಂಪರಾಗತವಾಗಿ ಬಂದ ಮೂಲದಾಟಿಯಲ್ಲಿ ಡೊಳ್ಳಿನ ಹಾಡುಗಳನ್ನು ಹಾಡಿ ಜನ ಮೆಚ್ಚುಗೆಗೆ ಪಾತ್ರರಾದ ರಾಮಪ್ಪನವರ ಶ್ರಮ ಮೆಚ್ಚುವಂತಹದ್ದು. ಅಷ್ಟೆ ಅಲ್ಲದೆ

ತಾವು ಕಲಿತ ಎಲ್ಲ ಡೊಳ್ಳಿನ ಪದಗಳನ್ನು ಇಂದಿನ ಯುವಕರಿಗೆ ಕಲಿಸುವ ಆಸಕ್ತಿಯನ್ನು ಹೊಂದಿ ಅವುಗಳನ್ನು ಉಳಿಸಿ-ಬೆಳೆಸಲು ಪ್ರಯತ್ನಿಸುತ್ತಿದ್ದಾರೆ.

ರಾಮಪ್ಪನವರು ಕೇವಲ ಡೊಳ್ಳಿನ ಹಾಡುಗಳನ್ನು ಹಾಡುವುದರಲ್ಲಷ್ಟೆ ಪಳಗಿದವರಲ್ಲ ಬದಲಾಗಿ ವಾಲಗದಡೊಳ್ಳನ್ನು ಬಾರಿಸುವುದರಲ್ಲೂ ಅಷ್ಟೇ ನಿಸ್ಸೀಮರಾಗಿದ್ದಾರೆ. ತಮ್ಮ ತಂಡದವರನ್ನು ಕಟ್ಟಿಕೊಂಡು ತಮ್ಮೂರಿನ ಸುತ್ತಮುತ್ತಲಿನ ಊರುಗಳ ಜಾತ್ರಾಮಹೋತ್ಸವಗಳಲ್ಲಿ ಭಾಗವಹಿಸಿ ಇಂಪಾದ ಹಾಡುಗಳನ್ನು ಹಾಡಿ ಜನ ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ಡೊಳ್ಳಿನ ಹಾಡುಗಳ ಬಗ್ಗೆ ಅಪಾರ ಜ್ಞಾನವುಳ್ಳ ರಾಮಪ್ಪನವರು. ಈ ಜನಪದ ಕಲೆಯನ್ನು ಉಳಿಸಿ-ಬೆಳೆಸಲು ತಮ್ಮ ಜೀವನದ ಸುದೀರ್ಘ ಸಮಯವನ್ನು ಈ ಕಲೆಯ ಸೇವೆಗಾಗಿ ಮುಡಿಪಾಗಿಟ್ಟಿದ್ದಾರೆ. ಅರವತ್ತೈದರ ಹರೆಯದ ಈ ಹಿರಿಯ ಜನಪದ ಕಲಾವಿದನ ಕಲೆಯನ್ನು-ಪ್ರತಿಭೆಯನ್ನು ಗುರುತಿಸಿ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನಿತ್ತು ಗೌರವಿಸಿವೆ.

## ವೀರಪ್ಪ ಮಹದೇವಪ್ಪ ಹಿಂಜೆಡಿ

ಜನಪದದ ಅನೇಕ ಪ್ರಕಾರಗಳಾದ ಡೊಳ್ಳಿನ ಹಾಡು, ಭಜನಾ, ರಿವಾಯತ್-ಕರಬಲ್ ಹಾಗೂ ದೊಡ್ಡಾಟ ಪದಗಳಿಗೆ ಜೀವತುಂಬಿ ಹಾಡುವ ಅಭಿಜಾತ ಕಲಾವಿದರಾದ ವೀರಪ್ಪ ಹಿಂಜೆಡಿಯವರು ಗದುಗಿನ ಗಂಗಾಪೂರ ಪೇಟೆಯ ನಿವಾಸಿಗಳು. ತಂದೆ ಮಹದೇವಪ್ಪ ತಾಯಿ ಹನಮವ್ವನವರ ಎರಡನೆಯ ಮಗನಾಗಿ 1-6-1950ರಲ್ಲಿ ಜನಿಸಿದರು. ತಂದೆ ಮಹದೇವಪ್ಪನವರು ಬೀರದೇವರ ಉತ್ಸವ ಹಾಗೂ ಮದುವೆಯ ಸಮಾರಂಭಗಳಲ್ಲಿ ಮೊದಲಿನಿಂದಲೂ ಈರಗಾರಿಕೆಯ ಸಂಪ್ರದಾಯವನ್ನು ಮಾಡುತ್ತ ಬಂದುದರಿಂದ ಇವರಿಗೆ ಈರಗಾರಿಕೆಯ ಮನೆಯವರು ಎಂಬ ಹೆಸರೂ ಸಹ ರೂಢಿಯಲ್ಲಿದೆ. ತಂದೆ ಮಹದೇವಪ್ಪನವರೊಡನೆ ಕುಲದ ಕಲೆಯಾದ ಡೊಳ್ಳು ಬಾರಿಸುವುದು ಮತ್ತು ಬೀರದೇವರ ಎದುರು ವೀರತ್ವದಿಂದ ಅಲಗನ್ನು ಹಿಡಿದು ಈರ ಹಾಯುವುದನ್ನು, ಇವರು ತಮ್ಮ ಬಾಲ್ಯದಲ್ಲಿಯೇ ಮೈಗೂಡಿಸಿಕೊಂಡು ಬೆಳೆದರು. ತುಸು ಬೆಳೆದ ದೊಡ್ಡವನಾದಾಗ ತಂದೆಯವರು ಬೀರದೇವರ ಮುಂದೆ ಅಲಗು ಹಾಯುತ್ತಿದ್ದರೆ ಅದಕ್ಕೆ ತಕ್ಕಂತೆ ಡೊಳ್ಳು ಬಾರಿಸುವುದನ್ನು ಕಲಿತರು. ಎಸ್. ಎಸ್. ಎಲ್. ಸಿ.ಯವರೆಗೆ ಓದಿದ ಇವರು ತಮ್ಮ ವಿದ್ಯಾಭ್ಯಾಸವನ್ನು ಮನೆಯ ಹಣಕಾಸಿನ ತೊಂದರೆಯಿಂದ ಮುಂದುವರೆಸಲು ಆಗದೆ, ಓದನ್ನು ಮೊಟಕುಗೊಳಿಸಿ ಒಕ್ಕಲುತನ ಹಾಗೂ ಕುರಿಕಾಯುವ ಕೆಲಸಕ್ಕೆ ನಿಲ್ಲಬೇಕಾಯಿತು. ಆಗಾಗ ಗಂಗಾಪೂರ ಪೇಟೆಯ ಓಣಿಯಲ್ಲಿ ನಡೆಯುತ್ತಿದ್ದ ಡೊಳ್ಳು ಕುಣಿತ,

ಕರಬಲ್ಲ ಕುಣಿತ, ದೊಡ್ಡಾಟ ಮೊದಲಾದ ಜನಪದ ಕಲೆಗಳು ಬಾಲಕರಾದ ವೀರಪ್ಪನವರ ಮನಸ್ಸನ್ನು ಸೆಳೆಯಲಾರಂಭಿಸಿದವು. ಕಲೆಯ ಕಯಾಲಿಯಲ್ಲಿಯೇ ಇದ್ದ ಬಾಲಕ ವೀರಪ್ಪ ಅವುಗಳನ್ನು ಕಲಿಯುಲು ತೊಡಗಿದನು. ಮೊದಲು ತಂದೆ ಮಹಾದೇವಪ್ಪನವರಿಂದ ಡೊಳ್ಳಿನ ಮಾರ್ಗದ, ವಾರಿಯ ಹಾಗೂ ಡೊಳ್ಳಿನ ಸಂಪ್ರದಾಯದ ಪದಗಳನ್ನು ಜೊತೆ-ಜೊತೆಯಲ್ಲಿಯೆ ಡೊಳ್ಳಿನ ಕೈಪೆಟ್ಟು ಮತ್ತು ವಾಲಗದ ಪೆಟ್ಟುಗಳನ್ನು ಕಲಿತು ಅದರಲ್ಲಿಯೇ ಯಶಸ್ವಿಯನ್ನು ಪಡೆದು, ಆಗಾಗ ಓಣಿಯಲ್ಲಿ ನಡೆಯುವ ಮನರಂಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮುಂಚೂಣಿಯಲ್ಲಿದ್ದುಕೊಂಡು ತಮ್ಮ ಕಂಚಿನ ಕಂಠದಿಂದ ಹಾಡುಗಳನ್ನು ಹಾಡಿ, ಕೂಡಿದ ಜನ ಸಮೂಹವನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಅಲ್ಲದೆ ಅವರ ಪ್ರಶಂಸೆಗೆ ಪಾತ್ರರಾಗುತ್ತಿದ್ದರು.

ದೊಡ್ಡಾಟ, ಭಜನಿ, ಕರಬಲ್ಲ ಮತ್ತು ರಿವಾಯತ್ ಪದಗಳನ್ನು ಹಾಡುವುದರಲ್ಲಿ ಪಳಗಿದವರಾಗಿದ್ದರೂ ಸಹ ಇವರ ಅಚ್ಚುಮೆಚ್ಚಿನ ಕಲೆ ಡೊಳ್ಳು ಬಾರಿಸುವುದು ಮತ್ತು ಡೊಳ್ಳಿನ ಕೈಪೆಟ್ಟಿಗೆ ತಕ್ಕಂತೆ ಹಳೆಯ ಮಾರ್ಗದ ಮತ್ತು ವಾರಿಪದಗಳನ್ನು ಸುಶ್ರಾವ್ಯವಾಗಿ ಹಾಡುವುದು. ಈ ಡೊಳ್ಳಿನ ಹಾಡುಗಳನ್ನು ಹಾಡುವುದರಲ್ಲಿ ತಮ್ಮದೆ ಆದ ವಿಶಿಷ್ಟ ಶೈಲಿಯನ್ನು ಮೈಗೂಡಿಸಿಕೊಂಡಿರುವ ಇವರು ಹಲವಾರು ಡೊಳ್ಳಿನ ಮೇಳಗಳ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಇಲ್ಲವೆ ದ್ವಿತೀಯ ಸ್ಥಾನಗಳನ್ನು ಅನೇಕ ಬಾರಿ ಪಡೆದುಕೊಂಡಿದ್ದಾರೆ.

ಹಲವಾರು ಜನಪದ ಕಲೆಗಳನ್ನು ಮೈಗೂಡಿಸಿಕೊಂಡಿರುವ ಇವರು ತಮ್ಮ ಬಾಲ್ಯದಲ್ಲಿಯೇ ಮೂಡಲಪಾಯ ಬಯಲಾಟಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಇವರ ಮತ್ತೊಂದು ವಿಶೇಷ. ಬಯಲಾಟದಲ್ಲಿ ಪ್ರಮುಖವಾಗಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸಿ ಜನಮನ್ನಣೆಯನ್ನು ಪಡೆದವರು. ಬಯಲಾಟಗಳ ಯಾವುದೇ ಸ್ತ್ರೀ ಪಾತ್ರವಿರಲಿ, ತಮ್ಮ ಹಾಡುಗಾರಿಕೆ, ಹಾವ-ಭಾವ ಮತ್ತು ಕುಣಿತಗಳ ಮುಖಾಂತರ ಆ ಪಾತ್ರಗಳಿಗೆ ಜೀವ ತುಂಬಿ ಅಭಿನಯಿಸುವಂತವರು. ಗಿರಿಜಾ ಕಲ್ಯಾಣದಲ್ಲಿ ರತಿದೇವಿ, ಭೂಕೈಲಾಸದಲ್ಲಿ ಮಂಡೋದರಿ, ವೀರ ಅಭಿಮನ್ಯುವಿನಲ್ಲಿ ಉತ್ತರೆ, ಕಿರಾತಾರ್ಜುನರ ಕಾಳಗದಲ್ಲಿ ಪಾರ್ವತಿ, ಕರ್ಣಪರ್ವದಲ್ಲಿ ದ್ರೌಪದಿಯಾಗಿ ಹೀಗೆ ಹತ್ತು ಹಲವಾರು ಸ್ತ್ರೀಪಾತ್ರಗಳನ್ನೆ ಅಭಿನಯಿಸಿ ದೊಡ್ಡಾಟಗಳ ಭಾಷೆ, ಪಾತ್ರಗಳಾಡುವ ವಿವಿಧ ಮಾತಿನ ಶೈಲಿ, ಸನ್ನಿವೇಶ ನಿರ್ಮಾಣ, ಪಾತ್ರಗಳ ವೇಷಭೂಷಣ, ಹಾಡುಗಾರಿಕೆ ಮುಂತಾದವುಗಳನ್ನು ಕರಗತ ಮಾಡಿಕೊಂಡು ಅದರಲ್ಲಿ

ಸಾಕಷ್ಟು ಅನುಭವವನ್ನು ಪಡೆದರು.

ಜನಪದ ಪರಿಸರದಲ್ಲಿ ಹುಟ್ಟಿ ಬೆಳೆದ ಇವರು ಪ್ರತಿವರ್ಷವು ನಡೆಯುವ ಮೊಹರಂ ಹಬ್ಬದಲ್ಲಿ ತಮ್ಮದೇ ಆದ ಹೆಜ್ಜೆಯ ಮೇಳವನ್ನು ಸಿದ್ಧಪಡಿಸಿ, ಮೇಳದ ನಾಯಕ ಕಲಾವಿದರಾಗಿ ಹೆಜ್ಜೆಯ ಹಾಡುಗಳನ್ನು ಹಾಡುವುದರೊಂದಿಗೆ ತಮ್ಮ ಮೇಳದ ಪ್ರದರ್ಶನವನ್ನು ನೀಡಿ ಜನಮೆಚ್ಚುಗೆಯನ್ನು ಪಡೆದಿದ್ದಾರೆ. ಕೆಲವೊಮ್ಮೆ ಹೆಜ್ಜೆಯ ಮೇಳದ ಹಾಡುಗಳನ್ನು ಸ್ವತಃ ತಾವೇ ಕಟ್ಟಿ ಹಾಡುವುದನ್ನು ಕರಗತ ಮಾಡಿಕೊಂಡಿರುವರು. ಗದುಗಿನ ಸುತ್ತಮುತ್ತಲಿನ ಊರುಗಳಲ್ಲಿ ನಡೆದ ಜನಪದ ಹಾಡಿನ ಸ್ಪರ್ಧೆಗಳಲ್ಲಿ ರಿವಾಯತ್ ಇಲ್ಲವೆ ಕರಬಲ್ ಹಾಡುಗಳನ್ನು ಹಾಡಿ ಅನೇಕ ಬಹುಮಾನಗಳನ್ನು ಪಡೆದಿದ್ದಾರೆ. ರಿವಾಯತ್-ಕರಬಲ್ ಹಾಡುಗಳನ್ನು ಹಿಮ್ಮೇಳದೊಂದಿಗೆ ಹಾಡಲು ಪ್ರಾರಂಭಿಸಿದರೆ ಸಾಕು ಕೂಡಿದ ಜನ ಸಮೂಹ ಬೆಪ್ಪು ಬೆರಗಾಗಿ ಕೇಳುತ್ತಿತ್ತು. ಅಲ್ಲದೆ ಇವರ ಹಾಡುಗಳನ್ನು ಕೇಳಿದ ಜನರಲ್ಲಿ ಕೆಲವರು ಪ್ರೀತಿಯ ದ್ಯೋತಕವಾಗಿ ಆಯಾರಿನ ಸುರಿಮಳೆಯನ್ನೆ ಹರಿಸುತ್ತಿದ್ದರು ಮತ್ತು ತಮ್ಮ ಕೋರಿಕೆಯ ಹಾಡುಗಳನ್ನು ಹಾಡುವಂತೆ ಕೇಳಿಕೊಳ್ಳುತ್ತಿದ್ದರು. ಅವರನ್ನು ಖುಷಿ ಪಡಿಸಲು ಮತ್ತೇ ಹಲವಾರು ಹಾಡುಗಳನ್ನು ಭಿನ್ನ ಭಿನ್ನ ಶೈಲಿಯಲ್ಲಿ ಹಾಡುತ್ತ ಕೇಳುಗರ ಪ್ರೀತಿಗೆ ಹಾಗೂ ಮೆಚ್ಚುಗೆಗೆ ಪಾತ್ರರಾಗುತ್ತ ಬಂದರು.

ವೀರಪ್ಪನವರದು ಒಕ್ಕಲುತನದ ಮನೆತನವಾದುದರಿಂದ ಪ್ರತಿವರ್ಷವು ಸುಗ್ಗಿಯ ಹಾಡುಗಳನ್ನು ಹಾಡುವುದು, ಹಂತಿ ಹೊಡೆಯುವಾಗ ಮತ್ತು ಕೆಲವೊಮ್ಮೆ ಉಳಕ ಹೊಡೆಯುವಂತಹ ವೇಳೆ ಕೆಲಸ ಮಾಡುವವರಿಗೆ ಬೇಸರವಾಗಬಾರದೆಂದು ಎಲ್ಲರೂ ಎಚ್ಚರದಿಂದ ಕೆಲಸ ಮಾಡಬೇಕೆಂದು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ಲಘು ಹಾಸ್ಯದಿಂದೊಡಗೂಡಿದ ಹಂತಿಪದಗಳನ್ನು ಹಾಡುತ್ತಿದ್ದರು ಇವರಿಗೆ ಸುಮಾರು ಮೂನ್ನೂರಿಂದ ನಾಲ್ಕುನೂರು ತ್ರಿಪದಿಗಳು ಬರುತ್ತವೆ. ಇವರ ಪ್ರತಿಭೆಯನ್ನು ಗುರುತಿಸಿದ ಗದುಗಿನ ಗಂಗಾಪೂರ ಪೇಟೆಯ ಒಕ್ಕಲು ಮನೆತನದವರು ಇವರಿಗೆ ವಿಳ್ಯೆಯವನ್ನು ಕೊಟ್ಟು ತಮ್ಮ ಹೊಲಗಳಿಗೆ ಕರೆದುಕೊಂಡು ಹೋಗಿ ಹಂತಿ ಪದಗಳನ್ನೂ ಹಾಡಿಸುತ್ತಿದ್ದರು. ಅಲ್ಲದೆ ರಾಶಿ ಮುಗಿದ ನಂತರ ದವಸ-ಧಾನ್ಯಗಳನ್ನು ಮತ್ತು ಉಡುಗೊರೆಯನ್ನು ನೀಡಿ ತಮ್ಮ ಖುಷಿ ಮೆಚ್ಚುಗೆಯನ್ನು ತೋರುತ್ತಿದ್ದರು. ಇತ್ತಿತ್ತಲಾಗಿ ಹಂತಿ ಹೊಡೆಯುವುದು ಮತ್ತು ಉಳಕ ಹೊಡೆಯುವುದು ನಿಂತು ಹೋಗಿದೆ ಹೀಗಾಗಿ ಈ ಹಂತಿ ಪದಗಳು ನಶಿಸಿ ಹೋಗದಿರಲೆಂದು ಅಳಿವಿನ ಅಂಚಿನಲ್ಲಿರುವ ಈ ಜನಪದ ಕಲೆ ಉಳಿದು ಬೆಳೆಯಬೇಕೆಂಬ ಬಯಕೆಯಿಂದ

ಜನಪದ ಪ್ರೇಮಿಯಾದ ವೀರಪ್ಪನವರು ಇಂದಿನ ಯುವಕರಿಗೆ ಅವುಗಳನ್ನು ಕಲಿಸಿಕೊಡುತ್ತಿದ್ದಾರೆ.

ಗಂಗಾಪೂರ ಪೇಟೆಯ ಹೋಳಿಹಬ್ಬ ವೀರಪ್ಪನವರ ಹಾಡುಗಾರಿಕೆಯಿಂದಲೇ ಆರಂಭಗೊಂಡು ಅವರಿಂದಲೇ ಮುಗಿಯುವಂತಹದ್ದು. ಹಬ್ಬದ ಸಂಜೆ ಕಾಮನಕಟ್ಟೆಯ ಮೇಲೆ ಕಾಮಣ್ಣನನ್ನು ಶೃಂಗರಿಸಿ ಪೇಟೆಯ ಬೇರೆ-ಬೇರೆಯ ಓಣಿಯವರು ಕಟ್ಟೆಯ ಎದುರಿಗೆ ಬಂದು ಗುಂಪು-ಗುಂಪಾಗಿ ಕುಳಿತುಕೊಳ್ಳುವರು. ಹಾಡಿನ ಸ್ಪರ್ಧೆಯು ವೀರಪ್ಪನವರ ಹಾಡಿನಿಂದಲೇ ಪ್ರಾರಂಭವಾಗಿ ಬೇರೆ ಬೇರೆ ಓಣಿಯವರು ಒಬ್ಬರಾದನಂತರ ಒಬ್ಬರು ರಾತ್ರಿ-ಬೆಳತನಕ ಹಾಡುತ್ತಾರೆ.

ಈ ಹಾಡುಗಾರರಲ್ಲಿ ಕಂಚಿನ ಕಂಠದ ವೀರಪ್ಪನವರ ಹಾಡುಗಳು ಕೇಳುಗರ ಮನಮುಟ್ಟುವಂತಿರುತ್ತಿದ್ದವು. ಕೇವಲ ಓಣಿಯ ಜನರ ಮೆಚ್ಚಿಗೆಯನ್ನಷ್ಟೆ ಅಲ್ಲದೆ ನೆರೆದ ಜನರೆಲ್ಲರ ಮೆಚ್ಚಿಗೆಗೆ ಪಾತ್ರರಾದವರಾಗಿದ್ದರು. ಹೀಗೆ ಈ ಹಬ್ಬಕ್ಕೆ ಕಳೆ ನೀಡುವವರೆ ಈ ವೀರಪ್ಪನವರು.

"ಶ್ರೀ ದುರ್ಗಾದೇವಿ ಪ್ರಸಾದಿತ ಭಜನಾ ಮಂಡಳಿ" ಯನ್ನು ಹುಟ್ಟು ಹಾಕಿ ಅನೇಕ ಜಾನಪದ ಮೇಳಗಳಲ್ಲಿ ಪಾಲ್ಗೊಂಡು ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ. ಜಾತ್ರಾ ಮಹೋತ್ಸವಗಳಲ್ಲಿ ಪಾಲ್ಗೊಂಡು ತಮ್ಮ ಕಲೆಯ ಪ್ರತಿಭೆಯನ್ನು ಮೆರೆದಿದ್ದಾರೆ. ಹಬ್ಬ-ಹರಿದಿನಗಳಲ್ಲಿ ವಿಳ್ಯೆ ಕೊಟ್ಟವರ ಮನೆ-ಮನೆಗೆ ಹೋಗಿ ತಮ್ಮದೇ ಆದ ವಿಶಿಷ್ಟ ಶೈಲಿಯ ಅನುಭಾವದ ಭಜನಾಪದಗಳನ್ನು ಹಾಡಿ ಜನರ ಮೆಚ್ಚುಗೆಯನ್ನು ಗಳಿಸುವಲ್ಲಿ ಸಫಲತೆಯನ್ನು ಪಡೆದಿದ್ದಾರೆ. ಹೀಗಾಗಿ ಇವರ ಭಜನಾ ಮೇಳವು ಗದಗ-ಬೆಟಗೇರಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿಯೇ ಬಹಳಷ್ಟು ಜನಪ್ರಿಯತೆಯನ್ನು ಗಳಿಸಿ ಒಂದು ವಿಶಿಷ್ಟ ಸ್ಥಾನದೊಂದಿಗೆ ಬೆಳಗುತ್ತಿದೆ ವೀರಪ್ಪನವರ ಮುಖಂಡತ್ವದಲ್ಲಿ ಬೆಳೆದ ಈ ಭಜನಾ ಮೇಳವು "ಗದಗ ಜಿಲ್ಲಾ ವಾಣಿಜ್ಯ ಸಂಘ", 'ಜಿಲ್ಲಾ ಕೈಗಾರಿಕಾ ಕೇಂದ್ರ', 'ಸುವರ್ಣ ಕರ್ನಾಟಕ ಕಲಾವೈಭವ'ದವರು ಏರ್ಪಡಿಸಿದ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ತಮ್ಮ ಕಲಾ ಧೀಮಂತಿಕೆಯನ್ನು ಪ್ರದರ್ಶಿಸಿ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕಗಳನ್ನು ಪಡೆದಿದ್ದಾರೆ. ಮೇಲಾಗಿ ಧಾರವಾಡ ಆಕಾಶವಾಣಿಯಲ್ಲಿಯೂ ತಮ್ಮ ಭಜನಾ ಪದಗಳ ಕಾರ್ಯಕ್ರಮವನ್ನು ನೀಡಿದ್ದಾರೆ. ಬೆಟಗೇರಿಯ ಹೊಸಗರಡಿ ಮೇಳದ ಕಲಾವಿದರೊಂದಿಗೆ ಅತಿಥಿ ಕಲಾವಿದರಾಗಿ ಸೇರಿಕೊಂಡು 'ತಿರುನೀಲಕಂಠ' ಮತ್ತು 'ಗಿರಿಜಾ ಕಲ್ಯಾಣ' ಎಂಬ ಬಯಲಾಟಗಳು ದೂರದರ್ಶನ ಕೇಂದ್ರದಿಂದ ಪ್ರಸಾರಗೊಂಡ ನಾಟಕಗಳಲ್ಲಿ ತಮ್ಮ

ಹಾಡುಗಾರಿಕೆಯನ್ನು ತೋರಿಸಿಕೊಟ್ಟಿದ್ದಾರೆ. ಸಾಹಿತ್ಯ ಪ್ರೇಮಿಗಳಾದ ಇವರು 'ಡೊಳ್ಳಿನ ಹಾಡುಗಳು' ಮತ್ತು 'ಹಂತಿ-ಹೋಳಿ ಹಾಡುಗಳು' ಎಂಬ ಎರಡು ಸಾಹಿತ್ಯ ಕೃತಿಗಳನ್ನು ಪ್ರಕಟಿಸಿರುವುದನ್ನು ನೋಡಿದರೆ ಇವರೊಬ್ಬ ಧೀಮಂತ ಕಲಾವಿದರು ಮೇಲಾಗಿ ಜನಪದ ಸಾಹಿತ್ಯದ ಬಗೆಗೆ ತುಂಬಾ ಕಳಕಳಿಯುಳ್ಳವರು ಎಂಬುದು ಸ್ಪಷ್ಟವಾಗುತ್ತದೆ.

## ಹನಮಪ್ಪ ಸತ್ಯಪ್ಪ ಮರ್ಲಾಪುರ

ಹಾತಲಗೇರಿ ಗದಗ ಪಟ್ಟಣದಿಂದ ಐದು ಕಿಲೋಮೀಟರ ದೂರವಿರುವ ಒಂದು ಸಣ್ಣ ಹಳ್ಳಿ, ಕಲ್ಲು ಕಣವಿಗಳ ಊರು. ಆದರೂ ಸಾಂಸ್ಕೃತಿಕ ಕೇಂದ್ರವೆಂದೇ ಪ್ರಸಿದ್ಧ ಇಂಥ ಹಳ್ಳಿಯಲ್ಲಿ 1946ರಲ್ಲಿ ಜನಿಸಿದ ಹನಮಪ್ಪ ಸತ್ಯಪ್ಪ ಮುರ್ಲಾಪುರ ಅವರು ಕಲಿತದ್ದು ಕೇವಲ ಎರಡನೆಯ ತರಗತಿಯವರೆಗೆ ಮಾತ್ರ. ಊರಿನ ಪ್ರಮುಖ ದೇವರಾದ ಬೇವಿನಮರದ ಸತ್ಯಮ್ಮದೇವಿಯ ಗುಡಿಯಲ್ಲಿ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಸಂಜೆ ನಡೆಯುತ್ತಿದ್ದ ಡೊಳ್ಳಿನ ಹಾಡುಗಳನ್ನು ಕೇಳಿ ಮತ್ತು ಪ್ರತಿದಿನ ಪೂಜೆಯ ವೇಳೆಯಲ್ಲಿ ಬಾರಿಸುತ್ತಿದ್ದ ಡೊಳ್ಳಿನ ವಾದನ ಇವೆಲ್ಲವುಗಳು ಬಾಲಕ ಹನಮಪ್ಪನ ಮೇಲೆ ಪರಿಣಾಮವನ್ನು ಬೀರಿ ಆಸಕ್ತಿಯಿಂದ ಇದನ್ನು ನಾನು ಕಲಿಯಬೇಕು, ಹಾಡಬೇಕು, ಕುಣಿಯಬೇಕು ಎಂಬ ಲವಲವಿಕೆಯು ಬೇರೂರಿ ಶಾಲೆಗೆ ಶರಣು ಹೊಡೆಯುವಂತಾಯಿತು.

ಸತ್ಯಮ್ಮದೇವಿಯ ಗುಡಿಯಲ್ಲಿ ಒಮ್ಮೆ ಹಿರಿಯರ ಸಭೆ ಸೇರಿ ಸಣ್ಣ ಸಣ್ಣ ಹುಡುಗರಿಗೆ ಹಾಗೂ ಯುವಕರಿಗೆ ಡೊಳ್ಳಿನ ಹಾಡು, ದಿಮ್ಮು, ವಾಲಗದ ಪೆಟ್ಟು, ಹಾಡು ಭಜನೆಪದಗಳನ್ನು ಕಲಿಸಬೇಕೆಂದು ತೀರ್ಮಾನಿಸಿದರು ಅದಕ್ಕಾಗಿ ಸತ್ಯಪ್ಪ ಲೆಂಕೆಪ್ಪ ಹೊಂಬಳ ಎಂಬುವರನ್ನು ಗೊತ್ತು ಮಾಡಿ ಪ್ರತಿದಿನ ಸಂಜೆ ದೇವಿಯ ಗುಡಿಯಲ್ಲಿ ತರಬೇತಿಯನ್ನು ನೀಡುವಂತೆ ಹೇಳಿದರು. ಆ ವೇಳೆಯಲ್ಲಿ ಬಾಲಕ ಹನಮಪ್ಪನ ಕಲಿಕೆಯ ದಾಹ ಎಷ್ಟಿತ್ತೆಂದರೆ ಗುರುಗಳು ಹೇಳುತ್ತಿದ್ದ ಹಾಡುಗಳನ್ನು, ದಿಮ್ಮು ನುಡಿಸುವುದನ್ನು ಹಾಗೂ ವಾಲಗದ ಪೆಟ್ಟು ಹಾಕುವುದನ್ನು ತಪ್ಪದೆ ಒಳ್ಳೆಯ ಆಸಕ್ತಿಯಿಂದ ಕಲಿತನು. ಬಾಲಕ ಹನಮಪ್ಪ, ಗುರುಗಳು ಕಲಿಸಿದ ಸಾವಿರಾರು ಸಾಲಿನ ಡೊಳ್ಳಿನ ಪದಗಳನ್ನು ಸ್ವರ ಶುದ್ಧವಾಗಿ ದಿಮ್ಮಿನ ಬಡಿತಕ್ಕೆ ಹಾಡಲು ಪ್ರಾರಂಭಿಸಿದ. ಇವನ ಜಾಣ್ಮೆಯನ್ನು ಕಂಡ ಗುರುಗಳು ತಮಗೆ ಬರುವ ಎಲ್ಲ

ಡೊಳ್ಳಿನ ಹಾಡುಗಳನ್ನು ಡೊಳ್ಳಿನ ಪೆಟ್ಟು ಹೊಳಕಿ ಮುಂತಾದವುಗಳನ್ನು ಕಲಿಸಿದರಲ್ಲದೆ, ಡೊಳ್ಳಿನ ಹಾಡುಗಳ ಮಧ್ಯದಲ್ಲಿ ಹೇಳುವ ರ್‍ವಾಣಗಳನ್ನು ಸಹ ಕಲಿಸಿದರು.

ಹನಮಪ್ಪನವರು ದಿಮ್ಮು ಹಿಡಿದು ತಮ್ಮ ಮೇಳದವರಾದ ಸತ್ಯಪ್ಪ ಹೊಂಬಳ, ಕರಿಯಪ್ಪ ಕುರುಬರ, ಯಲ್ಲಪ್ಪ ಮುರ್ಲಾಪುರ, ಸೋಮಪ್ಪ ಕಂಬಳಿ, ನಿಂಗಪ್ಪ ಮುರ್ಲಾಪುರ, ಹನಮಪ್ಪ ಹೂವನ್ನವರ ಜೊತೆಗೂಡಿ ಹಾಡಲು ಪ್ರಾರಂಭಿಸಿದರೆಂದರೆ, ಕೇಳುಗರು ದಿಂಗವರೆದು ಆ ಹಾಡಿನ ನಾದಕ್ಕೆ ಮರುಳಾಗಿ ತಲ್ಲೀನತೆಯಿಂದ ಮೈಮರೆತು ಕುಳಿತು ಕೇಳುತ್ತಾರೆ. ಒಂದು ಕಥನ ಗೀತೆಯನ್ನು ಸಂಧು-ಸಂಧು ಮಾಡಿ ಹಾಡುವುದು, ಪ್ರತಿ ಸಂಧಿಗೊಂದು ನೀತಿಬೋಧಕ ಹಾಡನ್ನು ಹಾಡುವುದು ಇವರ ವೈಶಿಷ್ಟ್ಯ. ಹೀಗೆ ಇವರು ದೇವರ ಹಬ್ಬ-ಹರಿದಿನಗಳಲ್ಲಿ ಒಂದು ಹಗಲು-ಒಂದು ರಾತ್ರಿ ನಿರಂತರವಾಗಿ ಹಾಡಬಲ್ಲರು.

ನಮ್ಮ ಜನಪದ ಕಲಾವಿದರು ಹಳ್ಳಿಯ ಒಂದೇ ಕಲೆಗೆ ಕಟ್ಟು ಬೀಳಲಾರದೆ ಆ ಹಳ್ಳಿಯ ಸಮಗ್ರ ಕಲೆಗಳನ್ನು ಮೈಗೂಡಿಸಿಕೊಂಡಿರುತ್ತಾದೆ. ಅಂದರೆ ಒಬ್ಬ ಜನಪದ ಕಲಾವಿದ ಕನಿಷ್ಠ ಮೂರು-ನಾಲ್ಕು ಕಲೆಗಳನ್ನಾದರೂ ಮೈಗೂಡಿಸಿಕೊಂಡಿರುತ್ತಾರೆ. ಅದೇ ರೀತಿ ಹನಮಪ್ಪನವರು ಕೂಡ ಕೇವಲ ಡೊಳ್ಳಿನ ಹಾಡುಗಳನ್ನಷ್ಟೆ ಅಲ್ಲದೆ ಭಜನೆಪದಗಳನ್ನು ಹಾಡುವುದರಲ್ಲಿಯೂ, ರ್‍ವಾಣಗಳನ್ನು ಹೇಳಿವುದರಲ್ಲಿಯೂ, ಎತ್ತಿದ ಕೈ. ಡೊಳ್ಳಿನ ಹಾಡುಗಳನ್ನು ಕೇಳುವ ಜನರಿಗೆ ಬೇಸರವಾಗದಂತೆ ಮಧ್ಯೆ ಮಧ್ಯೆ ರ್‍ವಾಣಗಳನ್ನು ಹೇಲುತ್ತ ಕೇಳುಗರನ್ನ ಮನರಂಜಿಸುತ್ತಾರೆ. ಇವರ ಹೇಳುವ ರ್‍ವಾಣಗಳನ್ನು ಜನ ಮಂತ್ರ ಮುಗ್ಧರಾಗಿ ಕೇಳುತ್ತಾರೆ. ಹಾಗೆಯೇ ಭಜನೆಯ ಪದಗಳನ್ನು ತುಂಬಾ ಸುಶ್ರಾವ್ಯವಾಗಿ ಹಾಡುತ್ತಾರೆ. ಅನೇಕ ಭಜನಾ ಪದಗಳನ್ನು ಬಲ್ಲ ಇವರು ಕನಿಷ್ಟ ಎಂಟು ತಾಸುಗಳವರೆಗೆ ನಿರಂತರವಾಗಿ ಹಾಡಬಲ್ಲರು.

ಹನಮಪ್ಪನವರ ಇನ್ನೊಂದು ವಿಶೇಷವೆಂದರೆ ವಾಲಗ ನುಡಿಸುವುದು. ಈ ವಾಲಗವನ್ನು ನುಡಿಸುವ ವೇಳೆಯಲ್ಲಿ ತಮ್ಮ ಪಾದಕ್ಕೆ ಮರಗಾಲನ್ನು ಕಟ್ಟಿಕೊಂಡು, ನಡಕ್ಕೆ ವಾಲಗದ ಡೊಳ್ಳು ಕಟ್ಟಿ, ನೀರು ತುಂಬಿದ ತಾಂಬ್ರದ ಕೊಡದ ಕಂಠವನ್ನು ಬಾಯಲ್ಲಿ ಎತ್ತಿ ಹಾಗೆಯೇ ಬಾಯಲ್ಲೆ ಹಿಡಿದುಕೊಂಡು, ಹೆಗಲ ಮೇಲೆ ಒಬ್ಬ ಸಣ್ಣ ಹುಡುಗನನ್ನು ಹೊತ್ತುಕೊಂಡು, ವಾಲಗದ ಡೊಳ್ಳಿನವರ ಮಧ್ಯದಲ್ಲಿ ವಾಲಗದ ಪೆಟ್ಟು ಹೊಳಕಿಯನ್ನು ಬಾರಿಸುವುದು ಅತ್ಯಂತ ವೈಶಿಷ್ಟ್ಯ ಪೂರ್ಣವಾಗಿದೆ. ಇವರಲ್ಲಿ ಮತ್ತೊಂದು ವಿಶೇಷತೆ ಇದೆ. ಅದೇನೆಂದರೆ ನಮ್ಮ ಉತ್ತರ ಕರ್ನಾಟಕದ ಕರಡಿ ಮಜಲಿನಲ್ಲಿ ಮಾತ್ರ ಶಹನಾಯಿಯನ್ನು ಬಳಸುತ್ತಾರೆ. ಆದರೆ ಹನಮಪ್ಪನವರು

ದಿಮ್ಮಿನ ಡೊಳ್ಳನ್ನು ನಡಕ್ಕೆ ಕಟ್ಟಿ ಅಕ್ಕಪಕ್ಕದ ದಿಮ್ಮಿನವರೊಂದಿಗೆ ಹಾಗೂ ಡೊರಿಕೆಯವನೊಂದಿಗೆ ಶಹನಾಯಿಯವನು ಬಾರಿಸುವ ರಾಗದ ಚೀಜಿಗೆ ತಕ್ಕಂತೆ ಹೊಳಕಿ ಪೆಟ್ಟು ನುಡಿಸುವುದು ಇವರ ಕಲಾ ವೈಶಿಷ್ಟ್ಯ. ಹೀಗೆ ಹಾಡುವುದರಲ್ಲಿಯೂ ಕುಣಿತದಲ್ಲಿಯೂ ತಮ್ಮದೇ ಆದ ವಿಶೇಷತೆಯನ್ನು ಹನಮಪ್ಪನವರು ರೂಢಿಸಿಕೊಂಡಿದ್ದಾರೆ. ಇವರ ಕುಣಿತ ಕಂಡು ಮಾರುಹೋಗದ ಜನರೇ ಇಲ್ಲ.

ಹನಮಪ್ಪನವರ ಜನಪದ ಕಲೆ ಹಾತಲಗೇರಿಗೆ ಮಾತ್ರ ಸೀಮಿತವಾಗಿಲ್ಲ. ಅವರ ಕಲೆಯನ್ನು ಕಂಡು ಮೆಚ್ಚಿದ ಅಕ್ಕಪಕ್ಕದ ಊರಿನವರು ಇವರನ್ನು ಜಾತ್ರಾ ಮಹೋತ್ಸವಗಳಿಗೆ ಆ ಮಂತ್ರಿಸುತ್ತಾರೆ. ಬಳ್ಳಾರಿ, ನರಸಾಪುರ, ಹುಬ್ಬಳ್ಳಿ, ಗದಗ ಹೀಗೆ ಇನ್ನೂ ಅನೇಕ ಸ್ಥಳಗಳಲ್ಲಿ ತಮ್ಮ ಪ್ರದರ್ಶನಗಳನ್ನು ನೀಡಿದ್ದಾರೆ. ಗದುಗಿನ ಗಂಗಾಪೂರ ಪೇಟೆಯ ದುರ್ಗಾದೇವಿ ಜಾತ್ರೆಯ ಸಮಯದಲ್ಲಿ ಪ್ರತಿವರ್ಷವು ತಮ್ಮ ಹಾಡುಗಾರಿಕೆಯ ಮತ್ತು ಕುಣಿತಗಳ ಪ್ರದರ್ಶನವನ್ನು ನೀಡುತ್ತಾ ಬಂದಿದ್ದಾರೆ. ಅಷ್ಟೆ ಅಲ್ಲದೆ ಹೋದಲ್ಲೆಲ್ಲ ಜನರ ಮೆಚ್ಚುಗೆಯನ್ನು ಗಳಿಸುತ್ತಾ ಬಂದಿರುವ ಇವರು ಆಕಾಶವಾಣಿ ಕಲಾವಿದರು ಸಹ ಹೌದು.

ಜನಪದದ ಅಭಿಜಾತ ಕಲಾವಿದರಾದ ಹನಮಪ್ಪನವರು ಜನಪದ ಕಲೆಯ ಬಗ್ಗೆ ಸಾಕಷ್ಟು ಕಳಕಳಿ ಹಾಗೂ ಕಾಳಜಿ ಉಳ್ಳವರಾಗಿದ್ದಾರೆ. ಅಳಿವಿನ ಅಂಚಿನಲ್ಲಿರುವ ಜನಪದ ಕಲೆಯನ್ನು ಉಳಿಸಿ-ಬೆಳೆಸಬೇಕು ಎಂಬ ದೃಢ ನಿಶ್ಚಲತೆಯನ್ನು ಹೊಂದಿದ್ದಾರೆ. ಅದಕ್ಕಾಗಿ ಶ್ರಮಿಸುತ್ತಿದ್ದಾರೆ. ಯುವಕರ ಸಂಘ ಕಟ್ಟಿ ತಮಗೆ ತಿಳಿದಿರುವ ಎಲ್ಲ ಜನಪದ ಕಲೆಯನ್ನು ಪ್ರತಿದಿನ ಅವರಿಗೆ ಹೇಳಿಕೊಡುತ್ತಿದ್ದಾರೆ. ಇಳಿವಯಸ್ಸಿನಲ್ಲಿಯೂ ಇವರ ಉತ್ಸಾವ ಕುಂದಿಲ್ಲ. ಜನಪದ ಕಲೆಯ ಉಳಿವಿಗಾಗಿ ದುಡಿಯುವ ತುಡಿತ ಕಡಿಮೆಯಾಗಿಲ್ಲ. ಇವರ ಉತ್ಸಾಹವನ್ನು ಕಂಡ ಯುವಪೀಳಿಗೆಯವರು ಆಸಕ್ತಿಯಿಂದ ಕೇಳಿ ಕಲಿಯುತ್ತಿದ್ದಾರೆ. ಇವರ ಶ್ರಮ ಸಾರ್ಥಕವಾಗಲಿ.

## ಮಾರುತೆಪ್ಪ ಬಲವಂತಪ್ಪ ಭಜಂತ್ರಿ

ಶಹನಾಯಿ ಹಾಗೂ ಘಂಟಾತರಂಗದ ವಾದಕರೆಂದೇ ಪ್ರಸಿದ್ಧರಾದ ಮಾರುತೆಪ್ಪ ಭಜಂತ್ರಿಯವರು ಗದುಗಿನ ಬೆಟಗೇರಿಯವರು. ತಂದೆ ಬಲವಂತಪ್ಪ, ತಾಯಿ ಭರಮಮ್ಮನವರ ಮಗನಾಗಿ 1940ರಲ್ಲಿ ಜನಿಸಿದರು. ಕೇವಲ ಮೂರನೆಯ ತರಗತಿಯವರೆಗೆ ಓದಿದ್ದಾರೆ. ಚಿಕ್ಕಂದಿನಿಂದಲೆ ಸಂಗೀತದ ಬಗ್ಗೆ ಆಸಕ್ತಿ ಇದ್ದ

ಇವರು ವಿರುಪಾಕ್ಷಪ್ಪ ಭಜಂತ್ರಿಯವರಿಂದ ಶಹನಾಯಿ, ಕರಡಿ, ಹಲಗಿ ಹಾಗೂ ಘಂಟಾ ತರಂಗ ವಾದನಗಳನ್ನು ತೋಂಡಿಯಾಗಿ ಕಲಿತು, ಬೆಟಗೇರಿಯ ದಿವಂಗತ ಪಂಡಿತ ಹೀರಾಸಿಂಗ ಗವಾಯಿಗಳ ಶಿಷ್ಯರಾಗಿ ಸಂಗೀತದ ಶಾಸ್ತ್ರೀಯ ದೀಕ್ಷೆಯನ್ನು ಪಡೆದರು. ಬಡತನದ ನಡುವೆಯೂ ಈ ಕಲೆಯನ್ನು ಕರಗತ ಮಾಡಿಕೊಂಡಿರುವ ಇವರು ಗದಗ-ಬೆಟಗೇರಿಯ ಹಿರಿಯ ಜನಪದ ಕಲಾವಿದರಲ್ಲಿ ಒಬ್ಬರೆನಿಸಿದ್ದಾರೆ.

ಜಯ ಘಂಟೆ ಹೆಸರಿನ ಹದಿನಾರು ದುಂಡನೆಯ ಹದಿನಾಲ್ಕು ಜಾಗಟೆಗಳನ್ನು ಒಂದು ನಿಲುವಾದ ಚಟ್ಟಿಗೆ ಕಟ್ಟಿ ಎರಡು ದಂಡಗಳನ್ನು ಎರಡು ಕೈಯಲ್ಲಿ ಹಿಡಿದು ಶಹನಾಯಿ, ಕರಡಿ ಹಾಗೂ ಚೌಗಡಿಯ ತಾಳಕ್ಕೆ ತಕ್ಕಂತೆ ನುಡಿಸುವ ಘಂಟಾ ತರಂಗದ ಮಂಗಳ ವಾದ್ಯದ ಧ್ವನಿ ವೈಶಿಷ್ಟ್ಯ ಪೂರ್ಣವಾದುದು. ದೇಸಿಯವೆನಿಸುವ ತತ್ವಪದ, ದಾಸರಪದ, ರಿವಾಯತ್ ಪದಗಳು ಇದರ ಧ್ವನಿ ತರಂಗದಲ್ಲಿ ಮೂಡಿ ಬರುತ್ತವೆ. ಹೀಗೆ ಮೂಡಿ ಬರುವ ಪದಗಳನ್ನು ಕೇಳಿದ ಜನರು ವಿಸ್ಮಯಗೊಳ್ಳುತ್ತಾರೆ. ಇಂಥ ವಿಸ್ಮಯಕಾರಿ ಜನಪದ ಕಲಾ ಪ್ರಕಾರವನ್ನು ಶಹನಾಯಿಯ ಶಾಸ್ತ್ರೀಯ ಸಂಗೀತದೊಡನೆ ಜುಗಳ ಬಂದಿಯಂತೆ ನುಡಿಸುವುದನ್ನು ಕರಗತ ಮಾಡಿಕೊಂಡಿರುವುದನ್ನು ನೋಡಿದರೆ ಇವರ ಕಲೆಯ ವಿಶೇಷತೆ ಅಗಮ್ಯವಾದುದೆಂದೆ ಹೇಳಬೇಕು. ಇವರ ಈ ವಾದ್ಯವೈಭವಕ್ಕೆ ಮರುಳಾಗದವರೆ ಇಲ್ಲ.

ಉತ್ತರ ಕರ್ನಾಟಕದ ವಿಶಿಷ್ಟ ಕಲೆಗಳಲ್ಲಿ ಒಂದಾದ ಈ ಘಂಟಾತರಂಗದ ಕಲೆಯನ್ನು ಉಳಿಸಿ-ಬೆಳೆಸಲು ಪರಶುರಾಮ ಭಜಂತ್ರಿ-ಶೃತಿ, ಹನಮಂತಪ್ಪ ಭಜಂತ್ರಿ-ತಾಳ, ಮಾರುತಿ ಭಜಂತ್ರಿ-ಚೌಗಡಿ, ಷಣ್ಮುಖಪ್ಪ-ಹಲಗಿ, ಯಲ್ಲಪ್ಪ ಭಜಂತ್ರಿ-ಕರಡಿ, ಶರಣಪ್ಪ ಭಜಂತ್ರಿ-ಶಹನಾಯಿ ಮತ್ತು ಘಂಟಾ ಹೀಗೆ ಅನುಭವಿ ಕಲಾವಿದರ ತಂಡವನ್ನು ಕಟ್ಟಿಕೊಂಡು ಸುಮಾರು ಅರವತ್ತು ವರ್ಷಗಳಿಂದ ಕರ್ನಾಟಕದ ಉದ್ದಗಲಕ್ಕೂ ಹೋಗಿ ಅನೇಕ ಕಾರ್ಯಕ್ರಮಗಳನ್ನು ನೀಡಿ, ವಾದ್ಯಗಳ ಮಧುರ ಸ್ವರದ ರಸದೌತನವನ್ನು ಜನತೆ ಸವಿಯುವಂತೆ ಮಾಡಿದ್ದಾರೆ. ಮರೆಯಾಗುತ್ತಿರುವ ವಾದ್ಯಗಳ ಪರಿಚಯ ಮಾಡಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಸಂತೋಷದ ಬದುಕಿಗೆ ಜನಪದ ಸಂಗೀತವೇ ಅವಶ್ಯವೆಂದು ಮನಗಂಡ ಮಾರುತೆಪ್ಪನವರು ತಮ್ಮ ಕಲಾ ತಂಡವನ್ನು ಕಟ್ಟಿಕೊಂಡು ಕೋಲಾರ, ಉಡುಪಿ, ಕಾರವಾರ, ಧಾರವಾಡ, ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಮೈಸೂರು ಮುಂತಾದ ಕಡೆಗಳಲ್ಲಿ ತಮ್ಮ ವಿಶಿಷ್ಟ ಜನಪದ ಸಂಗೀತವಾದ ಘಂಟಾತರಂಗ ವಾದನವನ್ನು ನುಡಿಸಿ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದಾರೆ.

ಹಂಪಿ, ಲಕ್ಕುಂಡಿ ಹಾಗೂ ಪಟ್ಟದಕಲ್ಲು ಉತ್ಸವಗಳಲ್ಲಿ ತಮ್ಮ ಅದ್ಭುತ ಸಂಗೀತವನ್ನು ನುಡಿಸಿ ಜನರ ಮೆಚ್ಚುಗೆಯನ್ನು ಪಡೆಯುವುದರೊಂದಿಗೆ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಇಷ್ಟೆ ಅಲ್ಲದೆ. ರಾಜಸ್ತಾನದ ರಾಜಧಾನಿಯಾದ ಜೈಪುರಕ್ಕೆ ಹೋಗಿ ಅವರ ಲೋಕ ಸಂಗೀತಗಳ ಜೊತೆಗೆ ಕನ್ನಡದ ಲೋಕ ಸಂಗೀತವಾದ ಘಂಟಾತರಂಗ, ಕರಡಿ ಮತ್ತು ಶಹನಾಯಿಗಳ ಸಮ್ಮಿಲನದ ತರಂಗಗಳನ್ನು ಹೊಮ್ಮಿಸಿ ಅಲ್ಲಿಯ ಜನರ ಮೆಚ್ಚುಗೆಯನ್ನು ಸಹ ಪಡೆದುಕೊಂಡಿರುವರು.

ಬಹು ಜನಪ್ರಿಯತೆಯನ್ನು ಪಡೆದುಕೊಂಡ ಇವರ ಕಲಾ ತಂಡವು ಧಾರವಾಡದ ಆಕಾಶವಾಣಿ ಕೇಂದ್ರದಿಂದಲೂ, ಬೆಂಗಳೂರಿನ ದೂರದರ್ಶನ ಕೇಂದ್ರದಿಂದಲೂ ಕಾರ್ಯಕ್ರಮಗಳನ್ನು ನೀಡಿ ಕನ್ನಡ ಜನತೆಯ ಪ್ರಶಂಸೆಗೆ ಪಾತ್ರರಾಗಿದ್ದಾರೆ. ತಂಡದ ನಾಯಕರಾದ ಮಾರುತೆಪ್ಪನವರು ಮೇಳದ ಎಲ್ಲಾ ವಾದ್ಯಗಳನ್ನು ನುಡಿಸಬಲ್ಲವರಾಗಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿ ನಸಿಸಿ ಹೋಗಬಹುದಾದ ಈ ಜನಪದ ಕಲೆಯನ್ನು ಉಳಿಸಿ-ಬೆಳೆಸಲು ಸತತವಾಗಿ ಪ್ರಯತ್ನ ನಡೆಸಿದ್ದಾರೆ. ತಮ್ಮ ತಂಡದವರಿಗಷ್ಟೆ ಅಲ್ಲದೆ ಇಂದಿನ ಯುವ ಪೀಳಿಗೆಯವರಿಗೂ ಈ ವಾದ್ಯಗಳನ್ನು ನುಡಿಸುವುದರ ಬಗ್ಗೆ ಕಲಿಸಿಕೊಡುತ್ತಿದ್ದಾರೆ. ಇವರ ಜನಪದ ಕಲಾಸೇವೆಯನ್ನು ಕಂಡು ಹಲವಾರು ಸಂಘ-ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ'ಯು 2007-08ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

## ಶರಣಪ್ಪ ವಿರುಪಾಕ್ಷಪ್ಪ ಭಜಂತ್ರಿ

ಶಹನಾಯಿ, ಕರಡಿ, ಘಂಟಾತರಂಗ, ತಾಳ, ಸಂಪ್ರದಾನಿ ಮುಂತಾದ ವಾದ್ಯಗಳನ್ನು ನುಡಿಸುವುದರಲ್ಲಿ ಪ್ರಾವೀಣ್ಯತೆಯನ್ನು ಪಡೆದ, ಶರಣಪ್ಪ ಭಜಂತ್ರಿಯವರು ಗದುಗಿನ ಬೆಟಗೇರಿಯವರು. ತಂದೆ ವಿರುಪಾಕ್ಷಪ್ಪ, ತಾಯಿ ಹನುಮವ್ವನವರ ಮಗನಾಗಿ 1953ರಲ್ಲಿ ಜನಿಸಿದರು. ಇವರು ಶಾಲೆಯನ್ನು ಕಲಿಯದೆ, ತಮ್ಮ ತಂದೆಯಿಂದ ಬಾಲ್ಯದಲ್ಲಿಯೆ ಶಹನಾಯಿ, ಕರಡಿ, ಹಲಗಿ, ಶೃತಿ ಮತ್ತು ಘಂಟಾತರಂಗ ನುಡಿಸುವುದನ್ನು ಕಲಿತುಕೊಂಡರು. ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇಲ್ಲದ ಕಾರಣ ಕೂಲಿನಾಲಿಯನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದರು. ಮದುವೆ ಇಲ್ಲವೆ ಜಾತ್ರಾಮಹೋತ್ಸವಗಳಲ್ಲಿ ಮಾತ್ರ ಶಹನಾಯಿ ಮತ್ತು ಕರಡಿ, ಸಂಪ್ರದಾನಿ (ಹಲಗಿ)

ವಾದ್ಯಗಳನ್ನು ನುಡಿಸಲಿಕ್ಕೆ ಹೋಗುತ್ತಿದ್ದರು. ಶಹನಾಯಿ ಮತ್ತು ಘಂಟಾತರಂಗಗಳನ್ನು ನುಡಿಸುವುದರಲ್ಲಿ ಪಾಂಡಿತ್ಯ ಪಡೆದ ಇವರು ದುರ್ಗಾ, ಯಮನ್, ಪೂರ್ವಿ, ಸಾರಂಗ, ಚಂದ್ರಕೌಂಸ, ಮಾಲಕೌಂಸ, ಅಹಿರ ಭೈರವಿ, ಭೂಪ ಮುಂತಾದ ರಾಗಗಳನ್ನು ವಿವಿಧ ತಾಳಗಳಲ್ಲಿ ಸರಾಗವಾಗಿ ನುಡಿಸಬಲ್ಲವರಾಗಿದ್ದಾರೆ.

ಘಂಟಾತರಂಗದ ಹಿರಿಯ ಕಲಾವಿದರಾದ ಮಾರುತೆಪ್ಪ ಭಜಂತ್ರಿಯವರ ಕಲಾ ತಂಡದ ಹಿರಿಯ ಕಲಾವಿದರಾದ ಇವರು ಕರ್ನಾಟಕದ ಬೆಂಗಳೂರು, ಧರ್ಮಸ್ಥಳ, ಮಂಗಳೂರು, ಶಿವಮೊಗ್ಗ, ಹೊಸಪೇಟೆ, ಬಳ್ಳಾರಿ, ರಾಯಚೂರು, ಗಂಗಾವತಿ, ಧಾರವಾಡ, ಬೆಳಗಾವಿ ಮುಂತಾದ ಕಡೆಗಳಲ್ಲಿ ತಮ್ಮ ಘಂಟಾತರಂಗದ ಸ್ವರತರಂಗಗಳನ್ನು ನುಡಿಸಿ, ಅಲ್ಲಿಯ ಜನರ ಮೆಚ್ಚುಗೆಗೆ-ಪ್ರೀತಿಗೆ ಪಾತ್ರರಾಗಿದ್ದಾರೆ. ಇದಲ್ಲದೆ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ', 'ಪ್ರವಾಸೋದ್ಯಮ ಇಲಾಖೆ' ಹಾಗೂ 'ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ-ತಂಜಾವೂರು' ಇವರ ಆಶ್ರಯದಲ್ಲಿ ಕೋಲಾರದ ಶ್ರೀ ಟಿ. ಚೆನ್ನಯ್ಯ ರಂಗಮಂದಿರದಲ್ಲಿ ಏರ್ಪಡಿಸಿದ್ದ ಜನಪದ ಪ್ರವಾಸಿ ಉತ್ಸವದಲ್ಲಿ ದಕ್ಷಿಣ ಭಾರತದ ವಿವಿಧ ಜನಪದ ಕಲಾ ಪ್ರಕಾರಗಳಿಗಿಂತಲೂ ತೀರಾ ಭಿನ್ನವಾದ ತಮ್ಮ ಘಂಟಾತರಂಗದ ವಿಸ್ಮಯ ತರಂಗಗಳನ್ನು ಹರಡಿ ಅಲ್ಲಿಯ ಜನರ ಮೆಚ್ಚುಗೆಯನ್ನು ಸಹ ಪಡೆದುಕೊಂಡಿದ್ದಾರೆ. ತಮ್ಮ ತಂದೆಯವರೊಡನೆ ಸಾತು ನೀಡಿ ಎಲ್ಲ ವಿದ್ಯೆಯನ್ನು ಕರಗತ ಮಾಡಿಕೊಂಡ ಶರಣಪ್ಪನವರು, ಮಾರುತೆಪ್ಪನವರ ಕಲಾತಂಡದೊಂದಿಗೆ ರಾಜಸ್ತಾನದ ಜೈಪುರಕ್ಕೆ ಹೋಗಿ ಅಲ್ಲಿಯೂ ತಮ್ಮ ಕಲೆಯ ಪ್ರದರ್ಶನವನ್ನು ನೀಡಿ ಅಲ್ಲಿಯ ಜನರಿಂದ ಮೆಚ್ಚುಗೆಯನ್ನು ಸಹ ಪಡೆದುಕೊಂಡಿದ್ದಾರೆ. ಶರಣಪ್ಪನವರ ಶಹನಾಯಿ ಮತ್ತು ಘಂಟಾತರಂಗದ ವಾದ್ಯದಲ್ಲಿ ಮಾರುತೆಪ್ಪನವರ ತಂಡ ಧಾರವಾಡದ ಆಕಾಶವಾಣಿ ಕೇಂದ್ರದಿಂದ ಘಂಟಾತರಂಗದ ಕಾರ್ಯಕ್ರಮವನ್ನು ಪ್ರಸಾರ ಮಾಡಿದ್ದಾರೆ. ಅದರಂತೆ ಬೆಂಗಳೂರಿನ ದೂರದರ್ಶನ ಕೇಂದ್ರದಿಂದ ಇವರ ಕಾರ್ಯಕ್ರಮ ಪ್ರಸಾರಗೊಂಡಿದೆ.

ಶರಣಪ್ಪನವರು ತಮ್ಮ ಹದಿನೈದನೆಯ ವಯಸ್ಸಿನಿಂದಲೆ ಪ್ರಾರಂಭಿಸಿದ ಈ ಕಲೆಯು ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಜನಪ್ರಿಯತೆಯನ್ನು ಪಡೆದುಕೊಂಡಿದೆ. ಈ ಜನಪ್ರಿಯಕಲೆಯು ಮಾರುತೆಪ್ಪನವರ ಮುಖಂಡತ್ವದಲ್ಲಿ ಇನ್ನು ಬೆಳೆಯುತ್ತ ಹೋಗಿ ಶರಣಪ್ಪನವರಂತ ಕಲಾವಿದರು ಬೆಳಕಿಗೆ ಬಂದು ಜನಪದ ಕಲೆಯು ಬೆಳೆಯಬೇಕು. ಅಂತೆಯೇ ಶರಣಪ್ಪನವರು ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಅವರ ಈ ಗುರುತಾರವಾದ ಸೇವೆಯನ್ನು ಗುರುತಿಸಿ ಇಲಾಖೆಯವರು ಮತ್ತು ಸ್ಥಳೀಯ ಸಂಘ-ಸಂಸ್ಥೆಗಳು ಹಲವಾರು ಪ್ರಶಸ್ತಿ ಪತ್ರಗಳನ್ನಿತ್ತು ಗೌರವಿಸಿವೆ.

# ಯಲ್ಲಪ್ಪ ಈರಪ್ಪ ತಾಳಿ

ಗದಗ ಜಿಲ್ಲೆಯ ರೋಣ ತಾಲೂಕಿನ ಬೆಳವಣಿಕೆ ಗ್ರಾಮದ ಕರಡಿ ಮಜಲಿನ ಹಿರಿಯ ಕಲಾವಿದರಾದ ಯಲ್ಲಪ್ಪನವರ ತಂದೆ ಈರಪ್ಪ, ತಾಯಿ ಮುಡಿಯವ್ವ ಇವರ ಉದರದಲ್ಲಿ 1948 ರಲ್ಲಿ ಜನಿಸಿದರು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೆ ಕರಡಿ ಮಜಲನ್ನು ಕಲಿತು ಕರಗತ ಮಾಡಿಕೊಂಡು, ಸುಮಾರು ನಲ್ವತ್ತು ವರ್ಷಗಳಿಂದ ಈ ಕಲೆಯ ಸೇವೆ ಮಾಡುತ್ತ ಬೆಳೆಸಿ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾರೆ.

ಯಲ್ಲಪ್ಪನವರು ಒಕ್ಕಲುತನ ಮನೆತನದವರು. ಮನೆಯ ಆರ್ಥಿಕ ಸ್ಥಿತಿಯಿಂದ ಶಿಕ್ಷಣವನ್ನು ಕಲಿಯದೆ ಮನೆಯ ಮುಖ್ಯ ಕಸುಬಾದ ಒಕ್ಕಲುತನವನ್ನು ಮಾಡುತ್ತ ಬೆಳೆದರು. ಬೆಳವಣಿಕೆಯ ಇವರ ಮನೆಯ ತುಸುದೂರದಲ್ಲಿ ನಾಟಕ ಮನೆಯೊಂದು ಇತ್ತು. ಆ ಮನೆಯಲ್ಲಿ ಆಗಾಗ ನಾಟಕ ತಾಲೀಮು ನಡೆಯುತ್ತಿದ್ದವು. ನಾಟಕ ಇಲ್ಲದ ವೇಳೆಯಲ್ಲಿ ಅಂದಪ್ಪ ಶಿವಸಿಂಪಿ ಎನ್ನುವವರು ಆ ಊರಿನ ಯುವಕರಿಗೆ ಕರಡಿ, ದಿಮ್ಮು, ಚೌಗಡಿ ಹಾಗೂ ತಾಳ ಬಾರಿಸುವುದನ್ನು ಕಲಿಸುತ್ತಿದ್ದರು. ನಾಟಕದ ತಾಲೀಮು ನಡೆಯುತ್ತಿದ್ದ ವೇಳೆಯಲ್ಲಿ ಪ್ರತಿದಿನ ನೋಡಲು ಹೋಗುತ್ತಿದ್ದ ಇವರಿಗೆ ನಾಟಕ ಮುಗಿದನ ನಂತರವೂ ಅಲ್ಲಿಗೆ ಹೋಗುವುದು ರೂಢಿಯಾಗಿ ಬಿಟ್ಟಿತ್ತು. ಅಂದಪ್ಪ ಶಿವಸಿಂಪಿಯವರು ಕಲಿಸುವುದನ್ನು ದಿನಾಲು ನೋಡಿ ನೋಡಿ ಇವರ ಮನದಲ್ಲಿಯೂ "ನಾನೂ ಏಕೆ ಇದನ್ನು ಕಲಿಯಬಾರದು?" ಎಂದು ಕೊಂಡು ತಮ್ಮ ಕಲಿಯಬೇಕೆಂಬ ಇಚ್ಛೆಯನ್ನು ಗುರುಗಳಾದ ಅಂದಪ್ಪನವರಲ್ಲಿ ಹೇಳಿಕೊಂಡರು. ಅದಕ್ಕೆ ಅವರು "ಕಲಿಯಬಹುದು ಆದರೆ ಇದು ಕಠಿಣವಾದುದು ನಿತ್ಯ ತಪ್ಪದೆ ಬರಬೇಕು ಈವತ್ತು ಹೇಳಿದ್ದನ್ನು ಮರುದಿನ ಒಪ್ಪಿಸಬೇಕು. ಹೀಗೆ ಮಾಡುತ್ತೀಯಾ?" ಎಂದು ಕೇಳಿದರು. ಅದಕ್ಕೆ ಯಲ್ಲಪ್ಪನವರು ಒಪ್ಪಿಗೆಯನ್ನು ಸೂಚಿಸಿದರು. ಅಂದಪ್ಪನವರು "ಈಗ ಇತರರಿಗೆ ಹೇಳುವುದನ್ನು ಕೇಳು ನಾಳೆ ಇದನ್ನೆ ಒಪ್ಪಿಸು" ಎಂದರು. 'ಆಯಿತು' ಎಂದು ಆವತ್ತು ಹೇಳಿದ ಬೋಲುಗಳನ್ನು ಕೇಳಿ ತಾನೂ ಬಾಯಿಂದ ಹೇಳಿ ಮನನ ಮಾಡಿಕೊಂಡು, ಮರುದಿನ ಮುಂಜಾನೆಯಿಂದಲೇ ಹೊಲದಲ್ಲಿ ಕೆಲಸ ಮಾಡುವಾಗಲೂ ಕೂಡ ಆ ಬೋಲುಗಳನ್ನು ಪಠಿಸುತ್ತಲೆ ಇದ್ದು, ಸಂಜೆಯ ವೇಳೆಗೆ ಗುರುಗಳ ಮುಂದೆ ಬಂದು, ಅವರ ಬಳಿ ಇದ್ದ ಪಳಿಯನ್ನು ಮತ್ತು ಗುಣಿಗಳನ್ನು ತೆಗೆದುಕೊಂಡು ಹಿಂದಿನ ದಿನ ಹೇಳಿದ ಎಲ್ಲ ಬೋಲುಗಳನ್ನು ಒಂದು ಬಿಡದಂತೆ ಬಾರಿಸಿ ತೋರಿಸಲು ಗುರುಗಳು ದಂಗಾದರು. ಇವರ ಕೈಚಳಕವನ್ನು ಬೋಲುಗಳನ್ನು ನುಡಿಸುವ ಸ್ಪಷ್ಟತೆಯನ್ನು ಗಮನಿಸಿ ಮೆಚ್ಚಿಕೊಂಡು 'ನೀನು ಪ್ರತಿದಿನ

ತಪ್ಪದೇ ಬಾ' ಎಂದು ಆಶೀರ್ವಾದ ಮಾಡಿ ಇತರ ಯುವಕರಿಗೆ "ನೋಡಿ, ಇವನು ಹೇಗೆ ಸಾತು ಮಾಡಿದ್ದಾನೆ" ಎಂದು ತಮ್ಮ ಮೆಚ್ಚುಗೆಯ ಮಾತುಗಳನ್ನು ಹೇಳಿದರು. ಹೀಗೆ ಮೊದಲ ದಿನವೆ ಯಲ್ಲಪ್ಪನವರು ಗುರುಗಳ ಮೆಚ್ಚಿನ ಶಿಷ್ಯರಾದರು. ಮುಂದೆ ಅವರು ಹೇಳಿ ಕೊಟ್ಟ ಎಲ್ಲ ವಿದ್ಯೆಯನ್ನು ಮನಃಪೂರ್ವಕವಾಗಿ ಕಲಿತು ಗುರುಗಳ ಅಚ್ಚು-ಮೆಚ್ಚಿನ ಶಿಷ್ಯರಲ್ಲೊಬ್ಬರಾದರು.

ಉತ್ತರ ಕರ್ನಾಟಕ ಕರಡಿ ಮಜಲಿನ ಕರಡಿಯನ್ನು ಬಾರಿಸುವುದು ಎರಡು ತೆರನಾಗಿರುವುದು ಕಂಡು ಬರುತ್ತದೆ. ಬೆಳಗಾವಿ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಕರಡಿಯ ಒಂದೇ ಅಂದರೆ ಬಲಗಡೆಯ ಕಣಿಯಿಂದ ಬಲಗೈ ಮತ್ತು ಎಡಗೈ ಗುಣಿಗಳಿಂದ ಬಾರಿಸಿದರೆ, ಧಾರವಾಡ ಮತ್ತು ಇತರೆ ಜಿಲ್ಲೆಗಳಲ್ಲಿ ಎರಡು ಕಡೆಯಿಂದ ಬಾರಿಸುವುದು ರೂಢಿ. ಹಲಗೆಯಂತೆ ಒಂದೇ ಕಡೆ ಬಾರಿಸುವುದು ಬಹಳ ದ್ವಿಗುಣವಾಗುತ್ತದೆ. ಎರಡೂ ಕಡೆ ಬಾರಿಸುವುದು ದ್ವಿಗುಣ ಕಡಿಮೆಯಾಗಿ ಗತಿ ಪ್ರಮಾಣಕ್ಕೆ ಬರುತ್ತದೆ ಎಂದು ಯಲ್ಲಪ್ಪನವರು ಎರಡೂ ಕಡೆಯಿಂದ ಬಾರಿಸುವುದನ್ನು ರೂಢಿಸಿಕೊಂಡಿದ್ದಾರೆ.

ಯಲ್ಲಪ್ಪನವರು ಓದು-ಬರಹ ಬಾರದ ಅನಕ್ಷರಸ್ಥರು. ಆದರೂ ಸಹ ತಮ್ಮ ಸ್ವಪ್ರಯತ್ನ ಹಾಗೂ ಸ್ಮರಣ ಶಕ್ತಿಯಿಂದ ಎಲ್ಲ ತಾಳಗಳ ಲಯ ಮತ್ತು ಗತ್ತುಗಳನ್ನು ನೆನಪಿಟ್ಟುಕೊಂಡು ಹೃದಯಂಗಮವಾಗಿ ಕರಡಿಯನ್ನು ತಮ್ಮ ಮೇಳದವರೊಂದಿಗೆ ಬಾರಿಸಿ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ. ಕರಡಿಮಜಲಿನ ಮೇಲೆ ಒಳ್ಳೆಯ ಆಸಕ್ತಿಯನ್ನು ಹೊಂದಿದ ಇವರು ತಮ್ಮ ಸ್ವಂತ ಖರ್ಚಿನಲ್ಲಿಯೇ ಮಜಲಿಗೆ ಬೇಕಾದ ಎರಡು ಕರಡಿ, ಎರಡು ದಿಮ್ಮು, ಎರಡು ತಾಳ ಹಾಗೂ ಎರಡು ಚೌಗಡಿಗಳನ್ನು ತಯಾರಿಸಿಕೊಂಡು, ಅವುಗಳ ಮೇಲೆ ಹೊದಿಸುವ ಗಲ್ಲಿಪಗಳನ್ನು ಸಹಿತ ತಯಾರಿಸಿಕೊಂಡಿದ್ದಾರೆ. ಮೇಲಾಗಿ ಊರಿನ ಯುವಕರಿಗೆ ತರಬೇತಿಯನ್ನು ನೀಡಿ ಮತ್ತೆ ಮೂರು ಮಜಲುಗಳನ್ನು ಸಹ ತಯಾರಿಸಿಕೊಂಡಿದ್ದಾರೆ.

ಕರಡಿ ಮಜಲನ್ನು ಜಾತ್ರೆ ಇಲ್ಲವೆ ಮದುವೆಯ ಸಮಾರಂಭಗಳಲ್ಲಿ ಬಳಸಿಕೊಳ್ಳುವುದು ರೂಢಿಯಲ್ಲಿದೆ. ಇಂಥ ಸಮಾರಂಭಗಳಿಗೆ ಯಲ್ಲಪ್ಪನವರು ತಮ್ಮ ಮೇಳದವರೊಂದಿಗೆ ಹೋಗಿ ತುಂಬಾ ಜನರಂಜನೀಯ ರೀತಿಯಲ್ಲಿ ಬಾರಿಸುತ್ತಿದ್ದರು. ಇವರ ಮೇಳದವರಾದ ಶಹನಾಯಿಯ ತ್ವಾಟಪ್ಪ ಕೊರವರ, ಸಾಜಿನ ಬಾಳಪ್ಪ ಕೊರವರ ಹಾಗೂ ದಿಮ್ಮಿನ, ಚೌಗಡಿಯ, ತಾಳಿನವರೊಂದಿಗೆ ಕೂಡಿಕೊಂಡು ಕರಡಿಯನ್ನು ಬಾರಿಸಲಿಕ್ಕೆ ಪ್ರಾರಂಭಿಸಿದರೆ ಸಾಕು, ಮದುವೆಯ

ಇಲ್ಲವೆ ಜಾತ್ರೆಯ ಸಮಾರಂಭಕ್ಕೆ ಬಂದ ಜನರೆಲ್ಲರೂ ಇವರು ಬಾರಿಸುವುದನ್ನು ಕೇಳಿ ಕಂಡು ಮಂತ್ರಮುಗ್ಧರಾಗುತ್ತಿದ್ದರು. ಕೆಲವರಂತೂ ಚುರಮರಿಯನ್ನು ತಂದು ಇವರ ಮೇಲೆ ತೂರುತ್ತ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಜನರ ಮೆಚ್ಚುಗೆಯ ಫಲವಾಗಿ ಯಲ್ಲಪ್ಪ ಹಾಗೂ ಅವರ ಮೇಳದವರು ಮತ್ತಷ್ಟು ಹುಮ್ಮಸ್ಸಿನಿಂದ ತಮ್ಮ ತಮ್ಮ ವಾದ್ಯಗಳನ್ನು ಕುಣಿ-ಕುಣಿದು ಬಾರಿಸುತ್ತಿದ್ದರು. ಒಮ್ಮೊಮ್ಮೆ ಮುಂಜಾನೆ ಎಂಟುಗಂಟೆಗೆ ಬಾರಿಸಲು ಪ್ರಾರಂಭಿಸಿದರೆ ಸಂಜೆ ಎಂಟು ಗಂಟೆಯವರೆಗೆ ಎಡೆಬಿಡದೆ ಬಾರಿಸುತ್ತಿದ್ದರು ಇದರಿಂದ ಇವರ ಹೆಗಲುಗಳು ದಡ್ಡು ಬೀಳುತ್ತಿದ್ದವಂತೆ.

ಒಂದು ಸಲ ತಮ್ಮೂರಿನ ಮದುವೆಯ ಸಮಾರಂಭಕ್ಕೆ ಬಂದಿದ್ದ ಬ್ಯಾಂಡ್-ಬಾಜಿಯವರಿಗೂ ಹಾಗೂ ಇವರಿಗೂ ಸ್ಪರ್ಧೆ ಬಿದ್ದಿತಂತೆ ಬ್ಯಾಂಡಿನ ಒಬ್ಬ ಖಯಾಲಿ ವ್ಯಕ್ತಿ "ನಾವೂ ಬ್ಯಾಂಡಿನಲ್ಲಿ ನುಡಿಸುವ ತಾಳಕ್ಕೆ ತಕ್ಕಂತೆ ನಿಮ್ಮ ಕರಡಿಯನ್ನು ನುಡಿಸಿರಿ ನೋಡೋಣ" ಎಂದನಂತೆ. ಆಗ ಯಲ್ಲಪ್ಪನವರಿಗೆ ಅಸಹ್ಯವಾಗುವ ಸ್ಥಿತಿ ಬಂದೋದಗಿತು. ಧೈರ್ಯಸಾಲದೆ ಶಹನಾಯಿ ನುಡಿಸುವ ತವಾಟಪ್ಪನ ಕಡೆಗೆ ನೋಡಿದಾಗ ತ್ವಾಟಪ್ಪನವರು ಯಲ್ಲಪ್ಪನಿಗೆ ಸನ್ನೆ ಮಾಡಿ ಬಾರಿಸು ಎಂದರಂತೆ. ಆಗ ಯಲ್ಲಪ್ಪನವರು ತಮ್ಮ ಮೇಳದವರಿಗೆ ಸೂಚನೆ ಕೊಟ್ಟು ಆ ಬ್ಯಾಂಡಿನ ಖಯಾಲಿ ವ್ಯಕ್ತಿಗೆ ಕೈಮಾಡಿ, "ಶುರು ಮಾಡು ಆಗೇ ಹೋಗಲಿ" ಎಂದರಂತೆ. ಆಗ ಬ್ಯಾಂಡಿನವನು "ನಮ್ಮ ಕೂಡ ಪ್ರಾರಂಭ ಮಾಡಿ, ನಾವೂ ಬಾರಿಸುವ ತಾಳದ ಗತಿಯಲ್ಲೆ ಬಾರಿಸಿ ನಮ್ಮೊಂದಿಗೆ ಮುಕ್ತಾಯ ಮಾಡಬೇಕು" ಎಂದು ಸೂಚನೆ ಕೊಟ್ಟು ಬ್ಯಾಂಡ ಬಾರಿಸಲು ಪ್ರಾರಂಭ ಮಾಡಿ ಒಂದು ಸುತ್ತು ಬಾರಿಸುವಷ್ಟರಲ್ಲಿಯೇ ಅವರು ಬಾರಿಸುವ ತಾಳಗತಿಯನ್ನು ಗುರುತಿಸಿಕೊಂಡು, ತಮ್ಮ ಮೇಳದವರಿಗೆ ಸೂಚನೆಯನ್ನು ಕೊಟ್ಟು ಬಾರಿಸಲು ಪ್ರಾರಂಭಿಸಿದರು. ಎರಡೂ ಮೇಳದವರು ಬಾರಿಸುತ್ತ ಒಂದನೆಯ ಕಾಲ ಮುಗಿಸಿ, ಎರಡು ಮತ್ತು ಮೂರನೆಯ ಕಾಲಕ್ಕೆ ಹೋಗುವಷ್ಟರಲ್ಲಿಯೇ ಬ್ಯಾಂಡಿನವರಿಗೆ ಸುಸ್ತಾಗಿ ನಾಲ್ಕನೆಯ ಕಾಲಕ್ಕೆ ಬರಲಾಗದೆ ಮೂರನೆಯ ಕಾಳಿನಲ್ಲಿಯೆ ತೊಳಲಾಡುತ್ತ ಬಾರಿಸುವುದನ್ನು ಮುಗಿಸಿ ನಿಂತಾಗ, ತಕ್ಷಣವೇ ತ್ವಾಟಪ್ಪನು ಶಹನಾಯಿಯನ್ನು ನುಡಿಸುತ್ತ ಮೇಳದವರಿಗೆ ಪ್ರೇರಣೆಯನ್ನು ಕೊಟ್ಟು ನಾಲ್ಕನೆಯ ಕಾಲನ್ನು ಮುಗಿಸಿ ಕುಣೆ-ಕುಣಿದು ಬಾರಿಸುತ್ತ ಐದನೆಯ ಕಾಲನ್ನು ಪ್ರವೇಶಿಸುತ್ತಿದ್ದಂತೆಯೇ ನೋಡುತ್ತ ನಿಂತ ಜನರೆಲ್ಲ ಮೆಚ್ಚುಗೆಯಿಂದ ಕೂಗುತ್ತ ಯಲ್ಲಪ್ಪನವರನ್ನು ಹೆಗಲ ಮೇಲೆ ಎತ್ತಿಕೊಂಡು "ನಮ್ಮ ಊರ ಮರ್ಯಾದೆಯನ್ನು ಉಳಿಸಿದೆ. ಇಲ್ಲದಿದ್ದರೆ ಬ್ಯಾಂಡಿನವರು ಹೆಚ್ಚಿನವರಾಗುತ್ತಿದ್ದರು" ಎಂದು ಯಲ್ಲಪ್ಪನವರಿಗೂ ತ್ವಾಟಪ್ಪನವರಿಗೂ ನೋಟಿನ ಸರಮಾಲೆಯನ್ನು ಹಾಕಿ ತಮ್ಮ

ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇತ್ತ ಬ್ಯಾಂಡಿನವರು ಸೋತು ಶರಣಾಗಿ "ನೀವೂ ನಮಗಿಂತಲು ಹೆಚ್ಚಿನವರು. ನಿಮ್ಮಂತ ಕರಡಿ ನುಡಿಸುವವರನ್ನು ನಾವು ಎಲ್ಲಿಯೂ ನೋಡಿಲ್ಲ" ಎಂದರು. ಇಂಥ ಎಷ್ಟೋ ಪ್ರಸಂಗಗಳನ್ನು ಅವರು ಎದುರಿಸಿದ್ದುಂಟು.

ಅಗಾಧ ಪ್ರತಿಭೆಯುಳ್ಳ ಯಲ್ಲಪ್ಪನವರು ಆದಿ, ಜಂಪಾ, ಬಲಂದಿ ಹೀಗೆಎಂಟ್ಟತ್ತು ತಾಳಗಳನ್ನು ತ್ವಾಟಪ್ಪನವರ ಶಹನಾಯಿಯ ರಾಗದ ಚೀಜಗಳೊಂದಿಗೆ ದಣಿವಿಲ್ಲದೆ ಬಾರಿಸುತ್ತಾರೆ. ಇವರು ತಮ್ಮೂರಿನ ಜಾತ್ರಾ-ಮಹೋತ್ಸವಗಳಲ್ಲಿ ಮಾತ್ರವಲ್ಲದೆ ಹಳ್ಯಾಳ, ಕಡಪಟ್ಟಿ, ಬ್ಯಾಡಗಿ, ಹದ್ಲಿ, ಗದಗ ಹಾಗೂ ಮುಂತಾದ ಊರುಗಳ ಜಾತ್ರೆ ಇಲ್ಲವೆ ಮದುವೆಯ ಸಮಾರಂಭಗಳಿಗೆ ತಮ್ಮ ಮೇಳದವರೊಂದಿಗೆ ಹೋಗಿ ಕರಡಿಯನ್ನು ನುಡಿಸಿ, ಜನರ ಮೆಚ್ಚುಗೆಯನ್ನು ಪಡೆದು ಅವರಿಂದ ಮಾನ-ಸನ್ಮಾನಗಳನ್ನು ಸಹ ಪಡೆದುಕೊಂಡಿದ್ದಾರೆ.

ಕರಡಿ ಮಜಲಿನ ಮೇಳದ ಜೊತೆಯಲ್ಲಿಯೇ ಭಜನೆಯ ಮೇಳವನ್ನು ಕಟ್ಟಿಕೊಂಡು ಊರಿನ ಹಾಗೂ ಸುತ್ತಮುತ್ತಲಿನ ಊರುಗಳಿಗೂ ಹೋಗಿ ಭಜನೆಯ ಪದಗಳನ್ನು ಸುಶ್ರಾವ್ಯವಾಗಿ ಹಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

## ಬಸವಂತಪ್ಪ ಸಂಗಪ್ಪ ಕರ್ಕಿಕಟ್ಟಿ

ಭಜನಿ ಪದಗಳ ಪೇಟೆ ಮಾಸ್ತರರೆಂದೆ ಪ್ರಸಿದ್ಧಿಯಾದ ಬಸವಂತಪ್ಪ ಕರ್ಕಿಕಟ್ಟಿಯವರು ಗದಗ ಜಿಲ್ಲೆಯ ರೋಣ ತಾಲೂಕಿನ ಬೆಳವಣಿಕಿ ಗ್ರಾಮದವರು. 1935ರಲ್ಲಿ ಜನಿಸಿದರು. ಆರನೆಯ ತರಗತಿಯವರೆಗೆ ಓದಿದ ಇವರನ್ನು ಮನೆಯಲ್ಲಿ ಕಮತದ ಕೆಲಸ ಮಾಡುವವರು ಯಾರು ಇಲ್ಲದ ಕಾರಣ ತಂದೆ ಸಂಗಪ್ಪನವರು ಶಾಲೆಯನ್ನು ಬಿಡಿಸಿ ಕಮತಕ್ಕೆ ಹಚ್ಚಿದರು. ಜನಪದ ಸಂಸ್ಕೃತಿಯ ಆಗರವಾದ ಬೆಳವಣಿಕಿ ಗ್ರಾಮದಲ್ಲಿ ಹಲವಾರು ಜನಪದ ಕಲೆಗಳು ಸಿಕ್ಕುತ್ತವೆ. ಇಂಥ ವಾತಾವರಣದಲ್ಲಿ ಬೆಳೆದ ಬಸವಂತಪ್ಪನವರು ತಮ್ಮ ಬಾಲ್ಯದಲ್ಲಿಯೆ ಕೆಲವೊಂದು ಜನಪದ ಕಲೆಗಳಿಗೆ ಮಾರುಹೋಗಿ, ಅವುಗಳನ್ನು ತಾನು ಏಕೆ ಕಲಿಯಬಾರದು ಎಂಬ ಆಸಕ್ತಿಯಿಂದ, ತಮ್ಮೂರಿನ ವೀರಭದ್ರದೇವರ ಗುಡಿಯಲ್ಲಿ ಗುರುಗಳಾದ ನಿಂಗಬಸಯ್ಯನವರು ಗ್ರಾಮದ ಯುವಕರನ್ನು ಕೂಡಿಸಿಕೊಂಡು ಭಜನೆಯ ಪದಗಳನ್ನು ಕಲಿಸುತ್ತಿದ್ದರು. ಅವರ ಬಳಿ ಪ್ರತಿನಿತ್ಯ ಭಜನೆಯ ಪದಗಳನ್ನು ಕೇಳಿ ಕಲಿತನು.

ಹಾರ್ಮೋನಿಯಂ ನುಡಿಸುವುರ ಜೊತೆಗೆ ಪದಗಳನ್ನು ಮುರಿದು ಮುಕ್ತಾಯ

ಮಾಡುವುದನ್ನು ಮತ್ತು ಅದರ ಚಾಲ್ತಿಯನ್ನು ಕಂಡು, ಅದರ ನಾದಕ್ಕೆ ಮರುಳಾಗಿ; ಹಿಮ್ಮೇಳದವರ ಜೊತೆ ಜೊತೆಯಲ್ಲಿ ಹಾಡುತ್ತಿದ್ದ ಗುರು ನಿಂಗಬಸಯ್ಯನವರಂತೆ ತಾನು ಪೇಟಿ ಬಾರಿಸುವುದನ್ನು ಕಲಿಯಬೇಕೆಂಬ ಆಸೆಯನ್ನು ಗುರುಗಳ ಮುಂದೆ ವ್ಯಕ್ತಪಡಿಸಲು, ಗುರುಗಳು ಹುಡುಗನ ಆಸಕ್ತಿಯನ್ನು ಕಂಡು ಹಾರ್ಮೋನಿಯಂ ಕಲಿಸಿದರು. ಸುಮಾರು ಎಂಟ್ಹತ್ತು ರಾಗಗಳನ್ನು ಕಲಿತು, ನಂತರ ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ 'ಹಾರ್ಮೋನಿಯಂ ಮಾಸ್ತರ' ಎಂದು ಪ್ರಸಿದ್ಧರಾದರು.

ಭಜನಿ ಪದಗಳಲ್ಲಿ ಹೆಚ್ಚಾಗಿ ಜನಪದ ಗೀತೆಗಳನ್ನು ಕಾಲಜ್ಞಾನದ ಪದಗಳನ್ನು, ಶಿಶುನಾಳ ಶರೀಫರ ಪದಗಳನ್ನು, ನಿಜಗುಣ ಶಿವಯೋಗಿಗಳ ಸ್ವರಚಿತ ವಚನಗಳನ್ನು, ಮೇಲಾಗಿ ತಾವೇ ರಚಿಸಿಕೊಂಡಿರುವ ಪದಗಳನ್ನು ಡಗ್ಗಾ ಮತ್ತು ತಪ್ಪಡಿ (ದಮಡಿ)ಯ ತಾಳಕ್ಕೆ ತಕ್ಕಂತೆ ಹಾಡುಗಾರ ಹಾಡುತ್ತಾ ಹೋಗುತ್ತಾನೆ. ಅದಕ್ಕೆ ತಕ್ಕಂತೆ ಹಾರ್ಮೋನಿಯಂ ಮಾಸ್ತರ ಸಾತು ನೀಡುತ್ತಾನೆ. ಹಿಮ್ಮೇಳದವರು ಚಿಕ್ಕಚಿಕ್ಕ ತಾಳಗಳನ್ನು ಬಾರಿಸುತ್ತ ಹಾಡನ್ನು ಹಾಡುತ್ತಿರುತ್ತಾರೆ. ಈ ಹಾಡುಗಳ ಚಾಲ್ತಿ ಮತ್ತು ಮುಕ್ತಾಯ ಕೇಳುಗರ ಮನಸ್ಸನ್ನು ಸೆರೆ ಹಿಡಿಯುತ್ತದೆ. ಇಂಥ ವೇಳೆಯಲ್ಲಿ ಹಾರ್ಮೋನಿಯಂ ಮಾಸ್ತರನ ಪಾತ್ರ ಪ್ರಮುಖವಾಗಿರುತ್ತದೆ. ಯಾವ ಪದಕ್ಕೆ ಯಾವಾಗ ಚಾಲ್ತಿ ತೆಗೆದುಕೊಳ್ಳಬೇಕು, ಯಾವಾಗ ಮುಕ್ತಾಯ ಮಾಡಬೇಕು ಎಂಬುದು ಇವರನ್ನೆ ಅವಲಂಭಿಸಿರುತ್ತದೆ. ಹಾಗೆಯೇ ಬಸವಂತಪ್ಪನವರು ಸಹ ಪೇಟಿಯನ್ನು ನುಡಿಸುತ್ತ ಅಪಸ್ವರವಿಲ್ಲದಂತೆ ಸೂರು ಬದಲಿಸಿ, ಹಾಡುವವನಿಗೂ ಮತ್ತು ಹಿಮ್ಮೇಳದವರಿಗೂ ಸೂಚನೆಯನ್ನಿತ್ತು ಪದಗಳನ್ನು ಮುಗಿಸುತ್ತಿದ್ದರು. ಕೆಲವೊಮ್ಮೆ ತಾವೇ ಹಾಡುಗಳನ್ನು ಹಾಡುತ್ತ ಪೇಟಿಯನ್ನು ಸಹ ಬಾರಿಸುತ್ತಾರೆ. ಹೀಗೆ ತಮ್ಮ ಬಾಲ್ಯದಲ್ಲಿಯೇ ಈ ವಿದ್ಯೆಯನ್ನು ಕರಗತ ಮಾಡಿಕೊಂಡ ಇವರು ಮೂರು ರಾತ್ರಿ-ಬೆಳತನಕ ಪೇಟಿ ನುಡಿಸುತ್ತ ಭಜನಾಪದಗಳನ್ನು ಹಾಡಬಲ್ಲವರಾಗಿದ್ದಾರೆ.

ಭಜನಾಪದಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲ ಬಸವಂತಪ್ಪನವರು ತಮ್ಮ ಭಜನಾ ತಂಡದೊಂದಿಗೆ ಗಜೇಂದ್ರಗಡದ ಕಳಕ ಮಲ್ಲಯ್ಯನ ಜಾತ್ರೆ, ಗದುಗಿನ ಪಂಚಾಕ್ಷರಿ ಗವಾಯಿಗಳ ಜಾತ್ರೆ, ರೋಣ ಜಾತ್ರೆ, ಸೂಡಿ ಜಾತ್ರೆ ಹೀಗೆ ಹತ್ತು ಹಲವಾರು ಜಾತ್ರೆಗಳಲ್ಲಿ ಭಾಗವಹಿಸಿ, ತಮ್ಮ ಭಜನಾಪದಗಳನ್ನು ಹಾಡಿ ಅಲ್ಲಿಯ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ. ಗ್ರಾಮದಲ್ಲಿ ಯಾರಾದರೂ ತೀರಿಕೊಂಡರೆ ಅವರ ಮನೆಗೆ ತಮ್ಮ ತಂಡದೊಂದಿಗೆ ಹೋಗಿ ಹಾರ್ಮೋನಿಯಂ ನುಡಿಸುತ್ತ ರಾತ್ರಿ-ಬೆಳತನಕ ಭಜನಾ ಪದಗಳನ್ನು ಹಾಡುತ್ತಾರೆ.

ಈ ಜನಪದ ಕಲೆಗಳ ಬಗೆಗೆ ಸುಮಾರು ಅರವತ್ತು ವರುಷಗಳ ಅನುಭವವುಳ್ಳ ಮತ್ತು ಅದರ ಬಗೆಗೆ ಆಸಕ್ತಿಯುಳ್ಳ ಬಸವಂತಪ್ಪನವರು ಕಲೆಯ ಉಳಿವಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಇವರ ಸೇವೆಯನ್ನು ಗಮನಿಸಿ ಸ್ಥಳೀಯ ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

## ಹುಲಗಪ್ಪ ಮುದಕಪ್ಪ ಬಜಂತ್ರಿ

ಹುಲಗಪ್ಪ ಮುದಕಪ್ಪ ಬಜಂತ್ರಿಯವರು ಗದಗ ಹಾಗೂ ಮುಂಡರಗಿ ತಾಲೂಕಿನ ಏಕೈಕ ಹಿರಿಯ ಶಹನಾಯಿ ವಾದಕರು. ಮುಂಡರಗಿ ತಾಲೂಕಿನ ಹಮ್ಮಿಗಿ, ಬೀಡನಾಳ, ಕೋರ್ಲಹಳ್ಳಿ, ಕಲಕೇರಿ, ಬಸರಕೋಡ ಮತ್ತು ಮುಂಡರಗಿ. ಗದಗ ತಾಲೂಕಿನ ಅಡವಿಸೋಮಾಪೂರ, ಪಾಪನಾಸಿ, ಹಾತಲಗೇರಿ, ಹೊಸಹಳ್ಳಿ ಮುಂತಾದ ಗ್ರಾಮಗಳಲ್ಲಿ ಇವರ ಶಹನಾಯಿ ವಾದನವನ್ನು ಕೇಳದವರೆ ಇಲ್ಲ. ಈ ಊರುಗಳಲ್ಲಿ ಮದುವೆಯಂತಹ ಶುಭ ಸಮಾರಂಭಗಳಿಗೆ ಇವರನ್ನು ಕರೆಯಿಸಿ ಸ್ಥಳೀಯ ಕರಡಿಮಜಲಿನೊಂದಿಗೆ ಶಹನಾಯಿ ನುಡಿಸುವುದೆಂದರೆ ಅದೊಂದು ಹಬ್ಬದ ವಾತಾವರಣವೆ ಸರಿ. ಪ್ರತಿಯೊಂದು ಹಳ್ಳಿಯವರು ಸ್ಪರ್ಧೆ ಎನ್ನುವ ರೀತಿಯಲ್ಲಿ ಇವರನ್ನು ಕರೆಯಿಸಿ ಇವರ ವಿಶಿಷ್ಟತರನಾದ ಶಹನಾಯಿ ವಾದನವನ್ನು ಮನತುಂಬುವಂತೆ ಕೇಳುತ್ತಿದ್ದರು.

ಜನಪ್ರಿಯ ಕಲಾವಿದರಾದ ಹುಲಗಪ್ಪನವರು 20-3-1935ರಲ್ಲಿ ಮುಂಡರಗಿಯಲ್ಲಿ ಜನಿಸಿದರು. ಮನೆಯ ಆರ್ಥಿಕ ತೊಂದರೆಯಿಂದ ಹೆಚ್ಚಿನ ಶಿಕ್ಷಣ ಪಡೆಯಲಾಗದೆ ಕೇವಲ ಆರನೆಯ ತರಗತಿಯವರೆಗೆ ಮಾತ್ರ ಓದಿ, ತಮ್ಮ ಓದನ್ನು ನಿಲ್ಲಿಸಿ, ತಮ್ಮ ಕುಲಕಸುಬಾದ ಶಹನಾಯಿ ಕಲಿಯಲೆಂದು ಗುರುಗಳಾದ ಫಕೀರಪ್ಪ ವರ್ದಿ ಅವರಲ್ಲಿಗೆ ಹೋಗಿ ಸತತ ನಾಲ್ಕೈದು ವರ್ಷ ಶಹನಾಯಿ ನುಡಿಸುವುದನ್ನು ರಾಗ-ತಾಳಗಳ ಸಮೇತ ಕಲಿತು, ಅಷ್ಟಕ್ಕೆ ತೃಪ್ತಿಗೊಳ್ಳದೆ ಕಬ್ಬೂರ ಸಿದ್ದಪ್ಪನವರ ಹತ್ತಿರ ಹೋಗಿ ರಾಗದ ಚೀಜಗಳನ್ನು ಮತ್ತು ಅವುಗಳನ್ನು ಕರಡಿಮಜಲಿನ ತಾಳಕ್ಕೆ ಹೇಗೆ ಹೊಂದಿಸಿಕೊಂಡು ನುಡಿಸಬೇಕೆಂಬುದನ್ನು ಸಹ ಕಲಿತು, ಮುಂಡರಗಿ ಹಾಗೂ ಗದಗ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಗೆ ಬಜಂತ್ರಿ ಹುಲಿಗೆಪ್ಪನವರು ತಮ್ಮ ಜನಪ್ರಿಯತೆಯನ್ನು ಗಳಿಸುವುದರಲ್ಲಿ ಯಶಸ್ವಿಯಾದರು. ಇವರು ಈ ಕಲೆಯನ್ನು ಕಳೆದ 56 ವರ್ಷಗಳಿಂದ ಪೋಷಿಸಿಕೊಂಡು ಬಂದಿರುವುದು ಗಮನಾರ್ಹ ಸಂಗತಿಯೆಂದೆ ಹೇಳಬೇಕು. ಹೀಗೆ ಸುದೀರ್ಘ ಸೇವೆಯನ್ನು ಸಲ್ಲಿಸುತ್ತ ಬಂದ

ಇವರ ಉತ್ಸಾಹ ಇನ್ನೂ ಕುಗ್ಗಿಲ್ಲ. ಶೃತಿ ಪ್ರಾರಂಭವಾಗಿ ಕರಡಿ ಮಜಲಿನವರು ಸಜ್ಜಾಗಿ ನಿಂತರೆ ಸಾಕು 72 ವಯಸ್ಸಿನ ಹುಲಗಪ್ಪನವರು ಹರೆಯದ ಹುಡುಗನಂತೆ ಜಿಗಿದಾಡಿ ಕರಡಿ ದಿಮ್ಮುಗಳ ತಾಳಕ್ಕೆ ತಕ್ಕಂತೆ ಉತ್ಸಾಹದಿಂದ ಈಗಲೂ ಶಹನಾಯಿಯನ್ನು ನುಡಿಸಿ ಜನರನ್ನು ರಂಜಿಸುತ್ತಾರೆ.

ಗದಗ ಮತ್ತು ಮುಂಡರಗಿಯ ಸುತ್ತಮುತ್ತಲಿನ ಹಳ್ಳಿಯ ಜನರು ತಮ್ಮೂರಿನ ಜಾತ್ರಾ ಸಮಾರಂಭಕ್ಕೆ ಮತ್ತು ಮದುವೆಯ ಕಾರ್ಯಕ್ರಮಕ್ಕೆ ಹುಲಗಪ್ಪನವರಿಗೆ ವಿಳ್ಯೆಕೊಟ್ಟು ಕರೆಸಿಕೊಳ್ಳುತ್ತಾರೆ. ಆಗ ಇವರ ಸಾಥಿಗಳಾದ ಈರಪ್ಪ, ಭೀಮಪ್ಪ, ಮರಿಯಪ್ಪ ಮತ್ತು ಬಲರಾಮರನ್ನು ಕರೆದುಕೊಂಡು ವಿಳ್ಯೆ ಕೊಟ್ಟವರ ಮನೆಗೆ ಹೋಗುತ್ತಾರೆ. ಮೊದಮೊದಲು ನಮ್ಮ ಹಳ್ಳಿಗಳಲ್ಲಿ ಮದುವೆ ಕಾರ್ಯಕ್ರಮಗಳು ಮೂರು ಇಲ್ಲವೆ ಐದುದಿನಗಳ ಕಾಲ ನಡೆಯುತ್ತಿದ್ದವು. ಒಳ್ಳು-ಒನಕೆಯ ಪೂಜೆಯಿಂದ ಪ್ರಾರಂಭವಾಗುವ ಮದುವೆಯ ಕಾರ್ಯಗಳು ಹಾಲಗಂಬ ತರುವುದು, ಬೀಗರನ್ನು ಎದುರುಗೊಂಡು ಅವರನ್ನು ಮದುವೆಯ ಮಂಟಪಕ್ಕೆ ಕರೆತರುವುದರಿಂದ ಹಿಡಿದು ಬೀಗರನ್ನು ಬೀಳ್ಕೊಡುವವರೆಗಿನ ಪ್ರತಿಯೊಂದು ಕ್ಷಣದಲ್ಲಿಯೂ ಕರಡಿ ಮಜಲಿನೊಂದಿಗೆ ಶಹನಾಯಿ ನುಡಿಸಲೇಬೇಕು. ಇಂಥ ವೇಳೆಯಲ್ಲಿ ಹುಲಗಪ್ಪ ಮತ್ತು ಅವರ ಮೇಳದವರು ಸ್ಥಳೀಯ ಊರಿನ ಕರಡಿಮಜಲಿನ ಮೇಳಗಳೊಂದಿಗೆ ಸಹಕರಿಸಿ ಶಹನಾಯಿಯನ್ನು ನುಡಿಸಬೇಕಾಗಿ ಬರುತ್ತಿತ್ತು. ಒಂದೊಂದು ಊರಿನಲ್ಲಿ ಒಂದೊಂದು ತರಹದ ಜನರಿರುತ್ತಾರೆ. ಒಂದು ಊರಿನಲ್ಲಿ ಹುಲಗಪ್ಪನವರ ಶಹನಾಯಿ ನುಡಿಸುವ ನಾದವನ್ನು ಕೇಳಿ ಮೆಚ್ಚಿಕೊಂಡರೆ ಮತ್ತೊಂದು ಊರಿನಲ್ಲಿ ಹುಲಗಪ್ಪನವರ ಪ್ರತಿಭೆಯ ಪರೀಕ್ಷೆಯೂ ನಡೆಯುತ್ತಿತ್ತು. ಇಂಥ ವೇಳೆಯಲ್ಲಿ ಹುಲಗಪ್ಪನವರು ತಮ್ಮ ಪ್ರತಿಭೆಯ ಪರಾಕಾಷ್ಠೆಯನ್ನು ಮೆರೆದು ಸ್ಥಳೀಯ ಕರಡಿ ಮಜಲಿನ ಮೇಳದವರಿಗೂ ಭಂಗ ಬರದಂತೆ ನಡೆದುಕೊಂಡದ್ದುಂಟು. ಒಮ್ಮೊಮ್ಮೆ ಕರಡಿಮಜಲಿನ ಕರಡಿ ಬಾರಿಸುವವನಿಗೂ ಮತ್ತು ಶಹನಾಯಿ ನುಡಿಸುವ ಹುಲಗಪ್ಪನವರಿಗೂ ನಡುವೆ ಅನೇಕ ಬಾರಿ ಸ್ಪರ್ಧೆ ನಡೆದುದು ಉಂಟು. ಶಹನಾಯಿಯವರು ದೀಪ ಚಂದಿರಾಗದಲ್ಲಿ ಶಹನಾಯಿಯನ್ನು ನುಡಿಸುತ್ತ ಮಟ್ಟಾ ಇಲ್ಲವೆ ಜಂಪಾತಾಳದಲ್ಲಿ ಪ್ರಾರಂಭಿಸಿದಾಗ ಕರಡಿಯವರು ಶಹನಾಯಿಯ ನಾದ, ಯಾವ ತಾಳಕ್ಕೆ ಹೊಂದುತ್ತದೆ ಎಂಬುದು ಗುರುತಿಸಿ ಅದೇ ತಾಳದಲ್ಲಿ ಕರಡಿ ಬಾರಿಸಲು ಪ್ರಾರಂಭಿಸಬೇಕು. ಒಂದು ವೇಳೆ ಏರು-ಪೇರು ಆದರೆ ರಾಗ ಒಂದು ಕಡೆ ತಾಳ ಮತ್ತೊಂದು ಕಡೆ ಆಗಿ ಶೃತಿ ಕೆಟ್ಟು ತಾಳ-ಮೇಳಗಳು ಸಹ ಕೆಟ್ಟು ಕೇಳುಗರಿಗೆ ಬೇಸೂರ ಎನಿಸುವ ಹಾಗೆ ಆಗಬಾರದೆಂದು ಇಬ್ಬರೂ ಸಹಕರಿಸಿಕೊಂಡು ಹೋಗುವುದು

ಅನಿವಾರ್ಯವಾಗುತ್ತಿತ್ತು. ಒಮ್ಮೊಮ್ಮೆ ಇದರ ಕಯಾಲಿ ಇದ್ದ ಹಳ್ಳಿಯ ಜನರು ಮೋಜು-ಮಜಲು ಮಾಡುವ ಜನರು ಕೂಡಿಕೊಂಡು ತಮಗೆ ಬೇಕಾದ ರಾಗವನ್ನು ಬಾರಿಸಲು ಶಹನಾಯಿಯವರಿಗೆ ಹೇಳಿ ಆ ಶಹನಾಯಿಗೆ ತಕ್ಕ ತಾಳದಲ್ಲಿ ಬಾರಿಸಲು ಕರಡಿ ಮಜಲಿನವರಿಗೆ ಹೇಳಿ; ಹಳ್ಳಿಯ ಪ್ರಮುಖ ಬೀದಿಯ ಕೂಟದಲ್ಲಿ ನಿಲ್ಲಿಸಿ ಬಾರಿಸಲು ಹೇಳುತ್ತಿದ್ದರು. ಇಂಥ ವೇಳೆಯಲ್ಲಿ ಹುಲಗಪ್ಪನವರು ಕರಡಿಯವನ ತಾಳವನ್ನು ಕೇಳಿ ಅದಕ್ಕೆ ರಾಗವನ್ನು ನುಡಿಸಲು ಪ್ರಾರಂಭಿಸಿ ಒಂದು ಮೆಟ್ಟಿಲು, ಎರಡನೆಯ ಮೆಟ್ಟಿಲು ಎಂದು ನುಡಿಸುತ್ತ ಮೂರನೆಯ ಮೆಟ್ಟಿಲಕ್ಕೆ ಮೇಳದವರು ಬರುತ್ತಾರೊ ಇಲ್ಲವೊ ಎಂಬುದನ್ನು ಗುರುತಿಸಿ ಅವರಿಗೆ ಅಸಹ್ಯವಾಗದಂತೆ ತೀವ್ರಗತಿಯಲ್ಲಿ ನುಡಿಸುತ್ತ ಮುಕ್ತಾಯಕ್ಕೆ ಸನ್ನೆಯನ್ನು ಮಾಡುತ್ತ ಮುಗಿಸಿ ಬಿಡುತ್ತಿದ್ದರು. ಹೀಗೆ ಬಾರಿಸುತ್ತ ತಾರಕಕ್ಕೇರಿದ ನಾದವನ್ನು ಕೇಳಿದ ಜನರು ದಿಂಗುವರೆದು ಕರಡಿಯ ತಾಳಕ್ಕೆ ಶಹನಾಯಿಯ ನಾದಕ್ಕೆ ತಕ್ಕಂತೆ ತಲೆಯ ಮೇಲಿನ ಪೇಟಾವನ್ನು ತೆಗೆದು ತೂರಿ ಅದನ್ನು ಕೈಯಲ್ಲಿ ಹಿಡಿದು ಕುಣಿಯುತ್ತಿರುತ್ತಾರೆ. ಒಬ್ಬ ಚುನಮರಿಯನ್ನು ತೂರುತ್ತ ಬರುತ್ತಿರುತ್ತಾನೆ. ಹೀಗೆ ಮೆರವಣಿಯಲ್ಲಿ ಭಾವಾವೇಶದಿಂದ ಹುಚ್ಚೆದ್ದು ಕುಣಿಯುವ ಜನರ ತೃಪ್ತಿಗಾಗಿ ಮಜಲಿನವರು ಶಹನಾಯಿಯವರು ಕೂಡ ಸಮಯದ ಅರಿವೇ ಇಲ್ಲದೆ ಉತ್ಸಾಹದಿಂದ ಬಾರಿಸುತ್ತಿರುತ್ತಾರೆ. ಇಂಥ ಸಮಯದಲ್ಲಿ ಹಿರಿಯರು ಎಚ್ಚರಿಸುವವರಂತೆ ಬಂದು ಮುಂದೆ ನಡೆಯಲು ಹೇಳುತ್ತಿದ್ದರು. ಮತ್ತೆ ದಾರಿಯನ್ನು ಕ್ರಮಿಸಲು ಸಾಮಾನ್ಯ ರಾಗ ಸಾಮಾನ್ಯ ತಾಳವನ್ನು ನುಡಿಸುತ್ತ-ಬಾರಿಸುತ್ತ ಮುಂದೆ ಸಾಗುತ್ತಿದ್ದರು. ಹೀಗೆ ಮೆರವಣಿಗೆಗಳು ನೋಡುಗರ ಮತ್ತು ಮೆರವಣಿಗೆಯಲ್ಲಿ ಪಾಲ್ಗೊಳ್ಳುವವರಿಗೂ ಮರೆಯಲಾರದ ನೆನಪುಗಳಾಗಿ ಉಳಿಯುವಲ್ಲಿ ಶಹನಾಯಿವಾದಕರಾದ ಹುಲಗಪ್ಪನವರ ಪಾತ್ರ ಅತೀ ದೊಡ್ಡದು. ಹೀಗೆ ಪ್ರತಿ ಊರ ಮದುವೆಯ ಇಲ್ಲವೆ ಜಾತ್ರಾ ಮಹೋತ್ಸವಗಳಲ್ಲಿ ಯಾರಿಗೂ ಬೇಸರವಾಗಾದ ರೀತಿಯಲ್ಲಿ ತಮ್ಮ ಶಹನಾಯಿಯನ್ನು ನುಡಿಸಿ ಮಾನ-ಸನ್ಮಾನಗಳನ್ನು ಪಡೆದು ಬರುತ್ತಿದ್ದರು.

ಶಾಸ್ತ್ರೀಯವಾಗಿ ಶಹನಾಯಿ ನುಡಿಸುವುದನ್ನು ತಮ್ಮ ಗುರುಗಳಿಂದ ಕರಗತ ಮಾಡಿಕೊಂಡ ಹುಲಗಪ್ಪನವರು ಮಲ್ಹಾರ, ತಿಲಂಗ, ಸಾರಂಗ, ಕಾಫಿ, ಪೂರ್ವಿ, ಧನಶ್ರೀ, ದುರ್ಗಾ, ಹಂಸಧ್ವನಿ, ಶಂಕರಾಭರಣ, ಪಡದೀಪ ಜೀವನಪುರಿ, ಭೈರವಿ, ಭೀಮಪಲಾಸ, ಬಾಹರ್, ಮಾಲಕೌಂಸ, ಕೇದಾರ ಗೌಳ, ಕಲ್ಯಾಣಿ, ಆಸಾವರಿ, ಜಯಜೈವಂತಿ, ಕಾಂಬೋಧಿ ಹೀಗೆ ಮುಂತಾದ ರಾಗಗಳನ್ನು ಆಯಾ ತಾಳಗಳನ್ನು ಯಶಸ್ವಿಯಾಗಿ ನುಡಿಸಿ, ಒಂದು ಆವರ್ತಿ ಬಿಟ್ಟು ಚೀಜಗಳನ್ನು ನುಡಿಸುವುದುಂಟು.

ಇವರ ಇನ್ನೊಂದು ವಿಶೇಷತೆಯೆಂದರೆ ಆಯಾ ರಾಗಗಳ ದಾಟಿಯಲ್ಲಿ ಜನಪದ ಚೀಜಗಳನ್ನು ನುಡಿಸುವುದು. ಹೀಗೆ ನುಡಿಸುವ ಇವರ ಆ ಧ್ವನಿ ನಮ್ಮ ಉತ್ತರ ಕರ್ನಾಟಕ ಮೂಲ ಜನಪದ ಧಾಟಿಗಳು ನೆನಪಿಗೆ ಬರುತ್ತವೆ. ಶಹನಾಯಿಯನ್ನು ನುಡಿಸುವ ಈ ಅದ್ವಿತೀಯ ಜನಪದ ಕಲಾವಿದರಾದ ಹುಲಗಪ್ಪ ಭಜಂತ್ರಿಯವರು ತಾವು ಕಲಿತ ಕಲೆ ತಮ್ಮೊಂದಿಗೆ-ಮುಗಿದು ಹೋಗಬಾರದೆಂದೂ, ಅದು ನಿರಂತರವಾಗಿ ಮುಂದುವರೆಯ ಬೇಕೆಂಬ ಉತ್ಕಟ ಆಸೆಯಿಂದ ಆಸಕ್ತಿಯಿಂದ ಕಲಿಯಲು ಬರುವ ಯುವಕರಿಗೆ ನಿಸ್ವಾರ್ಥದಿಂದ ಕಲಿಸಿಕೊಡುತ್ತಿದ್ದಾರೆ.

## ವಿರುಪಾಕ್ಷಪ್ಪ ಬಸಪ್ಪ ಕೊಳ್ಳಿ

ಕರಡಿ ಮಜಲಿನ ಕಲಾವಿರಾದ ವಿರುಪಾಕ್ಷಪ್ಪ ಕೊಳ್ಳಿಯವರು ಗದಗ ಜಿಲ್ಲೆಯ ರೋಣ ತಾಲೂಕಿನ ಮಾಳವಾಡ ಗ್ರಾಮದವರು. ಮಾಳವಾಡ ಗ್ರಾಮ ಜನಪದ ಸಂಸ್ಕೃತಿಯ ತವರೂರು. ತಂದೆ ಬಸಪ್ಪ, ತಾಯಿ ಪಾರ್ವತೆವ್ವನವರ ಮಗನಾಗಿ 1939 ಮಾರ್ಚ್ 1 ರಂದು ಜನಿಸಿದರು. ಇವರು ಐದನೆಯ ತರಗತಿಯವರೆಗೆ ಕಲಿತು, ಮನೆತನದ ಮುಖ್ಯ ಕಸುಬಾದ ಒಕ್ಕಲುತನಕ್ಕೆ ಶರಣಾದರು. ಬಾಲಕನಾದ ವಿರುಪಾಕ್ಷಪ್ಪ ಗ್ರಾಮದಲ್ಲಿಯ ಗುಡಿ–ಗುಂಡಾರಗಳಲ್ಲಿ ಹಾಗೂ ಮನೆ–ಮನೆಗಳಲ್ಲಿ ಭಜನಿಪದ, ಗೀಗಿಪದ, ಹೆಜ್ಜೆಯ ಮೇಳದ ಪದ, ಹಂತಿಪದಗಳಿಗೆ ಮಾರು ಹೋಗಿ, ಅವುಗಳನ್ನು ಕಲಿತುಕೊಳ್ಳಲು ಪ್ರಾರಂಭಿಸಿದರು. ಬೆಳೆದು ದೊಡ್ಡವರಾದಂತೆ ಹಾಡಲು ಪ್ರಾರಂಭಿಸಿದರು. ಜನರ ಚಪ್ಪಾಳೆ, ಪ್ರೋತ್ಸಾಹದಿಂದ ಉತ್ತಮ ಹಾಡುಗಾರರಾದರು.

ಊರಿನಲ್ಲಿ ಕರಡಿ ಮಜಲಿನ ಕೊರತೆ ಇತ್ತು. ಅದಕ್ಕಾಗಿ ಒಮ್ಮೆ ಊರ ಗುರು–ಹಿರಿಯರೆಲ್ಲ ಗುಡಿಯಲ್ಲಿ ಸಭೆ ಸೇರಿ 'ನಮ್ಮ ಊರಲ್ಲಿ ಕರಡಿ ಮಜಲು ಇಲ್ಲ; ಜಾತ್ರಾ ಸಮಯದಲ್ಲಿ ಮತ್ತು ಮದುವೆಯ ಗುಗ್ಗಳ ಸಮಾರಂಭಕ್ಕೆ ಬೇರೆ ಊರಿನ ಕರಡಿ ಮಜಲನ್ನು ತರಬೇಕಾಗುತ್ತದೆ. ಏಕೆ ನಮ್ಮೂರಿನಲ್ಲಿಯೇ ಒಂದು ಮಜಲನ್ನು ತಯಾರಿಸಬಾರದು" ಎಂದು ಸಮಾಲೋಚಿಸಿ, ಕಾರ್ಯ ತತ್ಪರರಾಗಿ ಕರಡಿ ಮಜಲಿನಲ್ಲಿ ಪರಿಣತಿಯನ್ನು ಪಡೆದ ಹನಮಂತಪ್ಪ ಭಜಂತ್ರಿ ಮಾಸ್ತರರನ್ನು ಕರೆಯಿಸಿ ಗುಡಿಯಲ್ಲಿ ತಾಲೀಮು ಆರಂಭಿಸಿದರು. ತಾಲೀಮು ಮಾಡುವ ವೇಳೆಯಲ್ಲಿ ಗ್ರಾಮದ ಒಂದು ತಾಡಿಯ ಲಿಂಗವಂತ ಸಮುದಾಯದ ಹುಡುಗರು ಬಂದು ಸೇರಿದರು. ಅವರೆಲ್ಲರಿಗೂ ಒಂದು ಫೂಟ್ ಎತ್ತರ, ಅರ್ಧಾ ಫೂಟ್ ಅಗಲದ ಹಲಗಿ ಮತ್ತು ಅದಕ್ಕೆ ತಕ್ಕ ಗುಣಿಯೊಂದನ್ನು ತರಲು ಹೇಳಿದರು. ಮಾಸ್ತರರು ಹೇಳಿದಂತೆ ಮರುದಿನ ಸಂಜೆಯ

ವೇಳೆಗೆ ಎಲ್ಲರೂ ಒಂದು ಹಲಗಿ (ಪಳಿ) ಮತ್ತು ಗುಣಿಯನ್ನು ತೆಗೆದುಕೊಂಡು ಬಂದು ಗುಡಿಯಲ್ಲಿ ಕುಳಿತರು. ಮಾಸ್ತರರು ತಮ್ಮ ಎಡಗೈಯಲ್ಲಿ ಪಳಿಯನ್ನು, ಬಲಗೈಯಲ್ಲಿ ಗುಣಿಯನ್ನು ಹಿಡಿದು ಎಲ್ಲರಿಗೂ "ನಾನು ಬಾರಿಸಿದಂತೆ ಬಾರಿಸಿ" ಎಂದು ಹೇಳಿ ಬಾಯಿಂದ ಬೋಲುಗಳನ್ನು ಹೇಳುತ್ತ ಪಳಿಯನ್ನು ಬಾರಿಸಲು ಪ್ರಾರಂಭಿಸಿದರು. ಅವರಂತೆ ಕೆಲವರು ಬಾರಿಸಿದರು. ಇನ್ನೂ ಕೆಲವರು ಬಾರಿಸದೆ ಹಾಗೆ ನೋಡುತ್ತ ಕುಳಿತರು. ಅವರನ್ನು ಗಮನಿಸಿದ ಮಾಸ್ತರರು ಬೋಲುಗಳನ್ನು ಹೇಳಿ ಮತ್ತೆ ಬಾರಿಸುವಂತೆ ಹೇಳಿದರು. ಮಾಸ್ತರರು ಹೇಳಿದಂತೆ ತಕ್ಷಣ ಬಾರಿಸಿದ ವಿರುಪಾಕ್ಷಪ್ಪನನ್ನು ಗಮನಿಸಿ ಅವನನ್ನು ಮುಂದೆ ಕರೆದು ಇವನಂತೆ ಬಾರಿಸಿರಿ ಎಂದು ಹೇಳಿದರು. ಮಾಸ್ತರು ಹೇಳಿದ ಬೋಲುಗಳನ್ನು ಆಸಕ್ತಿಯಿಂದ ಕೇಳಿ, ನೋಡಿ ತಕ್ಷಣವೇ ಬಾರಿಸಿ ತೋರಿಸಿ ಮಾಸ್ತರರ ಅಚ್ಚು-ಮೆಚ್ಚಿನ ಶಿಷ್ಯನಾದ. ಆ ಕೂಡಿದ ಒಂದಳತೆಯ ಹುಡುಗರಲ್ಲಿ ಕೇವಲ ಆರು ಹುಡುಗರನ್ನು ಆಯ್ಕೆ ಮಾಡಿಕೊಂಡು ಅವರವರ ಜಾಣತನಕ್ಕೆ ತಕ್ಕಂತೆ ದಿಮ್ಮು, ಚೌಗಡಿ ಮತ್ತು ತಾಳಕ್ಕೆ ನೇಮಿಸಿಕೊಂಡು ತಂಡಕ್ಕೆ ತರಬೇತಿಯನ್ನು ನೀಡಿ ಒಂದು ಒಳ್ಳೆಯ ಕರಡಿ ಮಜಲಿನ ಮೇಳವನ್ನು ತಯಾರಿಸಿ ಕೊಟ್ಟರು.

ಮಾಸ್ತರ ಹನಮಂತಪ್ಪ ಭಜಂತ್ರಿಯವರಿಂದ ಕಲಿತ ಕರಡಿ ಮಜಲಿನ ಜಪ್ತ, ಆದಿ, ರೂಪ, ಜಂಪಾ, ಸಂಕೀರ್ಣ, ಮಿಶ್ರ ಮುಂತಾದ ತಾಳಗಳನ್ನು ನುಡಿಸುವುದರಲ್ಲಿ ಪರಿಣಿತಿಯನ್ನು ಪಡೆದ ವಿರುಪಾಕ್ಷಪ್ಪನವರು, ಊರಿನ ಜಾತ್ರೆ ಮತ್ತು ಮದುವೆ ಮುಂತಾದ ಸಮಾರಂಭಗಳಲ್ಲಿ ಮಜಲು ಮಾಡಿ ಬಾರಿಸಲು ಪ್ರಾರಂಭಿಸಿದರು. ಇವರು ಕರಡಿ ಮಜಲಿನ ಮುಖ್ಯವಾದ್ಯವಾದ ಕರಡಿಯನ್ನು, ದಿಮ್ಮನ್ನು ಶಂಕ್ರಪ್ಪ ಉಗರಗೊಳ್ಳ ಮತ್ತು ಮುತ್ತಪ್ಪ ಅರಮನಿ, ಚೌಗಡಿಯನ್ನು ಶೇಖಪ್ಪ ರೇಶ್ಮಿ, ತಾಳ-ಮಲ್ಲಯ್ಯ ಹಿರೇಮಠ, ಶಹನಾಯಿ-ಮಲ್ಲಪ್ಪ ಭಜಂತ್ರಿ, ಶೃತಿಯನ್ನು ಬಸವಂತಪ್ಪ ಭಜಂತ್ರಿ ಹೀಗೆ ಎಲ್ಲರೂ ಕೂಡಿಕೊಂಡು ಬಾರಿಸಲು ಪ್ರಾರಂಭಿಸಿದರೆ ಸಾಕು ಕೂಡಿದ ಜನ ಬೆಪ್ಪು-ಬೆರಗಾಗಿ ಇವರ ಕರಡಿ ಮಜಲಿನ ತಾಳಗಳನ್ನು ವೀಕ್ಷಿಸುತ್ತಿದ್ದರು. ಅಲ್ಲದೆ ಇದರ ಖಯಾಲಿ ಇದ್ದ ಕೆಲವರು ಬೇರೆ-ಬೇರೆ ತಾಳಗಳನ್ನು ನುಡಿಸಲು ಹೇಳಿ, ತಾವು ಹೇಳಿದಂತ ತಾಳಗಳನ್ನು ನುಡಿಸುವುದನ್ನು ಕೇಳಿ-ಕಂಡು ಸಂತೃಪ್ತರಾಗುತ್ತಿದ್ದರು. ಕೆಲವರಂತೂ ಖುಷಿಯಿಂದ ನೋಟಿನ (ಹಣದ) ಸರಮಾಲೆ ಮಾಡಿ ಇವರ ಕೊರಳಿಗೆ ಹಾಕುತ್ತಿದ್ದರು. ಚಿಲ್ಲರೆ ಹಣ ಮತ್ತು ಚುರಮುರಿಯನ್ನು ಇವರ ಮೇಲೆ ತುರುತ್ತಿದ್ದರು. ಜನರ ಉತ್ಸಾಹವನ್ನು ನೋಡಿ ಹುಮ್ಮಸ್ಸಿನಿಂದ ಮತ್ತಷ್ಟು ಕುಣಿಯಬೇಕೆನ್ನುವಂತೆ ಚೈತನ್ಯ ಇವರಲ್ಲಿ ಮೂಡುತ್ತಿತ್ತು. ಹೀಗೆ ಜನರ

ಮೆಚ್ಚುಗೆಯನ್ನು ಪಡೆದ ಈ ಕರಡಿ ಮಜಲಿನ ತಂಡ ಊರಿನಲ್ಲಿ ಕರಡಿ ಮಜಲು ಇಲ್ಲ ಎಂಬ ಕೊರತೆಯನ್ನು ನೀಗಿಸುವಲ್ಲಿ ಯಶಸ್ವಿಯಾಯಿತು.

ಒಬ್ಬ ಜನಪದ ಕಲಾವಿದ ಗ್ರಾಮದ ಒಂದೇ ಒಂದು ಕಲೆಗೆ ಪ್ರಾಮುಖ್ಯತೆ ನೀಡಿ ಅದನ್ನೊಂದೆ ಕಲಿತಿರಲಾರ, ಬದಲಾಗಿ ಆ ಹಳ್ಳಿಯ ಸಮಗ್ರ ಕಲೆಗಳನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕನಿಷ್ಟ ಮೂರು-ನಾಲ್ಕು ಕಲೆಗಳನ್ನಾದರೂ ಕಲಿತಿರುತ್ತಾನೆ. ಅಂಥವರಲ್ಲಿ ವಿರುಪಾಕ್ಷಪ್ಪನವರು ಒಬ್ಬರು. ತಮ್ಮ ಗ್ರಾಮದ ಕಲೆಗಳಾದ ಭಜನೆ, ಹೆಜ್ಜೆಯ ಮೇಳ ಮತ್ತು ಹಂತಿಪದಗಳನ್ನು ಹಾಡುವುದರಲ್ಲಿಯೂ ಸಹ ಪರಿಣಿತಿಯನ್ನು ಪಡೆದಿದ್ದಾರೆ. ಆದರೆ ತಮ್ಮನ್ನು ತಾವು ಗುರುತಿಸಿಕೊಂಡದ್ದು ಮಾತ್ರ ಕರಡಿ ಮಜಲಿನ ಕಲಾವಿದರಾಗಿ, ತಮ್ಮೂರಿನ ಸಭೆ-ಸಮಾರಂಭಗಳಲ್ಲಿ ಕರಡಿ ಮಜಲನ್ನು ನುಡಿಸುವುದಲ್ಲದೆ ಊರಿನ ಅಕ್ಕಪಕ್ಕದ ಗ್ರಾಮಗಳಿಗೂ ತಮ್ಮ ಮೇಳವನ್ನು ಕರೆದುಕೊಂಡು ಹೋಗಿ, ತಮ್ಮ ಕಲೆಯ ಪ್ರದರ್ಶನವನ್ನು ನೀಡಿ ಅವರಿಂದ ಮಾನ-ಸನ್ಮಾನಗಳನ್ನು ಪಡೆದುಕೊಂಡಿದ್ದಾರೆ.

ವಿರುಪಾಕ್ಷಪ್ಪನವರು ತಮ್ಮ ಕರಡಿ ಮಜಲಿನ ಮೇಳವನ್ನು ಕರೆದುಕೊಂಡು ರಾಜ್ಯದ ಹಲವಾರು ಉತ್ಸವ, ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರಗಳನ್ನು ಪಡೆದುಕೊಂಡಿದ್ದಾರೆ. 2007ರ ಡಿಸೆಂಬರ 29 ರಂದು ಅವರಾಧಿಯ ಬಸವೇಶ್ವರ ಯುವಕ ಮಂಡಳದವರು ಏರ್ಪಡಿಸಿದ ಜಾನಪದ ಉತ್ಸವದಲ್ಲಿ ಭಾಗವಹಿಸಿ ಜನಮೆಚ್ಚುಗೆಯನ್ನು ಪಡೆದುದಕ್ಕೆ ಪ್ರಶಸ್ತಿ ಪತ್ರ, 2006 ಫೆಬ್ರವರಿ 26,27 ಹಾಗೂ 28 ರಂದು ಬಾಗಲಕೋಟ ಜಿಲ್ಲಾ ಮಂಡಳಿಯವರು ಏರ್ಪಡಿಸಿದ ಚಾಲುಕ್ಯ ಉತ್ಸವದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಪ್ರಶಸ್ತಿ ಪತ್ರವನ್ನು ಪಡೆದಿದ್ದಾರೆ. ಆದರೆ ಸ್ಥಳೀಯ ಸಂಘ-ಸಂಸ್ಥೆಗಳು ಹಾಗೂ ಸರಕಾರ ಇವರ ಕಲೆಯನ್ನು ಗುರುತಿಸಿ ಯಾವ ಪ್ರಶಸ್ತಿಯನ್ನು ಇದುವರೆಗೂ ನೀಡದಿರುವುದು ಇವರಿಗೆ ಬೇಸರ ತಂದಿದೆ. ಜನಪದ ಕಲೆಯ ಉಳಿವಿಗಾಗಿ ಯುವಕರನ್ನು ಕಲೆ ಹಾಕಿ, ಜನಪದದ ಅರಿವನ್ನು ಮೂಡಿಸಿ, ಆಸಕ್ತಿಯಿಂದ ಅವರು ಕಲಿಯುವಂತೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಕರಡಿ ಮಜಲಿನ ತಂಡಗಳನ್ನು ತಯಾರು ಮಾಡಿದ್ದಾರೆ. ಹೀಗೆ ಮೂವತ್ತೈದು ವರುಷಗಳಿಂದ ಜನಪದ ಕಲಾಸೇವೆ ಮಾಡುತ್ತಾ ಬಂದಿರುವ ಇವರನ್ನು, ಸರಕಾರ ಹಾಗೂ ಸಂಘ-ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿ ಕಲಾವಿದರನ್ನು ಮತ್ತು ಅವರ ಕಲೆಯನ್ನು ಉಳಿಸಬೇಕು. ಕಲಾವಿದ ಬೆಳೆದರೆ ಅವನ ಕಲೆಯು ಬೆಳೆಯುತ್ತದೆ.

# ಚನ್ನಪ್ಪ ವೀರಪ್ಪ ಅಂಗಡಿ

ಗದಗ ಜಿಲ್ಲೆಯ ಜಾನಪದ ಹಿರಿಯ ಕಲಾವಿದರು ಹಾಗೂ ಸುವರ್ಣ ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಚೆನ್ನಪ್ಪನವರು ತಮ್ಮ ಬಾಲ್ಯದಿಂದಲೇ ಜನಪದ ಕಲೆಗಳನ್ನು ಮೈಗೂಡಿಸಿಕೊಂಡವರು. ಉತ್ತರ ಕರ್ನಾಟಕದ ಜನಪದ ಕಲೆಗಳಾದ ಹಂತಿಪದ, ಲಾವಣಿಪದ, ಭಜನಾಪದ, ಡೊಳ್ಳಿನ ಪದ ಹೀಗೆ ಹತ್ತು ಹಲವಾರು ಕಲೆಗಳಲ್ಲಿ ಪರಿಣಿತರಾದ ಇವರು ಗೀಗೀಪದಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ನಾಡಿನಲ್ಲಿ ಇವರ ಗೀಗಿಪದಗಳನ್ನು ಕೇಳದವರೆ ಇಲ್ಲ. ಒಂದರ್ಥದಲ್ಲಿ ಹೇಳುವುದಾದರೆ ಇವರು ಗೀಗೀಜನಪದ ಪ್ರಕಾರಕ್ಕೆ ಒಂದು ಮೆರಗನ್ನು ತಂದು ಕೊಟ್ಟ ಹಿರಿಯಜೀವಿ.

ಚೆನ್ನಪ್ಪನವರು ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ತಮ್ಮ ತಾಯಿಯ ತವರೂರಾದ ಶಿಶುವಿನ ಹಳ್ಳಿಯಲ್ಲಿ ಫೆಬ್ರವರಿ 1942 ರಂದು ಜನಿಸಿದರು. ತಂದೆ ವೀರಪ್ಪ, ತಾಯಿ ಬಸಮ್ಮ ಇವರ ಏಕೈಕ ಪುತ್ರನಾಗಿ ಪ್ರೀತಿಯಿಂದ ಬೆಳೆದರು. ತಮ್ಮ ಸ್ವಗ್ರಾಮವಾದ ಅಡವಿಸೋಮಾಪುರದಲ್ಲಿ ನಾಲ್ಕನೆಯ ವರ್ಗದವರೆಗೆ ಓದಿದರು. ಮನೆಯಲ್ಲಿ ಮುಂದೆ ಓದಲಿಕ್ಕೆ ಅನುಕೂಲವಾಗಲಿಲ್ಲ ಮನೆಯ ಮೂಲ ಕಸುಬಾದ ಒಕ್ಕಲುತನಕ್ಕೆ ಸೇರಿದರು. ಬಾಲ್ಯದಿಂದಲೆ ಒಕ್ಕಲುತನ ಮಾಡಿಕೊಂಡು ಬಂದ ಚೆನ್ನಪ್ಪನವರು ಬಿಡುವಿನ ವೇಳೆಯಲ್ಲಿ ಗುಡಿಗಳಲ್ಲಿ ನಡೆಯುತ್ತಿದ್ದ ಡೊಳ್ಳಿನ ಪದ, ಭಜನಾಪದ ಮತ್ತು ಊರಲ್ಲಿ ನಡೆಯುತ್ತಿದ್ದ ದೊಡ್ಡಾಟಗಳನ್ನು ಕಂಡು ಅವುಗಳಿಗೆ ಮನಸೋತು, ಕಲಿಯಬೇಕೆಂಬ ಆಸಕ್ತಿ ಹೊಂದಿ ಅವುಗಳ ಲಯ, ದಾಟಿ, ತಾಳ ಮುಂತಾದವುಗಳನ್ನು ಗಮನಿಸಿ ಕಲಿಯಲು ಮುಂದಾದರು. ಶಾಲೆಯಲ್ಲಿ ಓದುತ್ತಿರುವಾಗಲೇ ಹಾಡುವ ಹವ್ಯಾಸದಲ್ಲಿದ್ದ ಇವರಿಗೆ ಮೂಲ ಧಾಟಿಯಲ್ಲಿಯೇ ಅವುಗಳನ್ನು ಕಲಿಯುವುದು ಅತಿ ಸುಲಭವಾಯಿತು. ಹೀಗೆ ಒಂದೊಂದೇ ಹಾಡುಗಳನ್ನು ಕಲಿತು ಹಾಡುತ್ತ ಮುಂದೆ ಗ್ರಾಮದಲ್ಲಿ ನಡೆಯುವ ಜಾತ್ರೆ-ಹಬ್ಬ ಹರಿದಿನ-ಉತ್ಸವಗಳಲ್ಲಿ ಡೊಳ್ಳಿನ ಪದ, ಕರಬಲ್-ರಿವಾಯತ್ ಪದ, ಹೊಲದಲ್ಲಿ ರಾಶಿ ಮಾಡುವಾಗ ಸುಗ್ಗಿಯ ಪದ, ಹಂತಿ ಹೊಡೆಯುವಾಗ ಹಂತಿಪದ ಹೀಗೆ ಹಲವಾರು ಹಾಡುಗಳನ್ನು ಕಲಿತು ಹಾಡುವುದನ್ನು ರೂಢಿಸಿಕೊಂಡರು.

ಸಾಗರದಷ್ಟು ವಿಶಾಲವಾದ ಜನಪದ ಕಲೆಗಳ ಬಗ್ಗೆ ಆಸಕ್ತಿ ಮೂಡಿ ತಾವು ಕಲಿತದ್ದು ಬೊಗಸೆಯಷ್ಟು ಇಲ್ಲ. ಇನ್ನೂ ಕಲಿಯುವುದು ಬಹಳಷ್ಟಿದೆ, ಎಲ್ಲವನ್ನು

ಕಲಿಯಬೇಕು ಎಂಬ ಹೆಬ್ಬಯಕೆ ಮೂಡಿ ಗೀಗೀಪದಗಳನ್ನು ಕಲಿತು, ತಮ್ಮ ಸ್ವಗ್ರಾಮದಲ್ಲಿ ಗೀಗೀ ಮೇಳವೊಂದನ್ನು ಕಟ್ಟಿಕೊಂಡು, ಅದರ ಮುಖಾಂತರ ಸರ್ಕಾರದವರು ನಡೆಸುವ ಯುವಜನ ಮೇಳಗಳಲ್ಲಿ ಭಾಗವಹಿಸುತ್ತಾ, ತಾಲೂಕು ಮಟ್ಟದಿಂದ ರಾಜ್ಯಮಟ್ಟದವರೆಗೆ ಗೀಗೀಪದ ಮತ್ತು ಲಾವಣಿ ಪದಗಳನ್ನು ಹಾಡಿ, ಜನಮನವನ್ನು ಸೂರೆಗೊಂಡು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡರು. ಗೀಗೀಪದಗಳ ಹಾಗೂ ಲಾವಣಿ ಪದಗಳ ವೃತ್ತಿಗಾಯಕರಾಗಿ ಮಾರ್ಪಟ್ಟರು.

ಜನಪ್ರಿಯ ಕಲಾವಿದರಾದ ಚನ್ನಪ್ಪ ಅಂಗಡಿಯವರು ರಾಜ್ಯದ ಧಾರವಾಡ, ಮೈಸೂರು, ಬೆಂಗಳೂರು, ಗುಲ್ಬರ್ಗಾ ಹಾಗೂ ಹೊಸಪೇಟ ಆಕಾಶವಾಣಿಗಳಲ್ಲಿ ನೂರಾರು ಹಾಡುಗಳನ್ನು ಹಾಡಿ ರಾಜ್ಯದ ಜನತೆಯ ಮೆಚ್ಚುಗೆಯನ್ನು ಗಳಿಸಿದರಲ್ಲದೆ, 'ಎ' ಗ್ರೇಡ್ ಆಕಾಶವಾಣಿ ಕಲಾವಿದರಾಗಿ ನಲ್ವತ್ತೇಳನೆಯ ಸ್ವಾತಂತ್ರ್ಯೋತ್ಸವದ ವಿಶೇಷ ಕಾರ್ಯಕ್ರಮಕ್ಕಾಗಿ ಗುಲ್ಬರ್ಗಾ ಆಕಾಶವಾಣಿಯಲ್ಲಿ ಭಾಗವಹಿಸಿ ಹಾಡಿದ ಕೀರ್ತಿ ಇವರದು. ಬೆಂಗಳೂರು ದೂರದರ್ಶನದ ಕಲಾವಿದರಾಗಿ 'ಜಾನಪದ ಜಗತ್ತು', 'ಕೃಷಿರಂಗ' ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉತ್ತಮ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಲ್ಲದೆ ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಬೆಳಗು' ಕಾರ್ಯಕ್ರಮದ ನೇರ ಸಂದರ್ಶನದಲ್ಲಿ ಭಾಗವಹಿಸಿ ರಾಜ್ಯದ ಜನತೆಯ ಮನಸೂರೆಗೊಂಡಿದ್ದಾರೆ.

ರಾಜ್ಯ ಸರಕಾರದವರು ಪ್ರತಿ ವರ್ಷ ನಡೆಸುತ್ತ ಬಂದಿರುವ ಯುವಜನ ಮೇಳಗಳಲ್ಲಿ 1982 ರಿಂದ 1988 ರವರೆಗೆ ತಾಲೂಕ ಮಟ್ಟದಿಂದ ರಾಜ್ಯಮಟ್ಟದವರೆಗೂ ಗೀಗಿಪದ ಮತ್ತು ಲಾವಣಿ ಪದಗಳ ಸ್ಪರ್ಧೆಗಳಲ್ಲಿ ಹಲವಾರು ಬಾರಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅಲ್ಲದೆ ಯುವಜನೋತ್ಸವ, ಯುವ ಸಪ್ತಾಹ ಮುಂತಾದ ಕಾರ್ಯಕ್ರಮಗಳಿಗೆ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. 1986ರಲ್ಲಿ ಯುವಕರನ್ನು ಹಾಗೂ ಊರಿನ ಗುರು-ಹಿರಿಯರನ್ನುಕಟ್ಟಿಕೊಂಡು ಗದಗ ತಾಲೂಕಾ ಮಟ್ಟದ ಯುವಜನ ಮೇಳವನ್ನು ಅಡವಿಸೋಮಾಪುರದಲ್ಲಿ ನಡೆಸಿ ಯಶಸ್ಸನ್ನು ಸಾಧಿಸಿದ ಕೀರ್ತಿ ಇವರದಾಗಿದೆ. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸುಮಾರು 200ಕ್ಕೂ ಅಧಿಕ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ನೀಡಿದ್ದಾರೆ. ಮೈಸೂರು ದಸರಾ ಉತ್ಸವದಲ್ಲಿ ಎರಡು ಬಾರಿ ಇಲಾಖೆಯವತಿಯಿಂದ ಜಿಲ್ಲೆಯ ಪ್ರತಿನಿಧಿಯಾಗಿ ಭಾಗವಹಿಸಿ, ವಿಶೇಷ ಕಾರ್ಯಕ್ರಮವನ್ನು ನೀಡಿ ಇಲಾಖೆಯ ಗೌರವಕ್ಕೆ ಪಾತ್ರರಾಗಿದ್ದಾರೆ. ನವರಸಪುರ, ಲಕ್ಕುಂಡಿ, ಪಟ್ಟದಕಲ್ಲು, ಹಂಪಿ ಜನಪದ ಜಾತ್ರಾ ಉತ್ಸವಗಳಲ್ಲಿ ಭಾಗವಹಿಸಿ ತಮ್ಮ ಹಾಡುಗಳನ್ನು ಹಾಡಿ ಜನಮನವನ್ನು ಗೆದ್ದಿದ್ದಾರೆ.

ಧಾರವಾಡ ಮತ್ತು ಗದಗ ಜಿಲ್ಲೆಗಳ ವಾರ್ತಾ ಮತ್ತು ಪ್ರಚಾರ ಇಲಾಖೆಯ ವತಿಯಿಂದ ಸರಕಾರದ ಯೋಜನೆಗಳ ಬಗೆಗೆ ಹಳ್ಳಿಯ ಜನರಿಗೆ ತಿಳುವಳಿಕೆಯನ್ನು ನೀಡುವ ರೀತಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಅದರಿಂದ ಯಶಸ್ಸನ್ನು ಪಡೆದುಕೊಂಡ ಧಾರವಾಡ ಹಾಗೂ ಗದಗ ಜಿಲ್ಲೆಗಳ ಏಕೈಕ ಜನಪದ ಕಲಾವಿದ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಲ್ಲದೆ ಸರಕಾರದ ಜಲನಿರ್ಮಲ ಯೋಜನೆಯ ಅಡಿಯಲ್ಲಿ ಗ್ರಾಮೀಣ ಜನರಿಗೆ ಅರಿವು ಮೂಡಿಸುವ ಹಾಡುಗಳನ್ನು ಸ್ವತಃ ತಾವೇ ಬರೆದು, ಧಾರವಾಡ ಮತ್ತು ಗದಗ ಜಿಲ್ಲೆಗಳ ಪ್ರತಿಯೊಂದು ಹಳ್ಳಿಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಜಾಗೃತಿಯನ್ನು ಮೂಡಿಸಿದ್ದಾರೆ. ಗದಗ-ಬೆಟಗೇರಿಯ ಮೂವತ್ತೈದು ವಾರ್ಡಗಳಲ್ಲಿ ನಗರ ನೈರ್ಮಲ್ಯ ಯೋಜನೆಯ ಕುರಿತಾಗಿ ಹಾಡುಗಳನ್ನು ರಚಿಸಿ ಹಾಡಿನ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಿ, ತಾವೊಬ್ಬ ಪರಿಸರ ಪ್ರೇಮಿ, ಪರಿಸರದ ಬಗ್ಗೆ ಅಪಾರ ಕಾಳಜಿಯುಳ್ಳ ವ್ಯಕ್ತಿ ಎಂಬುದನ್ನು ಈ ಮೂಲಕ ತೋರಿಸಿಕೊಟ್ಟಿದ್ದಾರೆ.

ಚೆನ್ನಪ್ಪನವರು ಶಿಕ್ಷಣ ಕ್ಷೇತ್ರದಲ್ಲಿಯೂ ಅನೇಕ ಕಾರ್ಯಕ್ರಮಗಳನ್ನು ನೀಡುವುದರಲ್ಲಿ ಹಿಂದೆ ಸರಿದಿಲ್ಲ. 'ಸಂಪೂರ್ಣ ಸಾಕ್ಷರತಾ ಆಂದೋಲನ'ದಲ್ಲಿ ಗದಗ ಜಿಲ್ಲೆಯ ಪ್ರತಿಯೊಂದು ಹಳ್ಳಿ ಹಳ್ಳಿಗೆ ಹೋಗಿ ಹಗಲಿರುಳೆನ್ನದೆ ಕಾರ್ಯಕ್ರಮಗಳನ್ನು ನೀಡುತ್ತಾ, ಅನಕ್ಷರಸ್ಥರಿಗೆ ವಿದ್ಯೆಯ ಮಹತ್ವವನ್ನು ತಿಳಿಸುವಲ್ಲಿ, ಅಕ್ಷರ ಜ್ಞಾನದ ಅರಿವು ಮೂಡಿಸುವಲ್ಲಿ ಯಶಸ್ಸನ್ನು ಕಂಡಿದ್ದಾರೆ. 'ಕನ್ನಡ ನಾಡು-ಸಾಕ್ಷರ ನಾಡು' ಎಂಬ ಜಯಘೋಷದೊಂದಿಗೆ ಜನರ ಮನ ಮಿಡಿಯುವ ಹಲವಾರು ಹಾಡುಗಳನ್ನು ಹಾಡಿ ರಂಜಿಸಿದ್ದಾರೆ. "ಸಾಕ್ಷರೋತ್ತರ ಹಾಗೂ ಮುಂದುವರೆದ ಶಿಕ್ಷಣ ಆಂಧೋಲನ"ದಲ್ಲಿಯೂ ಸ್ವಯಂ ಪ್ರೇರಣೆಯಿಂದ ಕಾರ್ಯಕ್ರಮಗಳನ್ನು ನೀಡಿರುವುದು ಶ್ಲಾಘನೀಯ. ಗದಗ ಹಾಗೂ ಸುತ್ತಮುತ್ತಲಿನ ಶಾಲಾ-ಕಾಲೇಜುಗಳ 'ರಾಷ್ಟ್ರೀಯ ಸೇವಾ ಯೋಜನೆ'ಯ ವಿಶೇಷ ಶಿಬಿರಗಳಲ್ಲಿ ನೂರಾರು ಕಾರ್ಯಕ್ರಮಗಳನ್ನು ನೀಡಿ ಜಾನಪದ ಕಲೆಯ ಬಗ್ಗೆ ಅರಿವು ಮೂಡಿಸಿದ್ದಾರೆ. ಹೀಗೆ ಶಿಕ್ಷಣ ಕ್ಷೇತ್ರದಲ್ಲಿಯೂ ಇವರ ಕೊಡುಗೆ ಅಪಾರವಾಗಿದೆ.

'ಗದುಗಿನ ವೀರೇಶ್ವರ ಇಲೆಕ್ಟ್ರಾನಿಕ್ಸ್' ಇವರು 1985ರಲ್ಲಿ 'ಬರಗಾಲ' ಎಂಬ ಧ್ವನಿ ಸುರಳಿಯನ್ನು ಹೊರ ತಂದರು. ಇದರಲ್ಲಿ ಬರಗಾಲಿನ ಭವನೆಯಿಂದ ಕಂಗೆಟ್ಟ ರೈತರಲ್ಲಿ ಧೈರ್ಯ ತುಂಬುವ ಹಾಡುಗಳನ್ನು ಶ್ರೀ ಚೆನ್ನಪ್ಪ ಅಂಗಡಿಯವರು ತಮ್ಮ ಸುಮಧುರ ಕಂಠದಿಂದ ಸುಮಧುರವಾಗಿ ಹಾಡಿದ್ದಾರೆ. ಈ ಧ್ವನಿ ಸುರುಳಿಯನ್ನು

ಖ್ಯಾತ ಹಿಂದುಸ್ತಾನಿ ಗಾಯಕರಾದ ಮಲ್ಲಿಕಾರ್ಜುನ ಮನಸೂರ ಅವರ ಅಮೃತ ಹಸ್ತದಿಂದ ಬಿಡುಗಡೆ ಮಾಡಿಸಿದರು. ಉತ್ತರ ಕರ್ನಾಟಕದಲ್ಲಿ ಗೀಗೀಪದದ ಧ್ವನಿ ಸುರುಳಿಯನ್ನು ಪ್ರಪ್ರಥಮವಾಗಿ ಹೊರತಂದ ಶ್ರೇಯಸ್ಸು ಚೆನ್ನಪ್ಪ ಅಂಗಡಿಯವರಿಗೆ ಸಲ್ಲುತ್ತದೆ. ಈ ಧ್ವನಿ ಸುರುಳಿಯು ಕೂಡ ಅಷ್ಟೇ ಜನಪ್ರಿಯತೆಯನ್ನು ಪಡೆಯಿತು. ಇದನ್ನು ಗಮನಿಸಿದ ಚೆನ್ನಪ್ಪನವರು 'ಕಡ್ಲಿಮಟ್ಟಿ ಕಾಶೀಬಾಯಿ' ಹಾಗೂ 'ಫ್ಯಾಷನ್' ಎಂಬ ಮತ್ತೆರಡು ಕ್ಯಾಸೆಟ್‌ಗಳನ್ನು ಬೆಂಗಳೂರಿನ 'ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್'ನಿಂದ ಹೊರತಂದರು. ಚಿತ್ರಗೀತೆಗಳಂತೆ ಗೀಗೀಪದಗಳನ್ನು ಸಹ ಜನರು ಕೇಳುತ್ತಾರೆ. ಎಂಬ ಸಂಪ್ರದಾಯಕ್ಕೆ ನಾಂದಿ ಹಾಡಿದ ಚೆನ್ನಪ್ಪನವರ ಪ್ರಯತ್ನ ನಿಜಕ್ಕೂ ಮೆಚ್ಚುವಂಥದ್ದು.

ಬಸವಾದಿ ಪ್ರಮತರ ವಚನಗಳನ್ನು ಅಭ್ಯಸಿಸಿದ ಶ್ರೀಯುತರು 'ಶ್ರೀ ಗುರು ಸಿದ್ಧಲಿಂಗ' ಎಂಬ ಅಂಕಿತದಲ್ಲಿ ಆಧುನಿಕ ವಚನಗಳನ್ನು ಬರೆದು 'ಗುರುಕರುಣ ಸ್ಥಿರ ವಚನ' ಎಂಬ ಹೆಸರಿನಲ್ಲಿ ಪುಸ್ತಕವೊಂದನ್ನು ಹೊರತಂದಿದ್ದಾರೆ. ಜನಪದ ಗೀತ ಸಾಹಿತ್ಯ ಉಳಿದು-ಬೆಳೆಯಲಿ, ಅಲ್ಲದೆ ಮುಂದಿನ ಪೀಳಿಗೆಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ 'ಜೀವಂತ ಜನಪದ' ಹಾಗೂ 'ಜಾಗೃತ ಜನಪದ' ಎಂಬ ಎರಡು ಗ್ರಂಥಗಳನ್ನು ಸಹ ಪ್ರಕಟಿಸಿದ ಶ್ರೀಯುತರ ಜನಪದದ ಬಗೆಗಿನ ಕಳಕಳಿ ಹಾಗೂ ಕಾಳಜಿ ಎದ್ದು ಕಾಣುತ್ತದೆ. ಇವರ ಪ್ರಯತ್ನಕ್ಕೆ ಸಾಕಷ್ಟು ಉತ್ತಮ ರೀತಿಯ ಪ್ರತಿಕ್ರಿಯೆಗಳು ಇವರಿಗೆ ಸಂದಿವೆ.

ಚೆನ್ನಪ್ಪನವರ ಸಾಧನೆಗೆ ನಾಡಿನ ಹಲವಾರು ಮಠಮಾನ್ಯಗಳು, ಸ್ವಯಂ ಸೇವಾ ಸಂಸ್ಥೆಗಳು ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. 1982-83ರ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ-ರಾಜ್ಯಮಟ್ಟದ ಪ್ರಶಸ್ತಿ, 1985ರಲ್ಲಿ ಕರ್ನಾಟಕದ ಕಂದಾಯ ಸಚಿವರಾಗಿದ್ದ ಮಾನ್ಯಶ್ರೀ, ಎಸ್. ಆರ್. ಬೊಮ್ಮಾಯಿಯವರಿಂದ 'ಉತ್ತಮ ಕಲಾವಿದ' ಪ್ರಶಸ್ತಿ, 2005-06ರ ಸುವರ್ಣ ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿಗಳನ್ನು ಪಡೆದ ಹಿರಿಯ ಜನಪದ ಕಲಾವಿದರಾದ ಇವರು ಜನಪ್ರಿಯ ಜಾನಪದ ಕಲೆ ನಶಿಸಿ ಹೋಗದಿರಲಿ ಎಂದು ಸ್ವತಃ ತಮ್ಮ ಮಗ ವೀರೇಶನಿಗೆ ಎಲ್ಲ ವಿದ್ಯೆಯನ್ನು ಕಲಿಸಿದ್ದಾರೆ. ಅಷ್ಟೆ ಅಲ್ಲದೆ ಯುವಕರನ್ನು ಹುರಿದುಂಬಿಸಿ ಗೀಗೀ ಮತ್ತು ಲಾವಣಿ ಪದಗಳನ್ನು ಕಲಿಸಿ ಕೊಟ್ಟು ಜನಪದ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ.

ಇಂಥ ದೀಮಂತ ಅಭಿಜಾತ ಜನಪದ ಕಲಾವಿದನ ಸೇವೆ ಜನತೆಗೆ-ನಾಡಿಗೆ ಬಹುಕಾಲ ಇದೇ ರೀತಿ ಸಿಗುತ್ತಿರಲಿ ಎಂಬುದು ನಮ್ಮೆಲ್ಲರ ಆಸೆ.

# ಹನಮಪ್ಪ ಯಮನಪ್ಪ ರಂಗಣ್ಣವರ

ಹನಮಪ್ಪ ರಂಗಣ್ಣವರ ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿ ಗ್ರಾಮದವರು. ಜಕ್ಕಲಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಇವರೊಬ್ಬರೆ ಹಂತಿಯ ಹಾಡುಗಳನ್ನು ಹಾಡುವ ಏಕೈಕ ಜನಪದ ಕಲಾವಿದರು. ತಂದೆ ಯಮನಪ್ಪ, ತಾಯಿ ಲಕ್ಷ್ಮವ್ವನವರ ಪುತ್ರನಾಗಿ 1943ರಲ್ಲಿ ಜಕ್ಕಲಿಯಲ್ಲಿ ಜನಿಸಿದ ಇವರು ವಾಲ್ಮೀಕಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಮನೆತನದ ಆರ್ಥಿಕ ತೊಂದರೆಯಿಂದಾಗಿ ಶಾಲೆಯನ್ನು ಕಲಿಯದೆ ಕೂಲಿಯ ಕೆಲಸಕ್ಕೆ ಹೋಗುತ್ತಿದ್ದರು. ಜಕ್ಕಲಿ ಗ್ರಾಮ ಜನಪದ ಸಂಸ್ಕೃತಿಯ ತವರೂರು. ಗ್ರಾಮದಲ್ಲಿ ಹಬ್ಬ-ಹರಿದಿನಗಳಲ್ಲಿ ಮತ್ತು ಜಾತ್ರಾ ಮಹೋತ್ಸವಗಳಲ್ಲಿ ಮೋಜು ಮಜಲುಗಳು ಜರುಗುತ್ತಿದ್ದವು. ಬಾಲಕನಾದ ಹನಮಪ್ಪನಿಗೆ ಈ ಮೋಜು-ಮಜಲುಗಳನ್ನು ನೋಡುವುದೆಂದರೆ ತುಂಬಾ ಖುಷಿ. ಅಷ್ಟೇ ಅಲ್ಲ ತುಂಬಾ ಆಸಕ್ತಿಯಿಂದ ಹಾಡುಗಳನ್ನು ಆಲಿಸುತ್ತಿದ್ದನು. ಒಮ್ಮೊಮ್ಮೆ "ಅವುಗಳನ್ನು ನಾನು ಏಕೆ ಕಲಿಯಬಾರದು?' ಎಂದುಕೊಳ್ಳುತ್ತಿದ್ದ. ಬಾಲಕ ದೊಡ್ಡವನಾದಂತೆ ಅವುಗಳನ್ನು ಒಂದೊಂದಾಗಿ ಕಲಿಯ ತೊಡಗಿದನು.

ಹೊಳೆ ಆಲೂರಿನ ಕೃಷ್ಣಪ್ಪ ಗೌಡರದು ಹದಿನಾರು ಎತ್ತಿನ ದೊಡ್ಡ ಕಮತ. ಮನೆಯಲ್ಲಿ ದಿನಾಲು ಐದಾರು ಆಳು ಕಟ್ಟಾಳಿನಂತೆ ದುಡಿಯುತ್ತಿದ್ದರು. ಸುಗ್ಗಿಯ ಕಾಲ ಬಂತೆಂದರೆ ಸಾಕು ಹೊಲ-ಮನೆಯಲ್ಲಿ ಹಬ್ಬದ ವಾತಾವರಣವೆ ಮೂಡುತ್ತಿತ್ತು. ಹೊಲದಲ್ಲಿ ಹದಿನಾರು ಎತ್ತಿನ ಕಣ ಮಾಡುವುದರಿಂದ ಹಿಡಿದು ರಾಶಿಯನ್ನು ಮನೆಗೆ ತರುವವರೆಗೆ ಕಣದಲ್ಲಿ ದಿನನಿತ್ಯ ಸತತವಾಗಿ ಇಪ್ಪತ್ತರಿಂದ ಮೂವತ್ತು ಆಳುಗಳು ಕೆಲಸ ಮಾಡುತ್ತಿದ್ದರು. ರಾತ್ರಿಯ ವೇಳೆಯಲ್ಲಿ ಹಂತಿಯನ್ನು ಹೊಡೆಯುವಾಗ, ಕಣದಲ್ಲಿ ಕೆಲಸ ಮಾಡುವಾಗ ಆಳು ಮಕ್ಕಳಿಗೆ ಬೇಸರವಾಗಬಾರದೆಂದು ಹಂತಿಯ ಹಾಡುಗಳನ್ನು ಹಾಡುವುದರಲ್ಲಿ ಪ್ರಸಿದ್ಧರಾಗಿದ್ದ ಹೊಳೆ ಮಣ್ಣೂರಿನ ದೊಡ್ಡ ಶಿವಪ್ಪನವರನ್ನು ಕೇವಲ ಹಾಡುವುದಕ್ಕೆಂದೇ ಕೃಷ್ಣಪ್ಪಗೌಡರು ಕರೆಸುತ್ತಿದ್ದರು. ಹನಮಪ್ಪನು ಜಕ್ಕಲಿಯಿಂದ ಹೊಳೆ ಆಲೂರಿನ ಕೃಷ್ಣಪ್ಪಗೌಡರ ರಾಶಿ ಮಾಡುವ ಕೆಲಸಕ್ಕೆ ಹೋಗುತ್ತಿದ್ದರಲ್ಲದೆ ಸುಗ್ಗಿ ಮುಗಿಯುವವರೆಗೂ ಅಲ್ಲಿಯೇ ವಾಸವಾಗಿರುತ್ತಿದ್ದರು.

ಕಣದ ಅಳತೆಯನ್ನು ಹೇಳುವಾಗ ಎಂಟು ಎತ್ತಿನ ಕಣ, ಹತ್ತು ಎತ್ತಿನ ಕಣ, ಅತಿ ದೊಡ್ಡ ಕಣವೆಂದರೆ ಹದಿನಾರು ಎತ್ತಿನ ಕಣ. ಈ ಹದಿನಾರು ಎತ್ತಿನ ಕಣದಲ್ಲಿ ಗೋಧಿಯ ಹುಲ್ಲನ್ನು ಹರವಿ ಎತ್ತುಗಳನ್ನು ಮೇಟಿಗೆ ಕಟ್ಟಿ ಹಂತಿ ಹೊಡೆಯಲಿಕ್ಕೆ

ಹತ್ತಿದರೆ ಒಂದು ರಾತ್ರಿ-ಬೆಳತನಕ ಎಂದರೆ ಒಂದು ಖಂಡಗದ ರಾಶಿ ಹೊರ ಬರುತ್ತಿತ್ತು. ಅಂದರೆ ನಲವತ್ತು ಚೀಲದ ರಾಶಿ ಹೊರ ಬರುತ್ತಿತ್ತು. ಮೇಟಿಗೆ ಎತ್ತುಗಳನ್ನು ಸಾಲಾಗಿ ಕಟ್ಟುವಾಗ ದಡ್ಡ ಎತ್ತನ್ನು ಮೇಟಿಯ ಬದಿಗೆ ಕಟ್ಟಿ, ಅತೀ ಜಲ್ದಿ ಇದ್ದ ಎತ್ತನ್ನು ಹಂತಿಯ ಕೊನೆಗೆ ಕಟ್ಟಬೇಕು ಏಕೆಂದರೆ ದಡ್ಡ ಎತ್ತನ್ನು ಕೊನೆಗೆ ಇಲ್ಲವೆ ನಡುವೆ ಕಟ್ಟಿದರೆ ಅದು ಮೇಟಿಯ ಸುತ್ತು ತಿರುಗದೆ ವಾಳೆ ತೆಗೆದು ಬಿದ್ದು ಬಿಡುತ್ತದೆ. ಆದ್ದರಿಂದ ಅಂತಹ ಎತ್ತನ್ನು ಬಡ್ಡಿಗೆ ಕಟ್ಟುವುದು ರೂಢಿ. ಹಂತಿಯ ಕೊನೆಯ ಜಲ್ದ ಎತ್ತು ಇಪ್ಪತ್ತು ಹೆಜ್ಜೆ ಹಾಕಿದರೆ ಬಡ್ಡಿಯ ಎತ್ತು ಐದು ಹೆಜ್ಜೆ ಹಾಕುತ್ತದೆ. ಹೀಗೆ ಬಡ್ಡಿಯ ಎತ್ತಿನಿಂದ ಹಿಡಿದು ಕೊನೆಯ ಎತ್ತಿನವರೆಗೆ ಹೆಚ್ಚಾಗುತ್ತ ಹೋಗುತ್ತದೆ. ಒಂದು ವೇಳೆ ಮುದಿ ಎತ್ತುಗಳಿದ್ದರೆ ಅವು ಹಂತಿಯನ್ನು ತಿರುಗದೆ ಕಣದಲ್ಲಿ ಕಣ್ಣು ತಿರುಗಿಬಿದ್ದು ಬಿಡುತ್ತವೆ. ಹೀಗಾಗಿ ಅವುಗಳನ್ನು ಹಂತಿಗೆ ಕಟ್ಟುವುದಿಲ್ಲ. ಹಂತಿಯನ್ನು ಹೊಡೆಯುವಾಗ ಒಮ್ಮೊಮ್ಮೆ ಎತ್ತುಗಳು ಸಗಣಿಯನ್ನು ಹಾಕುತ್ತವೆ, ಅದನ್ನು ತಕ್ಷಣ ನೋಡಿ ಅಂಥ ಎತ್ತಿನ ಹಿಂದೆ ಹೋಗಿ ಹಂತಿ ಹೊಡೆಯುತ್ತ ಸಗಣಿ ಕೆಳಗೆ ಚೆಲ್ಲದಂತೆ ಕೈಯಲ್ಲಿಯೋ ಅಥವಾ ಬುಟ್ಟಿಯ್ಲಲಿಯೋ ಹಿಡಿದು ಕಣ ಬಿಟ್ಟು ದೂರ ಒಗೆಯುವುದು ಹಂತಿ ಹೊಡೆಯುವವನ ಕೆಲಸ. ಹೀಗೆ ಹಂತಿ ಹೊಡೆಯುವುದು ಪ್ರಾರಂಭವಾಯಿತೆಂದರೆ ಮೂರು-ನಾಲ್ಕು ಜನ ಆಳುಗಳು ಕೈಯಲ್ಲಿ ಕುಡಗೋಲು ಹಿಡಿದುಕೊಂಡು ಕಣದಲ್ಲಿಯೆ ಹುಲ್ಲನ್ನು ತಿರುವಿ ಹಾಕುತ್ತಾರೆ. ಹೀಗೆ ನಿರಂತರವಾಗಿ ಸಾಗುವ ಈ ಕಾರ್ಯದಿಂದ ಕೆಲಸಗಾರರಿಗೆ ದಣಿವಾಗಬಾರದು, ಬೇಸರವಾಗಬಾರದೆಂದು ಹಂತಿಯ ಪದಗಳನ್ನು ಹಾಡುವ ಮೇಳ ಕಣದ ಒಂದು ಬದಿಯಲ್ಲಿ ನಿಂತು ಹಾಡುಗಳನ್ನು ಹಾಡಲು ಪ್ರಾರಂಭಿಸುತ್ತಾರೆ.

ಹೊಳೆ ಮಣ್ಣೂರಿನ ದೊಡ್ಡ ಶಿವಪ್ಪನವರು ಹಾಡುತ್ತಿದ್ದ ಹಂತಿಯ ಪದಗಳನ್ನು ಯುವಕ ಹನಮಪ್ಪ ಒಳ್ಳೆಯ ಆಸಕ್ತಿಯಿಂದ ಲಕ್ಷವಹಿಸಿ ಆ ಹಾಡುಗಳನ್ನು ಕೇಳುತ್ತಿದ್ದ. ಹೀಗೆ ಪ್ರತಿದಿನ ಕೇಳುತ್ತಿರುವಾಗ ಆ ಹಾಡುಗಳೆಲ್ಲ ಅವನ ನೆನಪಿನಂಗಳದಲ್ಲಿ ನೆಲೆ ನಿಂತುಕೊಂಡವು. ಒಮ್ಮೊಮ್ಮೆ ಹಿಮ್ಮೇಳದವರು ಬರದಿದ್ದಾಗ ಹಿಮ್ಮೇಳದಲ್ಲಿ ನಿಂತು ಹಾಡತೊಡಗಿದರು. ಹೀಗೆಯೇ ಎರಡು-ಮೂರು ವರ್ಷ ಸುಗ್ಗಿಯ ಸಮಯಕ್ಕೆ ಹಾಡಲೆಂದು ಬಂದ ದೊಡ್ಡ ಶಿವಪ್ಪನವರೊಂದಿಗೆ ಸುಗ್ಗಿ ಮುಗಿಯುವವರೆಗೂ ಇದ್ದು ಅವರಿಂದ ಅನೇಕ ಹಾಡುಗಳನ್ನು ಕಲಿತರು.

ದೊಡ್ಡ ಶಿವಪ್ಪನವರಿಂದ ಕಲಿತ ಹಂತಿಪದಗಳನ್ನು ಹನಮಂತ ತನ್ನ ನೆನಪಿನ ಶಕ್ತಿಯಿಂದ ಅವೆಲ್ಲವನ್ನು ನೆನಪಿಟ್ಟುಕೊಂಡು, ಬಿಡುವಿನ ವೇಳೆಯಲ್ಲಿ ಹಾಡಿ-ಹಾಡಿ

ಮನನ ಮಾಡಿಕೊಂಡರು. ತಮ್ಮ ಬಗ್ಗೆ ಬರವಸೆ ಮೂಡಿದಾಗ ತಮ್ಮದೆ ಆದ ಒಂದು ಮೇಳವನ್ನು ತಯಾರಿಸಿ ಪ್ರತಿ ವರ್ಷ ಹೊಳೆ ಆಲೂರಿನ ಕೃಷ್ಣಪ್ಪಗೌಡರ ಸುಗ್ಗಿಯ ವೇಳೆಯಲ್ಲಿ ಹಾಡಲು ಪ್ರಾರಂಭಿಸಿದರು. ಮುಮ್ಮೇಳದಲ್ಲಿ ಹನಮಪ್ಪ ಮತ್ತು ಶೇಖಪ್ಪ ರಂಗಣ್ಣವರ ಹಾಡುತ್ತಿದ್ದರೆ, ಹಿಮ್ಮೇಳದಲ್ಲಿ ಮುದಕಪ್ಪ ಕುರ್ತಕೋಟಿ ಹಾಗೂ ಹನಮಪ್ಪ ಜಂತ್ಲಿ ಹಾಡುತ್ತಿದ್ದರು. ಸಂಜೆಯ ವೇಳೆಯಲ್ಲಿ ಗೌಡರ ಕಣದಲ್ಲಿ ನಿಂತು ಹಾಡಲು ಪ್ರಾರಂಭಿಸಿದರೆ ದೂರದಲ್ಲಿರುವ ಹತ್ತಾರು ಕಣಗಳಿಗೆ ಇವರ ಹಾಡು ಕೇಳಬೇಕು ಅಷ್ಟು ಇಂಪಾಗಿ ಎತ್ತರದ ಧ್ವನಿಯಲ್ಲಿ ಹಾಡುಗಳನ್ನು ಹಾಡುತ್ತಿದ್ದರು. ಅವರು ಹಾಡುತ್ತಿದ್ದ ಹಾಡುಗಳು ಈ ರೀತಿ ಇವೆ-

ಹದಿನಾರೆತ್ತವ ನೋಡೊ ಇದರ ಗ್ವಾದಲಿ ನೋಡೊ
ಸದರಿನ್ಯಾಗ ಒಬ್ಬ ಮಲಿಗ್ಯಾನ। ಬಸವಣ್ಣ
ನೆದರಾಗಿ ಮೇವ ತಿನವಲ್ಲ॥

ಆರ ಎತ್ತಿನ ಕೂರಿಗಿ ಹೋರಿ ಬೆಳಸಾಲ್ಹೂಡಿ
ಕ್ವಾರಿ ಮೀಸಿಯವರು ಧರಮರ। ಹೊಲದಾಗ
ಭೋರ್ಯಾಡತಾನ ಮಳೆರಾಜ॥

ಬೂದಗ ಬಾಸಿಂಗ ಭೂಮಿ ತಾಯಿಗೆ ದಂಡಿ
ಸಾಲ ಪಾಂಡವರಿಗೆ ಸರಮಾಲಿ। ತಂದವರ್‍ಯಾರೊ
ನನಗೂಡ ಹಾಡುವ ಅಣ್ಣ ಒಡದ್ವೇಳ॥

ಹೀಗೆ ಹಾಡುತ್ತಿರುವಾಗ ಹಿಮ್ಮೇಳದವರು ಇಲ್ಲದೇ ಹೋದಲ್ಲಿ ಮುಮ್ಮೇಳದವರೆ ಒಬ್ಬರಾದ ನಂತರ ಒಬ್ಬರು ಹಾಡುತ್ತಾರೆ. ಹೀಗೆ ಹಾಡುವಾಗ ಸ್ಪರ್ಧೆ ಬೆಳೆಯುವುದುಂಟು. ಸ್ಪರ್ಧೆ ಬೆಳೆದರೆ ಸಾಕು ಸೋಲಿಲ್ಲದಂತೆ ಹೊತ್ತೇರಿದರೂ ಮುಗಿಸದೆ ಕೆಲಸದಲ್ಲಿ ಮೇಲಾಗಿ ಹಾಡಿನಲ್ಲಿ ಮಗ್ನರಾಗಿರುವಾಗ ಕೆಲಸ ಸಾಗಿರುವುದೆ ಗೊತ್ತಾಗುವುದಿಲ್ಲ. ಹೀಗೆ ಹಂತಿ ಹೊಡೆಯುವಾಗ ಹಂತಿ ಪದವಿಲ್ಲದೆ ಕೆಲಸ ಸುಸೂತ್ರವಾಗಿ ಸಾಗದು. ಅಷ್ಟೊಂದು ಮಹತ್ವ ಹಂತಿಪದಗಳಲ್ಲಿ ಇದೆ. ಹನಮಪ್ಪನರ ಹಾಡುಗಳನ್ನು ಕೇಳಲೆಂದು ತಮ್ಮೂರಿನ ರೈತರು ಇವರಿಗೆ ವಿಳ್ಯವ ಕೊಟ್ಟು ತಮ್ಮ ತಮ್ಮ ಹೊಲಗಳಿಗೆ ಕರೆದುಕೊಂಡು ಹೋಗಿ ಹಂತಿಯ ಪದಗಳನ್ನು ಹಾಡಿಸುತ್ತಾರೆ. ಹನಮಪ್ಪನವರು ಹಂತಿಯ ಹಾಡಿನ ಲಯ ಮತ್ತು ಅದರ ಗತಿಯನ್ನು ಬಲ್ಲವರಾದುದರಿಂದ ತಮಗೆ ಓದು-ಬರಹ ಬರದಿದ್ದರೂ ಸರಿ ಒಮ್ಮೊಮ್ಮೆ

ನಿಂತನಿಂತಲ್ಲಿಯೇ ಹಂತಿಪದಗಳನ್ನು ಕಟ್ಟಿ ಹಾಡುವ ಕೌಶಲ್ಯವನ್ನು ಪಡೆದಿದ್ದಾರೆ. ಸುಮಾರು ಮೂವತ್ತೈದು ವರ್ಷಗಳಿಂದ ಹಾಡುತ್ತ ಬಂದ ಇವರು ಈ ಹಾಡುಗಳನ್ನು ಯುವಕರಿಗೆ ಕಲಿಸಬೇಕೆಂಬ ಉತ್ಸುಕತೆಯಲ್ಲಿದ್ದಾರೆ. ಆದರೆ ಈಗ ಊರುಗಳಲ್ಲಿ ಕಣಗಳೆ ಇಲ್ಲ ಮೇಲಾಗಿ ರಾಶಿಯನ್ನು ಕಣದಲ್ಲಿ ಮಾಡದೆ ರಸ್ತೆಗಳಲ್ಲಿ ಮಾಡುತ್ತಾರೆ. ಒಂದು ವೇಳೆ ಎಲ್ಲಾದರೊಂದು ಕಣವಿದ್ದರೂ ಕಣದಲ್ಲಿ ಗೋಧಿಯ ಹುಲ್ಲನ್ನೊ ಇಲ್ಲ ಜೋಳದ ತೆನೆಯನ್ನು ಹಾಕಿ ಹಂತಿಯ ಬದಲು ಟ್ರ್ಯಾಕ್ಟರ್ ಉಪಯೋಗಿಸಿಕೊಂಡು ರಾಶಿಯನ್ನು ಮಾಡುವ ಹೊಸಕ್ರಮ ಬಂದ ನಂತರ ಹಂತಿಯೂ ಮಾಯವಾಯಿತು. ಅದರ ಜೊತೆಯಲ್ಲಿಯೇ ಹಂತಿಯ ಪದಗಳು ಸಹ ಮಾಯವಾಗುವ ಸ್ಥಿತಿ ಬಂದೊದಗಿದೆ. ಹೀಗೆ ಅಳಿವಿನ ಅಂಚಿನಲ್ಲಿರುವ ಹಂತಿಪದಗಳು ಉಳಿಯಬೇಕು, ಯುವಕರು ಆಸಕ್ತಿಯಿಂದ ಕಲಿತು ಇವುಗಳನ್ನು ಜೀವಂತವಾಗಿಡಬೇಕು ಎಂದು ಗ್ರಾಮದ ಯುವಕರಿಗೆ ಅವುಗಳನ್ನು ಕಲಿಸಿ ಕೊಡುವ ವ್ಯವಸ್ಥೆಯನ್ನು ಸಹ ಮಾಡಿದ್ದಾರೆ.

## ಯಲ್ಲಪ್ಪ ದುರಗಪ್ಪ ವಿಭೂತಿ

ಸುಡುಗಾಡ ಸಿದ್ಧರೆಂದೆ ಜನಪ್ರಿಯತೆಯನ್ನು ಗಳಿಸಿದ ಯಲ್ಲಪ್ಪ ವಿಭೂತಿಯವರು ಗದುಗಿನ ರಾಜೀವಗಾಂಧಿ ನಗರದ ನಿವಾಸಿಗಳು. ತಂದೆ ದುರಗಪ್ಪ, ತಾಯಿ ಯಲ್ಲವ್ವನವರ ಮಗನಾಗಿ 1948ರಲ್ಲಿ ಜನಿಸಿದರು. ಇವರು ಶಾಲೆಗೆ ಹೋಗದಿದ್ದರೂ ಓದಲು-ಬರೆಯಲು ಬರುತ್ತದೆ. ಇವರ ಚಿಕ್ಕಪ್ಪನಾದ ಮಾರೆಪ್ಪನವರು ಗುಡಿಸಲಲ್ಲಿಯೆ ಪ್ರತಿದಿನ ಬಿಡುವಿನ ವೇಳೆಯಲ್ಲಿ ಇವರಿಗೆ ಕನ್ನಡ ಬರೆಯಲು-ಓದಲು ಕಲಿಸುತ್ತಿದ್ದರು. ಅದರ ಬಲದಿಂದಲೆ ಇವರು ಈಗ ಕನ್ನಡವನ್ನು ಸರಾಗವಾಗಿ ಓದುತ್ತಾರೆ ಮತ್ತು ಬರೆಯುತ್ತಾರೆ. ಸುಡುಗಾಡು ಸಿದ್ಧರ ಸಮುದಾಯಕ್ಕೆ ಸೇರಿದ ಇವರು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೆ ಸುಡುಗಾಡು ಸಿದ್ಧರ ಕೈಚಳಕ (ಮಾಯ)ದ ವಿದ್ಯೆಯನ್ನು ತಮ್ಮ ತಂದೆಯವರಿಂದ ಕಲಿತುಕೊಂಡರು. ತಂದೆ ದುರಗಪ್ಪನವರು ಜೋಳಿಗೆ ಹಾಕಿಕೊಂಡು ಊರೂರಿಗೆ ಹೋಗಿ ತಮ್ಮ ಮಾಯದ ಆಟವನ್ನು ಪ್ರದರ್ಶಿಸುವಾಗ ಯಲ್ಲಪ್ಪನಿಗೆ ಅದನ್ನು ಹೇಳಿ ಕೊಡುತ್ತಿದ್ದರು. ಅದನ್ನೆ ಮತ್ತೆ ಮನೆಗೆ ಬಂದು ಮಗನಿಗೆ ಮಾಡಲು ಹೇಳುತ್ತಿದ್ದರು. ತಂದೆ ಹೇಳಿದಂತೆ ಮಗ ಚಾಚುತಪ್ಪದೆ ಮಾಡಿ ತೋರಿಸುತ್ತಿದ್ದ. ಇನ್ನೇನು ಮಗ ಈ ಕಲೆಯಿಂದ ಬದುಕುತ್ತಾನೆ ಎಂಬ ಭರವಸೆ ಹುಟ್ಟಿದ ಮೇಲೆ ತಂದೆ ದುರುಗಪ್ಪನವರು ತಮ್ಮ ಜೋಳಿಗೆಯನ್ನು ಕೊಟ್ಟು ಹಳ್ಳಿಗಳಿಗೆ ಕಳಿಸಿಕೊಡಲು ಪ್ರಾರಂಭಿಸಿದರು.

ಸುಡುಗಾಡ ಸಿದ್ಧರ ವಿದ್ಯೆ ಮೋಡಿಕಾರರ ಹಾಗೆ ಮಾಯ ಮಂತ್ರದ ವಿದ್ಯೆಯಲ್ಲ,

ಬಾಯಿ ಮಾತಿನ, ಕೈಚಳಕಿನ ಕಣ್‌ಕಟ್ಟು ವಿದ್ಯೆ. ಈ ವಿದ್ಯೆಯನ್ನು ಜನರ ಮುಂದೆ ಪ್ರದರ್ಶಿಸಿ, ಅವರು ಮೆಚ್ಚಿ ಕೊಡುವ ಕಾಸಿನಿಂದಲೆ ಇವರು ಬದುಕಬೇಕು. ಯಲ್ಲಪ್ಪನವರು ತಮ್ಮ ಇಪ್ಪತ್ತನೆಯ ವಯಸ್ಸಿನಿಂದಲೆ ಈ ಕಲೆಯನ್ನು ಪ್ರದರ್ಶಿಸಲು ಪ್ರಾರಂಭಿಸಿದರು. ಕಲೆಯ ಪ್ರದರ್ಶನದಿಂದ ಬಂದ ಹಣದಿಂದಲೆ ಬಾಳಿ ಬದುಕಿದವರು. ಜನನಿಬಿಡ ಪ್ರದೇಶದಲ್ಲಿ ಒಂದು ಪ್ರದರ್ಶನ ನೀಡಿದರೆ ಇಪ್ಪತ್ತರಿಂದ ಮೂವತ್ತು ರೂಪಾಯಿಗಳು ಕೂಡುತ್ತಿದ್ದವು. ಒಮ್ಮೊಮ್ಮೆ ಏನು ಇರುತ್ತಿರಲಿಲ್ಲ. ಹಣ ಬಂದಾಗ ಹಿಗ್ಗದೆ, ಹಣ ಕೂಡದಿದ್ದಾಗ ಕೊರಗದೆ ಈ ಜನಪದ ಕಲೆಯನ್ನು ಪೋಷಿಸುತ್ತ ಬಂದಿದ್ದಾರೆ. ಇವರು ತೋರಿಸುವ ಆಟ ಪ್ರಾರಂಭವಾಗುವುದು ಹೀಗೆ-ಕೂಡಿದ ಮಂದಿಯ ನಡುವೆ ಇವರು ಕುಳಿತು, "ಅರೆರೆss ರೆss ಜಾss." ಎಂದು ಸಾಮಾನಿನ ಜೋಳಿಗೆಯನ್ನು ಕೆಳಗಿಟ್ಟು 'ಸುಡುಗಾಡ ಸಿದ್ಧನಾಟ ಬಲು ಮೋಜಿನಾಟ' ಎನ್ನುತ್ತಿದ್ದಂತೆ ಜೋಳಿಗೆಯೊಳಗೆ ಕೈ ಹಾಕಿ ಮಲ್ಲಾಡ ಚೌಡಿಯನ್ನು ಹೊರಗೆ ತೆಗೆದು, ಎರಡು ಕೈಯಲ್ಲಿ ಹಿಡಿದು 'ಮಲ್ಲಾಡ ಗುಬ್ಬಿss ಮೋಜ ಮಾಡ್ತಿ' ಎಂದವನೆ ತಾನೆ ತನ್ನ ಬಾಯಿಂದ 'ಚಿಂವ್' ಎಂದು ಜನರನ್ನು ಕೂಡಿಸಿ ತಮ್ಮ ಮಾಯದ ಆಟವನ್ನು ಪ್ರಾರಂಭಿಸಿ, ಗುಂಡಾ ನುಂಗುವುದು, ಮತ್ತೆ ಅದನ್ನ ಬಾಯಿಂದ ಹೊರಗೆ ತೆಗೆದು, ಅದನ್ನು ಕೈಯಲ್ಲಿ ಹಿಡಿದು ಬಲಗೈ ಕರಿ ಗುಣಕಿಯಿಂದ ಮಾಯ ಮಾಡುವದು, ಹೀಗೆ ಹತ್ತು ಹನ್ನೆರಡು ಪ್ರದರ್ಶನಗಳನ್ನು ನೀಡಿ ಜನರ ಮೆಚ್ಚುಗೆಗೆ ಪಾತ್ರರಾಗುತ್ತಿದ್ದರು.

ಈ ಮಾಯದ ವಿದ್ಯೆಯನ್ನು ನಂಬಿಕೊಂಡು ಬದುಕು ಸಾಗಿಸಿದ ಯಲ್ಲಪ್ಪನವರು ಬಳ್ಳಾರಿ, ಕೊಪ್ಪಳ, ಗದಗ ಮತ್ತು ಧಾರವಾಡ ಜಿಲ್ಲೆಗಳ ಊರು-ಕೇರಿಗಳಿಗೆ ಹೋಗಿ ತಮ್ಮ ಪ್ರದರ್ಶನವನ್ನು ನೀಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಈ ಕಲೆಯನ್ನು ಉಳಿಸಲು ನಿರಂತರ ಮೂವತ್ತು ವರ್ಷಗಳಿಂದ ಶ್ರಮಿಸುತ್ತಿದ್ದಾರೆ. ಕೆಲವು ಶಿಷ್ಯರನ್ನು ಸಹ ಸಿದ್ಧ ಪಡಿಸಲು ಪ್ರಯತ್ನಿಸಿದ್ದಾರೆ. ಆದರೆ ಈಗ ಈ ವಿದ್ಯೆಯನ್ನು ಕಲಿಯಲು ಯಾರು ಮುಂದೆ ಬರುತ್ತಿಲ್ಲವಾದ್ದರಿಂದ, ಎಲ್ಲಿ ಈ ಕಲೆಯು ಮಾಯವಾಗಿ ಹೋಗುತ್ತದೆ ಎಂಬ ಭೀತಿ ಅವರಿಗಿದೆ. ಇವರ ಸಮಕಾಲೀನರಾದ ಇನ್ನು ಕೆಲವರು ಸುಡುಗಾಡು ಸಿದ್ಧನ ವೇಷಹಾಕಿಕೊಂಡು ಈ ಕಲೆಯನ್ನು ಪ್ರದರ್ಶಿಸುತ್ತಿದ್ದಾರೆ. ಆದರೆ ಈ ವಿದ್ಯೆಯನ್ನು ಯುವಕರು ಈ ವಿದ್ಯೆಯನ್ನು ಕಲಿಯದೆ ಇರುವದು ಆತಂಕದ ವಿಷಯವೆ ಸರಿ. ಈ ಕಲೆಯು ಉಳಿಯಬೇಕಾದರೆ ಸರಕಾರವಾಗಲಿ, ಇಲಾಖೆಯವರಾಗಲಿ ಯಲ್ಲಪ್ಪನವರಂಥ ಕಲಾವಿದರನ್ನು ಗುರುತಿಸಿ ಸೂಕ್ತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಪ್ರೋತ್ಸಾಹಿಸಿದರೆ ಮಾತ್ರ ಸಾಧ್ಯ.

# ವೀರಪ್ಪ ದೊಡ್ಡದುರಗಪ್ಪ ಗಡ್ಡದ

ಸುಡುಗಾಡ ಸಿದ್ಧರೆಂದೆ ಚಿರಪರಿಚಿತರಾದ ವೀರಪ್ಪ ಗಡ್ಡದವರು ಗದುಗಿನ ರಾಜೀವ ಗಾಂಧಿನಗರದ ನಿವಾಸಿಗಳು. ತಂದೆ ದೊಡ್ಡದುರಗಪ್ಪ, ತಾಯಿ ಹುಲಿಗೆವ್ವನವರ ಮಗನಾಗಿ 1950ರಲ್ಲಿ ಜನಿಸಿದರು. ಇವರು ಶಾಲೆಗೆ ಹೋಗದಿದ್ದರೂ ಓದು-ಬರಹ ಬಲ್ಲವರಾಗಿದ್ದಾರೆ. ಚಿಕ್ಕಪ್ಪನಾದ ಸಣ್ಣದುರಗಪ್ಪನವರಿಂದ ಓದು-ಬರಹ ಕಲಿತರಲ್ಲದೆ ಸುಡುಗಾಡು ಸಿದ್ಧರ ಮಾಯದ ಆಟವನ್ನು ಸಹ ಇವರಿಂದಲೆ ಕಲಿತಿದ್ದಾರೆ. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೆ ಸಿದ್ಧರ ಜೋಳಿಗೆಯನ್ನು ಹೆಗಲಿಗೆ ಹಾಕಿಕೊಂಡು ಊರು-ಊರು ಅಲಿಯುತ್ತ ಈ ಆಟವನ್ನು ಪ್ರದರ್ಶಿಸಲು ಪ್ರಾರಂಭಿಸಿದರು.

ಸುಡುಗಾಡು ಸಿದ್ಧರು ತಮ್ಮನ್ನು ತಾವು ರೇವಣಸಿದ್ಧರ ಸಾಂಜಾತರೆಂದು ಹೇಳಿಕೊಳ್ಳುತ್ತಾರೆ. ರಾತ್ರಿ ಬೆಳತನಕ ಪನಕಟ್ಟಿಕೊಂಡು ಸುಡುಗಾಡಿನಲ್ಲಿಯೆ ಇದ್ದು ಬೆಳಗಿನ ಜಾವಕ್ಕೆ ಪುರವನ್ನು ಪ್ರವೇಶಿಸಿ ಜಂಗವನ್ನೊ ಇಲ್ಲವೆ ಗಂಟೆಯನ್ನೊ ಬಾರಿಸುತ್ತ ಭಕ್ತರ ಮನೆಯ ಮುಂದೆ ಬಂದು ನಿಂತು ಭಿಕ್ಷೆಬೇಡಿ, ಭಿಕ್ಷೆ ಸ್ವೀಕರಿಸಿ "ರೇವಣ ಸಿದ್ಧಯ್ಯನ ಪಾದುಕು, ಶ್ರೀಶೈಲ ಮಲ್ಲಿಕಾರ್ಜುನನ ಪಾದುಕು ಕೊಟ್ಟೂರು ಬಸವಣ್ಣನ ಪಾದುಕು" ಎಂದು ಹರಕೆ ಕೊಟ್ಟು ಮುಂದೆ ಹೋಗುತ್ತಿದ್ದರು. ನಂತರ ಹಗಲ್ಹೊತ್ತು ಊರ ಜನರ ಮುಂದೆ ತಮ್ಮ ಕಣ್ಕಟ್ಟಿನ ವಿದ್ಯೆಯನ್ನು ಪ್ರದರ್ಶಿಸುತ್ತಾರೆ. ಜನನಿಬಿಡ ಪ್ರದೇಶದಲ್ಲಿ ತನ್ನ ಹೆಗಲಿನ ಜೋಳಿಗೆಯನ್ನು ಮುಂದಿಟ್ಟುಕೊಂಡು ಸುರುಳಿಸುತ್ತಿದ ಚಿಗರಿಚರ್ಮವನ್ನು ಎರಡು ಮೂರು ಬಾರೆ ಲಘುವಾಗಿ ಬಡಿದು "ಅರೆರೆss ಅರೆss ಮಲ್ಲಾಡ ಚೌಡಿ" ಅಂದಾಗೊಮ್ಮೆ ಬಾಯಿಂದ 'ಚಿವ್' ಎಂದು 'ಮೋಜಮಾಡ್ತಿ...ಚೀವ್' ಎನ್ನುತ್ತಾ ತನ್ನ ಆಟವನ್ನು ಪ್ರದರ್ಶಿಸುತ್ತ ಜೋಳಿಗೆಯಿಂದ ಜಮಾ ಮಾಡಿದ ಮುಳ್ಳುಗಳನ್ನು ನುಂಗಿ ಗೋಣನ್ನು ಎಬ್ಬಿಸಿ ತೋರು ಬೆರಳಿನಿಂದ ಕುತ್ತಿಗೆಯನ್ನು ಬಡೆಯುತ್ತ ನುಂಗಿದಂತೆ ಮಾಡಿ "ಅರೆss ರೆss ಸುಡುಗಾಡ ಸಿದ್ಧನಾಟ ಬಲು ಮೋಜಿನಾಟ" ಎನ್ನುತ್ತಾ ಸಣ್ಣಕರಿ ಗುಣಕನ್ನ ಹಿಡಿದು 'ನುಂಗು ಕರಗು ಮತ್ತೆ ಹೊಟ್ಯಾಗಿಂದ ಬಾ' ಎಂದವನೆ ನುಂಗಿದ ಮುಳ್ಳನ್ನು ಬಾಯಿಂದ ತೆಗೆದು ತೋರಿಸುವನು. ಒಂದು ಗಜಗವನ್ನು ಜೋಳಿಗೆಯಿಂದ ತೆಗೆದು ಜನರಿಗೆ ತೋರಿಸಿ, ಅದನ್ನು ಮಾಯ ಮಾಡಿ ಗಟ್ಟಿ ರೂಪಾಯಿಯನ್ನಾಗಿ ಮಾಡಿ, ಆ ರೂಪಾಯಿಯನ್ನು ನುಂಗಿ, ಮತ್ತೆ ತೆಗೆದು ತೋರಿಸುವನು. ಹೀಗೆ ಹತ್ತಾರು ತರದ ಕಣ್ಕಟ್ಟು ವಿದ್ಯೆಯನ್ನು ಕೂಡಿದ ಜನರಿಗೆ ತೊರಿಸಿ, ಅವರಿಗೆ ಮನರಂಜನೆಯನ್ನು ನೀಡಿ, ಅವರು ಮೆಚ್ಚಿಕೊಡುವ ಹಣವನ್ನು ತೆಗೆದುಕೊಂಡು ಮುಂದಿನ ಓಣಿಗೆ ಹೋಗುತ್ತಿದ್ದರು.

ಹೀಗೆ ವೀರಪ್ಪನವರು ತಮ್ಮ ಕೈಚಳಕದಿಂದ ಒಳ್ಳೆಯ ಪ್ರದರ್ಶನವನ್ನು ನೀಡುತ್ತಿದ್ದರು.

ಸುಡುಗಾಡು ಸಿದ್ಧರ ಈ ಜನಪದ ಕಲೆಯನ್ನು ವೀರಪ್ಪನವರು ಸುಮಾರು ಮೂವತ್ತು ವರ್ಷಗಳಿಂದ ನಿರಂತರವಾಗಿ ಪ್ರದರ್ಶಿಸುತ್ತಾ ಬಂದಿದ್ದಾರೆ. ಕೊಪ್ಪಳ ಜಿಲ್ಲೆಯ ಕಿನ್ನಾಳ, ಮಂಗಳೂರು ಕುದುರೆಮುಖ, ಬೇವೂರು, ಹುಲಸನ್ಹಟ್ಟಿ, ತಾವರಗೇರಾ ಮುಂತಾದ ಊರುಗಳಲ್ಲಿ ಮತ್ತು ಗದಗ ಜಿಲ್ಲೆಯ ಹೊಳೆ ಆಲೂರು, ರೋಣ, ಜಕ್ಕಲಿ, ಲಕ್ಕುಂಡಿ, ಸೊರಟೂರ ಹಾಗೂ ಗದುಗಿನ ಕನ್ನಡ ಶಾಲೆಗಳಲ್ಲಿಯೂ ಸಹ ತಮ್ಮ ಪ್ರದರ್ಶನವನ್ನು ನೀಡಿ ಶಾಲಾ ಮಕ್ಕಳನ್ನು ರಂಜಿಸಿದ್ದಾರೆ. ಆದರೆ ಇವರ ಪ್ರದರ್ಶನಗಳು ದೂರದರ್ಶನದಲ್ಲಾಗಲಿ, ಸರಕಾರದವರು ನಡೆಸುವ ಜನಪದ ದಿಬ್ಬಣ, ಜಾತ್ರೆಗಳಲ್ಲಿ ಪ್ರದರ್ಶನಗೊಳ್ಳದಿರುವುದು ದುರದೃಷ್ಟಕರವೆಂದೆ ಹೇಳಬೇಕು.

## ರಾಮಪ್ಪ ಲಕ್ಷ್ಮಪ್ಪ ಸಣ್ಣದಾಸರು

ಮಾಯಾಲೋಕದ ಅದ್ಭುತ ವಿಸ್ಮಯಕಾರಿ. ರೌದ್ರ ಭಯಂಕರ ಮೋಡಿಯ ಪ್ರದರ್ಶನ ನೀಡುವ ಪ್ರಸಿದ್ಧ ಮೋಡಿಕಾರ ರಾಮಪ್ಪನವರು ಗದುಗಿನ ರಾಜೀವ ಗಾಂಧಿನಗರ ನಿವಾಸಿಗಳು. ತಂದೆ ಲಕ್ಷ್ಮಪ್ಪ. ತಾಯಿ ಸಂಜೀವಮ್ಮನವರ ಮಗನಾಗಿ 1950ರಲ್ಲಿ ಜನಿಸಿದರು. ಸಾಲಿ ಕಲಿಯದಿದ್ದರೂ ನೂರಾರು ಮಂತ್ರಗಳನ್ನು ಪಠಿಸಬಲ್ಲವರಾದ ಇವರು ಮೋಡಿಕಾರ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ತಂದೆ ಲಕ್ಷ್ಮಪ್ಪನವರಿಂದ ಈ ವಿದ್ಯೆಯನ್ನು ಕರಗತ ಮಾಡಿಕೊಂಡ ಇವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೇ ತಮ್ಮ ತಂಡದಲ್ಲಿ ಸೇರಿ; ಮೋಡಿಯ ಪ್ರದರ್ಶನವನ್ನು ನೀಡಲು ಪ್ರಾರಂಭಿಸಿದರು.

ಪ್ರದರ್ಶನ ನಡೆಯುವ ಬಯಲಿನಲ್ಲಿ ಮಂಟಪವನ್ನು ಹಾಕಿಕೊಂಡು ಎದುರು ಮೋಡಿಯ ಮುಂದೆ ಕಳ್ಳಿಯ ಟೊಂಗಿಯನ್ನು ಇಟ್ಟುಕೊಂಡು. ಅದರ ಪಕ್ಕದಲ್ಲಿ ಮಜ್ಜಿಗೆ ತುಂಬಿದ ಬಿಂದಿಗೆಯನ್ನು ಇಟ್ಟುಕೊಂಡು. ಹದಿನೈದು ಮಂದಿ ಗಂಡಸರು ಹಾಗೂ ಹೆಂಗಸರು ಕೂಡಿಕೊಂಡು ಮೋಡಿಕಾರರು ತಮ್ಮ ಆಟವನ್ನು ಪ್ರಾರಂಭಿಸುತ್ತಾರೆ. ಇವರು ಎದುರು ಮೋಡಿಯ ಮಂಟಪವನ್ನು ಪ್ರವೇಶಿಸಿ ರಾಕ್ಷಸ ಗೊಂಬಿಯನ್ನು ಭೇದಿಸಬೇಕು. ಎದುರು ಮೋಡಿಯು ಹಾಕಿದ ರಣ ರಂಗೋಲಿಯನ್ನು ದಾಟಬೇಕು. ಇದನ್ನು ದಾಟಿ ಮಂಟಪವನ್ನು ಪ್ರವೇಶಿಸುವುದು ಅಷ್ಟು ಸುಲಭವಲ್ಲ. ಆದರೂ ಇವರು ಅದನ್ನು ಭೇದಿಸಲೇಬೇಕು ಹೀಗೆ ಭೇದಿಸುವಾಗ ಅವನು ಮಂತ್ರಿಸಿ ಒಗೆದ ಬೇವಿನ ಎಲೆಗಳು ಚೇಳುಗಳಾಗುತ್ತವೆ. ಎದುರು ಮೋಡಿಯವನು ಕೆಂಡದಲ್ಲಿ

ಕಾಸಿದ ಕೆಂಪನೆಯ ಗುಂಡಗಳನ್ನು ಇವರು ಬಾಯಿಯಿಂದ ತೆಗೆದು ಅವುಗಳನ್ನು ತಂಪಾಗಿಸಬೇಕು. ಮಂಡಲದಲ್ಲಿಯ ಲಿಂಬೆಯ ಹಣ್ಣುಗಳನ್ನು ಬಾಯಿಂದ ಎತ್ತಬೇಕು. ಹೀಗೆ ಒಂದೊಂದೆ ಮಂಡಲಗಳನ್ನು ಭೇದಿಸುತ್ತ ಬರುವ ಮೋಡಿಕಾರನಿಗೆ ಎದುರು ಮೋಡಿಯು ಗುಂಡು ಹೊಡೆಯುತ್ತಾನೆ. ಆಗ ಮೋಡಿಕಾರನು ರಕ್ತವನ್ನು ಕಾರುತ್ತಿರುವಾಗ ಮಂತ್ರದಿಂದ ಅದನ್ನು ಇಳಿತಾರ ಮಾಡಿ ಅವನನ್ನು ರಕ್ಷಿಸಿಕೊಳ್ಳಬೇಕು. ಎದುರು ಮೋಡಿಯು ಜೇನುನೊಣಗಳನ್ನು ಮಾಡಿಬಿಟ್ಟರೆ ಅವುಗಳನ್ನು ಮಂತ್ರದಿಂದ ಮಾಯ ಮಾಡಬೇಕು.ಮಂಟಪದ ಪಕ್ಕದಲ್ಲಿರುವ ಗುಡಿಸಲಿಗೆ ಎದುರು ಮೋಡಿಯು ಬೆಂಕಿ ಹಚ್ಚಿದರೆ ಅದನ್ನು ಮೋಡಿಕಾರರು ಮಂತ್ರ ಶಕ್ತಿಯಿಂದ ತಕ್ಷಣವೇ ನಂದಿಸಬೇಕು. ಒಂದು ವೇಳೆ ನಂದಿಸದಿದ್ದರೆ ಇವರ ಜೋಪಡಿಗಳಿಗೆ ಉರಿಹತ್ತಿ ನಾಶವಾಗುತ್ತವೆ. ಕೊನೆಯಲ್ಲಿ ರಣರಂಗದ ಮಂಡಲವ ಭೇದಿಸಿ ಮಂಟಪದ ಪಕ್ಕದ ಕಂಬಕ್ಕೆ ಕಟ್ಟಿದ ಕೋಳಿಯನ್ನು ಮೋಡಿಕಾರನು ತನ್ನ ಬಾಯಿಂದ ಅದರ ರುಂಡವನ್ನು ಬೇರೆ ಮಾಡಬೇಕು. ಹೀಗೆ ಮಾಡುವಾಗ ಎದುರು ಮೋಡಿಯ ಬಾರಕೋಲಿನಿಂದ ಕಂಬಕ್ಕೆ ಹೊಡೆದರೆ ಮೋಡಿಕಾರನ ಮೈಮೇಲೆ ಬಾಸುಂಡೆಗಳು ಮೂಡುತ್ತವೆ ಅದನ್ನು ಸಹಿಸಿಕೊಂಡು ಕೋಳಿಯ ರುಂಡವನ್ನು ಬಾಯಿಂದ ಕೀಳುತ್ತಾನೆ. ಹೀಗೆ ನೂರಾರು ವಿಸ್ಮಯಕಾರಿ ಅದ್ಭುತ ಚಮತ್ಕಾರಗಳನ್ನು ಮಾಡುತ್ತ ಮೋಡಿಕಾರ ತನ್ನ ಎರಡು ಕಣ್ಣು ಗುಡ್ಡೆಗಳನ್ನು ಕಿತ್ತು ತೋರಿಸುತ್ತಾನೆ. ಆಗ ಮೋಡಿಕಾರನ ಆಟ ಮುಗಿಯುತ್ತದೆ. ಈ ಎಲ್ಲ ಚಟುವಟಿಕೆಗಳಿಗೆ ಎದುರು ಮೋಡಿಯ ಮಂತ್ರಕ್ಕೆ ಸವಾಲು ಹಾಕಿ ಅವುಗಳನ್ನು ಇಳಿತಾರ ಮಾಡುವಂಥ ಚಮತ್ಕಾರ ಕೆಲಸವನ್ನು ರಾಮಪ್ಪನವರು ಚಾಚು ತಪ್ಪದೆ ಮಾಡುತ್ತಿದ್ದರು. ಎದುರು ಮೋಡಿಗೆ ಪ್ರಬಲವಾಗಿ ಎದುರು ನಿಂತು ಅವನ ಪ್ರತಿಯೊಂದು ಮಂತ್ರಕ್ಕೆ ಎದುರು ಮಂತ್ರವನ್ನು ಪಠಿಸಿ ಇಳಿತಾರ ಮಾಡುವುದಷ್ಟೆ ಅಲ್ಲ ರಣ ಮಂಡಲವನ್ನು ಪ್ರವೇಶಿಸಿ ಕೋಳಿಯ ರುಂಡ-ಚೆಂಡಾಡಿ ರಾಕ್ಷಸಗೊಂಬೆಯನ್ನು ತಂದು. ಈ ಅದ್ಭುತ ಆಟಕ್ಕೆ ಕೊನೆ ಹಾಡುವವನೆ ಮಂತ್ರಗಾರ ಮೋಡಿಕಾರ ರಾಮಪ್ಪ.

ರೌದ್ರ-ಭಯಂಕರವಾದ ಈ ಪ್ರದರ್ಶನ ಕಲೆಯನ್ನು ಸುಮಾರು ಮೂವತ್ತು ವರ್ಷಗಳಿಂದ ಉಳಿಸಿ-ಬೆಳೆಸಲು ಪ್ರಯತ್ನಿಸುತ್ತಿದ್ದ ರಾಮಪ್ಪನವರಿಗೆ ಸರಕಾರ ಅಥವಾ ಇಲಾಖೆಯವರು ಪ್ರಶಸ್ತಿ-ಪುರಸ್ಕಾರಗಳನ್ನಿತ್ತು ಪ್ರೋತ್ಸಾಹಿಸಿ. ಈ ಅದ್ಭುತ ಜನಪದ ಕಲೆಯು ಉಳಿಯುವಂತೆ ಮಾಡಬೇಕು. ನೂರಾರು ಊರುಗಳಲ್ಲಿ ಹಲವಾರು ಪ್ರದರ್ಶನಗಳನ್ನು ನೀಡಿ ಸಾವಿರಾರು ಅಭಿಮಾನಿಗಳನ್ನು ರಂಜಿಸಿದ್ದಾರೆ.

# ಹುಲಗಪ್ಪ ಗಂಗಪ್ಪ ಸಣ್ಣದಾಸರು

"ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳನ್ನು ಕರಗತ ಮಾಡಿಕೊಂಡು ಮೋಡಿಯ ಆಟವನ್ನು ಪ್ರದರ್ಶಿಸುವುದರಿಂದ ನಮಗೆ 'ಮೋಡಿಕಾರರು' ಎಂಬ ಹೆಸರು ರೂಢಿಯಾಯಿತು" ಎಂದು ಮೋಡಿಕಾರ ಹುಲಗಪ್ಪನವರು ಹೇಳುತ್ತಾರೆ. ಇವರು ಗದುಗಿನ ರಾಜೀವಗಾಂಧಿ ನಗರದ ನಿವಾಸಿಗಳು ತಂದೆ ಗಂಗಪ್ಪ, ತಾಯಿ ಲಕ್ಷ್ಮಮ್ಮನವರ ಮಗನಾಗಿ 1947ರಲ್ಲಿ ಜನಿಸಿದರು. ತಮ್ಮ ತಿರುಗಾಟದಲ್ಲಿ ಅಂದರೆ ಅಲೆಮಾರಿ ಜೀವನದಿಂದ ಓದು-ಬರಹ ಕಲಿತಿಲ್ಲವದರೂ ನೂರಾರು ಮಂತ್ರಗಳನ್ನು ಬಲ್ಲವರಾಗಿದ್ದಾರೆ. ತಂದೆಯವರಾದ ಗಂಗಪ್ಪನವರಿಂದ ಈ ಮೋಡಿಯ ವಿದ್ಯೆಯನ್ನು ಕಲಿತಿರುವರು. ತಮ್ಮ ಇಪ್ಪತ್ತೈದನೆಯ ವಯಸ್ಸಿನಿಂದಲೆ ಈ ಆಟವನ್ನಾಡಲು ಪ್ರಾರಂಭಿಸಿದರು. ಈ ವಿದ್ಯೆ ಇವರಿಗೆ 'ಅಜ್ಜಾ ಆರುತಲಿ, ಮುತ್ತ್ಯಾ ಮೂರು ತಲಿ' ಎನ್ನುವಂತೆ ತಲೆತಲಾಂತರದಿಂದ ಬಂದಿರುವಂತಹದ್ದು. ತಮ್ಮ ಬಾಲ್ಯದಿಂದಲೆ ಇಂಥ ವಿದ್ಯೆಯನ್ನು ಕರಗತ ಮಾಡಿಕೊಂಡು ಸಾಕಷ್ಟು ಪಳಗಿದವರಾಗಿದ್ದಾರೆ.

ಒಂದು ಹಳ್ಳಿಯಲ್ಲಿ ಮೋಡಿಕಾರರ ಆಟವಾಡುವುದನ್ನು ಮೊದಲೆ ಗೊತ್ತು ಮಾಡಿಕೊಂಡಿರುತ್ತಾರೆ. ಆ ದಿನವು ಬಂತೆಂದರೆ ಎದುರು ಮೋಡಿಯವನು ಆ ದಿನದಂದು ಆಡುವ ಆಟದ ಮೈದಾನದಲ್ಲಿ ಉತ್ತರ ಇಲ್ಲವೆ ಪೂರ್ವ ದಿಕ್ಕಿಗೆ ಎದುರಾಗಿ ಒಂದು ಮಂಟಪವನ್ನು ತಯಾರಿಸಿ, ಅದರ ಮುಂದೆ ರಣದ ರಂಗೋಲಿಯನ್ನು ಬರೆದು ಮಂಟಪದ ಪಕ್ಕದಲ್ಲಿ ಒಂದು ಕಂಬವನ್ನು ಹುಗಿದು, ಅದರ ಮತ್ತೊಂದು ಬದಿಯಲ್ಲಿ ದಂಟಿನ ಸಿವುಡುಗಳ ಒಂದು ಗುಡಿಸಲು ಹಾಕಿ, ಮಂಟಪದ ಮಧ್ಯದಲ್ಲಿ ಒಂದು ರಾಕ್ಷಸ ಗೊಂಬೆಯನ್ನಿಟ್ಟು ರಂಗಕ್ಕೆ ಮೋಡಿಕಾರರನ್ನು ಆಹ್ವಾನಿಸುತ್ತಾನೆ. ಅಷ್ಟರಲ್ಲಿಯೇ ಮೋಡಿಕಾರರು ರಂಗವನ್ನು ಹಾಗೆಯೇ ಪ್ರವೇಶಿಸುವುದಿಲ್ಲ ಪ್ರದರ್ಶನಗೊಳ್ಳುವ ಮೈದಾನದಿಂದ ಸುಮಾರು ಒಂದು ಕಿಲೋಮೀಟರ ದೂರದಲ್ಲಿ ಒಂದು ಚಕ್ಕಡಿಯನ್ನು ನಿಲ್ಲಿಸಿ ಅದರ ಮೇಲೆ ಹಿಡಿಯುವಷ್ಟು ಮಂದಿಯನ್ನು ಕುಳ್ಳಿರಿಸಿ ಮೋಡಿಕಾರನ ಮೂಗಿನ ಹೊಳ್ಳೆಗಳಿಗೆ ದಾರವನ್ನು ಪೋಣಿಸಿ ಅದಕ್ಕೆ ಹಗ್ಗವನ್ನು ಕಟ್ಟಿಕೊಂಡು ಆ ಚಕ್ಕಡಿಯನ್ನು ಎಳೆಯುತ್ತ ಕೂಡಿದ ಜನರ ಮಧ್ಯದಲ್ಲಿಯೆ ಜೈಕಾರಗಳೊಂದಿಗೆ ಬಯಲು ರಂಗಕ್ಕೆ ಬರುತ್ತಾರೆ. ಎದುರು ಮೋಡಿಯ ಸ್ವಲ್ಪ ದೂರದಲ್ಲಿ ಒಂದು ಕಳ್ಳಿಯ ಟೊಂಗೆಯನ್ನಿಟ್ಟು ಅದರ ಪಕ್ಕದಲ್ಲಿಯೆ ಮಜ್ಜಿಗೆ ತುಂಬಿದ ಮಗಿಯನ್ನಿಟ್ಟುಕೊಂಡು ಮೋಡಿ ವಿದ್ಯೆಯ ಆಟವನ್ನು ಪ್ರಾರಂಭಿಸುವರು.

ಆಟ ಪ್ರಾರಂಭವಾಗುವುದು ಮಧ್ಯಾಹ್ನ ಮೂರುಗಂಟೆಗೆ ಮಾತ್ರ. ಮೋಡಿಕಾರರು ಎದುರು ಮೋಡಿಯ ಮಂತ್ರಗಳನ್ನು ಭೇದಿಸಿ ಮಂಟಪವನ್ನು ಪ್ರವೇಶಿಸಬೇಕು. ಹೀಗೆ ಪ್ರವೇಶಿಸುವಾಗ ನಡುವೆ ನಡೆಯುವ ಮಂತ್ರದ ಚಮತ್ಕಾರ ರೌದ್ರ ಭಯಂಕರವಾಗಿರುತ್ತದೆ. ಮೋಡಿಕಾರನೊಬ್ಬ ತನ್ನ ಮಂತ್ರದ ಶಕ್ತಿಯಿಂದ ಮಂಟಪದ ಪಕ್ಕದ ಕಂಬಕ್ಕೆ ಕಟ್ಟಿದ ಕೋಳಿಯನ್ನು ಬಾಯಿಯಿಂದ ಕಚ್ಚಲು ಬಂದರೆ ಎದುರು ಮೋಡಿಯು ಬಾರಕೋಲಿನಿಂದ ಕಂಬಕ್ಕೆ ಹೊಡೆದರೆ ಮೋಡಿಕಾರನ ಮೈಯಲ್ಲಿ ಬಾರು (ಬಾಸುಂಡೆ)ಗಳು ಎಳುತ್ತವೆ. ಅದನ್ನು ಭೇದಿಸಿ ಕೋಳಿಯ ಚಂಡನ್ನು ಬಾಯಿಂದಲೆ ಕಚ್ಚಿ ಹಾಕಬೇಕು. ಮಂಡಲದಲ್ಲಿ ಒಂದು ಕೊಬ್ಬರಿ ಬಟ್ಟಲಿಗೆ ಎರಡು ದಬ್ಬಣಗಳನ್ನು ಕತ್ತರಿಯಾಗಿ ಪೋಣಿಸಿ ಇಟ್ಟಿರುತ್ತಾರೆ, ಅದನ್ನು ಮೋಡಿಕಾರ ಬಾಯಿಂದ ತೆಗೆದುಕೊಳ್ಳುವಾಗ ಆ ದಬ್ಬಣಗಳು ಅವನ ಗಲ್ಲಗಳಲ್ಲಿ ನಾಟುತ್ತವೆ, ಹೀಗೆ ಬೇವಿನ ಎಲೆಗಳನ್ನು ಚೇಳು ಮಾಡುವುದು, ದಂಟುಗಳನ್ನು ಹಾವು ಮಾಡುವುದು, ಹೀಗೆ ಹತ್ತು ಹಲವಾರು ಚಮತ್ಕಾರಗಳನ್ನು ತೋರಿಸುವ ಈ ಪ್ರದರ್ಶನ ಅದ್ಭುತವಾಗಿರುತ್ತದೆ. ಪ್ರಜಾವಾಣಿ ಪತ್ರಕರ್ತರೊಬ್ಬರು ಇದನ್ನು 'ಜಾದುಲೋಕದ ಓಲಂಪಿಕ್ಸ್' ಎಂದು ಕರೆದಿರುವರು. ಇಂಥ ಓಲಂಪಿಕ್ಸ್ ಆಟಗಾರರು ಈ ನಮ್ಮ ಮೋಡಿಕಾರರು ಮತ್ತು ಎದುರು ಮೋಡಿಕಾರರ ಮಧ್ಯೆ ನಡೆಯುವ ಪೈಪೋಟಿಯಲ್ಲಿ ನಂಬಲಸಾಧ್ಯವಾದ ತಂತ್ರಗಳನ್ನು ಪ್ರದರ್ಶಿಸುವ ಈ ಜನಪದ ಕಲೆ ಶಿಷ್ಟ ಲೋಕಕ್ಕೆ ಗೊತ್ತೆ ಇಲ್ಲ. ಇಂಥ ಅದ್ಭುತ ಕಲೆಯನ್ನು ಕರಗತ ಮಾಡಿಕೊಂಡ ಮೋಡಿಕಾರ ಹುಲಗಪ್ಪನವರು ತಮ್ಮ ತಂಡದವರೊಂದಿಗೆ ಸೇರಿಕೊಂಡು ನೂರಾರು ಪ್ರದರ್ಶಗಳನ್ನು ನೀಡಿದ್ದಾರೆ. ಅಲ್ಲದೆ ದೂರದರ್ಶನದಲ್ಲಿಯೂ ಸಹ ನಾಲ್ಕು ಬಾರಿ ಇವರ ಪ್ರದರ್ಶನವನ್ನು ಪ್ರಸಾರಮಾಡಿದ್ದಾರೆ. ಬನವಾಸಿ, ಹಾವೇರಿ, ಕುರುಬಗೊಂಡ, ಮೋಟೆ ಬೆನ್ನೂರು, ಗುಳೇದಗುಡ್ಡ, ಬಾದಾಮಿ, ಗದಗ (ನಾಲ್ಕು ಸಲ), ಗಂಗಾವತಿ, ಕುಕನೂರು, ಯಲಬುರ್ಗಿ, ಗಜೇಂದ್ರಗಡ, ನರೆಗಲ್ಲ ಹೀಗೆ ನೂರಾರು ಊರುಗಳಲ್ಲಿ ತಮ್ಮ ಭ್ರಮಾಲೋಕದ ಆಟಗಳನ್ನು ಪ್ರದರ್ಶಿಸಿ ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ಈ ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಆದರೆ ಈ ಅದ್ಭುತ ಕಲೆಯನ್ನು ಉಳಿಸಿ-ಬೆಳೆಸಬೇಕಾದರೆ ಸರಕಾರ ಈ ಕಲಾವಿದರಿಗೆ ಪ್ರಶಸ್ತಿ-ಪುರಸ್ಕಾರಗಳನ್ನು ಮಾನ-ಸನ್ಮಾನಗಳನ್ನು ನೀಡಿ ಗೌರವಿಸಬೇಕು. ಅಂದರೆ ಮಾತ್ರ ಕಲೆಯು ಉಳಿಯಲು ಸಾಧ್ಯ.

# ನಾಗಪ್ಪ ಮಾರೆಪ್ಪ ದುರಗಮರ್ಗಿ

ದುರಗಮರ್ಗಿಯವರೆಂದೆ ಪ್ರಸಿದ್ಧರಾದ ನಾಗಪ್ಪನವರು ಗದುಗಿನ ರಾಜೀವಗಾಂಧಿ ನಗರದ ನಿವಾಸಿ. ತಂದೆ ಮಾರಪ್ಪ, ತಾಯಿ ಮಾರೆವ್ವ ಇವರ ಎರಡನೆಯ ಮಗನಾಗಿ 1948ರಲ್ಲಿ ಕಿನ್ನಾಳ ಗ್ರಾಮದಲ್ಲಿ ಜನಿಸಿದರು. ಇವರ ಅಜ್ಜನವರು ದುರಗಮರ್ಗಿ ವೇಷ ಹಾಕಿಕೊಂಡು ಅಲೆದಾಡುತ್ತ ಗದುಗಿಗೆ ಬಂದು ನೆಲೆಸಿದರು. ಶಾಲೆಗೆ ಹೋಗದಿದ್ದರೂ ತುಸು ಓದು-ಬರಹ ಬರುತ್ತದೆ. ತಂದೆ ಮಾರಪ್ಪನವರಿಂದ ಈ ಧಾರ್ಮಿಕ ಜನಪದ ಕಲೆಯನ್ನು ಕಲಿತು, ಮದುವೆಯಾದ ನಂತರ ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೆ ಹೆಂಡತಿಯನ್ನು ಕರೆದುಕೊಂಡು ದುರಗಮ್ಮನ ಗುಡಿಯನ್ನು ಹೊತ್ತುಕೊಂಡು ಹಳ್ಳಿ-ಹಳ್ಳಿ ತಿರುಗಿ ಜೀವನ ಸಾಗಿಸಲು ಪ್ರಾರಂಭಿಸಿದರು.

ದುರುಗಮ್ಮನ ಗುಡಿಯನ್ನು ಹೊತ್ತುಕೊಂಡು ಒಂದು ಹಳ್ಳಿಯ ಪ್ರಮುಖ ಬೀದಿಯೊಂದರಲ್ಲಿಟ್ಟು, ಹೆಂಡತಿಯು ಬಾರಿಸುವ ಡೋಲಿನ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ಎಡಗೈಯಲ್ಲಿ ಗಂಟೆ, ಬಲಗೈಯಲ್ಲಿ ಲಡ್ಡನ್ನು (ಈರಗೋಲನ್ನು) ಹಿಡಿದು ಆ ಕಡೆ ಈ ಕಡೆ ತಿರುಗಾಡುತ್ತ 'ಛಡ್ ಛಡ್' ಎಂದು ಲಡ್ಡಿನಿಂದ ಎರಡು ಕೈಗಳ ರೆಟ್ಟೆಗೆ ಬಡೆದುಕೊಳ್ಳುತ್ತ "ತಾಯಿ ಬಂದಾಳ ಊರಿಗೆ ನಿಮ್ಮ ಕೇರಿಗೆ, ಓಣ್ಯಾಗ ಕುಂತಾಳ" ಎನ್ನುತ್ತಿದ್ದಂತೆ ಇವನ ಗಂಟೆಯ, ಲಡ್ಡಿನ, ಡೋಲಿನ ಸಪ್ಪಳಕ್ಕೆ ಭಯ-ಭಕ್ತಿಯ ವಾತಾವರಣವೆ ಸೃಷ್ಟಿಗೊಂಡು, ಗ್ರಾಮದ ಆ ಓಣಿಯ ಹೆಣ್ಣು ಮಕ್ಕಳು ದೇವಿಯ ದರ್ಶನಕ್ಕೆಂದು ಒಂದು ತಂಬಿಗೆ ನೀರು, ಮರದಲ್ಲಿ ಜೋಳವನ್ನು ಹಾಕಿಕೊಂಡು ಬರುವರು. ಬಂದು, ಎರಡೂ ಬದಿಯಲ್ಲಿ ನಿಲ್ಲುತ್ತಿದ್ದರು. ಆಗ ದುರಗಮರ್ಗಿ ನಾಗಪ್ಪನವರು ದೇವಿಗುಡಿಯ ಬಾಗಿಲದ ಚಿಕ್ಕ ಪರದೆಯನ್ನು ಮೇಲಕ್ಕೆ ಎತ್ತಿ ಹಾಕುತ್ತಿದ್ದರು. ಭಕ್ತರು ಶ್ರದ್ಧೆಯಿಂದ ದೇವಿಯ ದರ್ಶನ ಮಾಡಿ ಭಕ್ತಿಯಿಂದ ಕೈ ಮುಗಿಸಯುತ್ತಿದ್ದರು. ಕೆಲಭಕ್ತರು ತಂದ ಬೆಂಕಿಯ ಕೆಂಡವನ್ನು ಧೂಪದಾರತಿಗೆ ಹಾಕಿ ಲೋಭಾನವನ್ನು ಹಾಕಿ, ಹೊಗೆ ಬರುವಂತೆ ಮಾಡಿ, ಭಕ್ತರು ಎತ್ತಿಕೊಂಡ ಸಣ್ಣ-ಸಣ್ಣ ಮಕ್ಕಳಿಗೆ ನಮಸ್ಕಾರ ಮಾಡುವಾಗ ನವಿಲುಗರಿಯ ಸಿವುಡಿನಿಂದ ಮಕ್ಕಳ ತಲೆಯ ಮೇಲೆ ಎರಡು-ಮೂರು ಸಾರೆ ಸಾವರಿಸುತ್ತಿದ್ದ. ದೇವಿಯನ್ನು ನೋಡಲು ಬಂದ ಕೂಡಿದ ಭಕ್ತರ ಮುಂದೆ ಗುಡಿಯ ಒಳಗಿನ ಒಂದೊಂದೆ ಬೆಳ್ಳಿಯ ಸಾಮಾನುಗಳನ್ನು ಹೊರಗೆ ತೆಗೆಯುತ್ತ 'ಮುನವಳ್ಳಿ ಮಚ್ಚಿಗೇರ ನಾಗಮ್ಮ ಕೊಟ್ಟಾಳ, ಮಗಳಿಗೆ ಗೊಬ್ಬರ ಮೈಲಿ ಆದಾಗದೇವಿಗೆ ಬೇಡ್ಕೊಂಡು ಉಪ್ಪಾರ ತಿಪ್ಪವ್ವ ಕೊಟ್ಟಳ' ಹೀಗೆ ದೇವಿಯ ಗುಡಿಯಲ್ಲಿರುವ ಬೆಳ್ಳಿಯ ತೊಟ್ಟಿಲ, ಗೆಜ್ಜಿ, ನಡಪಟ್ಟಿ

ಮುಂತಾದವುಗಳನ್ನು ಡೋಲಿನ ಗತ್ತಿಗೆ ತಕ್ಕಂತೆ ಧ್ವನಿಯನ್ನು ತೆಗೆದು ಹೇಳುತ್ತಿರುವಾಗ, ಡೋಲು ಬಡೆಯುವ ಹೆಣ್ಣುಮಗಳು "ಬಾತಾ ಬೇಲುss" ಅನ್ನುತ್ತಿರುತ್ತಾಳೆ. ಇಷ್ಟೆಲ್ಲ ಆದ ಮೇಲೆ ದುರಗಮುರ್ಗಿಯು ಗುಡಿಯ ಮುಂದಿನ ಮರಗಳಲ್ಲಿರುವ ಜೋಳವನ್ನು ತೆಗೆದುಕೊಂಡು ತನ್ನ ಜೋಳಿಗೆಗೆ ಹಾಕಿಕೊಂಡು, ಪ್ರತಿ ಮರಗಳಿಗೂ ತುಸು ಜೋಳವನ್ನು ಹಾಕಿ, ದೇವಿಯ ಭಂಡಾರವನ್ನು ಇಟ್ಟು ಭಕ್ತರಿಗೆ ಕೊಡುವನು. ಭಕ್ತರು ಮರದಲ್ಲಿಯ ಜೋಳವನ್ನು ದೇವಿಯ ಆಶೀರ್ವಾದವೆಂದು ತೆಗೆದುಕೊಂಡು ಹೋಗಿ ಜೋಳದ ಚೀಲಕ್ಕೆ ಹಾಕುವರು. ಹೀಗೆ ಮಾಡುವುದರಿಂದ ಜೋಳ ಹುಲುಸಾಗುತ್ತದೆ ಎಂಬುದು ನಮ್ಮ ಜನಪದೀಯರ ನಂಬಿಕೆ.

ಧಾರ್ಮಿಕ ಜನಪದ ಕಲೆಯಾದ ದುರಗಮುರ್ಗಿ ಕಲೆಯನ್ನು ತನ್ನ ವೃತ್ತಿಯನ್ನಾಗಿ ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೆ ಸ್ವೀಕರಿಸಿ, ಹೆಂಡತಿ ಮಕ್ಕಳು, ಎರಡಮೂರು ಆಕಳು, ಮತ್ತೆ ಎರಡು ನಾಯಿ ಮನೆಯ ಸಾಮಾನುಗಳನ್ನು ತುಂಬಿಕೊಂಡು ಊರೂರಿಗೆ ಅಲೆದು ಗುಡಿಸಲನ್ನು ಕಟ್ಟಿಕೊಂಡು ಅಲ್ಲಿಯೆ ಅಡುಗೆ ಮಾಡಿಕೊಂಡು ಊರಾಗ ಹೋಗುತ್ತಿದ್ದರು. ಮಧ್ಯಾಹ್ನ ಹನ್ನೆರಡು ಗಂಟೆಗೆ ಮರಳಿ ಬಂದು ಊಟ ಮಾಡಿ ವಿರಮಿಸುತ್ತಿದ್ದರು. ಊರಿನ ಜನರ ಸಹಕಾರವಿದ್ದರೆ ಅಂಥ ಊರಿನಲ್ಲಿ ಒಂದು ವಾರ ಠಿಕಾಣೆ, ತೊಂದರೆಯಾದರೆ ಮರುದಿನವೆ ಮುಂದಿನ ಊರು. ಹೀಗೆ ಮುನರಾಬಾದದ ಹುಲಿಗೆಮ್ಮದೇವಿಯ ಗುಡಿಯಿಂದ ಹಿಡಿದು ಧಾರವಾಡ, ನರಗುಂದ, ನವಲಗುಂದ, ರೋಣ, ಹೊಳೆ ಆಲೂರು, ಗಜೇಂದ್ರಗಡ, ಯಲಬುರ್ಗಾ, ಕುಷ್ಟಗಿ, ಕುಕನೂರ, ಕೊಪ್ಪಳ, ಬಿಸನ್ಹಳ್ಳಿ, ಮುಂಡರಗಿ, ಕಲಕೇರಿ ಹೀಗೆ ನೂರಾರು ಊರುಗಳಲ್ಲಿ ಈ ಧಾರ್ಮಿಕ ಜಾನಪದ ಕಲೆಯನ್ನು ಪ್ರದರ್ಶಿಸಿ ಅಲ್ಲಿಯ ಜನರ ಪ್ರೀತಿಗೆ ಪಾತ್ರಾರಾಗಿದ್ದಾರೆ.

ಈ ಕಲೆಯನ್ನು ಉಳಿಸಿ-ಬೆಳೆಸಲು ಸುಮಾರು ನಲವತ್ತು ವರುಷಗಳ ಕಾಲ ನಿರಂತರವಾಗಿ ತಿರುಗಾಟವನ್ನು ಮಾಡಿ, ಈಗ ಅದರ ಜವಾಬ್ದಾರಿಯನ್ನು ಅಳಿಯಂದಿರಿಗೆ ಒಪ್ಪಿಸಿ, ಮನೆಯಲ್ಲಿ ಮೀನಿನ ಬಲೆಯನ್ನು ಹೆಣೆಯುತ್ತ ಅವುಗಳನ್ನು ಮಾರಾಟ ಮಾಡುತ್ತ ಕಾಲಕಳೆಯುತ್ತಿದ್ದಾರೆ.

## ಯಲ್ಲಪ್ಪ ಮಾರೆಪ್ಪ ದುರಗಮುರ್ಗಿ

ಕರ್ನಾಟಕದ ಧಾರ್ಮಿಕ ಜನಪದ ಕಲೆಗಳಲ್ಲಿ ದುರಗಮುರ್ಗಿ ಕಲೆಯೂ ಒಂದು. ಈ ಕಲೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಹಿರಿಯ ಜನಪದ ಕಲಾವಿದ ಯಲ್ಲಪ್ಪ ದುರಗಮುರ್ಗಿಯವರು, ಗದುಗಿನ ರಾಜೀವಗಾಂಧಿ ನಗರದ

ನಿವಾಸಿಗಳು. ತಂದೆ ಮಾರೆಪ್ಪ, ತಾಯಿ ಮಾರೆವ್ವ ಇವರ ಮಗನಾಗಿ 1946ರಲ್ಲಿ ಜನಿಸಿದರು. ಓದು-ಬರಹ ಬಾರದ ಯಲ್ಲಪ್ಪನವರು ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿಯೆ ತಂದೆಯಿಂದ ಬಳುವಳಿಯಾಗಿ ಬಂದ ದುರಗಮರ್ಗಿ ಕಲೆಯನ್ನು ಕಲಿತರು. ಮದುವೆಯಾದ ನಂತರ ಮಾರೆಪ್ಪನವರನ್ನು ಇದರಿಂದ ಮುಕ್ತಗೊಳಿಸಿ, ಹೆಂಡಿತಿಯೊಂದಿಗೆ ದುರಗವ್ವನ ಗುಡಿಯನ್ನು ಹೊತ್ತುಕೊಂಡು ಹಳ್ಳಿ-ಹಳ್ಳಿ ತಿರುಗಿ ಜೀವನ ಸಾಗಿಸಲು ಪ್ರಾರಂಭಿಸಿದರು.

ಜನಪದರು ಸಣ್ಣ-ಸಣ್ಣ ಮಕ್ಕಳಿಗೆ ಗಣಜಲಿ ಇಲ್ಲವೆ ಗೊಬ್ಬರ ಬಂದ ತಕ್ಷಣವೇ ಆ ಮಗುವಿಗೆ ಕಮರಿನ (ಎಣ್ಣೆಯಲ್ಲಿ ಕರಿದ) ಪದಾರ್ಥಗಳನ್ನು ತಿನ್ನಲು ಕೊಟ್ಟು "ದುರಗಮ್ಮ, ನಮ್ಮ ಮಕ್ಕಳ ಗೊಬ್ಬರದ ಉರಿಯು ಕಡಿಮೆಯಾಗಲಿ, ನೀನು ನಮ್ಮ ಊರಿಗೆ ಬಂದಾಗ ನಿನ್ನ ಗುಡಿಯ ಮುಂದೆ ನೀರು ಹಾಕಿ ಕಾಣಿಕೆಗಳನ್ನು ಕೊಡುತ್ತೇವೆ ತಾಯಿ" ಎಂದು ಬೇಡಿಕೊಳ್ಳುವುದು ವಾಡಿಕೆ. ಅದರಂತೆ ದೇವಿಯ ವಾರಗಳಾದ ಮಂಗಳವಾರ ಹಾಗೂ ಶುಕ್ರವಾರದಂದು ದುರಗಮರ್ಗಿಯು ದೇವರ ಗುಡಿಯನ್ನು ಹೊತ್ತುಕೊಂಡು ತನ್ನ ಹೆಂಡತಿಯೊಡಗೂಡಿ ಹಳ್ಳಿ-ಹಳ್ಳಿಗೆ ಹೋಗಿ ಪ್ರಮುಖ ಬೀದಿಯಲ್ಲಿ ಗುಡಿ ಇಳಿಸಿ, ಎಡಗೈಯಲ್ಲಿ ಗಂಟೆ, ಬಲಗೈಯಲ್ಲಿ ಈರಗೋಲನ್ನು ಹಿಡಿದು, ಹೆಂಡತಿ 'ಈರನಂ' (ಡೋಲು) ಬಾರಿಸುವ ತಾಳಕ್ಕೆ ತಕ್ಕಂತೆ ಗುಡಿಯ ಮುಂದೆ ಕುಣಿಯುತ್ತ, ಈರಗೋಲಿನಿಂದ ನಾಲ್ಕೈದು ಸಾರೆ ಮೈಗೆ ಹೊಡೆದುಕೊಳ್ಳುತ್ತ ಆ ಕಡೆ ಈ ಕಡೆ ತಿರುಗುತ್ತಾನೆ. ಹೀಗೆ ಮಾಡುವಷ್ಟರಲ್ಲಿ ಹಳ್ಳಿಯ ಹೆಣ್ಣು ಮಕ್ಕಳು ತಂಬಿಗೆಯಲ್ಲಿ ನೀರನ್ನು ತಂದು ಗುಡಿಯ ಮುಂದೆ ಹಾಕುತ್ತಾರೆ. ಭಕ್ತಿಯಿಂದ ಮರದಲ್ಲಿ ಜೋಳವನ್ನು ಕಾಣಿಕೆಯಾಗಿ ತಂದು ಇಡುತ್ತಾರೆ. ಭಕ್ತರು ಮರದಲ್ಲಿ ತಂದ ಜೋಳವನ್ನು ತನ್ನ ಜೋಳಿಗೆಗೆ ಹಾಕಿಕೊಂಡು, ಒಂದು ಮರವನ್ನು ಉಳಿಸಿ ಅದನ್ನು ಎದ್ದು ನಿಂತು ಈರನಂ (ಡೋಲಿನ) ಗತ್ತಿಗೆ ಕುಣಿಯುತ್ತ ಆ ಕಡೆ ಈ ಕಡೆ, ಮೇಲೆ ಮತ್ತು ಕೆಳಗೆ ತಿರುಗಿಸುತ್ತ ಹೊರಳಿಸುತ್ತ ಮರದಲ್ಲಿನ ಜೋಳ ಬೀಳದಂತೆ ಕೈಚಳಕವನ್ನು ತೋರಿಸಿ, ನಂತರ ಪ್ರತಿ ಮರಕ್ಕೆ ದೇವಿಯ ಭಂಡಾರವನ್ನಿಟ್ಟು ಹರಕೆಯನ್ನು ಕೊಟ್ಟು ಮುಂದಿನ ಓಣಿಗೆ ಹೋಗುವುದು ಸಂಪ್ರದಾಯ. ಕೆಲವೊಮ್ಮೆ ದೇವಿಯ ಗುಡಿಯನ್ನು ಹೊತ್ತುಕೊಂಡು ಹೆಣ್ಮಗಳಷ್ಟೆ ಬರುವುದುಂಟು. ಹಾಗೆ ಒಬ್ಬಳೆ ಬಂದಾಗ ಈರನಂ ಬಾರಿಸುತ್ತ ಮನೆ-ಮನೆಗೆ ಹೋಗಿ ಭಿಕ್ಷೆ ಪಡೆದು ಹೋಗುತ್ತಾಳೆ.

ಪರಂಪರಾಗತವಾಗಿ ಬಂದ ಧಾರ್ಮಿಕ ಜನಪದ ಕಲೆಯನ್ನು ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿಯೇ ವೃತ್ತಿಯನ್ನಾಗಿ ಸ್ವೀಕರಿಸಿ ಬಳ್ಳಾರಿ, ಕೊಪ್ಪಳ,

ಗದಗ, ಹಾವೇರಿ, ಧಾರವಾಡ, ಬಾಗಲಕೋಟಿ ಮುಂತಾದ ಜಿಲ್ಲೆಗಳ ಪ್ರತಿಯೊಂದು ಊರು-ಕೇರಿಗಳಲ್ಲಿ ದುರಗಮುರ್ಗಿಯ ಆಟವನ್ನು ಪ್ರದರ್ಶಿಸಿ ಜನರ ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಕೆಲವೊಂದು ಊರುಗಳಿಗೆ ಬಹಳ ದಿನಗಳ ನಂತರ ಹೋದಾಗ ಆತ್ಮೀಯತೆಯಿಂದ "ಯಾಕ್ರಿ ಬಾಳದಿವಸದ ಮ್ಯಾಲ ಬಂದ್ರೆಲ್ಲಾ, ಆರ ತಿಂಗಳಿಗೆ ಒಮ್ಮೆರ ಬಂದ ಹೋಗ್ರಿ" ಎಂದು ಹೇಳುತ್ತಿದ್ದರಂತೆ ಇದರಿಂದ ದುರಗಮುರ್ಗಿ ಯಲ್ಲಪ್ಪನವರು ನಮ್ಮ ಹಳ್ಳಿಯ ಜನರಿಗೆ ಎಷ್ಟು ಅಚ್ಚು-ಮೆಚ್ಚು ಎಂಬುದು ಸ್ಪಷ್ಟವಾಗುತ್ತದೆ.

ದುರಗಮುರ್ಗಿ ಯಲ್ಲಪ್ಪನವರು ಈ ಕಲೆಯನ್ನು ತಮ್ಮ ಮಗನಾದ ಹುಸೇನಪ್ಪನಿಗೂ ಕಲಿಸಿದ್ದಾರೆ. ಯುವಕನಾದ ಹುಸೇನಪ್ಪನು ಈ ಕಲೆಯ ಬಗ್ಗೆ ಆಸಕ್ತಿಯುಳ್ಳವನಾಗಿದ್ದಾನೆ. ತಂದೆ-ಮಕ್ಕಳಿಬ್ಬರು ಸೇರಿ ಈ ಕಲೆಯನ್ನು ಉಳಿಸಿ-ಬೆಳೆಸಲು ಪ್ರಯತ್ನಿಸುತ್ತಿದ್ದಾರೆ. ಅಲ್ಲದೆ ಕನ್ನಡದ ಹಲವಾರು ಚಿತ್ರಗಳ ಚಿತ್ರೀಕರಣದಲ್ಲಿ ಭಾಗವಹಿಸಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಇಂಥ ಧಾರ್ಮಿಕ ಜನಪದ ಕಲೆಯನ್ನು ಉಳಿಸಿ-ಬೆಳೆಸಲು ಹಾಗೂ ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿರುವ ಅರವತ್ತರ ಹರೆಯದ ಯಲ್ಲಪ್ಪನವರ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಅಕಾಡೆಮಿಯು 2008ರಲ್ಲಿ "ಜನಪದ ಕಲಾವಿದ" ಪ್ರಶಸ್ತಿ ನೀಡಿ ಗೌರವಿಸಿದೆ.

## ಲಕ್ಷ್ಮವ್ವ ಗಿರಿಯಪ್ಪ ಗೌಳಿ

ಸೋಬಾನೆಯ ಲಕ್ಷ್ಮಮ್ಮನೆಂದೆ ಜನಪ್ರಿಯತೆಯನ್ನು ಪಡೆದ ಲಕ್ಷ್ಮಮ್ಮ ಗೌಳಿಯವರು ಗದುಗಿನ ಲಕ್ಕುಂಡಿ ಗ್ರಾಮದವರು. ತಂದೆ ಬಸಪ್ಪ, ತಾಯಿ ನೀಲಗಂಗಮ್ಮನವರ ಮಗಳಾಗಿ 1951ರಲ್ಲಿ ನಾಗಸಮುದ್ರದಲ್ಲಿ ಜನಿಸಿದರು. ನಾಲ್ಕನೆಯ ತರಗತಿಯವರಗೆ ಓದಿದ ನಂತರ ತಾಯಿಗೆ ನೆರವಾಗಿ ಮನೆಗೆಲಸ ಕಲಿಯಲೆಂದು ಶಾಲೆಯನ್ನು ಬಿಡಿಸಿದರು. ಮನೆಗೆಲಸದ ಜೊತೆ-ಜೊತೆಯಲ್ಲಿಯೆ ತಾಯಿ ನೀಲಗಂಗಮ್ಮನವರು ತಮಗೆ ಬರುವ ಎಲ್ಲ ಸೋಬಾನಪದ ಹಾಗೂ ಬೀಸುಕಲ್ಲಿನ ಪದಗಳನ್ನು ಹೇಳಿಕೊಟ್ಟರು. ತಾಯಿಯಂತೆ ಸುಶ್ರಾವ್ಯವಾಗಿ ಹಾಡುವುದನ್ನು ಕಲಿತರು. ಕುರುಬ ಸಮುದಾಯಕ್ಕೆ ಸೇರಿದ ಇವರು ತಮ್ಮ ಹಳ್ಳಿಯಲ್ಲಿ ನಡೆಯುತ್ತಿದ್ದ ಮದುವೆಯ ಸಮಾರಂಭಕ್ಕೆ ಹಾಡಲು ಹೋಗುತ್ತಿದ್ದರು. ಗಿರಿಯಪ್ಪ ಗೌಳಿಯವರನ್ನು ಮದುವೆಯಾದ ನಂತರ ಲಕ್ಕುಂಡಿಗೆ ಬಂದರು.

ಸುಶ್ರಾವ್ಯವಾಗಿ ಹಾಡುತ್ತಿದ್ದ ಲಕ್ಷ್ಮಮ್ಮನವರ ಕಲೆಗೆ ಗಂಡನ ಮನೆಯಲ್ಲಿಯೂ

ಮನ್ನಣೆ ದೊರೆಯಿತು. ಊರಲ್ಲಿ ನಡೆಯುವ ಮದುವೆಯು ಹಾಗೂ ಶುಭಸಮಾರಂಭಗಳಿಗೆ ಹಾಡಲು ಇವರನ್ನು ಆಹ್ವಾನಿಸುತ್ತಿದ್ದರು. ಸಂಗಡಿಗರಾದ ಸುಲೋಚನಾ ಅರಸಿದ್ಧಿ (ಮುಮ್ಮೇಳ), ಪ್ರೇಮವ್ವ ಹನವಾಳ ಮತ್ತು ಗಂಗಮ್ಮ ಹುಬ್ಬಳ್ಳಿಯವರೊಂದಿಗೆ ವಿಳ್ಯೆವ ಕೊಟ್ಟು ಕರೆದವರ ಮನೆಗೆ ಹೋಗಿ ಸೋಬಾನೆ ಪದಗಳನ್ನು ಹಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಮದುವೆಯ ಸಮಾರಂಭದಲ್ಲಿ ಮೂರುದಿನಗಳಿಂದ ನಿರಂತರವಾಗಿ ವಿವಿಧ ದೇವತಾಕಾರ್ಯಗಳು ನಡೆಯುತ್ತವೆ. ಲಗ್ನ ಕಟ್ಟಿಸುವ ಕಾರ್ಯದಿಂದಲೆ ಮದುವೆಯ ಕಾರ್ಯಕ್ರಮಗಳು ಪ್ರಾರಂಭಗೊಂಡು ಒಳಕಲ್ಲು ಪೂಜೆ, ಬೀಸುವಕಲ್ಲು ಪೂಜೆ, ಸಾಂವಿಗಿಮಣಿ ಪೂಜೆ, ಲಕ್ಷ್ಮಿ ಪೂಜೆ ಹಾಗೂ ಮದುವೆಯ ಸೀರೆಗಳ (ಜವಳಿ) ಪೂಜೆಯನ್ನು ಮಾಡುತ್ತಾರೆ. ಅಂಥ ಸಂದರ್ಭದಲ್ಲಿ ತಕ್ಕಂತ ಸೋಬಾನೆ ಪದಗಳನ್ನು ಹಾಡಬೇಕು

**ಬಿದರು ಬೆಟ್ಟದ ಮೇಲೆ**
**ಚದುರಂಗದ ಹೆರಳ್ವಾಕಿ। ಮದನಾರಿಗೆ**
**ಒಂದೆರಡು ಒನಕಿ ಸುವ್ವಿ ಸುವ್ವಿ ಸುವ್ವಾಲೆ॥**

ಹೀಗೆ ಒಳಕಲ್ಲು ಪೂಜೆಯವೇಳೆ ಹಾಡಿದರೆ, ಬೀಸುಕಲ್ಲಿನ ಪೂಜೆಗೆ

**ಬ್ಯಾಳಿ ಕಲ್ಲಿಡಾಕ ಭದ್ರ್ಯಾರ ಕರಸಿರಿ**
**ಮುದ್ದ ಮಾಳಗಿ ಮನಿಯ। ತಂಗೆವ್ವನ**
**ಬ್ಯಾಳಿ ಕಲ್ಲಿಡಾಕ ಕರಸಿರಿ। ಸುವ್ವಿ ಸುವ್ವಿ ಸುವ್ವಾಲೆ**

ಎಂದು ಬೇರೆ ಬೇರೆ ಹಂತಗಳಲ್ಲಿ ಹಾಡುತ್ತ ಹೋಗುತ್ತಾರೆ. ಹೀಗೆ ಒಂದು ದಿನದ ಕಾರ್ಯಕ್ರಮಗಳು ಮುಗಿದರೆ ಮರುದಿನ ಹಂದರಕ್ಕೆ ಹಂದರ ತಪ್ಪಲು ತರುವುದು, ಹಾಲಗಂಬ ತರುವುದು, ಗಂಗೆ ಪೂಜೆ, ಬಾಸಿಂಗ ತರುವುದು, ತಾಳಿ ತರುವುದು, ಎಣ್ಣೆ ಬೀರುವುದು ಹೀಗೆ ನಿರಂತರವಾಗಿ ನಡೆಯುವ ಮದುವೆಯ ಪ್ರತಿಯೊಂದು ಕಾರ್ಯಕ್ಕೆ ತಕ್ಕಂತೆ ಹಾಡುವುದು ಮುಂದುವರೆಯುತ್ತಿರುತ್ತದೆ. ಇಂಥ ಎಲ್ಲ ಕಾರ್ಯಕ್ರಮಗಳಲ್ಲಿ ಬೇಸರವಿಲ್ಲದಂತೆ ಲಕ್ಷ್ಮಮ್ಮನವರು ಹಾಡುತ್ತಾರೆ.

ಲಕ್ಷ್ಮಮ್ಮನವರು ಕೇವಲ ಸೋಬಾನದ ಪದಗಳನ್ನಷ್ಟೆ ಹಾಡುವುದಿಲ್ಲ ಬದಲಾಗಿ ಬೀಸುವ ಕಲ್ಲಿನ ಪದಗಳನ್ನು ಸಹ ಅಷ್ಟೇ ಸುಂದರವಾಗಿ ಹಾಡುತ್ತಾರೆ. ಸುಮಾರು ನೂರಕ್ಕೂ ಹೆಚ್ಚು ಸೋಬಾನೆಪದ ಹಾಗೂ ಬೀಸುಕಲ್ಲಿನ ಪದಗಳನ್ನು ಬಲ್ಲ ಇವರು ನೂರಾರು ಮದುವೆಯ ಸಮಾರಂಭಗಳಲ್ಲಿ ಹಾಡಿ ಊರವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಗಿರಣಿಗಳು ಬಂದ ನಂತರ ಬೀಸುವಕಲ್ಲು ಮೂಲಿಗೆ ಬಿದ್ದ ಹಾಗೆ ಅದರ ಹಾಡುಗಳು ಸಹ ಮೂಲೆ ಹಿಡಿದಿವೆ. ಹಾಗೆಯೇ ಯಾಂತ್ರಿಕ ಯುಗ ಪ್ರಾರಂಭವಾಗಿ ಮದುವೆಯ ಕಾರ್ಯಕ್ರಮಗಳು ಸಹ ಯಾಂತ್ರಿಕವಾಗಿ ಮೂರು ದಿನಗಳವರೆಗೆ ನಡೆಯುತ್ತಿದ್ದ ಮದುವೆ ಈಗ ಕೇವಲ ಮೂರು ತಾಸಿಗೆ ಬಂದುದರಿಂದ ಸೋಬಾನದ ಹಾಡುಗಳು ಸಹ ಮಾಯವಾಗುತ್ತಿರುವ ಈ ಕಾಲದಲ್ಲಿ ಲಕ್ಷ್ಮವ್ವನವರು ಮತ್ತು ಅವರ ಸಂಗಡಿಗರು ಈ ಹಾಡುಗಳನ್ನು ಉಳಿಸಲು ಪ್ರಯತ್ನಿಸುತ್ತಿದ್ದಾರೆ. ಓಣಿಯ ಯುವತಿಯರಿಗೆ ತಮ್ಮ ಬಿಡುವಿನ ವೇಳೆಯಲ್ಲಿ ಈ ಹಾಡುಗಳನ್ನು ಕಲಿಸುತ್ತಿದ್ದಾರೆ. ಇವರ ಪ್ರಯತ್ನದಿಂದ ಈ ಹಾಡುಗಳು ಉಳಿದು, ಕಲೆ ಬೆಳೆದರೆ ಸಾಕು, ಸುಮಾರು ನಲವತ್ತು ವರುಷಗಳಿಂದ ನಿರಂತರವಾಗಿ ಹಾಡುತ್ತಾ ಬಂದ ಈ ಜನಪದ ಕಲಾಸಿರಿಯ ಶ್ರಮಸಾರ್ಥಕವಾಗುತ್ತದೆ.

# ಸುಲೋಚನಾ ವಿಶ್ವನಾಥ ಅರಸಿದ್ಧಿ

ಗದುಗಿನ ಲಕ್ಕುಂಡಿ ಗ್ರಾಮದವರಾದ ಸುಲೋಚನಾ ಅರಸಿದ್ಧಿಯವರು 1952ರಲ್ಲಿ ಜನಿಸಿದರು. ತಂದೆ ವಿಶ್ವನಾಥ, ತಾಯಿ ಟಾಕುಬಾಯಿ. ಸಾವಜಿ ಸಮುದಾಯಕ್ಕೆ ಸೇರಿದ ಇವರು ನಾಲ್ಕನೆಯ ತರಗತಿಯವರೆಗೆ ಓದಿದ್ದಾರೆ. ದೊಡ್ಡಮ್ಮ ಪುನವಂತಬಾಯಿ ಅವರಿಂದ ಜೋಗುಳಪದ, ಸೋಬಾನಪದ ಮತ್ತು ಬೀಸುಕಲ್ಲಿನ ಪದಗಳನ್ನು ಕಲಿತುಕೊಂಡಿದ್ದಾರೆ. ಹಳ್ಳಿಯಲ್ಲಿ ನಡೆಯುವ ಶುಭಕಾರ್ಯಗಳಿಗೆ ಸಂಗಡಿಗರಾದ ಲಕ್ಷ್ಮಮ್ಮ, ಗಂಗಮ್ಮ ಮತ್ತು ಪ್ರೇಮವ್ವನವರೊಂದಿಗೆ ಹೋಗಿ ಹಾಡಿ ಬರುತ್ತಾರೆ.

ಸುಲೋಚನಾ ಅವರು ಜೋಗುಳ ಹಾಡುಗಳನ್ನು ತುಂಬಾ ಸುಶ್ರಾವ್ಯವಾಗಿ ಹಾಡುತ್ತಾರೆ. ಮಗುವಿನ ನಾಮಕರಣ ಸಂದರ್ಭದಲ್ಲಿ ಜೋಗುಳದ ಹಾಡುಗಳನ್ನು ಹಾಡುವುದು ಸಂಪ್ರದಾಯ, ಹೀಗಾಗಿ ಹಳ್ಳಿಯಲ್ಲಿ ನಡೆಯುವ ನಾಮಕರಣ ಸಮಾರಂಭಗಳಿಗೆಲ್ಲ ವಿಶೇಷವಾಗಿ ಸುಲೋಚನಾ ಅವರಿಗೆ ವೀಳ್ಯವ ನೀಡಿ ಹಾಡಲು ಆಹ್ವಾನಿಸುತ್ತಾರೆ. ಆಗ ತಮ್ಮ ಸಂಗಡಿಗರೊಂದಿಗೆ ಅಲ್ಲಿಗೆ ಹೋಗಿ ಹೆಸರಿಡುವ ಕಾರ್ಯಕ್ರಮವು ಮುಗಿಯುವವರೆಗೆ ಇಂಪಾಗಿ ಜೋಗುಳದ ಹಾಡುಗಳನ್ನು ಹಾಡಿ ಸಮಾರಂಭಕ್ಕೆ ಮೆರಗನ್ನು ತರುತ್ತಾರೆ.

ಮದುವೆಯ ಸಮಾರಂಭಗಳಿಗೂ ಆಹ್ವಾನಿವತ್ತಾಗ ಹೋಗುತ್ತಾರೆ. ಅಲ್ಲಿ ನಡೆಯುವ ಎಲ್ಲ ಶುಭಕಾರ್ಯಗಳಲ್ಲೂ ಪಾಲ್ಗೊಳ್ಳುತ್ತಾರೆ. ಒಳಕಲ್ಲು ಪೂಜೆ, ಲಕ್ಷ್ಮೀ ಪೂಜೆ ಕಾಲಕ್ಕೆ

ತುಂಬಿದ ಕೊಡದಾಗ ನಿಂಬಿ ಹಣ್ಣ ಹಾಕಿ
ಸೂರ್ಯ ಪ್ರಕಾಶರಿಗೆ ಸಾರಿ ಬಾರವ್ವ॥ ತಾಯಿ
ಕರೆದು ಬಾರವ್ವ ಲಕ್ಷ್ಮೀ ಸಾಲ ಮುತ್ತೈದರನ॥

ಬಾಳಿಯ ಎಲಿಯಾಗ ಹೋಳಿಗಿ ಎಡಿ ಮಾಡಿ
ವಿಷ್ಣು ಬ್ರಹ್ಮರಿಗೆ ಶ್ರೇಷ್ಟವಾದಾಕೆವ್ವ॥ ನೀನು
ಕರೆದು ಬಾರವ್ವ ಲಕ್ಷ್ಮಿ ಬಳಗದ ಮುತ್ತೈದರನss

ಎಂಬಂಥ ಇಂಪಾದ ಹಾಡುಗಳನ್ನು ತಮ್ಮ ಸಂಗಡಿಗರೊಂದಿಗೆ ಹಾಡುತ್ತ ಮದುವೆಯ ಸಮಾರಂಭಕ್ಕೆ ನಾಂದಿಹಾಕುತ್ತಾರೆ. ಇದರ ನಂತರ ನಡೆಯುವ ಕಾರ್ಯಗಳಾದ ವೀಳ್ಯದ ಕಾರ್ಯ (ನಿಶ್ಚಿತಾರ್ಥ), ಇದರ ಮರುದಿನ ಅರಿಸಿಣ ಕಾರ್ಯ, ನಂತರ ಬೀಗರನ್ನು ಮದುವೆ ಹಂದರಕ್ಕೆ ಕರೆ ತರುವುದು, ಮದುಮಕ್ಕಳನ್ನು ಹಂದರಕ್ಕೆ ಕರೆ ತರುವುದು, ಅಕ್ಕಿಕಾಳು ಬಿದ್ದನಂತರ ಗೋಧಿ ಉಡಕ್ಕಿ ಹಾಕುವುದು ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳು ಸತತ ಮೂರು ದಿನಗಳಿಂದ ನಡದೇ ಇರುತ್ತವೆ. ಈ ಎಲ್ಲ ಸಂದರ್ಭಗಳಲ್ಲಿಯೂ ಆರತಿ ಹಿಡಿದ ಐಮುತ್ತೈದೆರ ಜೊತೆಯಲ್ಲಿ ಸದಾಕಾಲ ಇದ್ದು ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಹಾಡಿ ಶುಭಕೋರುವದು ಈ ಸೋಬಾನೆ ತಂಡದವರ ಕೆಲಸ. ಸತತ ಮೂರು ದಿನಗಳವರೆಗೆ ನಡೆಯುವ ಈ ಕಾರ್ಯಕ್ರಮಗಳಿಗೆ ಸುಲೋಚನಾ ಅವರು ತಮ್ಮ ಸಂಗಡಿಗರೊಂದಿಗೆ ಬೇಸರವಿಲ್ಲದೆ ಎಡೆಬಿಡದೆ ಹಾಡುತ್ತಾರೆ. ಸಂದರ್ಭಕ್ಕೆ ತಕ್ಕಂತೆ ಹಾಡುವ ಇವರ ಹಾಡುಗಳನ್ನು ಕೇಳುವುದೆ ಒಂದು ಸಂಭ್ರಮ. ಹೀಗೆ ಇವರ ಸೋಬಾನೆ ಪದಗಳಿಂದ ಮದುವೆ ಸಮಾರಂಭಕ್ಕೂ ಒಂದು ಮೆರಗು ಬರುತ್ತದೆ. ಸಾಕಷ್ಟು ಜನಮೆಚ್ಚುಗೆ ಪಡೆದ ಇವರು ಸುಮಾರು ನೂರರಿಂದ-ನೂರೈವತ್ತು ಹಾಡುಗಳನ್ನು ಹಾಡಬಲ್ಲವರಾಗಿದ್ದಾರೆ.

ಲಕ್ಕುಂಡಿ ಗ್ರಾಮದ ಮದುವೆಯ ಸಮಾರಂಭಗಳಿಗಷ್ಟೆ ಇವರ ಸೋಬಾನೆ ಹಾಡುಗಳು ಮೀಸಲಾಗಿಲ್ಲ, ಬದಲಾಗಿ ವೀಳ್ಯವಕೊಟ್ಟು ಆಹ್ವಾನಿಸುವ ಅಕ್ಕಪಕ್ಕದ ಊರುಗಳಿಗೂ ಹೋಗಿ ಸೋಬಾನೆ ಪದಗಳನ್ನು ಹಾಡಿ, ಉಡುಗೊರೆಗಳನ್ನು ಸ್ವೀಕರಿಸಿದ್ದಾರೆ. ಹೀಗೆ ಸೋಬಾನದ ಪದಗಳಿಂದಲೂ, ಜೋಗುಳದ ಪದಗಳಿಂದಲೂ ಜನಪ್ರಿಯತೆಯನ್ನು ಪಡೆದ ಸುಲೋಚನಾ ಅವರು, ಈ ಕಲೆಯ ಉಳಿವಿಗಾಗಿ ಲಕ್ಕುಂಡಿಯಲ್ಲಿ ಅಕ್ಕಮಹಾದೇವಿ ಹೆಸರಿನಲ್ಲಿ ಒಂದು ಮಹಿಳಾ ಮಂಡಳವನ್ನು ಕಟ್ಟಿಕೊಂಡು, ಅಲ್ಲಿ ಬರುವ ಮಹಿಳೆಯರಿಗೆ-ವಿಶೇಷವಾಗಿ ಯುವತಿಯರಿಗೆ ಈ

ಹಾಡುಗಳನ್ನು ಕಲಿಸಿಕೊಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಇವರ ಈ ಶ್ರಮದಲ್ಲಿ ಇವರ ತಂಡದವರ ಸಹಕಾರವು ತುಂಬಾ ಇದೆ. ಹೀಗೆ ಈ ಜನಪದ ಕಲೆಗಳ ಉಳಿವಿಗಾಗಿ ಶ್ರಮಿಸುತ್ತಿರುವ ಇವರಿಗೆ ಸೂಕ್ತ ಪ್ರೋತ್ಸಾಹ ಸಿಗುವುದು ಅಗತ್ಯ.

## ಈರಣ್ಣ ವಿರುಪಾಕ್ಷಪ್ಪ ಐಲಿ

'ಭಕ್ತ ಮಾರ್ಕಂಡೇಯ'ದ ಕರಾಳನ ಪಾತ್ರ ಒಂದನ್ನೆ ಇಪ್ಪತ್ತೈದು–ಮೂವತ್ತು ಸಲ ನಿರ್ವಹಿಸಿದ್ದರಿಂದ ಜನಮನದಲ್ಲಿ 'ಕರಾಳ'ನೆಂದೆ ಪ್ರಸಿದ್ಧರಾದ ಈರಣ್ಣನವರು 'ಹೊಸ ಬನಶಂಕರಿ ದೊಡ್ಡಾಟ ಮೇಳ'ದ ಹಿರಿಯ ಜನಪದ ಕಲಾವಿದರು. ತಂದೆ ವಿರುಪಾಕ್ಷಪ್ಪ, ತಾಯಿ ಚೌಡಮ್ಮನವರ ಮಗನಾಗಿ 1943 ಫೆಬ್ರವರಿ 15ರಂದು ಜನಿಸಿದರು. ಐದನೆಯ ತರಗತಿಯವರೆಗೆ ಓದಿ ಮನೆಯ ತೊಂದರೆಯಿಂದ ಓದನ್ನು ಮುಂದುವರೆಸದೆ ನೇಕಾರಿಕೆಯ ಕೆಲಸಕ್ಕೆ ಸೇರಿ ಅದನ್ನೆ ವೃತ್ತಿಯನ್ನಾಗಿ ಮಾಡಿಕೊಂಡರು. ಕುರುವಿನಶೆಟ್ಟಿ ಸಮುದಾಯಕ್ಕೆ ಸೇರಿದ ಇವರು ತಮ್ಮ ಹದಿಮೂರನೆಯ ವಯಸ್ಸಿನಲ್ಲಿಯೆ ಜನಪದ ರಂಗ ಭೂಮಿಯನ್ನು ಪ್ರವೇಶಿಸಿದರು. ಇವರ ಮನೆಯ ಪಕ್ಕದ ಬನಶಂಕರಿಯ ಗುಡಿಯ ಬಣ್ಣದ ಮನೆಯಲ್ಲಿ ಪ್ರತಿದಿನ ರಾತ್ರಿ ಮತ್ತು ಒಮ್ಮೊಮ್ಮೆ ಹಗಲು ಹೊತ್ತಿನಲ್ಲಿ 'ವೀರ ಅಭಿಮನ್ಯು ಕಾಳಗ' ಆಟದ ತಾಲೀಮು ನಡೆಯುತ್ತಿತ್ತು. ಆ ವೇಳೆಯಲ್ಲಿ ಯುವಕನಾಗಿದ್ದ ಈರಣ್ಣನವರು ಪ್ರತಿದಿನವು ತಾಲೀಮು ನೋಡಲಿಕ್ಕೆ ಹೋಗುತ್ತಿದ್ದರು. ಒಂದು ದಿನ ಕಥೆಗಾರರಾದ ರಂಗಪ್ಪ ನಾರಾಯಣ ಕೇರಿಯವರಿಗೆ "ನಾನೂ ಪಾತ್ರ ಮಾಡುತ್ತೇನೆ, ನನಗೂ ಸಣ್ಣ ಪಾತ್ರವನ್ನು ಕೊಡಿರಿ" ಎಂದು ಕೇಳಿದಾಗ, ಇವನ ಆಸಕ್ತಿಯನ್ನು ಕಂಡ ರಂಗಪ್ಪನವರು ನಿರಾಕರಿಸಲು ಮನಸ್ಸು ಬರದೆ ಕೇವಲ ಎಂಟು ಮಾತಿನ ಲಕ್ಷ್ಮಣ ಕುಮಾರನ ಪಾತ್ರವನ್ನು ಕೊಟ್ಟರು. ತಾನು ಬಯಸಿದಂತೆ, ಸಿಕ್ಕ ಪಾತ್ರವನ್ನು, ಪಾತ್ರದ ಮಾತುಗಳನ್ನು ಮತ್ತು ಕುಣಿತ, ಹಾವಭಾವಗಳನ್ನು ಚೆನ್ನಾಗಿ ಕಲಿತು ಮನೋಜ್ಞವಾಗಿ ಅಭಿನಯಿಸಿ ಜನಮೆಚ್ಚುಗೆಯನ್ನು ಪಡೆದನು. ಅಂದಿನಿಂದ ಇವರು ಮೇಳದ ಖಾಯಂ ಪಾತ್ರಧಾರಿ ಸದಸ್ಯರಾದರು.

ಗದಗ–ಬೆಟಗೇರಿಯ 'ಹೊಸ ಬನಶಂಕರಿ ಮೇಳ'ದವರು ಪ್ರಯೋಗಿಸುತ್ತಿದ್ದ ಪ್ರತಿಯೊಂದು ದೊಡ್ಡಾಟಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ ಕೀರ್ತಿ ಇವರದು. 'ದಕ್ಷಯಜ್ಞ'ದಲ್ಲಿ ನಂದಿಯ ಪಾತ್ರವನ್ನು ಹದಿಮೂರು ಸಲ, 'ಗಿರಿಜಾ ಕಲ್ಯಾಣ'ದಲ್ಲಿ ತಾರಕಾಸುರನಾಗಿ ಇನ್ನು ಕೆಲವು ಸಲ ಹೇಮಂತ ರಾಜನಾಗಿ, 'ಲಕ್ಷಣಿ ಕಲ್ಯಾಣ'ದಲ್ಲಿ ಕರ್ಣ ಇನ್ನು ಕೆಲವು ಸಲ ಬಾಲಚಂದ್ರನಾಗಿ, 'ರಾಮಾಯಣ'ದಲ್ಲಿ

ತ್ರಿಸರಾಸುರ, ಮತ್ತೊಮ್ಮೆ ಕುಂಬಕರ್ಣ ಅಥವಾ ರಾವಣನ ಪಾತ್ರ ಹೀಗೆ ವಿವಿಧ ಬಗೆಯ ಪಾತ್ರಗಳನ್ನು ಮಾಡಿದ ಅನುಭವ ಇವರದು. ಆದರೆ ಇವರಿಗೆ ಹೆಸರು ತಂದುಕೊಟ್ಟ ಪಾತ್ರವೆಂದರೆ 'ಭಕ್ತ ಮಾರ್ಕಂಡೇಯ'ದಲ್ಲಿನ ಕರಾಳನ ಪಾತ್ರ.

ದೊಡ್ಡಾಟದಲ್ಲಿ ಇವರ ಪಾತ್ರಗಳು ಆಗಾಗ ಬದಲಾಗುತ್ತಿದ್ದವೂ 'ಭಕ್ತ ಮಾರ್ಕಂಡೇಯ'ದಲ್ಲಿನ ಕರಾಳನ ಪಾತ್ರ ಮಾತ್ರ ಯಾವತ್ತು ಬದಲಾಗುತ್ತಿರಲಿಲ್ಲ. ರಂಗಭೂಮಿಯ ಮೇಲೆ ಇವರ ಕರಾಳನ ಪಾತ್ರ ಬಹಳಷ್ಟು ಜನ ಮೆಚ್ಚುಗೆಯನ್ನು ಪಡೆದಿದೆ. ಆಟವನ್ನು ಪ್ರದರ್ಶಿಸುತ್ತಿರುವಾಗ 'ಕರಾಳ'ನ ಪಾತ್ರಧಾರಿ ಈರಣ್ಣನವರು ರಂಗ ಪ್ರವೇಶಿಸಿ ಸಭಾದ ಮಾತನ್ನು ಹೇಳಿ ಹಿಮ್ಮೇಳದವರ ಬೋಲುಗಳಿಗೆ ತಕ್ಕಂತೆ ಕುಣಿದು 'ಹುರ್ ಹಲಲಽಽ' ಎಂದು ಮಾತುಗಳನ್ನು ಹೇಳುತ್ತಿದ್ದರೆ ಸಾಕು ಪ್ರೇಕ್ಷಕರು ಬೆಪ್ಪು ಬೆರಗಾಗಿ ಇವರ ಪಾತ್ರವನ್ನು ವೀಕ್ಷಿಸುತ್ತಿದ್ದರು. ಇವರ ಇನ್ನೊಂದು ಅಚ್ಚು-ಮೆಚ್ಚಿನ ಪಾತ್ರವೆಂದರೆ 'ಲಕ್ಷಣಿ ಕಲ್ಯಾಣ'ದಲ್ಲಿಯ ಕರ್ಣನ ಪಾತ್ರ. ಈ ಪಾತ್ರವನ್ನು ನಿರ್ವಹಿಸುತ್ತಿರುವಾಗ ರಂಗದ ಮೇಲೆ ಬಂದು "ತೈ ತೈ ತೈ ದಿತ್ತಯ್ಯ" ಎಂಬ ಬೋಲುಗಳಿಗೆ ಬೇಸರವಿಲ್ಲದೆ, ದಣಿವಿಲ್ಲದೆ ಕುಣಿಯುತ್ತಿದ್ದರು.

ಹಿರಿಯ ಜನಪದ ಕಲಾವಿದರಾದ ಇವರು ಪಾತ್ರ ಮಾಡಿದ 'ತ್ರಿಸರಾಸುರ ಸಂಹಾರ' ಮತ್ತು 'ಭಕ್ತ ಮಾರ್ಕಂಡೇಯ' ಈ ಎರಡು ಆಟಗಳು ಧಾರವಾಡದ ಆಕಾಶವಾಣಿಯಲ್ಲಿ (1998) ಪ್ರಸಾರಗೊಂಡಿವೆ. ಮಲ್ಲಪ್ಪ ಮಹಾಂತಗೊಂಡ ಅವರ ಮುಖಂಡತ್ವದಲ್ಲಿ 'ಗಿರಿಜಾ ಕಲ್ಯಾಣ' ದೊಡ್ಡಾಟವು ಬೆಂಗಳೂರಿನ ದೂರದರ್ಶನ ಕೇಂದ್ರದಿಂದ 1997ರಲ್ಲಿ ಪ್ರಸಾರವಾಯಿತು. ಈ ಎರಡು ಸಂದರ್ಭಗಳು ಈರಪ್ಪನವರಿಗೆ ಮರೆಯಲಾಗದ ಅನುಭವವನ್ನು ತಂದು ಕೊಟ್ಟಿವೆ. ದೆಹಲಿ, ಬೆಂಗಳೂರು, ಧಾರವಾಡ, ಉಡುಪಿ, ಹೊರನಾಡು, ಧರ್ಮಸ್ಥಳ ಮುಂತಾದ ನಗರ ಪಟ್ಟಣಗಳಲ್ಲಿ ಮೇಳದ ಆಟಗಳನ್ನು ಪ್ರಯೋಗಿಸಿ ಜನಮೆಚ್ಚುಗೆಯನ್ನು ಪಡೆದ ಹೆಮ್ಮೆ ಇವರಿಗಿದೆ. ಇದಲ್ಲದೆ ಜಾತ್ರಾಮಹೋತ್ಸವ ಹಾಗೂ ಹಂಪಿ, ಲಕ್ಕುಂಡಿ ಉತ್ಸವಗಳಲ್ಲಿ ತಮ್ಮ ದೊಡ್ಡಾಟಗಳನ್ನು ಪ್ರದರ್ಶಿಸಿ ಜನಪ್ರಿಯತೆಯನ್ನು ಪಡೆದಿದ್ದಾರೆ.

ಈರಣ್ಣನವರು ತಮ್ಮ ಅರವತ್ತನೆಯ ವಯಸ್ಸಿನಲ್ಲಿಯೂ ಬೇಸರವಿಲ್ಲದೆ, ದೊಡ್ಡಾಟದ ಕುಣಿತ ಕಡಿಮೆ ಇರುವ ಯಮಧರ್ಮ, ಈಮಂತರಾಜನಂತಹ ಪಾತ್ರಗಳನ್ನು ಈಗಲೂ ನಿರ್ವಹಿಸುತ್ತಿದ್ದಾರೆ. ಅಷ್ಟೆ ಅಲ್ಲದೆ ದೊಡ್ಡಾಟ ಕಲೆಯನ್ನು ಉಳಿಸಿ-ಬೆಳೆಸುವ ಮಹದಾಸೆಯಿಂದ ಯುವಕಲಾವಿದರಿಗೆ ರಂಗ ತರಬೇತಿಯನ್ನು ಸಹ ನೀಡುತ್ತಿದ್ದಾರೆ. ಜನಪದ ರಂಗಭೂಮಿಯ ಅಪಾರ ಅನುಭವವುಳ್ಳ ಈರಣ್ಣನವರಿಗೆ

ಅವರ ಪ್ರತಿಭೆಯನ್ನು ಹಾಗೂ ರಂಗಕ್ಕೆ ನೀಡಿದ ಸೇವೆಯನ್ನು ಗುರುತಿಸಿ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನಿತ್ತು ಗೌರವಿಸಿವೆ.

## ಈಶ್ವರಪ್ಪ ಬಸಪ್ಪ ಕುರ್ತಕೋಟಿ

ಗದಗ ಜಿಲ್ಲೆಯ ಹತ್ತಾರು ಹಳ್ಳಿಗಳಿಗೆ ದೊಡ್ಡಾಟದ ಕಥೆಗಾರರೆಂದು ಪ್ರಸಿದ್ಧರಾದ ಈಶ್ವರಪ್ಪನವರು. ರೋಣ ತಾಲೂಕಿನ ಜಕ್ಕಲಿಯಲ್ಲಿ 1927ರಂದು ತಂದೆ ಬಸಪ್ಪ, ತಾಯಿ ಶಾಂತವ್ವನವರ ಮಗನಾಗಿ ಜನಿಸಿದರು. ಜಕ್ಕಲಿಯಲ್ಲಿಯೇ ಐದನೆಯ ತರಗತಿಯವರೆಗೆ ಓದಿದ್ದಾರೆ. ತಂದೆ ಬಸಪ್ಪನವರಿಗೆ ಮಗನನ್ನು ಮುಂದೆ ಓದಿಸಲಿಕ್ಕಾಗಲಿಲ್ಲ. ಮನೆತನದ ಮುಖ್ಯ ಉದ್ಯೋಗವಾದ ಒಕ್ಕಲುತನಕ್ಕೆ ಹಚ್ಚಿದರು. ಮನೆಯಲ್ಲಿ ಸಣ್ಣ-ಪುಟ್ಟ ಒಕ್ಕಲುತನದ ಕೆಲಸಗಳನ್ನು ಮಾಡುತ್ತ ತಮ್ಮ ಬಾಲ್ಯ ಜೀವನವನ್ನು ಕಳೆದರು.

ಜಕ್ಕಲಿ ಗ್ರಾಮಕ್ಕೆ ದೊಡ್ಡಾಟವನ್ನು ಕಲಿಸಲೆಂದು ಸುರಕೋಡದಿಂದ ಬಂದಿದ್ದ ಅರಹುಣಸಿ ಅಯ್ಯಪ್ಪನವರ ಪ್ರಭಾವಕ್ಕೊಳಗಾದ ಈಶ್ವರಪ್ಪನವರು ದೊಡ್ಡಾಟಗಳಲ್ಲಿಯ ಸಣ್ಣ-ಪುಟ್ಟ ಪಾತ್ರಗಳನ್ನು ಮಾಡಲು ಪ್ರಾರಂಭಿಸಿದರು. ಯುವಕನ ಪ್ರತಿಭೆಯನ್ನು ಕಂಡುಕೊಂಡ ಅಯ್ಯಪ್ಪನವರು ಮುಂದೆ ತಾವು ಕಲಿಸುತ್ತಿರುವ "ವೀರ ಅಭಿಮನ್ಯು ಕಾಳಗ" ದೊಡ್ಡಾಟದಲ್ಲಿ ಉತ್ತರೆಯ ಪಾತ್ರವನ್ನು ಮತ್ತು 'ಯಯಾತಿ' ಯಲ್ಲಿ ದೇವಾಯಾನಿ ಪಾತ್ರವನ್ನು ಕೊಟ್ಟರು. ತೆಳ್ಳಗೆ ದುಂಡನೆಯ ಮುಖವುಳ್ಳ ಯುವಕ ಈಶ್ವರಪ್ಪನಿಗೆ ಈ ಎರಡು ಪಾತ್ರಗಳು ಚೆನ್ನಾಗಿ ಒಪ್ಪುತ್ತಿದ್ದವು. ಆಟದ ಪ್ರದರ್ಶನದ ದಿನದಂದು ಸುಂದರವಾಗಿ ಅಲಂಕಾರಗೊಂಡು, ಹಾವ-ಭಾವ, ನಯ-ನಾಜೂಕಿನಿಂದ ಮನಮೋಹಕವಾಗಿ ಅಭಿನಯಿಸಿ ಪ್ರೇಕ್ಷಕರ ಮನವನ್ನು ಗೆದ್ದರು. ಅಷ್ಟೆ ಅಲ್ಲದೆ ಗುರುಗಳಾದ ಅಯ್ಯಪ್ಪನವರ ಅಚ್ಚು ಮೆಚ್ಚಿನ ಶಿಷ್ಯರಾದರು. ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿಯೆ ಜನರ ಮೆಚ್ಚುಗೆಯನ್ನು ಪಡೆದ ಅಭಿಜಾತ ಜನಪದ ಕಲಾವಿದರೆನಿಸಿದರು.

ಅಯ್ಯಪ್ಪನವರು ಜಕ್ಕಲಿಗೆ ಬಂದು ಯಾವುದೇ ದೊಡ್ಡಾಟವನ್ನು ಕಲಿಸಲಿ ಆ ಆಟದ ಪ್ರಮುಖ ಪಾತ್ರವನ್ನು ಯುವಕನಾದ ಈಶ್ವರಪ್ಪನವರಿಗೆ ಮೀಸಲಾಗಿರಿಸುತ್ತಿದ್ದರು. "ಪ್ರಮೀಳೆ" ಆಟದಲ್ಲಿ ಪ್ರಮೀಳೆಯ ಪಾತ್ರ, 'ವನಖಂಡ ಯುದ್ಧಖಂಡ'ದಲ್ಲಿ ಸೀತೆಯ ಪಾತ್ರ ಹೀಗೆ ತನಗೆ ವಹಿಸಿಕೊಟ್ಟ ಸ್ತ್ರೀಪಾತ್ರಗಳನ್ನು ಮನೋಜ್ಞವಾಗಿ ಅಭಿನಯಿಸಿ ಗುರುಗಳ ಗೌರವಕ್ಕೆ ಪಾತ್ರರಾಗುತ್ತಿದ್ದರು. ಅಲ್ಲದೆ ಜನರ ಮೆಚ್ಚುಗೆಯ ದೊಡ್ಡಾಟದ

ಕಲಾವಿದರಾಗಿ ಬೆಳೆದರು. ಹೀಗೆ ಜಕ್ಕಲಿಯ ದೊಡ್ಡಾಟದ ಕಲಾವಿದರಲ್ಲಿ ಪ್ರಮುಖ ಕಲಾವಿದರೆಂದೆನಿಸಿಕೊಂಡರು. 'ಕರ್ಣಪರ್ವ'ದಲ್ಲಿ ಅರ್ಜುನ ಇಲ್ಲವೆ ಶಲ್ಯ ಭೂಪತಿಯ ಪಾತ್ರವನ್ನು, 'ರಾಮಾಯಣ'ದಲ್ಲಿ ರಾಮನ ಪಾತ್ರವನ್ನು, 'ಹನುಮಂತನ ಲಿಂಗಧಾರಣ' ದಲ್ಲಿ ರಾಮನ ಪಾತ್ರವನ್ನು ಹೀಗೆ ಹತ್ತು ಹಲವಾರು ಪುರುಷ ಪಾತ್ರಗಳನ್ನು ಮಾಡಿ ಅದರಲ್ಲಿಯೂ 'ಸೈ' ಎನಿಸಿಕೊಂಡಿದ್ದಾರೆ. ಹೀಗೆ ದೊಡ್ಡಾಟದಲ್ಲಿ ಸ್ತ್ರೀ ಹಾಗೂ ಪುರುಷ ಪಾತ್ರಗಳೆರಡನ್ನೂ ಅಭಿನಯಿಸಿ, ದೊಡ್ಡಾಟದ ಎಲ್ಲ ಗತ್ತುಗಳನ್ನು ಈಶ್ವರಪ್ಪನವರು ಕರಗತಮಾಡಿಕೊಂಡು ಗುರುಗಳಾದ ಅಯ್ಯಪ್ಪನವರಂತೆ ತಾವು ದೊಡ್ಡಾಟವನ್ನು ಕಲಿಸಬಹುದು ಎನ್ನುವಷ್ಟರ ಮಟ್ಟಿಗೆ ಪರಿಣಿತರಾದರು.

ಈಶ್ವರಪ್ಪನವರು ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿಯೇ ಬಯಲು ರಂಗಭೂಮಿಗೆ ಸೇರಿ, ಪಾತ್ರ ಮಾಡುವುದರಿಂದ ಹಿಡಿದು ಅದರ ಕುಣಿತ, ಮಾತಿನ ಶೈಲಿ, ನಡುನಡುವೆ ಪ್ರತಿಪಾತ್ರದಾರಿಗಳು ಹಾಡುವ ಹಾಡುಗಳು, ಹಾಡಿಗೆ ತಕ್ಕ ರಾಗ, ರಾಗಕ್ಕೆ ತಕ್ಕ ತಾಳ, ತಾಳಕ್ಕೆ ತಕ್ಕಂತೆ ಕುಣಿತ ಇವೆಲ್ಲವನ್ನು ಕರಗತ ಮಾಡಿಕೊಂಡು ತಾವೇ ದೊಡ್ಡಾಟಗಳನ್ನು ಕಲಿಸುವಷ್ಟರ ಮಟ್ಟಿಗೆ ತಯಾರಾದರು. ಮೊದಮೊದಲು ತಮ್ಮೂರಿನಲ್ಲಿಯೇ ಕೆಲವು ದೊಡ್ಡಾಟಗಳನ್ನು ಯುವಕರಿಗೆ ಕಲಿಸಿ ಊರಿನ ಎಲ್ಲ ಜನರ ಮೆಚ್ಚುಗೆಯನ್ನು ಪಡೆದುಕೊಂಡರು. ಅಂತೆಯೇ ಜಕ್ಕಲಿಯ ಸುತ್ತಮುತ್ತಲಿನ ಹಳ್ಳಿಯ ಜನರು ಕೂಡ ಇವರ ದೊಡ್ಡಾಟಗಳನ್ನು ಮೆಚ್ಚಿಕೊಂಡು ತಮ್ಮೂರಿನ ಯುವಕರಿಗೂ ದೊಡ್ಡಾಟವನ್ನು ಹೇಳಿಕೊಡುವಂತೆ ಕಥೆಗಾರ ಈಶ್ವರಪ್ಪನವರನ್ನು ತಮ್ಮೂರುಗಳಿಗೆ ಆಹ್ವಾನಿಸತೊಡಗಿದರು. ಹೀಗೆ ದೊಡ್ಡಾಟದಲ್ಲಿ ಪಾತ್ರಧಾರಿಯಾಗಿ ಸೇರಿಕೊಂಡ ಈಶ್ವರಪ್ಪನವರು ದೊಡ್ಡಾಟದ ಕಥೆಗಾರರಾಗಿ ಬೆಳೆದರು.

ದೊಡ್ಡಾಟ ಕಥೆಗಾರರೆಂದೆ ಜನಪ್ರಿಯತೆಯನ್ನು ಪಡೆದ ಈಶ್ವರಪ್ಪನವರು ಜಕ್ಕಲಿ ಮತ್ತು ಅದರ ಸುತ್ತಮುತ್ತಲಿನ ಊರುಗಳಾದ ಅಂದರೆ ಗದಗ ಜಿಲ್ಲೆಯ ಹಳ್ಳಿಗಳಾದ ಸೂಡಿ, ಚೌಡಿ, ಸಂಕನೂರ, ಕರಮುಡಿ, ಕೊಡತಗೇರಿ, ಕೋಡಿಕೊಪ್ಪ, ಹರ್ಲಾಪೂರ ಮುಂತಾದ ಕಡೆಗಳಲ್ಲಿ ಒಟ್ಟು ಐವತ್ತೆಂಟು ದೊಡ್ಡಾಟಗಳನ್ನು ಕಲಿಸಿದ್ದಾರೆ. ಒಂದು ಊರಿಗೆ ದೊಡ್ಡಾಟವನ್ನು ಕಲಿಸಲಿಕ್ಕೆ ಹೋದರೆ ಅಲ್ಲಿಯ ಜನರಿಗೆ ದೊಡ್ಡಾಟದ ಗಂಧವೆ ಇರುತ್ತಿರಲಿಲ್ಲ. ಆದರೆ ಅವರಿಗೆ ಕಲಿಯಬೇಕೆಂಬ ಹಂಬಲ ಮಾತ್ರ ಇರುತ್ತಿತ್ತು. ಒಂದು ದೊಡ್ಡಾಟವನ್ನು ಕಲಿಸಬೇಕೆಂದರೆ ಕನಿಷ್ಠ ಮೂರು ತಿಂಗಳು ಹಿಡಿಯುತ್ತದೆ. ದೊಡ್ಡಾಟಕ್ಕೆ ಬೇಕಾದ ಪಾತ್ರಧಾರಿಗಳನ್ನು, ಹಾಡುಗಾರರನ್ನೂ, ಮದ್ದಲಿ ನುಡಿಸುವವರನ್ನು ಹಾಗೂ ತಾಳ ಬಾರಿಸುವವರನ್ನು ಪರಿಣಿತಿಗೊಳಿಸುವ ಜವಾಬ್ದಾರಿ

ಕಥೆಗಾರನದ್ದು. ಹೀಗಾಗಿ ಮೊದಲು ಹಾರ್ಮೋನಿಯಂ ಮಾಸ್ತರ ಮತ್ತು ಮದ್ದಲಿಯವರನ್ನು ರೆಡಿ ಮಾಡಿ, 'ದಿನತಾ' ಕುಣಿತ, ಸರ್ಪಾಟ, ಕುಂಟ್ಹೆಜ್ಜಿ, ಮೂರ್ಹೆಜ್ಜಿ, ಐದ್ಹೆಜ್ಜಿ, ಕಿಸಗಾಲ್ಹೆಜ್ಜಿ ಮುಂತಾದವುಗಳನ್ನು ಮೊದಲು ಕಲಿಸಿ, ಪಾತ್ರಧಾರಿಗಳಿಗೆ ಮಾತಿನ ಶೈಲಿಯನ್ನು ಕಲಿಸಿ, ನಂತರ ಹಾವಭಾವಗಳನ್ನು ಕಲಿಸುತ್ತಿದ್ದರು. ಹೀಗೆ ನಿರಂತರ ಮೂರು ತಿಂಗಳುಗಳವರೆಗೆ ತರಬೇತಿಯನ್ನು ನೀಡಿ ದೊಡ್ಡಾಟವನ್ನು ಪ್ರದರ್ಶನಕ್ಕೆ ಸಿದ್ಧಪಡಿಸುತ್ತಿದ್ದರು. ಇವರು ಕಲಿಸಿದ ಊರುಗಳಲ್ಲಿ ಈಗಲೂ ಪ್ರತಿವರ್ಷ ಜಾತ್ರಾಮಹೋತ್ಸವಗಳಲ್ಲಿ ದೊಡ್ಡಾಟಗಳನ್ನು ಆಡುವ ಪರಂಪರೆ ಮುಂದುವರೆದುಕೊಂಡು ಬಂದಿದೆ. ಸುಮಾರು ಎಂಬತ್ತರ ವಯಸ್ಸಿನ ಈಶ್ವರಪ್ಪನವರು ಇಂದಿಗೂ ತಮ್ಮ ದೊಡ್ಡಾಟದ ಖಯಾಲಿತನವನ್ನು ಬಿಟ್ಟಿಲ್ಲ. ಹೀಗೆ ಸುಮಾರು ಅರವತ್ತು ವರ್ಷಗಳವರೆಗೆ ನಿರಂತರವಾಗಿ ದೊಡ್ಡಾಟದ ರಂಗ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಿದ ಹಿರಿಯ ಜನಪದ ಕಲಾವಿದರಾದ ಈಶ್ವರಪ್ಪನವರಿಗೆ ಸಿಕ್ಕ ಮಾನ-ಸನ್ಮಾನಗಳು ಸಾಕಷ್ಟು, ಈಗ ಅವರು ಒಳ್ಳೆಯ ತೃಪ್ತಿಯಿಂದ ಜೀವನವನ್ನು ಸಾಗಿಸುತ್ತಿದ್ದಾರೆ.

## ಉಮೇಶಪ್ಪ ಜಗನ್ನಾಥಪ್ಪ ಅಂಬ್ರದ

ದೊಡ್ಡಾಟಗಳ ಸಾರಥಿಯೆಂದೆ ಜನಪ್ರಿಯರಾದ ಉಮೇಶಪ್ಪನವರು ಹಿರಿಯ ಜನಪದ ಕಲಾವಿದರು ಇವರು 1957 ಡಿಸೆಂಬರ 15ರಂದು ಗದುಗಿನ ಬೆಟಗೇರಿಯಲ್ಲಿ ಜನಿಸಿದರು. ಕುರುವಿನಶೆಟ್ಟಿ ಸಮಾಜಕ್ಕೆ ಸೇರಿದ ಇವರು ಕೇವಲ ನಾಲ್ಕನೆಯ ತರಗತಿಯವರೆಗೆ ಓದಿ ಮನೆಯ ಆರ್ಥಿಕ ತೊಂದರೆಯಿಂದಾಗಿ ತಮ್ಮ ಓದನ್ನು ಮುಂದುವರೆಸಲಾಗಲಿಲ್ಲ. ತಂದೆ ಜಗನ್ನಾಥರು ಒಬ್ಬ ಜನಪ್ರಿಯ ದೊಡ್ಡಾಟ ಕಲಾವಿದರು ಅವರ ಪ್ರೇರಣೆಯಿಂದ ತಮ್ಮ ಹದಿನೇಳನೆಯ ವಯಸ್ಸಿನಲ್ಲಿಯೇ ದೊಡ್ಡಾಟ ಮೇಳವನ್ನು ಸೇರಿದರು. ಇವರು ಮೇಳವನ್ನು ಸೇರುವ ಸಮಯಕ್ಕೆ ಹೊಸಬನಶಂಕರಿ ದೊಡ್ಡಾಟ ಮೇಳವು ಒಡೆದು ಎರಡಾಯಿತು. ಮೇಳದಲ್ಲಿ ಸಾರಥಿಯ ಪಾತ್ರವನ್ನು ನಿರ್ವಹಿಸುತ್ತಿದ್ದ ಕಲಾವಿದ ಮತ್ತೊಂದು ಮೇಳಕ್ಕೆ ಹೋದುದರಿಂದ ಮೇಳದಲ್ಲಿ ಸಾರಥಿಯ ಪಾತ್ರವನ್ನು ನಿರ್ವಹಿಸುವವರೆ ಇಲ್ಲದಂತಾದಾಗ ತಂದೆ ಜಗನ್ನಾಥ ಮತ್ತು ಕಥೆಗಾರ ಮಲ್ಲಪ್ಪನವರು ಯುವಕನಾದ ಉಮೇಶನಿಗೆ ತರಬೇತಿಯನ್ನು ನೀಡಿ ಸಾರಥಿಯ ಪಾತ್ರವನ್ನು ನಿರ್ವಹಿಸಲು ತಯಾರಿಸಿದರು. ಹೀಗೆ ಇವರು ಮೇಳದ ಎಲ್ಲ ದೊಡ್ಡಾಟಗಳಿಗೆ ಕಾಯಂ ಸಾರಥಿಯಾದರು.

ದೊಡ್ಡಾಟಗಳಲ್ಲಿ ಸಾರಥಿಯ ಪಾತ್ರಕ್ಕೆ ಇತರೆ ಪಾತ್ರಗಳಿಗೆ ಇರುವಂತೆ

ನಿರ್ದಿಷ್ಟವಾದ ಮಾತುಗಳಿರುವುದಿಲ್ಲ. ಸಾರಥಿಯ ಪಾತ್ರಧರಿಯೇ ಸಮಯ ಸನ್ನಿವೇಶಗಳಿಗೆ ತಕ್ಕಂತೆ ತನ್ನ ಮಾತುಗಳನ್ನು ತಾನೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಸಾರಥಿಯು ಪ್ರೇಕ್ಷಕರ ಮತ್ತು ಪಾತ್ರಗಳ ನಡುವಿನ ಕೊಂಡಿ ಇದ್ದಂತೆ. ಪ್ರೇಕ್ಷಕರಿಗೆ ಬೇಸರವಾಗದಂತೆ ಆಟ ನಡೆಸಿಕೊಂಡು ಹೋಗಲು ಸಾರಥಿಗೆ ಹಾಸ್ಯ ಪ್ರಜ್ಞೆ ಇರುವುದು ತುಂಬಾ ಅವಶ್ಯಕ. ರಂಗದ ಮೇಲೆ ಬರುವ ಸ್ತ್ರೀ-ಪುರುಷ, ಋಷಿ-ಮುನಿ, ಸೇವಕ-ಸೇವಕಿ, ದೇವರು-ದೈತ್ಯರು ಹೀಗೆ ಎಲ್ಲ ಪಾತ್ರಗಳನ್ನು ಪ್ರೇಕ್ಷಕರಿಗೆ ತಿಳಿಸಿ ಕೊಡಬೇಕಾಗುತ್ತದೆ. ಅದು ಹೇಗೆಂದರೆ-

ಸಾರಥಿ:- ತಾವು ಬಂದಂತವರದಾರು? ತಮ್ಮ ನಾಮಾಂಕಿತವಾದರೇನು? ಹೇಳಬೇಕು ದೇವಾ ಮಹಾನುಭಾವ.

ಪಾತ್ರಧಾರಿ:- ನನ್ನ ನಾಮಾಂಕಿತವನ್ನು ಕೇಳುವವ ನೀನದಾರು? ನಿನ್ನ ನಾಮಾಂಕಿತವೇನು. ದಿಟ್ಟನೆ ಹೇಳುವಂತವನಾಗೆಲೈ ಮಾನವ.

ಹೀಗೆ ಪ್ರಾರಂಭವಾಗುವ ಮಾತುಗಳಿಗೆ ತಟ್ಟನೆ ಉತ್ತರವನ್ನು ಕೊಟ್ಟು ನಡುನಡುವೆ ಪ್ರೇಕ್ಷಕರನ್ನು ನಗಿಸುತ್ತ ಆಟವನ್ನು ಮುಂದೆ ಸಾಗುವಂತೆ ಮಾಡಬೇಕು. ಇಂಥ ಸಾರಥಿಯ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದ ಉಮೇಶಪ್ಪನವರು ಜನಮೆಚ್ಚುಗೆಯನ್ನು ಪಡೆದಿದ್ದರು.

ದೊಡ್ಡಾಟಗಳಲ್ಲಿ ಸಾಕಷ್ಟು ಅನುಭವ ಪಡೆದ ಯುವ ಪ್ರತಿಭಾವಂತ ಉಮೇಶಪ್ಪನವರು ಒಮ್ಮೊಮ್ಮೆ ತಮ್ಮ ಮಾತುಗಳನ್ನು ತಾವೇ ಸೃಷ್ಟಿ ಮಾಡಿಕೊಳ್ಳುತ್ತಿದ್ದರು. ಪಾತ್ರಧಾರಿಯು "ನೀನು ಯಾರು?" ಎಂದು ಕೇಳಿದಾಕ್ಷಣ "ದೆಹಲಿಗೆ ಹೋಗಿ ತ್ರಿಸದಾಸುರ ಆಟವನ್ನಾಡಿ, ದೆಲ್ಲಿ ದ್ವಾಸಿ ತಿಂದ ಬಂದಂತಹ ದಿಟ್ಟುಳ್ಳ ಸಾರಥಿ ಎಂದು ಕರೆಯುತ್ತಾರೆ ದೇವಾ" ಎಂದೆನ್ನುತ್ತಿದ್ದಂತೆ ಪ್ರೇಕ್ಷಕರು ಗೊಳ್ಳೆಂದು ನಗುತ್ತಿದ್ದರು. ಹೀಗೆಯೇ ಮತ್ತೊಂದು ಪಾತ್ರ ಬಂದು "ತಾವುದಾರು? ತಮ್ಮ ನಾಮಾಕಿಂತವೇನು" ಎಂದು ಕೇಳಿದಾಗ, ಆವೇಳೆ ಸಾರಥಿಯ ಮಾತು ಮತ್ತೆ ಬೇರೆಯೇ ಆಗಿರುತ್ತಿತ್ತು. 'ಬೆಟಗೇರಿ ಬದನಿಕಾಯಿ ತಿಂದ ಬದ್ದಿ ಬದ್ದಿ ಕೆರಕೊಳ್ಳುವಂತ ದಿಟ್ಟ ಸಾರಥಿ ಎಂದು ಕರೆಯುತ್ತಾರೆ ದೇವಾ" ಎಂದು ಹೇಳಿ ಪ್ರೇಕ್ಷಕರ ಮನ ರಂಜಿಸುತ್ತಿದ್ದರು. ಹೀಗೆ ಸಾರಥಿ ಉಮೇಶಪ್ಪನವರು ಪ್ರತಿಯೊಂದು ಮಾತುಗಳನ್ನು ಸೃಷ್ಟಿಸಿಕೊಂಡು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿಕೊಂಡು ಹೋಗಿ ಅವರ ಬೇಸರಿಕೆಯನ್ನು ಕಳೆದು ಆಟವನ್ನು ಸುಸೂತ್ರವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದರು.

ಮೊದಮೊದಲು ದೊಡ್ಡಾಟಗಳು ಬೆಳ್ಳಬೆಳತನಕ ಪ್ರದರ್ಶನಗೊಳ್ಳುತ್ತಿದ್ದವು. ಆಗ ಸಾರಥಿಯ ಪಾತ್ರಧಾರಿಗೆ ತನ್ನ ಸ್ವಂತ ಪ್ರತಿಭೆ ತೋರ್ಪಡಿಸಲು ಬಹಳಷ್ಟು ಸಮಯ ಅವಕಾಶ ಸಿಗುತ್ತಿತ್ತು. ಆದರೆ ಈಗ ಸಮಯದ ಅಭಾವದಿಂದ ಸಾರಥಿಗೆ ಅವಕಾಶ ಕಡಿಮೆಯಾದುದರಿಂದ ಮಧ್ಯದಲ್ಲಿ ಹಾಸ್ಯ ಭರಿತ ಚುಟುಕುಗಳನ್ನು ಹೇಳುವಂತಿಲ್ಲ. ಆಟವನ್ನು ಸರಾಗವಾಗಿ ಮುಂದೆ ಸಾಗಿಸಿಕೊಂಡು ಹೋಗಿ ಮುಗಿಸುವ ಜವಾಬ್ದಾರಿ ಇವನ ಮೇಲೆ ಇರುವುದರಿಂದ ಸಾರಥಿ ಪಾತ್ರಧಾರಿ ತನ್ನ ಪ್ರತಿಭೆಯನ್ನು ತೋರಿಸಲಾರದೆ ಆಟವನ್ನು ಮುಗಿಸುವ ಪ್ರಯತ್ನದಲ್ಲಿ ತೊಡಗುತ್ತಾನೆ. ತಮಗೆ ಕೊಟ್ಟ ವೇಳೆಯಲ್ಲಿಯೇ ಉಮೇಶಪ್ಪನವರು ಸಾರಥಿಯ ಪಾತ್ರವನ್ನು ನಿರ್ವಹಿಸುತ್ತ ಪ್ರೇಕ್ಷಕರನ್ನು ನಗಿಸುತ್ತ ಯಾರಿಗೂ ಬೇಸರವಿಲ್ಲದಂತೆ ಆಟವನ್ನು ಮುಗಿಸುತ್ತಾರೆ. ಕುಶಲಮತಿಯಾದ ಸಾರಥಿ ಉಮೇಶಪ್ಪನವರು ಮೇಳದ ಎಲ್ಲ ದೊಡ್ಡಾಟಗಳಿಗೆ ಸಾರಥಿಯ ಪಾತ್ರವನ್ನು ನಿರ್ವಹಿಸಿ ಯಶಸ್ವಿಯನ್ನು ಹಾಗೂ ಜನಪ್ರಿಯತೆಯನ್ನು ಪಡೆದಿದ್ದಾರೆ. ಇಂಥ ಹಿರಿಯ ಕಲಾವಿದ ಉಮೇಶಪ್ಪನವರ ರಂಗ ಸೇವೆಯನ್ನು ಗುರುತಿಸಿ ಗದಗ ಬೆಟಗೇರಿಯ ಜನತೆ ಮಾನ-ಸನ್ಮಾನಗಳನ್ನಿತ್ತು ಗೌರವಿಸಿದ್ದಾರೆ.

## ಗಣಪತಸಾ ರೇವಣಸಾ ಅರವಟಗಿ

ದೊಡ್ಡಾಟಗಳಿಗೆ ಮದ್ದಲಿಯನ್ನು ನುಡಿಸುವುದರಲ್ಲಿ ಜನಪ್ರಿಯತೆಯನ್ನು ಪಡೆದ ಗಣಪತಸಾ ಅರವಟಗಿಯವರು 'ಮದ್ದಲಿ ಗಣಪತಸಾ' ಎಂದೆ ಪ್ರಸಿದ್ಧರಾಗಿದ್ದಾರೆ. ತಂದೆ ರೇವಣಸಾ, ತಾಯಿ ಗಂಗೂಬಾಯಿಯವರ ಮಗನಾಗಿ 1946ರಲ್ಲಿ ಜನಿಸಿದರು. ಏಳನೆಯ ತರಗತಿಯವರೆಗೆ ಓದಿದ ಇವರು ಮನೆತನದ ಆರ್ಥಿಕ ತೊಂದರೆಯಿಂದ ಮುಂದೆ ಓದಲಿಕ್ಕಾಗದೆ ಕೈಮಗ್ಗದ ಕೆಲಸವನ್ನು ಕಲಿತುಕೊಂಡು ಅದನ್ನೆ ವೃತ್ತಿಯನ್ನಾಗಿ ಮಾಡಿಕೊಂಡರು.

'ಹೊಸ ಬನಶಂಕರಿ ದೊಡ್ಡಾಟ ಮೇಳ'ದ ಆಟಗಳಿಗೆ ಮದ್ದಲಿಯನ್ನು ಬಾರಿಸುತ್ತಿದ್ದ ಜೇಜಪ್ಪ ದೇವರೆಡ್ಡಿಯವರಿಗೆ ವಯಸ್ಸಾದುದರಿಂದ ದ್ವಿಗುಣದಲ್ಲಿ ಬಾರಿಸುವಾಗ ಕೈಗಳು ಓಡುತ್ತಿರಲಿಲ್ಲ. ಹೀಗಾಗಿ ಅವರು 'ನನ್ನಿಂದಾ ದೊಡ್ಡಾಟದ ಕಲೆ ನಿಲ್ಲಬಾರದು, ಅದು ಮುಂದುವರೆಯಬೇಕು' ಎಂಬ ಮಹದಾಸೆಯಿಂದ ಮದ್ದಲಿ ಕಲಿಯಲು ಆಸಕ್ತಿ ಇರುವ ಹುಡುಗನನ್ನು ಹುಡುಕುತ್ತಿದ್ದರು. ಒಮ್ಮೆ ಭಜನಿ ಪದಗಳಿಗೆ ತಮಟೆ (ದಮಡಿ)ಯನ್ನು ಬಾರಿಸುತ್ತಿದ್ದ ಗಣಪತಸಾನ ಕೈಚಳಕವನ್ನು ಕಂಡು ಆ ಹುಡುಗನನ್ನು ಕರೆದು 'ನೀನು ಮದ್ದಲಿ ಬಾರಿಸುವುದನ್ನು ಕಲಿತಿ ಏನು? ನಾ ನಿನಗೆ ಕಲಸ್ತೇನಿ' ಎಂದರು. ಅದಕ್ಕೆ ಒಪ್ಪಿದ ಹುಡುಗನನ್ನು ಮರುದಿನ ಬಣ್ಣದ

ಮನೆಗೆ ಕರೆದುಕೊಂಡು ಹೋಗಿ ಮದ್ದಲಿಯ ಟೀಕಾಗಳನ್ನು ಹೇಳಿ, ಮೇಳದವರು ತಾಲೀಮು ಮಾಡುತ್ತಿದ್ದ 'ರಾಮಾಯಣ' ಆಟಕ್ಕೆ ಇವನನ್ನು ಸಿದ್ಧಗೊಳಿಸಿದರು. ಹೀಗೆ ಯುವಕನಾದ ಗಣಪತಸಾ ಒಳ್ಳೆಯ ಆಸಕ್ತಿಯಿಂದ ಕಲಿತು ಮದ್ದಲಿಕಾರನಾದನು.

'ಹೊಸ ಬನಶಂಕರಿ ದೊಡ್ಡಾಟ ಮೇಳ'ದವರು ಪ್ರಯೋಗಿಸುತ್ತಿದ್ದ 'ಭಕ್ತ ಮಾರ್ಕಂಡೇಯ', 'ದಕ್ಷಬ್ರಹ್ಮ', 'ಗಿರಿಜಾ ಕಲ್ಯಾಣ', 'ಲಕ್ಷಣಿ ಕಲ್ಯಾಣ', 'ತ್ರಿಪುರ ಸಂಹಾರ', 'ಗಧಾಯುದ್ಧ', 'ಕರ್ಣಪರ್ವ', ಮುಂತಾದ ದೊಡ್ಡಾಟಗಳಿಗೆ ಬೇಸರವಿಲ್ಲದೆ ರಾತ್ರಿ-ಬೆಳತನಕ ಮದ್ದಲಿಯನ್ನು ಬಾರಿಸಿದ್ದಾರೆ. ಕೆಲವೊಂದು ಮೇಳದಲ್ಲಿ ಮದ್ದಲಿ ಬಾರಿಸುವವರು ಒಂದು ಆಟಕ್ಕೆ ಇಬ್ಬರಿರುತ್ತಾರೆ. ಒಬ್ಬರಿಗೆ ಬೇಸರವಾದಾಗ ಮತ್ತೊಬ್ಬರು ಬಂದು ಮದ್ದಲಿಯನ್ನು ಬಾರಿಸುವುದುಂಟು. ಆದರೆ ಗಣಪತಸಾ ಅವರು ಬೇಸರವಿಲ್ಲದೆ ಪಾತ್ರದ ಹಾಡುಗಳಿಗೆ ಕರೆನಾಲ್ಕನೆಯ ಪಟ್ಟಿ ಇಲ್ಲವೆ ಐದನೆಯ ಪಟ್ಟಿಗೆ ಬಾರಿಸುವುದು ರೂಢಿ. ಪ್ರಸಂಗ ಬಿದ್ದರೆ ಬಿಳಿ ಆರನೆಯ ಪಟ್ಟಿಗೆ ಬಾರಿಸಬಲ್ಲವರಾಗಿದ್ದಾರೆ. ಇವರು ಮದ್ದಲಿಯನ್ನು ನುಡಿಸಿದ 'ಗಿರಿಜಾಕಲ್ಯಾಣ', 'ದಕ್ಷ ಬ್ರಹ್ಮ', 'ರಾಮಾಯಣ' ದೊಡ್ಡಾಟಗಳು ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರಗೊಂಡಿವೆ. ಅಲ್ಲದೆ 'ದಕ್ಷಬ್ರಹ್ಮ' ಹಾಗೂ 'ಗಿರಿಜಾ ಕಲ್ಯಾಣ'ದೊಡ್ಡಾಟಗಳು ಬೆಂಗಳೂರಿನ ದೂರದರ್ಶನ ಕೇಂದ್ರದಿಂದ ಪ್ರಸಾರಗೊಂಡಿವೆ.

ಮೇಳದವರು ತಮ್ಮ ಮೇಳದ ದೊಡ್ಡಾಟಗಳನ್ನು ದೆಹಲಿ, ಬೆಂಗಳೂರು, ಮೈಸೂರು, ಉಡುಪಿ, ಹೊರನಾಡು, ಧರ್ಮಸ್ಥಳ, ಹಂಪಿ, ಲಕ್ಕುಂಡಿ ಮುಂತಾದ ಕಡೆಗಳಲ್ಲಿ ಪ್ರದರ್ಶಿಸಿದೆ. ಆ ಆಟಗಳಲ್ಲೆಲ್ಲ ಇವರೆ ಮದ್ದಲಿಯನ್ನು ನುಡಿಸಿದ್ದಾರೆ. ಪಾತ್ರಧಾರಿಗಳ ಕುಣಿತಕ್ಕೆ ಹಾಗೂ ಯುದ್ಧ ಮಾಡುವಾಗಿನ ದಾಪುಗಾಲಿನ ಕುಣಿತಗಳಿಗೆ ನುಡಿಸುತ್ತಿದ್ದ ಇವರ ಮದ್ದಲಿಯ ಕೈವಾರ ಬಹಳಷ್ಟು ಮನಮೋಹಕವಾಗಿರುತ್ತಿತ್ತು.

ಹೀಗೆ ಸುಮಾರು ಮೂವತ್ತು ವರ್ಷಗಳ ಕಾಲ ಗಣಪತಸಾ ಜನಪದ ರಂಗಭೂಮಿಯ ಸೇವೆಯನ್ನು ಮಾಡುತ್ತ ಬಂದಿರುವ ಹಿರಿಯ ಜನಪದ ಕಲಾವಿದ ಈಗಲೂ ರಂಗ ಭೂಮಿಯ ಸೇವೆಯಲ್ಲಿ ನಿರತರಾಗಿದ್ದಾರೆ.

## ಜಗನ್ನಾಥ ಶಿವಪ್ಪ ಅಂಬ್ರದ

ದೊಡ್ಡಾಟಗಳ ಸ್ತ್ರೀ ಪಾತ್ರಧಾರಿಗಳೆಂದೆ ಪ್ರಸಿದ್ಧರಾದ ಜಗನ್ನಾಥರವರು ಗದುಗಿನ ಬೆಟಗೇರಿಯವರು. ತಂದೆ ಶಿವಪ್ಪ, ತಾಯಿ ಲಕ್ಷ್ಮಮ್ಮನವರ ಮಗನಾಗಿ 1936ರ ಫೆಬ್ರವರಿ 15 ರಂದು ಜನಿಸಿದರು. ಕುರುವಿನ ಶೆಟ್ಟಿ ಸಮುದಾಯಕ್ಕೆ ಸೇರಿದ ಇವರು

ಆರನೆಯ ತರಗತಿಯವರೆಗೆ ಓದಿ ಮನೆಯ ಆರ್ಥಿಕ ತೊಂದರೆಯಿಂದ ಮುಂದೆ ಓದಲಿಕ್ಕಾಗದೆ ನೇಕಾರಿಕೆಯನ್ನು ಕಲಿತು ಅದನ್ನೆ ವೃತ್ತಿಯನ್ನಾಗಿ ಮಾಡಿಕೊಂಡರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೆ ದೊಡ್ಡಾಟ ರಂಗಭೂಮಿಗೆ ಪಾದಾರ್ಪಣೆ ಮಾಡಿದರು.

ನಾಟಕದ ಬಗೆಗೆ ಅಪಾರವಾದ ಶ್ರದ್ಧೆಯುಳ್ಳ ಬಣ್ಣದ ಬೆನಕಪ್ಪನವರು ಬೆಟಗೇರಿ ತುಳಜಾ ಭವಾನಿಯ ಗುಡಿಯ ಹತ್ತಿರ ಒಂದು ಬಣ್ಣದ ಮನೆಯಲ್ಲಿ 'ಸೀತಾ ಸ್ವಯಂವರ' ಮತ್ತು 'ಬಾಣಾಸೂರ' ಎಂಬೆರಡು ನಾಟಕಗಳನ್ನು ಕಲಿಸಲಿಕ್ಕೆ ಪ್ರಾರಂಬಿಸಿದ್ದರು. ಯುವಕನಾದ ಜಗನ್ನಾಥ ಪ್ರತಿದಿನ ಸಂಜೆ ಆ ನಾಟಕಗಳ ತಾಲೀಮು ನೋಡಲಿಕ್ಕೆ ಹೋಗುತ್ತಿದ್ದ. ಅವನ ಮುಖ ಚಹರೆ ನಿಲುವನ್ನು ಕಂಡ ಬೆನಕಪ್ಪನವರು "ಈತ ಸ್ತ್ರೀ ಪಾತ್ರಕ್ಕೆ ಸರಿಯಾಗಿ ಒಪ್ಪುತ್ತಾನೆ" ಎಂದು ಆ ನಾಟಕಗಳಲ್ಲಿ ಒಂದು ಚಿಕ್ಕ ಸ್ತ್ರೀ ಪಾತ್ರವನ್ನು ಕೊಟ್ಟರು. ಆಗ ಜಗನ್ನಾಥರು ಆ ಪಾತ್ರಗಳನ್ನು ಒಳ್ಳೆಯ ರೀತಿಯಲ್ಲಿ ಜನಮೆಚ್ಚುವಂತೆ ನಿರ್ವಹಿಸಿದರು. ಹೀಗೆ ದೊಡ್ಡಾಟ ರಂಗಭೂಮಿಗೆ ಮೊದಲ ಹೆಜ್ಜೆಯನ್ನಿಟ್ಟರು.

ಕೆಲವು ತಿಂಗಳುಗಳ ನಂತರ ಆ ನಾಟಕ ಮಂಡಳಿಯೂ ನಿಂತು ಬಿಟ್ಟಿತು. ಆದರೆ ಬಣ್ಣದ ಬೆನಕಪ್ಪನವರ ರಂಗಭೂಮಿಯ ದಾಹ ಇನ್ನು ಹಾಗೆಯೇ ಇತ್ತು. ನೇಕಾರರ ಕೆಲವು ಯುವಕರನ್ನು ಕೂಡಿಸಿಕೊಂಡು "ಹೊಸ ಬನಶಂಕರಿ ಗುಡಿಯ ಮೇಳ" ಎಂಬ ಹೆಸರಿನಲ್ಲಿ, ದೊಡ್ಡಾಟದ ಕಥೆಗಾರರಾದ ರಂಗಪ್ಪ ನಾರಾಯಣ ಕೇರಿ ಮತ್ತು ಮಲ್ಲಪ್ಪ ಮಹಾಂತಗೊಂಡ ಅವರನ್ನು ಕೂಡಿಕೊಂಡು 1940ರಲ್ಲಿ ಒಂದು ದೊಡ್ಡಾಟದ ಮೇಳವನ್ನು ಪ್ರಾರಂಭಿಸಿದರು.

ಬಣ್ಣದ ಬೆನಕಪ್ಪನವರ ಮುಖಂಡತ್ವದಲ್ಲಿ ಪ್ರಾರಂಭವಾದ ಹೊಸ ಬನಶಂಕರಿ ಗುಡಿ ಮೇಳದವರು 'ಗಿರಿಜಾ ಕಲ್ಯಾಣ' ಎಂಬ ದೊಡ್ಡಾಟದ ತಾಲೀಮನ್ನೂ ಪ್ರಾರಂಭಿಸಿದರು. ಆ ಆಟದಲ್ಲಿ ಜಗನ್ನಾಥರಿಗೆ ಮೇನಕೆಯ ಪಾತ್ರವನ್ನು ಕೊಟ್ಟರು. ಇವರು ಆ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದರಿಂದ ಆ ಮೇಳದ ಖಾಯಂ ಕಲಾವಿದರಾದರಲ್ಲದೆ ಮೇಳದವರು ಪ್ರದರ್ಶಿಸಿದ ಎಲ್ಲ ದೊಡ್ಡಾಟಗಳಲ್ಲಿ ಪ್ರಧಾನ ಪಾತ್ರ ಮಾಡುವ ಅವಕಾಶ ದೊರೆಯಿತು. 'ಭಕ್ತ ಮಾರ್ಕಂಡೇಯ'ದಲ್ಲಿ ಯಮಧರ್ಮರಾಯನ ಸೇವಕನಾದ ಗುಪ್ತನ ಪಾತ್ರ, ಮತ್ತೊಮ್ಮೆ ಅದೇ ಆಟದ ನಾರದನ ಪಾತ್ರ, 'ತ್ರಿಪುರ ಸಂಹಾರ'ದಲ್ಲಿ ಊರ್ವಶಿ ಪಾತ್ರ, 'ಲಕ್ಷಣಿ ಕಲ್ಯಾಣ'ದಲ್ಲಿ

ದುರ್ಯೋಧನನ ಹೆಂಡತಿಯಾದ ಭಾನುಮತಿಯ ಪಾತ್ರ, 'ದಕ್ಷಬ್ರಹ್ಮ'ದಲ್ಲಿ ದಕ್ಷನ ಹೆಂಡತಿಯಾದ ಪ್ರಸೂತಿಯ ಪಾತ್ರ ಹೀಗೆ ಹತ್ತು ಹಲವಾರು ವಿಭಿನ್ನ ಪಾತ್ರಗಳನ್ನು ಅದರಲ್ಲೂ ಸ್ತ್ರೀ ಪಾತ್ರಗಳನ್ನು ಯಶಸ್ವಿಯಾಗಿ ಅಭಿನಯಿಸಿ, ಪ್ರೇಕ್ಷಕರ ಮನದಲ್ಲಿ ಆ ಪಾತ್ರಗಳು ಇಂದಿಗೂ ಹಚ್ಚಹಸುರಾಗಿ ನಿಲ್ಲುವಂತೆ ಮಾಡಿದ್ದಾರೆ.

'ತ್ರಿಪುರಾಸೂರ ಸಂಹಾರ' ದೊಡ್ಡಾಟವನ್ನು ದೆಹಲಿಯ ಕರ್ನಾಟಕ ಭವನದಲ್ಲಿ ಪ್ರಯೋಗಿಸುತ್ತಿರುವಾಗ ಅಲ್ಲಿಯ ಜನರು ಇವರ ಊರ್ವಶಿಯ ಪಾತ್ರವನ್ನು ಹಾಗೂ ಇವರ ಸಭಾದ ಕುಣಿತವನ್ನು ಕಂಡು ಹರ್ಷೋದ್ಗಾರದಿಂದ ಕೇಕೆ ಹಾಕಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.ಅದರಂತೆ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಮೈಸೂರಿನ ದಸರಾ ಮಹೋತ್ಸವ, ಉಡುಪಿ, ಹೊರನಾಡು, ಧಾರವಾಡ ಮುಂತಾದ ಕಡೆಗಳಲ್ಲಿ ದೊಡ್ಡಾಟಗಳನ್ನು ಪ್ರದರ್ಶಿಸುತ್ತಿರುವಾಗ ಇವರ ಸ್ತ್ರೀ ಪಾತ್ರಗಳನ್ನು ಕಂಡು ಪ್ರೇಕ್ಷಕರು ಮಂತ್ರಮುಗ್ಧರಾಗಿ ವೀಕ್ಷಿಸಿ, ಉಲ್ಲಾಸದಿಂದ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.

ತಮ್ಮ ರಂಗಭೂಮಿಯ ಸೇವೆಯುದ್ದಕ್ಕೂ ಹೆಚ್ಚಾಗಿ ಸ್ತ್ರೀ ಪಾತ್ರಗಳನ್ನೆ ನಿರ್ವಹಿಸುತ್ತ ಬಂದ ಇವರಿಗೆ 'ದಕ್ಷಬ್ರಹ್ಮ' ಆಟದ ಪ್ರಸೂತಿ ಪಾತ್ರ ಹಾಗೂ 'ಲಕ್ಷಣಿ ಕಲ್ಯಾಣಿ'ದಲ್ಲಿಯ ಭಾನುಮತಿಯ ಪಾತ್ರಗಳು ತುಂಬಾ ಹೆಸರನ್ನು ಹಾಗೂ ತೃಪ್ತಿಯನ್ನು ತಂದುಕೊಟ್ಟಿವೆ. 'ದಕ್ಷಬ್ರಹ್ಮ' ಆಟದಲ್ಲಿ ದಕ್ಷನು ವೀರಭದ್ರನಿಂದ ಹತನಾಗುತ್ತಾನೆ. ಆಗ ದಕ್ಷನ ಹೆಂಡತಿ ಪ್ರಸೂತಿಯ ಪಾತ್ರವನ್ನು ನಿರ್ವಹಿಸುವ ಜಗನ್ನಾಥರು ಶೋಕತಪ್ತಳಾಗಿ ರಂಗ ಪ್ರವೇಶಿಸಿ

**ಅಯ್ಯಾ ಪ್ರಾಣದರಸ ನೀ ಮೈ ಮರೆತೆಯಾ**
**ಶಿವನೊಳ್ ವೈರವ। ಹರನೊಳ್ ವೈರವ**
**ಬೇಡವೆಂದು ಪೇಳಿದರೆ**
**ಭುವನದೊಳ್ ನಿನ್ನನು ಕೊಂದು ಮುದವತಾಳಿದರು.**

ಎಂದು ಹಿಮ್ಮೇಳದವರ ಹಾಡನ್ನು ಹಾಡುತ್ತ ಕಾಂತಾss ಕಾಂತಾ ಎಂದು ಶೋಕಿಸುವ ದೃಶ್ಯವನ್ನು ಕಂಡು ಪ್ರೇಕ್ಷಕರ ಕಣ್ಣಲ್ಲಿ ನೀರು ಬರುತ್ತಿದ್ದವು. ಅಷ್ಟೊಂದು ಭಾವಪರವಶರಾಗಿ ಪಾತ್ರವನ್ನು ನಿರ್ವಹಿಸುತ್ತಿದ್ದರು. ಅದೇ ರೀತಿ 'ಲಕ್ಷಣಿ ಕಲ್ಯಾಣ'ದ ದೃಶ್ಯ ಒಂದರಲ್ಲಿ ದುರ್ಯೋಧನ ತನ್ನ ಮಗಳಾದ ಲಕ್ಷಣಿಯನ್ನು ಕೃಷ್ಣನ ಹೆಂಡತಿಯಾದ ಜಾಂಬವತಿಯ ಮಗನಾದ ಶಾಂಭನಿಗೆ ಕೊಡುವುದಿಲ್ಲವೆಂದು ಹೆಂಡತಿ ಭಾನುಮತಿಗೆ

ಹೇಳುತ್ತಾನೆ. ಆಗ ಭಾನುಮತಿಯು ಮಗಳನ್ನು ಕೊಡುವುದಾದರೆ ಶಾಂಬನಿಗೆ ಕೊಡಬೇಕು ಎಂಬ ಮಾತಿನಲ್ಲಿ ಇಬ್ಬರಿಗೂ ವಾಗ್ವಾದ ನಡೆಯುತ್ತದೆ. ಆಗ ಭಾನುಮತಿ

**ಛಲ ಬೇಡೊ ಪ್ರಾಣನಾಥ**
**ಹಡೆದ ಮಗಳು ಎಂದು ಭಾವಿಸಿ**
**ಒಡಲಲೊಳ್ ಕನಿಕರ ಬಂದು**
**ಉಡಿಯ ಒಡ್ಡಿ ಬೇಡಿಕೊಂಬುವೆ**

ಎಂದು ಹಾಡುತ್ತ ಸೆರಗನ್ನು ಎರಡು ಕೈಯಲ್ಲಿ ಹಿಡಿದು ದುರ್ಯೋಧನನಲ್ಲಿ ಬೇಡಿಕೊಳ್ಳುವ ಈ ದೃಶ್ಯವನ್ನು ಜಗನ್ನಾಥರು ಹೃದಯಂಗಮವಾಗಿ ಅಭಿನಯಿಸುತ್ತ ದುರ್ಯೋಧನನನ್ನು ದಯನೀಯವಾಗಿ ಬೇಡಿಕೊಳ್ಳುವ ಮಾತುಗಳನ್ನು ಕೇಳುತ್ತಿದ್ದ ಪ್ರೇಕ್ಷಕರ ಕಣ್ಣುಗಳಲ್ಲಿ ತಂತಾನೆಯೇ ನೀರು ಬರುತ್ತಿದ್ದವು.

ಜಗನ್ನಾಥರು ತಾವು ಅಭಿನಯಿಸುವ ಪ್ರತಿಯೊಂದು ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಅದರಂತೆ ಪ್ರೇಕ್ಷಕರು ಕೂಡ ಅವರ ಅಭಿನಯವನ್ನು ಮೆಚ್ಚಿ, ತುಂಬು ಹೃದಯದಿಂದ ಆಯಾರು ಮಾಡಿ ಅವರನ್ನು ಹುರುದುಂಬಿಸುತ್ತಿದ್ದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೆ ದೊಡ್ಡಾಟದ ಪಾತ್ರಗಳನ್ನು ಮಾಡಲು ಪ್ರಾರಂಭಿಸಿದ ಜಗನ್ನಾಥರು ದೊಡ್ಡಾಟದ ರಂಗಕ್ಕೆ ತಮ್ಮ ಸುದೀರ್ಘವಾದ ಸೇವೆಯನ್ನು ಸಲ್ಲಿಸಿ, ಗದಗದ ಬೆಟಗೇರಿಯ ಹಿರಿಯ ಜನಪದ ಕಲಾವಿದರಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರ ಕಲೆಯನ್ನು ಕಲಾಸೇವೆಯನ್ನು ಕಂಡ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನಿತ್ತು ಗೌರವಿಸಿವೆ.

## ಪುಂಡಲೀಕಪ್ಪ ರಾಮಚಂದ್ರಪ್ಪ ಬಣ್ಣದ

'ರಾಮಾಯಣ' ದೊಡ್ಡಾಟದ ದಶರಥ ಮಹಾರಾಜರೆಂದೆ ಜನಪ್ರಿಯತೆಯನ್ನು ಪಡೆದ ಪುಂಡಲೀಕಪ್ಪನವರು ಗದುಗಿನ ಬೆಟಗೇರಿಯವರು. ತಂದೆ ರಾಮಚಂದ್ರಪ್ಪ, ತಾಯಿ ಲಕ್ಷ್ಮಮ್ಮನವರ ಎರಡನೆಯ ಮಗನಾಗಿ 1945ರಲ್ಲಿ ಜನಿಸಿದರು. ನಾಲ್ಕನೆಯ ತರಗತಿಯವರೆಗೆ ಓದಿದ ಇವರು ಮನೆತನದ ಆರ್ಥಿಕ ತೊಂದರೆಯಿಂದ ಮುಂದೆ ಓದಲಾಗದೆ ನೇಕಾರಿಕೆಯನ್ನು ಕಲಿತು, ಅದನ್ನೆ ತಮ್ಮ ವೃತ್ತಿಯನ್ನಾಗಿಸಿಕೊಂಡರು. ದಿನನಿತ್ಯ ದೊಡ್ಡಾಟದ ತಾಲೀಮನ್ನು ನೋಡಲು ಬರುತ್ತಿದ್ದ ಇವರ ಲವಲವಿಕೆಯನ್ನು ಕಂಡ ಕಥೆಗಾರ ಮಹಾಂತಗೊಂಡ ಮಲ್ಲಪ್ಪನವರು "ಲೇ ತಮ್ಮಾ ಪಾತ್ರಾ ಮಾಡ್ತಿಯೇನ್" ಎಂದು ಕೇಳಿದರು. ಅದಕ್ಕೆ ಯುವಕನಾದ ಪುಂಡಲೀಕಪ್ಪ 'ಕೊಟ್ಟರೆ ಮಾಡುತ್ತೇನೆ'

ಎಂದಾಗ 'ಮಾರ್ಕಂಡೇಯ್ಯ' ಆಟದ ಹದಿನಾರು ಮಾತಿನ ಚಿತ್ರನ ಪಾತ್ರವನ್ನು ಕೊಟ್ಟರು. ಆ ಚಿತ್ರನ ಪಾತ್ರವನ್ನು ಒಳ್ಳೆಯ ಯಶಸ್ವಿಯಾಗಿ ಅಭಿನಯಿಸಿ ತೋರಿಸಿದಾಗ, ಮುಂದೆ ಮೇಳದವರು ಪ್ರಯೋಗಿಸುತ್ತಿದ್ದ ಪ್ರತಿಯೊಂದು ಆಟದಲ್ಲಿ ಪ್ರಧಾನ ಪಾತ್ರಗಳನ್ನು ನಿರ್ವಹಿಸುವ ಅವಕಾಶ ಸಿಕ್ಕಿತು. ಹೀಗೆ ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೆ ರಂಗಭೂಮಿಯನ್ನು ಪ್ರವೇಶಿಸಿದರು.

ಮೇಳದವರು ಪ್ರಯೋಗಿಸುತ್ತಿದ್ದ ದೊಡ್ಡಾಟಗಳಲ್ಲಿ ಪ್ರಮುಖ ಪಾತ್ರಗಳನ್ನು ಮಾಡುತ್ತಿದ್ದರು. 'ದಕ್ಷಬ್ರಹ್ಮ'ದಲ್ಲಿ ಶ್ರೀಕೃಷ್ಣ, 'ರಾಮಾಯಣ'ದಲ್ಲಿ ಒಮ್ಮೆ ದಶರಥ ಮತ್ತೊಮ್ಮೆ ಮಾರೀಚನ, 'ಭಕ್ತ ಮಾರ್ಕಂಡೇಯ'ದಲ್ಲಿ ಒಮ್ಮೆ ದೇವೇಂದ್ರ ಮತ್ತೊಮ್ಮೆ ಮಾರ್ಕಂಡೇಯನ, 'ರತಿ ಕಲ್ಯಾಣ'ದಲ್ಲಿ ವಶಿಷ್ಠ, 'ಲಕ್ಷಣಿ ಕಲ್ಯಾಣಿ'ದಲ್ಲಿ ಬಾಲಚಂದ್ರನ ಪಾತ್ರ ಹೀಗೆ ದೊಡ್ಡಾಟಗಳ ಬೇರೆ ಬೇರೆ ಪಾತ್ರಗಳನ್ನು ಯಶಸ್ವಿಯಾಗಿ ಅಭಿನಯಿಸಿದ ಶ್ರೇಯಸ್ಸು ಇವರದು. ಇವರು ಅಭಿನಯಿಸಿದ ಅತಿ ಹೆಚ್ಚು ಜನಪ್ರಿಯತೆಯನ್ನು ಪಡೆದ ಪಾತ್ರಗಳೆಂದರೆ 'ರಾಮಾಯಣ'ದ ದಶರಥನ ಪಾತ್ರ ಮತ್ತು 'ಭಕ್ತ ಮಾರ್ಕಂಡೇಯ'ದ ಚಿತ್ರನ ಪಾತ್ರ. 'ರಾಮಾಯಣ'ದಲ್ಲಿ ರಾಮನು ವನವಾಸಕ್ಕೆ ಹೋಗುವ ದೃಶ್ಯವೊಂದರಲ್ಲಿ ದಶರಥನ ಪಾತ್ರವನ್ನು ನಿರ್ವಹಿಸುತ್ತಿದ್ದ ಇವರ ಶೋಕತಪ್ತವಾದ ಮಾತುಗಳು ಪ್ರೇಕ್ಷಕರ ಮನಕಲಕುವಂತಿರುತ್ತಿದ್ದವು. ಅದರಂತೆ 'ಭಕ್ತ ಮಾರ್ಕಂಡೇಯ' ಆಟದ ಯಮಧರ್ಮರಾಜನ ಆಸ್ಥಾನದ ಸನ್ನಿವೇಶದಲ್ಲಿ ಚಿತ್ರನ ಪಾತ್ರವನ್ನು ಅಭಿನಯಿಸುತ್ತ ಹೇಳುತ್ತಿದ್ದ ನೀತಿಬೋಧಕ ಮಾತುಗಳನ್ನು ಕೇಳಿ ಪ್ರೇಕ್ಷಕರು ಚಪ್ಪಾಳೆ ಹಾಕುತ್ತಿದ್ದರು. ಇವರ ದಶರಥನ ಪಾತ್ರವಿದ್ದ 'ರಾಮಾಯಣ' ದೊಡ್ಡಾಟವೂ ಧಾರವಾಡ ಆಕಾಶವಾಣಿಯಿಂದ ಪ್ರಸಾರಗೊಂಡಿದೆ.

ದೆಹಲಿ, ಬೆಂಗಳೂರು, ಮೈಸೂರು, ಉಡುಪಿ, ಹೊರನಾಡು, ಧರ್ಮಸ್ಥಳ, ಧಾರವಾಡ, ಹಂಪಿ ಮುಂತಾದ ಕಡೆಗಳಲ್ಲಿ ಬೇರೆ ಬೇರೆ ದೊಡ್ಡಾಟಗಳನ್ನು ಪ್ರಯೋಗಿಸಿ ಅಲ್ಲಿಯ ಜನರ ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ದೊಡ್ಡಾಟಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಅಪಾರ ಅನುಭವ ಪಡೆದ ಪುಂಡಲೀಕಪ್ಪನವರು ಈ ಕಲೆಯ ಬಗ್ಗೆ ವಿಶೇಷ ಕಾಳಜಿಯುಳ್ಳವರಾಗಿದ್ದಾರೆ. ತಾವು ಅಳಿದರೂ ಈ ಕಲೆ ಉಳಿಯಬೇಕು, ಬೆಳೆಯಬೇಕು ಎಂಬ ಭಾವನೆಯುಳ್ಳ ಇವರು, ಯುವಕರಿಗೆ ದೊಡ್ಡಾಟದ ತಾಲೀಮು ನೀಡುತ್ತಿದ್ದಾರೆ. ಅರವತ್ತೆರಡರ ಹರೆಯದ ಈ ಹಿರಿಯ ಜನಪದ ಕಲಾವಿದನ ಸೇವೆಯನ್ನು ಗುರುತಿಸಿ ಸ್ಥಳೀಯ ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

# ಫಕೀರಪ್ಪ ವಿರುಪಾಕ್ಷಪ್ಪ ಕೆಂಚಗೊಂಡಿ

ದೊಡ್ಡಾಟಗಳ ನಾರದರೆಂದೆ ಪ್ರಸಿದ್ಧರಾದ ಫಕೀರಪ್ಪ ಕೆಂಚಗೊಂಡಿಯವರು ಗದುಗಿನ ಬೆಟಗೇರಿಯ 'ಹೊಸ ಬನಶಂಕರಿ ದೊಡ್ಡಾಟ ಮೇಳ'ದ ಹಿರಿಯ ಜನಪದ ಕಲಾವಿದರು. ಇವರ ತಂದೆ ವಿರುಪಾಕ್ಷಪ್ಪ, ತಾಯಿ ನೀಲಮ್ಮನವರ ಮಗನಾಗಿ 1942ರಲ್ಲಿ ಜನಿಸಿದರು. ಇವರು ಕುರುವಿನ ಶೆಟ್ಟಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ತಮ್ಮ ಎಂಟನೆಯ ವಯಸ್ಸಿನಲ್ಲಿಯೆ 'ದಕ್ಷಬ್ರಹ್ಮ' ದೊಡ್ಡಾಟದಲ್ಲಿ ಗಣಪತಿಯ ಪಾತ್ರವನ್ನು ಮಾಡಿದರು. ಹೊಸ ಬನಶಂಕರಿ ಗುಡಿಯ ಬಣ್ಣದ ಮನೆಯಲ್ಲಿ ದಿನನಿತ್ಯ ಸಂಜೆಯ ವೇಳೆಯಲ್ಲಿ ನಡೆಯುತ್ತಿದ್ದ ತಾಲೀಮನ್ನು ನೋಡಲು ಹೋಗುತ್ತಿದ್ದರು. ಒಂದು ದಿನ ಕಥೆಗಾರರು ಹಾಗೂ ಮಾವನವರಾದ ಮಲ್ಲಪ್ಪ ಮಹಾಂತಗೊಂಡರು ಬಾಲಕನಾದ ಫಕೀರಪ್ಪನ ಮುಖಚರ್ಯೆಯನ್ನು ವೀಕ್ಷಿಸಿ 'ಎಲೆ ಹುಡುಗಾ ನೀ ಗಣಪತಿ ಪಾತ್ರಮಾಡು' ಎಂದು ಹೇಳಿದರು. ಬಾಲಕನಾದ ಫಕೀರಪ್ಪ ಒಳ್ಳೆಯರೀತಿಯಲ್ಲಿ ಮಾಡಿದಾಗ ಆ ಪಾತ್ರ ಇವನಿಗೆ ಖಾಯಂ ಆಯಿತು.

'ದಕ್ಷಬ್ರಹ್ಮ' ದೊಡ್ಡಾಟವನ್ನು ತಯಾರು ಮಾಡಿಕೊಂಡು ಕಥೆಗಾರ ಮಲ್ಲಪ್ಪನವರು ತಮ್ಮ ತಂಡದೊಂದಿಗೆ ಬೆಂಗಳೂರಿಗೆ ಹೋದಾಗ ಗಣಪತಿಯ ಪಾತ್ರ ನಿರ್ವಹಿಸುತ್ತಿದ್ದ ಬಾಲಕ ಫಕೀರಪ್ಪನಿಗೆ ನಾಲ್ಕನೆಯ ತರಗತಿಯ ಪರೀಕ್ಷೆಗಳು ನಡೆಯುತ್ತಿದ್ದವು. ಅವುಗಳನ್ನು ಬಿಟ್ಟು ಬೆಂಗಳೂರಿಗೆ ಹೋಗಿ ಮರಳಿ ಬರುವಷ್ಟರಲ್ಲಿ ಪರೀಕ್ಷೆಗಳೆಲ್ಲ ಮುಗಿದಿದ್ದವು. ಹೀಗಾಗಿ ಶಾಲೆಗೆ ಶರಣು ಹೊಡೆದು ನೇಕಾರಿಕೆಯನ್ನು ಕಲಿತು ಅದನ್ನೆ ವೃತ್ತಿಯಾಗಿಸಿಕೊಂಡನು. ಮೇಳದ ಖಾಯಂ ಕಲಾಸದಸ್ಯರಾಗಿ ಪಾತ್ರಗಳನ್ನು ಮಾಡಲು ಪ್ರಾರಂಭಿಸಿದರು. ಮೇಳದವರು ಪ್ರಯೋಗಿಸುತ್ತಿದ್ದ 'ದಕ್ಷಬ್ರಹ್ಮ', 'ಲಕ್ಷಣಿ ಕಲ್ಯಾಣ', 'ಅಭಿಮನ್ಯು ಕಾಳಗ', 'ತ್ರಿಪುರ ಸಂಹಾರ' ಮುಂತಾದ ದೊಡ್ಡಾಟಗಳಲ್ಲಿ ಇವರಿಗೆ ನಾರದನ ಪಾತ್ರ ಖಾಯಂ ಆಗಿ ಬಿಟ್ಟಿತ್ತು. ಪ್ರತಿ ಆಟದಲ್ಲಿಯೂ ನಾರದನ ಪಾತ್ರವನ್ನು ಇವರು ವಿಭಿನ್ನವಾಗಿ ಅಭಿನಯಿಸುತ್ತಿದ್ದರು. 'ಭಕ್ತ ಮಾರ್ಕಂಡೇಯ'ದಲ್ಲಿ ಶ್ಯಾಮಲಿ ಮತ್ತು ಗುಪ್ತನ ಪಾತ್ರ, 'ರಾಮಾಯಣ'ದಲ್ಲಿ ರಾಮನ ಪಾತ್ರವನ್ನು ಸಹ ಚೆನ್ನಾಗಿ ಅಭಿನಯಿಸುತ್ತಿದ್ದರು.

ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ದುರ್ಗದಲ್ಲಿ 'ದಕ್ಷಬ್ರಹ್ಮ' ದೊಡ್ಡಾಟವನ್ನು ಪ್ರದರ್ಶಿಸಿ ಅಲ್ಲಿಯ ಜನರ ಮೆಚ್ಚುಗೆಯನ್ನು ಸಹ ಪಡೆದುಕೊಂಡರು. ಸತತ ನಾಲ್ಕು ದೊಡ್ಡಾಟಗಳಲ್ಲಿ ಕೇವಲ ನಾರದನ ಪಾತ್ರ ಒಂದನ್ನೆ ಅಭಿನಯಿಸುವ ಇವರಿಗೆ ಆ

ಪಾತ್ರದ ಬಗೆಗೆ ಬೇಸರವಾಗುತ್ತಿರಲಿಲ್ಲ ಬದಲಿಗೆ ಆಟದಿಂದ ಆಟಕ್ಕೆ ಆ ಪಾತ್ರವನ್ನು ನಟಿಸುತ್ತಿರುವಾಗ ಭಿನ್ನ-ವಿಭಿನ್ನವಾಗಿ ಕುಣಿದು, ಮಾತನಾಡುವ ಶೈಲಿಯನ್ನು ಬದಲಿಸಿ ಅಭಿನಯಿಸಿದ್ದರಿಂದ ತಮಗಷ್ಟೆ ಅಲ್ಲದೆ ಪ್ರೇಕ್ಷಕರಿಗೂ ಈ ನಾರದನ ಪಾತ್ರ ತುಂಬಾ ಮೆಚ್ಚುಗೆಯಾಗುತ್ತಿತ್ತು.

ಸುಮಾರು ಅರವತ್ತು ವರ್ಷಗಳವರೆಗೆ ನಿರಂತರವಾಗಿ ದೊಡ್ಡಾಟದ ರಂಗಸೇವೆಯನ್ನು ಮಾಡಿರುವುದು ಫಕೀರಪ್ಪನವರಿಗೆ ತೃಪ್ತಿ ತಂದಿದೆ. ತಮ್ಮ ಜೀವನದುದ್ದಕ್ಕೂ ಕೇವಲ ಒಂದೇ ಪಾತ್ರವನ್ನು ನಿರ್ವಹಿಸಿದ ಕಲಾವಿದರು ತುಂಬಾ ವಿರಳ. ಪ್ರತಿಭೆಯುಳ್ಳ ಕಲಾವಿದ, ವಿಭಿನ್ನ ಪಾತ್ರಗಳನ್ನು ಅಭಿನಯಿಸಲು ಆಸೆ ಪಡುತ್ತಾರೆ. ಆದರೆ ಇವರು ಕೇವಲ ನಾರದನ ಪಾತ್ರವನ್ನೆ ಅಭಿನಯಿಸಿ ತನ್ನೆಲ್ಲ ಪ್ರತಿಭೆಯನ್ನು ಆ ಪಾತ್ರದಲ್ಲಿಯೇ ಪ್ರದರ್ಶಿಸಿ ದೊಡ್ಡಾಟ ರಂಗಭೂಮಿಯ ನಾರದನೆಂದೇ ಜನಪ್ರಿಯತೆಯನ್ನು ಪಡೆದಿರುವುದು ಹೆಮ್ಮೆಯ ವಿಷಯವೆ ಸರಿ. ಈ ಅರವತ್ತರ ಹರೆಯದಲ್ಲೂ ಯುವಕರಿಗೆ ಬಣ್ಣದ ಮನೆಯಲ್ಲಿ ತರಬೇತಿಯನ್ನು ನೀಡಲು ಬರುತ್ತಿರುವುದನ್ನು ನೋಡಿದರೆ ಇವರ ರಂಗ ಪ್ರೇಮ ಎಂಥದು ಎಂಬುದು ಗೊತ್ತಾಗುತ್ತದೆ. ತಾನಳಿದರು ದೊಡ್ಡಾಟಗಳು ಉಳಿಯಬೇಕು-ಬೆಳೆಯಬೇಕು ಎನ್ನುವ ಈ ಹಿರಿಯ ಕಲಾವಿದರಿಗೆ ಗದಗ-ಬೆಟಗೇರಿಯ ಜನರು ಮಾನ-ಸನ್ಮಾನಗಳನ್ನು ನೀಡಿ ಗೌರವಿಸಿದ್ದಾರೆ.

## ಫಕೀರಪ್ಪ ಹನಮಪ್ಪ ತುರಾಯದ

ಉತ್ತರ ಕರ್ನಾಟಕದ ಜನಪದ ಕಲೆಗಳಾದ ದೊಡ್ಡಾಟ, ಕರಡಿ ಮಜಲು, ಮೊಹರಮ್ ಹೆಜ್ಜೆ ಕುಣಿತ, ಸಂಪ್ರದಾನಿ (ಹಲಗಿ) ವಾದನ ಹಾಗೂ ಮುಂತಾದ ಕಲೆಗಳನ್ನು ಕರಗತ ಮಾಡಿಕೊಂಡಿರುವ ಫಕೀರಪ್ಪ ತುರಾಯದರು, ರೋಣ ತಾಲೂಕಿನ ಜಕ್ಕಲಿ ಗ್ರಾಮದವರು. ತಂದೆ ಹನಮಪ್ಪ, ತಾಯಿ ಫಕೀರವ್ವ ಇವರ ಮಗನಾಗಿ 1948ರಲ್ಲಿ ಜನಿಸಿದರು. ಅಂಬಿಗರ ಸಮುದಾಯಕ್ಕೆ ಸೇರಿದ ಇವರು ಕೇವಲ ಒಂದನೆಯ ತರಗತಿಯವರೆಗೆ ಮಾತ್ರ ಓದಿದರು. ಗ್ರಾಮದ ಜನಪದ ಕಲೆಗಳಿಗೆ ಮಾರು ಹೋಗಿ ಕರಡಿ, ಹೆಜ್ಜೆಮೇಳ ಮತ್ತು ಹಲಗಿ ವಾದನವನ್ನು ಶಾಸ್ತ್ರೀಯವಾಗಿ ಕಲಿತರು. ನಂತರ ಹಸನಸಾಬ ನದಾಫ್ ಅವರ ಪ್ರೇರಣೆಯಿಂದ ದೊಡ್ಡಾಟದ ಕಲೆಯನ್ನು ಸಹ ಕರಗತ ಮಾಡಿಕೊಂಡು ದೊಡ್ಡಾಟದ ಕಲಾವಿದರಾದರು.

ಜಕ್ಕಲಿ ಗ್ರಾಮದಲ್ಲಿ ಪ್ರದರ್ಶಿಸುತ್ತಿದ್ದ ದೊಡ್ಡಾಟಗಳಲ್ಲೊಂದಾದ 'ಜಲಂಧರ'ದಲ್ಲಿ

ಸರಸ್ವತಿಯ ಪಾತ್ರವನ್ನು ಮಾಡುವ ಮೂಲಕ ಫಕೀರಪ್ಪನವರು ಜನಪದ ರಂಗಭೂಮಿಯನ್ನು ಪ್ರವೇಶಿಸಿದರು. ಮುಂದೆ 'ಶೂರ ಶಂಭರಾಸುರ'ದಲ್ಲಿ ಕೃಷ್ಣನ ಪಾತ್ರ, 'ತಾಮ್ರಧ್ವಜ ಮೈರಧ್ವಜ'ದಲ್ಲಿ ಮೇಘನಾಥನ ಪಾತ್ರ, 'ಶುರ ಪದ್ಮಾಸುರ'ದಲ್ಲಿ ಸಿಂಹವಕ್ರನ ಪಾತ್ರ, 'ಭೂಕೈಲಾಸ'ದಲ್ಲಿ ವೈಶ್ರವಣನ ಪಾತ್ರ ಹೀಗೆ ಹಲವಾರು ವಿಭಿನ್ನ ಪಾತ್ರಗಳನ್ನು ಅಚ್ಚುಕಟ್ಟಾಗಿ ಅಭಿನಯಿಸಿ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ. ಇವರು ಅಭಿನಯಿಸಿದ 'ಶೂರ ಶಂಭರಾಸುರ' ಆಟದ ಶ್ರೀಕೃಷ್ಣನ ಪಾತ್ರ ಮತ್ತು 'ಶೂರ ಪದ್ಮಾಸುರ' ಆಟದ ಸಿಂಹವಕ್ರನ ಪಾತ್ರ ಪ್ರೇಕ್ಷಕರ ಮನದಾಳದಲ್ಲಿ ಇನ್ನೂ ಅಚ್ಚಳಿಯದೆ ಹಚ್ಚ ಹಸುರಾಗಿ ನಿಂತಿವೆ. ಇವರ ಮಾತಿನ ಶೈಲಿ, ಪಾತ್ರಕ್ಕೆ ತಕ್ಕಂತೆ ಕುಣಿಯುವ ಕುಣಿತಗಳು ತುಂಬಾ ವೈಶಿಷ್ಟ್ಯಮಯವಾಗಿರುತ್ತಿದ್ದವು.

ನಮ್ಮ ಜನಪದ ಕಲಾವಿದರು ಒಂದೇ ಕಲೆಗೆ ಕಟ್ಟು ಬೀಳದೆ, ಹಲವಾರು ಜನಪದ ಕಲೆಗಳನ್ನು ಕರಗತ ಮಾಡಿಕೊಂಡಿರುತ್ತಾರೆ. ಹಾಗೆಯೇ ಫಕೀರಪ್ಪನವರು ಕೇವಲ ದೊಡ್ಡಾಟದ ಕಲಾವಿದರಾಗಿರದೆ ಗ್ರಾಮದ ಇನ್ನುಳಿದ ಜನಪದ ಕಲೆಗಳಾದ ಕರಡಿ ಬಾರಿಸುವುದರಲ್ಲಿಯೂ ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆ. ಕರಡಿಯ ಹಲವಾರು ತಾಳಗಳಾದ ಆದಿತಾಳ, ಜಂಪಾತಾಳ, ತ್ರಿತಾಳ ಮುಂತಾದ ತಾಳಗಳನ್ನು ಬೇರೆ ಬೇರೆ ಮಟ್ಟುಗಳಲ್ಲಿ ಬಾರಿಸಿ; ಶಹನಾಯಿ ನುಡಿಸುವವನ ರಾಗಕ್ಕೆ ಹಾಗೂ ರಾಗದ ಚೀಜಗಳಿಗೆ ತಕ್ಕಂತೆ ಸರಾಗವಾಗಿ ಬಾರಿಸುವ ಶೈಲಿಯನ್ನು ಕರಗತ ಮಾಡಿಕೊಂಡಿದ್ದಾರೆ. ಮೇಲಾಗಿ ಹಲಗಿ ಬಾರಿಸುವುದರಲ್ಲಿಯೂ ಪ್ರಾವಿಣ್ಯತೆಯನ್ನು ಪಡೆದುಕೊಂಡಿದ್ದಾರೆ. ವರ್ಷಕ್ಕೊಮ್ಮೆ ಬರುವ ಮೊಹರಮ್ ಹಬ್ಬದಲ್ಲಿ ಹೆಜ್ಜೆಯ ಮೇಳದೊಂದಿಗೆ ಹಲಗಿಯನ್ನು ಬಾರಿಸುತ್ತ ವಿವಿಧ ಬಗೆಯ ಹೆಜ್ಜೆಯ ಕುಣಿತಗಳನ್ನು ಹಾಕುವುದರಲ್ಲಿಯೂ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ.

ಅರವತ್ತರ ಹರೆಯದ ಹಿರಿಯ ಜನಪದ ಕಲಾವಿರಾದ ಫಕೀರಪ್ಪನವರು ತಮ್ಮ ಜೀವನದ ಸುದೀರ್ಘ ಸಮಯವನ್ನು ಜನಪದ ಕಲೆಗಳಿಗೆ ಮುಡಿಪಾಗಿಟ್ಟು, ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಇವರ ಜನಪದ ಕಲಾಸೇವೆಯನ್ನು ಗುರುತಿಸಿ ಸ್ಥಳೀಯ ಸಂಘ-ಸಂಸ್ಥೆಗಳು ಹಾಗೂ ವಿವಿಧ ಇಲಾಖೆಗಳು ಮಾನ-ಸನ್ಮಾನಗಳನ್ನಿತ್ತು ಗೌರವಿಸಿವೆ.

## ಬಡೆಸಾಬ ಹುಚ್ಚುಸಾಬ ನದಾಫ.

ಗದಗ ಜಿಲ್ಲೆಯ ರೋಣ ತಾಲ್ಲೂಕಿ ಜಕ್ಕಲಿ ಗ್ರಾಮದವರಾದ ಬಡೆಸಾಬ ಹುಚ್ಚುಸಾಬ ನದಾಪರು 1952 ಜೂನ್ ಒಂದರಂದು ತಂದೆ ಹುಚ್ಚುಸಾಬ, ತಾಯಿ

ರಾಜವಿಯವರ ಮಗನಾಗಿ ಜನಿಸಿದರು. ಪಿಂಜಾರ ಸಮುದಾಯಕ್ಕೆ ಸೇರಿದ ಇವರು ಮೊಹರಮಿನ ಹೆಜ್ಜೆಯ ಕುಣಿತ ಮತ್ತು ರಿವಾಯತ್ ಪದಗಳನ್ನು ಹಾಡುವುದರಲ್ಲಿ ನಿಸ್ಸೀಮರು. ತಮ್ಮನ್ನು ತಾವು ಗುರುತಿಸಿಕೊಂಡಿದ್ದು ಮಾತ್ರ ದೊಡ್ಡಾಟದ ಕಲಾವಿದರಾಗಿ.

ಬಡೆಸಾಬ ಇವರು ಬಡ ಕುಟುಂಬದಿಂದ ಬಂದವರು. ಮನೆಯ ಆರ್ಥಿಕ ಪರಿಸ್ಥಿತಿಯಿಂದ ಕೇವಲ ಒಂದನೇ ತರಗತಿಯವರೆಗೆ ಓದಿದರು. ಮುಂದೆ ಮನೆಕೆಲಸಕ್ಕೆ ತೊಡಗಿದರು. ಯುವಕರಾದಾಗ ಊರಿನಲ್ಲಿ ಮನೆಕಟ್ಟುವ ಗೌಂಡಿ ಕೆಲಸಕ್ಕೆ ಸೇರಿದರು. ಈ ಹೊತ್ತಿಗಾಗಲೇ ಮೊಹರಮ್‌ದ ಹೆಜ್ಜೆಯ ಕುಣಿತ ಹಾಗೂ ರಿವಾಯತ್ ಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಬಡೆಸಾಭರು ಊರ ಜನರ ಪ್ರೀತಿಗೆ ಪಾತ್ರರಾಗಿದ್ದರು. ಜಕ್ಕಲಿಗ್ರಾಮದಲ್ಲಿ ದೊಡ್ಡಾಟ ಕಲಿಸುತ್ತಿದ್ದ ಹಸನಸಾಬರು ಬಡೆಸಾಬರ ಪ್ರತಿಭೆಯನ್ನು ಕಂಡು 'ಶಂಭರಾಸುರ' ದೊಡ್ಡಾಟದಲ್ಲಿ ರುಕ್ಮಿಣಿಯ ಪಾತ್ರವನ್ನು ಮಾಡುವಂತೆ ಕೇಳಿಕೊಂಡಾಗ, ಇಪ್ಪತ್ತರ ಹರೆಯದ ಯುವಕನಾದ ಬಡೆಸಾಬರು ಯಾವುದೇ ಮುಜುಗರವಿಲ್ಲದೆ ಸ್ತ್ರೀ ಪಾತ್ರವನ್ನು ಒಪ್ಪಿಕೊಂಡು, ಗುರುಗಳು ಹೇಳಿಕೊಟ್ಟಂತೆ ನಯ ನಾಜೂಕಿನಿಂದ ಪಾತ್ರವನ್ನು ನಿರ್ವಹಿಸಿ ಆ ಸ್ತ್ರೀ ಪಾತ್ರಕ್ಕೆ ನ್ಯಾಯವನ್ನು ತಂದುಕೊಟ್ಟರು. ಅಂದಿನಿಂದ ಮೇಳದ ಖಾಯಂ ಕಲಾವಿದರಾದರು.

ಬಡೆಸಾಭರು ನೋಡಲಿಕ್ಕೆ ತೆಳ್ಳಗೆ, ದುಂಡನೆಯ ಮುಖ, ನೀಟಾದ ಮೂಗು ಇರುವುದರಿಂದ ಇವರಿಗೆ ಸ್ತ್ರೀಪಾತ್ರಗಳು ಸರಿಯಾಗಿ ಒಪ್ಪುತ್ತಿದ್ದವು. ಹೀಗಾಗಿ ಗುರುಗಳಾದ 'ಶಂಭರಾಸುರ' ದೊಡ್ಡಾಟದ ರುಕ್ಮಿಣಿಯ ಪಾತ್ರವನ್ನು ನಿರ್ವಹಿಸುವ ವೇಳೆಯಲ್ಲಿ ಬಣ್ಣದ ಮನೆಯಲ್ಲಿ ವೇಷ-ಭೂಷಣಗಳನ್ನು ಧರಿಸಿಕೊಂಡು ನಿಂತ ವೇಳೆಯಲ್ಲಿ ಬಣ್ಣದ ಮನೆಗೆ ಬಂದ ಗ್ರಾಮದ ಯುವಕರು ಬಡೆಸಾಬರನ್ನು ಗುರುತು ಹಿಡಿಯದೆ ಸ್ತ್ರೀ ಪಾತ್ರಕ್ಕೆ ನಿಜವಾಗಲೂ ಯಾರೋ ಒಬ್ಬ ಹೆಣ್ಣು ಮಗಳನ್ನು ಕರೆತಂದಿದ್ದಾರೆ ಎಂದು ಕ್ಷಣ ಹೊತ್ತು ನಿಂತು ನೋಡಿಕೊಂಡು ಹೋಗುತ್ತಿದ್ದರಂತೆ. ಪಾತ್ರವನ್ನು ಅಭಿನಯಿಸುವಾಗಲಂತೂ ಹೆಣ್ಣಿನ ಕಳೆತುಂಬಿ ನಯ-ನಾಜೂಕುಗಳಿಂದ ಪಾತ್ರಕ್ಕೆ ಮತ್ತಷ್ಟು ಮೆರಗು ತಂದು ಕೊಡುತ್ತಿದ್ದರು. ಮನಮೋಹಕವಾಗಿ ಅಭಿನಯಿಸಿ ಜನಪ್ರಿಯತೆಯನ್ನು ಪಡೆದ ಇವರು ಅದೇ ಆಟದ ಲಲಿತಾನ ಪಾತ್ರವನ್ನು ಮತ್ತೆ ದಾಸಿಯ ಪಾತ್ರಗಳನ್ನು ಸಹ ಮಾಡುತ್ತಿದ್ದರು. ಸ್ತ್ರೀ ಪಾತ್ರಕ್ಕೆ ಬೇಕಾದ ವೇಷಭೂಷಣಗಳನ್ನು ಸ್ವತಃ ತಾವೇ ತಯಾರಿಸಿಕೊಳ್ಳುತ್ತಿದ್ದರು.

ದೊಡ್ಡಾಟದ ಸ್ತ್ರೀ ಪಾತ್ರಧಾರಿಯೆಂದೆ ಪ್ರಸಿದ್ಧರಾದ ಇವರು 'ಶೂರ ಪದ್ಮಾಸುರ' ದೊಡ್ಡಾಟದಲ್ಲಿ ದೇವೇಂದ್ರನ ಮಗನಾದ ಜಯಂತನ ಪಾತ್ರವನ್ನು ಅಭಿನಯಿಸಿ ಜನ ಮೆಚ್ಚುಗೆಯನ್ನು ಪಡೆದರು. ಹೀಗೆ ದೊಡ್ಡಾಟದ ಪುರುಷ ಪಾತ್ರವಿರಲಿ ಅಥವಾ ಸ್ತ್ರೀ ಪಾತ್ರವೇ ಇರಲಿ ಆಯಾ ಪಾತ್ರಗಳ ಆಳಕ್ಕೆ ಇಳಿದು ಅಭಿನಯಿಸಿ ಜನಪ್ರಿಯತೆಯನ್ನು ಗಳಿಸಿದ ಹಿರಿಯ ಕಲಾವಿದರಾದ ಬಡೆಸಾಬರು ನಂತರದ ದಿನಗಳಲ್ಲಿ ಸಾರಥಿಯ

ಪಾತ್ರವನ್ನು ನಿರ್ವಹಿಸತೊಡಗಿದರು. ದೊಡ್ಡಾಟದಲ್ಲಿ ಇತರೆ ಪಾತ್ರಗಳನ್ನು ಮಾಡುವುದು ಒಂದು ದೃಷ್ಟಿಯಿಂದ ಸುಲಭ. ಆದರೆ ಸಾರಥಿಯ ಪಾತ್ರವನ್ನು ನಿರ್ವಹಿಸುವುದು ತುಸು ಕಠಿಣವಾದ ಕೆಲಸವೇ ಸರಿ. ಸಾರಥಿಗೆ ನಿರ್ಧಿಷ್ಟವಾದ ಮಾತುಗಳಿರುವುದಿಲ್ಲ. ಸನ್ನಿವೇಷಕ್ಕೆ ತಕ್ಕಂತೆ ತಿಳಿ ಹಾಸ್ಯದೊಂದಿಗೆ ಸಾರಥಿಯೆ ಮಾತುಗಳನ್ನು ನಿರ್ಮಿಸಿಕೊಂಡು ರಂಗದ ಮೇಲೆ ಬರುವ ಪುರುಷ ಹಾಗೂ ಸ್ತ್ರೀ ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸಿ ಕೊಡುವುದರೊಂದಿಗೆ ಪಾತ್ರಧಾರಿಗಳಿಂದ "ಏಲವೋ ಸಾರಥಿ ಹೊಲಸ ನಾರತಿ" ಎನ್ನುವಂತಹ ಮಾತುಗಳಿಂದ ಬೈಯಿಸಿಕೊಳ್ಳುತ್ತ ರಾತ್ರಿ-ಬೆಳತನಕ ಆಟವನ್ನು ಸುಸೂತ್ರವಾಗಿ ಮುಂದುವರೆಸಿಕೊಂಡು ಹೋಗಿ ಆಟವನ್ನು ಮುಗಿಸುವ ಜವಾಬ್ದಾರಿಯು ಸಾರಥಿಯ ಮೇಲಿರುತ್ತದೆ. ಇಂಥ ಸಾರಥಿಯ ಪಾತ್ರವನ್ನು ಬಡೆಸಾಬರು ಒಳ್ಳೆಯ ರೀತಿಯಿಂದ ನಿಭಾಯಿಸಿ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ. ಹೀಗೆ ದೊಡ್ಡಾಟದಲ್ಲಿ ಬರುವ ಸ್ತ್ರೀ ಪಾತ್ರ, ಪುರುಷ ಪಾತ್ರಗಳನ್ನಷ್ಟೆ ಅಲ್ಲದೆ ಸಾರಥಿಯ ಪಾತ್ರವನ್ನು ಸಹ ಅಷ್ಟೆ ಯಶಸ್ವಿಯಾಗಿ ನಿಭಾಯಿಸಿ 'ಸೈ' ಎನಿಸಿಕೊಂಡಿದ್ದಾರೆ.

ಜಕ್ಕಲಿ ಗ್ರಾಮದ ಹಿರಿಯ ಜನಪದ ಕಲಾವಿದರಾದ ಬಡೆಸಾಬರು ಸುಮಾರು ಮೂವತ್ತೈದು ವರ್ಷಗಳಿಂದ ಕಲಾಸೇವೆಯನ್ನು ಮಾಡುತ್ತ ಬಂದಿದ್ದಾರೆ. ಅವರ ದೊಡ್ಡಾಟದ ಗೀಳು ಇನ್ನೂ ಕಡಿಮೆಯಾಗಿಲ್ಲ. ಗ್ರಾಮದಲ್ಲಿ ಎಂಟು ದೊಡ್ಡಾಟದ ಮೇಳಗಳಿವೆ, ಯಾವುದೇ ಮೇಳದವರು ಯಾವುದೇ ಆಟ ಪ್ರದರ್ಶಿಸಲಿ ಅಲ್ಲಿ ಸಾರಥಿಯ ಪಾತ್ರವನ್ನು ಇವರೆ ನಿರ್ವಹಿಸುತ್ತಾರೆ. ಅಲ್ಲದೆ ಹಿಮ್ಮೇಳದವರಾಗಿಯೂ ಭಾಗವಹಿಸುತ್ತಾರೆ. ಊರಿನ ಯುವಕಲಾವಿದರಿಗೆ ತರಬೇತಿಯನ್ನು ನೀಡಿ, ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಇಂಥ ಹಿರಿಯ ಜನಪದ ಕಲಾವಿದರಾದ ಇವರಿಗೆ ಸ್ಥಳೀಯ-ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನು ನೀಡಿ ಗೌರವಿಸಿವೆ.

## ಬಸಪ್ಪ ದುಡಮಪ್ಪ ಸರಲಾ

ದೊಡ್ಡಾಟಗಳ ಭಿನ್ನ-ವಿಭಿನ್ನ ಪುರುಷ ಹಾಗೂ ಸ್ತ್ರೀ ಪಾತ್ರಗಳನ್ನು ನಿರ್ವಹಿಸಿ ಜನಪ್ರಿಯತೆಯನ್ನು ಪಡೆದ ಬಸಪ್ಪನವರು ಗದಗ-ಬೆಟಗೇರಿಯ "ಹೊಸ ಬನಶಂಕರಿ ದೊಡ್ಡಾಟ ಮೇಳ"ದ ಹಿರಿಯ ಕಲಾವಿದರು. ತಂದೆ ದುಡುಮಪ್ಪ, ತಾಯಿ ಲಕ್ಷ್ಮಮ್ಮನವರ ಮಗನಾಗಿ 1935ರಲ್ಲಿ ಜನಿಸಿದರು. ಮನೆಯಲ್ಲಿ ತಂದೆಯವರಿಗೆ ಕಣ್ಣು ಕಾಣುತ್ತಿರಲಿಲ್ಲ. ಆದ್ದರಿಂದ ತಾಯಿ ನೆಯ್ಗೆಯ ಕೂಲಿಯ ಕೆಲಸಕ್ಕೆ ಹೋಗುತ್ತಿದ್ದರು. ಮನೆಯಲ್ಲಿ ತುಂಬಾ ಬಡತನ ಹೀಗಾಗಿ ಹೆಚ್ಚಿನ ಶಾಲೆಯನ್ನು ಕಲಿಯಲಿಕ್ಕಾಗದೆ ಕೇವಲ ಎರಡನೆಯ ತರಗತಿಯವರೆಗೆ ಓದಿದ್ದಾರೆ. ದೊಡ್ಡಾಟದ ತಾಲೀಮು ನೋಡಲು ಹೋಗಿ ಅದರಿಂದ ಪ್ರೇರಣೆಗೊಂಡು ಕಥೆಗಾರ ಚೌಡಪ್ಪ ಮಹಾಂತಗೊಂಡ ಹಾಗೂ ರಂಗಪ್ಪ ನಾರಾಯಣಕೇರಿ ಅವರ ಸಹಾಯದಿಂದ 'ಕನಕಾಂಗಿ ಕಲ್ಯಾಣ' ದೊಡ್ಡಾಟದಲ್ಲಿಯ

ಗಣಪತಿ (ಗೋಪಾಲ) ಪಾತ್ರದಿಂದ ದೊಡ್ಡಾಟದ ರಂಗಭೂಮಿಗೆ ಪ್ರವೇಶಿಸಿದರು.

ಬಸಪ್ಪನವರು ತಮ್ಮ ಹದಿಮೂರನೆಯ ವಯಸ್ಸಿನಲ್ಲಿಯೆ 'ಗಿರಿಜಾ ಕಲ್ಯಾಣ'ದಲ್ಲಿಯ ಪ್ರಮುಖ ಪಾತ್ರವಾದ ರುಕ್ಮಿಣಿಯ ಪಾತ್ರವನ್ನು ತುಂಬಾ ಚೆನ್ನಾಗಿ ಅಭಿನಯಿಸಿ ಜನರ ಮೆಚ್ಚುಗೆಯನ್ನು ಪಡೆಯಲಾಗಿ, ಮುಂದೆ ಹೊಸಬನಶಂಕರಿ ದೊಡ್ಡಾಟ ಮೇಳದವರು ಪ್ರಯೋಗಿಸುತ್ತಿದ್ದ ಎಲ್ಲ ದೊಡ್ಡಾಟಗಳಲ್ಲಿಯೂ ಪ್ರಮುಖ ಪಾತ್ರಗಳನ್ನು ನಿರ್ವಹಿಸಲು ಪ್ರಾರಂಭಿಸಿದರು. 'ಶೂರ ಶಂಬರಾಸುರ' ದೊಡ್ಡಾಟದಲ್ಲಿ ರುಕ್ಮಿಣಿ, 'ದಕ್ಷಬ್ರಹ್ಮ'ದಲ್ಲಿ ಭೃಗುಋಷಿ, 'ವೀರ ಅಭಿಮನ್ಯು ಕಾಳಗ'ದಲ್ಲಿ ಕೃಷ್ಣ, 'ಭಕ್ತ ಮಾರ್ಕಂಡೇಯ'ದಲ್ಲಿ ಮಾರ್ಕಂಡೇಯನ ತಂದೆಯಾದ ಮುರಖಂಡ (ಮೃಕಂಡು) ಮುನಿಯ, 'ಲಕ್ಷಣಿ ಕಲ್ಯಾಣ'ದಲ್ಲಿ ಕುಶಾಲಮತಿ, 'ತ್ರಿಸರಾಸುರ ಸಂಹಾರ'ದಲ್ಲಿ ಸೀತೆಯಾಗಿ ಹೀಗೆ ಪುರುಷ ಪಾತ್ರಗಳನ್ನು ಹಾಗೂ ಸ್ತ್ರೀ ಪಾತ್ರಗಳನ್ನು ರಂಗಭೂಮಿಯ ಮೇಲೆ ಅಭಿನಯಿಸಿದ ಕೀರ್ತಿ ಇವರದು. ಒಬ್ಬ ಕಲಾವಿದ ಕೇವಲ ಪುರುಷ ಪಾತ್ರಗಳನ್ನಾಗಲಿ ಇಲ್ಲವೆ ಸ್ತ್ರೀ ಪಾತ್ರಗಳನ್ನಾಗಲಿ ನಿರ್ವಹಿಸಬಲ್ಲ. ಆದರೆ ನಮ್ಮ ಜನಪದ ಕಲಾವಿದರು ಸ್ತ್ರೀ-ಪುರುಷ ಪಾತ್ರಗಳನ್ನು ಮೇಲಾಗಿ ದೈತ್ಯ ಪಾತ್ರಗಳನ್ನು ಅಷ್ಟೇ ನೈಜವಾಗಿ ರಂಗಭೂಮಿಯ ಮೇಲೆ ನಿರ್ವಹಿಸಬಲ್ಲರು ಎಂಬುದಕ್ಕೆ ನಮ್ಮ ಬಸಪ್ಪನವರು ಸಾಕ್ಷಿಯಾಗಿ ನಿಲ್ಲುತ್ತಾರೆ.

ರುಕ್ಮಿಣಿಯ ಪಾತ್ರವನ್ನು ಎರಡು ಆಟಗಳಲ್ಲಿ, ಕೃಷ್ಣನ ಪಾತ್ರವನ್ನು ಎರಡು ಆಟಗಳಲ್ಲಿ, ಆಯಾ ಸ್ತ್ರೀ-ಪುರುಷ ಪಾತ್ರಗಳನ್ನು ಪಾತ್ರಗಳ ಮೂಲ ಅಭಿರುಚಿಯಂತೆ ಅಭಿನಯಿಸಿ ಜನಪ್ರಿಯತೆಯನ್ನು ಪಡೆದಿರುವುದನ್ನು ನೋಡಿದರೆ ಇವರೊಬ್ಬ ಅಭಿಜಾತ ಜನಪದ ಕಲಾವಿದರು ಎಂಬುದು ಸ್ಪಷ್ಟವಾಗುತ್ತದೆ. ಇನ್ನೆರಡು ಆಟಗಳಾದ ಮಾರ್ಕಂಡೇಯ ಮತ್ತು ದಕ್ಷಬ್ರಹ್ಮದಲ್ಲಿ ಎರಡು ವಿಭಿನ್ನ ಮುನಿಗಳ ಪಾತ್ರವನ್ನು ನಿರ್ವಹಿಸಿದ್ದಾರೆ. ಒಂದು ತೀರಾ ಕೋಪಿಷ್ಟ ಭೃಗು ಮುನಿಯ ಪಾತ್ರ, ಇನ್ನೊಂದು ಅಷ್ಟೆ ಸಾತ್ವಿಕವಾದ ಮೃಕಂಡ ಮುನಿಯ ಪಾತ್ರ ಇವೆರಡು ಪಾತ್ರಗಳನ್ನು ಯಶಸ್ವಿಯಾಗಿ ಅಭಿನಯಿಸಿ ಜನಮೆಚ್ಚುಗೆಯನ್ನು ಸಹ ಪಡೆದಿದ್ದಾರೆ. ಅಷ್ಟೇ ಅಲ್ಲದೆ ದೆಹಲಿಯಲ್ಲಿ 'ತ್ರಿಸರಾಸುರ ಸಂಹಾರ' ದೊಡ್ಡಾಟವನ್ನು ಪ್ರದರ್ಶಿಸುತ್ತಿರುವಾಗ ದೆಹಲಿಯ ಪ್ರೇಕ್ಷಕರು ಇವರ ಸೀತಾಮಾತೆಯ ಪಾತ್ರವನ್ನು ಕಂಡು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು ಎಂದು ತಾವೇ ಹೇಳಿಕೊಳ್ಳುವಾಗ ಬಸಪ್ಪನವರಲ್ಲಿ ಆತ್ಮ ತೃಪ್ತಿಯ ಛಾಯೆ ಎದ್ದು ಕಾಣುತ್ತಿತ್ತು. ಬೆಂಗಳೂರು, ಉಡುಪಿ, ಧಾರವಾಡ, ಹೊರನಾಡು ಮುಂತಾದ ಕಡೆಗಳಲ್ಲಿ ಮೇಳದವರು ತಮ್ಮ ಬೇರೆ ಬೇರೆ ಆಟಗಳನ್ನು ಪ್ರಯೋಗಿಸುತ್ತಿದ್ದಾಗಲೂ ಬಸಪ್ಪನವರು

ತಮ್ಮ ಭಿನ್ನ-ವಿಭಿನ್ನ ಪಾತ್ರಗಳಿಂದ ಜನರ ಮೆಚ್ಚುಗೆಯನ್ನು ಪಡೆದಿರುವುದುಂಟು.

ಜನಪದ ರಂಗಭೂಮಿಗೆ ಸುಮಾರು ಐವತ್ತೆರಡು ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿದ ಇವರು ಈಗಲೂ ದೊಡ್ಡಾಟದ ಹಿಮ್ಮೇಳದವರಾಗಿ ಸೇವೆಸಲ್ಲಿಸುತ್ತಲಿದ್ದಾರೆ. ಅಲ್ಲದೆ ಯುವಕರಲ್ಲಿ ದೊಡ್ಡಾಟಗಳ ಬಗೆಗೆ ಆಸಕ್ತಿಯನ್ನು ತುಂಬಿ ಜನಪದ ಕಲೆಯನ್ನು ಉಳಿಸಿ-ಬೆಳೆಸುವ ಪ್ರಯತ್ನ ಮಾಡುತ್ತಿದ್ದಾರೆ. ಇಂಥ ಹಿರಿಯ ಜನಪದ ಕಲಾವಿದರ ರಂಗಸೇವೆಯನ್ನು ಗುರುತಿಸಿ ಗದಗ-ಬೆಟಗೇರಿಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನಿತ್ತು ಗೌರವಿಸಿವೆ.

## ಬಾಬುಸಾಬ ಹುಸೇನಸಾಬ ಯಮನೂರ

ಮೂಡಲಪಾಯ ದೊಡ್ಡಾಟಗಳ ಸ್ತ್ರೀ ಹಾಗೂ ಪುರುಷ ಪಾತ್ರಗಳನ್ನು ನಿರ್ವಹಿಸಿದ ಗದಗ-ಬೆಟಗೇರಿಯ ಹಿರಿಯ ಜನಪದ ಕಲಾವಿದರಾದ ಬಾಬುಸಾಬ ಯಮನೂರ ಇವರ ತಂದೆ ಹುಸೇನಸಾಬ, ತಾಯಿ ಸೈದಾಬಿಯವರ ಮಗನಾಗಿ 1945ರಲ್ಲಿ ಜನಿಸಿದರು. ಮೂರನೆಯ ತರಗತಿಯವರೆಗೆ ಓದಿ ಮನೆಯ ಆರ್ಥಿಕ ತೊಂದರೆಯಿಂದ ಓದನ್ನು ಮೊಟಕುಗೊಳಿಸಿ ಕೂಲಿನಾಲಿಯನ್ನು ಮಾಡುತ್ತ ಬೆಳೆದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ದೊಡ್ಡಾಟಗಳಲ್ಲಿ ಪಾತ್ರ ಮಾಡಲು ಪ್ರಾರಂಭಿಸಿದರು. ಮನೆಯ ಪಕ್ಕದಲ್ಲಿಯೆ 'ಹೊಸ ಗರಡಿ ಮೇಳ'ದವರ 'ಕೃಷ್ಣಗಾರುಡಿ' ದೊಡ್ಡಾಟದ ತಾಲೀಮು ನೋಡಲು ಹೋಗುತ್ತಿದ್ದ ಇವರಿಗೆ, ಕಥೆಗಾರ ಮಲ್ಲಪ್ಪ ಸಕ್ರಿಯವರು ಗಣಪತಿಯ ಪಾತ್ರ ಮಾಡಲು ಕೊಟ್ಟರು. ಈ ಪಾತ್ರವನ್ನು ಆಟದ ಪ್ರದರ್ಶನದ ದಿನದಂದು ಚೆನ್ನಾಗಿ ನಿರ್ವಹಿಸಿದ್ದರಿಂದ ಇವರನ್ನು ತಮ್ಮ ಮೇಳದ ಖಾಯಂ ಸದಸ್ಯರನ್ನಾಗಿ ಮಾಡಿಕೊಂಡ ಮಲ್ಲಪ್ಪನವರು, ನಂತರ ಮೇಳದವರು ಪ್ರಯೋಗಿಸುತ್ತಿದ್ದ ಪ್ರತಿಯೊಂದು ದೊಡ್ಡಾಟಗಳಲ್ಲಿ ಪ್ರಮುಖ ಪಾತ್ರಗಳನ್ನು ಅಭಿನಯಿಸುವ ಅವಕಾಶ ಕೊಟ್ಟರು.

'ಹೊಸ ಗರಡಿ ಮೇಳ'ದವರು ಪ್ರದರ್ಶಿಸುತ್ತಿದ್ದ ಕರ್ಣಪರ್ವ'ದಲ್ಲಿ ಕುಂತಾದೇವಿಯ; "ಶ್ರೀ ಕೃಷ್ಣ ಗಾರುಡಿ'ಯಲ್ಲಿ ದ್ರೌಪದಿಯ, 'ರಾಮಾಂಜನೇಯ ಯುದ್ಧ' ದಲ್ಲಿ ಚಂದ್ರ ಭಾನುವಿನ, 'ರಾಮನ ಪಟ್ಟಾಭಿಷೇಕ'ದಲ್ಲಿ ಮಂಡೋದರಿಯ, 'ಐರಾವಣ-ಮೈಹಿರಾವಣ'ದಲ್ಲಿ ಚಂದ್ರಸೇನನ ಪಾತ್ರಗಳನ್ನು ನಿರ್ವಹಿಸಿದ್ದಲ್ಲದೆ 'ಹೊಸ ಬನಶಂಕರಿ ಗುಡಿಯ ಮೇಳ'ದವರು ಪ್ರಯೋಗಿಸುತ್ತಿದ್ದ 'ದಕ್ಷಬ್ರಹ್ಮ'ದಲ್ಲಿ ವೀರಭದ್ರನ, 'ರಾಮಾಯಣ'ದಲ್ಲಿ ವಾಲಿಯ ಪಾತ್ರ ಹೀಗೆ ಹತ್ತು ಹಲವಾರು ವಿಭಿನ್ನ ಸ್ತ್ರೀ ಹಾಗೂ

ಪುರುಷ ಪಾತ್ರಗಳನ್ನು ಆಯಾ ಪಾತ್ರಗಳ ಗುಣ-ಸ್ವಭಾವಕ್ಕನುಗುಣವಾಗಿ ಅಭಿನಯಿಸಿ ಜನಪ್ರಿಯತೆಯನ್ನು ಗಳಿಸಿದ ಬಾಬುಸಾಬರ ಪ್ರತಿಭೆಯನ್ನು ಮೆಚ್ಚಿಕೊಳ್ಳಬೇಕು. ಇಷ್ಟೆಲ್ಲ ಪಾತ್ರಗಳಲ್ಲಿ ಅಭಿನಯಿಸಿದ ಇವರಿಗೆ 'ಕರ್ಣಪರ್ವ'ದಲ್ಲಿಯ ಕುಂತಾದೇವಿಯ ಪಾತ್ರ, 'ಶ್ರೀಕೃಷ್ಣಗಾರುಡಿ'ಯಲ್ಲಿಯ ದ್ರೌಪದಿಯ ಪಾತ್ರ, 'ದಕ್ಷಬ್ರಹ್ಮ'ದಲ್ಲಿಯ ವೀರಭದ್ರನ ಪಾತ್ರ, 'ರಾಮಾಯಣ'ದಲ್ಲಿಯ ವಾಲಿಯ ಪಾತ್ರಗಳು ತುಂಬಾ ನೆಮ್ಮದಿಯನ್ನು ತಂದು ಕೊಟ್ಟ ಪಾತ್ರಗಳು ಎಂದು ಅವರೆ ಹೇಳುತ್ತಾರೆ. ಇವರ ಇನ್ನೊಂದು ವಿಶೇಷತೆಯೆಂದರೆ ತಾವು ಅಭಿನಯಿಸುತ್ತಿದ್ದ ದೊಡ್ಡಾಟಗಳಲ್ಲಿ ತಮ್ಮ ಪಾತ್ರ ಬರುವವರೆಗೆ ಸಾರಥಿಯ ಪಾತ್ರವನ್ನು ನಿರ್ವಹಿಸಿ, ತಮ್ಮ ಪಾತ್ರ ಬಂದಕೂಡಲೆ ಆ ಪಾತ್ರವನ್ನು ಬಿಟ್ಟು ಬೇರೆಯವರಿಗೆ ಒಪ್ಪಿಸಿ ತಮಗೆ ವಹಿಸಿಕೊಟ್ಟ ಪಾತ್ರವನ್ನು ನಿರ್ವಹಿಸುತ್ತಿದ್ದರು. ಹಾಸ್ಯಭರಿತವಾದ ಇವರ ಸಾರಥಿಯ ಪಾತ್ರ ನೋಡುಗರ ಮನಸ್ಸಿಗೆ ಬಹಳಷ್ಟು ಮುದ ನೀಡುತ್ತಿತ್ತು. ಇವರು ಅಭಿನಯಿಸಿದ 'ಶ್ರೀ ಕೃಷ್ಣ ಗಾರುಡಿ' ಮತ್ತು 'ಕರ್ಣ ಪರ್ವ' ದೊಡ್ಡಾಟಗಳು ಧಾರವಾಡದ ಆಕಾಶವಾಣಿಯ ಮೂಲಕ ಪ್ರಸಾರಗೊಂಡಿವೆ. 'ಶ್ರೀಕೃಷ್ಣ ಗಾರುಡಿ' ಮತ್ತು 'ರಾಮಾಂಜನೆಯ ಯುದ್ಧ' ಎಂಬ ದೊಡ್ಡಾಟಗಳು ಬೆಂಗಳೂರಿನ ದೂರದರ್ಶನದಿಂದ ಪ್ರಸಾರಗೊಂಡಿವೆ. ದೆಹಲಿ, ಬೆಂಗಳೂರು, ಧಾರವಾಡ, ಉಡುಪಿ, ಹೊರನಾಡು, ಧರ್ಮಸ್ಥಳಗಳಲ್ಲಿ ದೊಡ್ಡಾಟವನ್ನು ಪ್ರದರ್ಶಿಸಿದ್ದಾರೆ. ಮೈಸೂರಿನ ದಸರಾ ಮಹೋತ್ಸವಗಳಲ್ಲಿ ಮತ್ತು ಹಂಪಿ ಉತ್ಸವ ಮತ್ತು ಲಕ್ಕುಂಡಿ ಉತ್ಸವಗಳಲ್ಲಿ ಪಾಲ್ಗೊಂಡು ತಮ್ಮ ದೊಡ್ಡಾಟಗಳನ್ನು ಪ್ರದರ್ಶಿಸಿದ್ದಾರೆ ಅಷ್ಟೇ ಅಲ್ಲದೆ ಅಲ್ಲಿಯ ಜನರ ಪ್ರೀತಿಗೆ ಹಾಗೂ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಬಾಬುಸಾಬವರು ಕೇವಲ ದೊಡ್ಡಾಟದಲ್ಲಿ ಮಾತ್ರ ನಿಸ್ಸೀಮರಲ್ಲ ಬದಲಾಗಿ ಭಜನೆಯ ಪದಗಳನ್ನು ಸಹ ಅಷ್ಟೆ ಸುಶ್ರಾವ್ಯವಾಗಿ ಹಾಡಬಲ್ಲರು. ಕಲೆಗೆ ಹಾಗೂ ಕಲಾವಿದನಿಗೆ ಯಾವುದೇ ಜಾತಿ-ಮತ ಅಡ್ಡವಾಗುವುದಿಲ್ಲ ಎಂಬುದಕ್ಕೆ ಈ ಬಾಬುಸಾಬರೆ ಸಾಕ್ಷಿ. ದೊಡ್ಡಾಟಗಳ ರಂಗ ಕಲೆಗೆ ಮಾರುಹೋದ ಇವರು ಸುಮಾರು ನಲವತ್ತು ವರ್ಷಗಳ ಸುದೀರ್ಘ ಸೇವೆಯನ್ನು ಈ ಜನಪದ ರಂಗ ಭೂಮಿಗಾಗಿ ನೀಡಿದ್ದಾರೆ. ಇಂದಿಗೂ ದೊಡ್ಡಾಟಗಳಲ್ಲಿ ಪಾತ್ರಗಳನ್ನು ಮಾಡುತ್ತಾರಲ್ಲದೆ ಕೆಲವೊಮ್ಮೆ ಹಿಮ್ಮೇಳದವರಾಗಿ ಭಾಗವಹಿಸುತ್ತಾರೆ. ಯುವಕರಿಗೆ ಕಲೆಯ ಬಗೆಗೆ ಪ್ರೇರಣೆಯನ್ನಿತ್ತು, ಕಲೆಯು ಉಳಿಯುವಂತೆ ಪ್ರಯತ್ನಿಸುತ್ತಿದ್ದಾರೆ. ಇಂಥ ಹಿರಿಯ ಜನಪದ ಕಲಾವಿದನ ಕಲಾಸೇವೆಯನ್ನು ಗುರುತಿಸಿದ ಕೆಲವು ಇಲಾಖೆಗಳು ಹಾಗೂ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನು ನೀಡಿ ಗೌರವಿಸಿವೆ.

# ಮಾರುತೆಪ್ಪ ಪರಮೇಶ್ವರಪ್ಪ ಇಂಡಿ

ದೊಡ್ಡಾಟಗಳಲ್ಲಿ ಬರುವ ಪಾತ್ರಗಳ ಗುಣ-ಲಕ್ಷಣಗಳಿಗೆ ತಕ್ಕಂತೆ ಪಾತ್ರಧಾರಿಗಳಿಗೆ ವೇಷ-ಭೂಷಣಗಳನ್ನು ತೊಡಿಸುವದರಲ್ಲಿ ಪ್ರಸಿದ್ಧಿಯನ್ನು ಪಡೆದ ಹಿರಿಯ ಜನಪದ ಕಲಾವಿದ. ಮಾರುತೆಪ್ಪ ಇಂಡಿಯವರ ತಂದೆ ಪರಮೇಶ್ವರಪ್ಪ, ತಾಯಿ ಲೋಕವ್ವ ಇವರ ಮೊದಲನೆಯ ಮಗನಾಗಿ 1952 ಜುಲೈ 31 ರಂದು ಬೆಟಗೇರಿಯಲ್ಲಿ ಜನಿಸಿದರು. ಇವರು ಐದನೆಯ ತರಗತಿಯವರೆಗೆ ಓದಿ ಮನೆತನದ ಆರ್ಥಿಕ ತೊಂದರೆಯಿಂದ ಮುಂದೆ ಓದಲಿಕ್ಕಾಗದೆ ನೆಯ್ಗೆಯ ಕೆಲಸವನ್ನು ಕಲಿತು ಅದನ್ನೆ ವೃತ್ತಿಯನ್ನಾಗಿ ಸ್ವೀಕರಿಸಿದರು. ದೊಡ್ಡಾಟದ ಹಿರಿಯ ಕಲಾವಿದರಾದ ಲಕ್ಷ್ಮಪ್ಪ ಗಡಾದ ಅವರ ಪ್ರಭಾವದಿಂದ ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೆ ಜನಪದ ರಂಗಭೂಮಿಯನ್ನು ಪ್ರವೇಶಿಸಿದರು. 'ಗಿರಿಜಾ ಕಲ್ಯಾಣ'ದ ಹೇಮಂತರಾಜನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದರಿಂದ 'ಹೊಸ ಬನಶಂಕರಿ ಮೇಳ'ದ ಕಾಯಂ ಸದಸ್ಯರಾದರು.

ಮೇಳದವರು ಪ್ರಯೋಗಿಸುತ್ತಿದ್ದ 'ಲಕ್ಷಣಿ ಕಲ್ಯಾಣ'ದಲ್ಲಿ ಶಾಂಬನ ಮಿತ್ರನಾದ ಬಾಲಚಂದ್ರನ ಪಾತ್ರ, 'ರಾಮಾಯಣ'ದಲ್ಲಿ ದಶರಥನ ಪಾತ್ರ ಮತ್ತೊಮ್ಮೆ ಮಂತ್ರಿಯ ಪಾತ್ರ, 'ಭಕ್ತ ಮಾರ್ಕಂಡೇಯ'ದಲ್ಲಿ ಕರಾಳನ ಪಾತ್ರ ಹೀಗೆ ಹಲವಾರು ಪುರುಷ ಪಾತ್ರಗಳನ್ನು ಜನಮೆಚ್ಚುವಂತೆ ಅಭಿನಯಿಸಿ ಯಶಸ್ವಿಯಾಗಿದ್ದಾರೆ. 'ಭಕ್ತಮಾರ್ಕಂಡೇಯ'ದ ಕರಾಳನ ಪಾತ್ರವು ತಮಗೆ ತುಂಬಾ ತೃಪ್ತಿಯನ್ನು ತಂದುಕೊಟ್ಟಿದೆ ಎಂದು ಹೇಳಿಕೊಂಡಿದ್ದಾರೆ. ಇವರ ಇನ್ನೊಂದು ವಿಶೇಷತೆಯೆಂದರೆ ದೊಡ್ಡಾಟದಲ್ಲಿ ಬರುವ ಸ್ತ್ರೀ-ಪುರುಷ ಪಾತ್ರಗಳಿಗೆ ವೇಷ-ಭೂಷಣಗಳನ್ನು ತಯಾರಿಸಿ ಸಮಯಕ್ಕೆ ಸರಿಯಾಗಿ ಆಯಾ ಪಾತ್ರಗಳನ್ನು ತಯಾರು ಮಾಡಿ ರಂಗಕ್ಕೆ ಕಳಿಸುವ ಕೆಲಸವನ್ನು ಚಾಕು-ಚಕ್ಯತೆಯಿಂದ ನಿರ್ವಹಿಸುತ್ತಿದ್ದರು. ದೊಡ್ಡಾಟಗಳ ವಿಶೇಷ ಪಾತ್ರಗಳಾದ ಹನುಮಂತ, ಭೃಗುಋಷಿ, ದಶರಥ, ಕೃಷ್ಣ, ಶಿವ ಹೀಗೆ ಮುಂತಾದ ಪಾತ್ರಗಳನ್ನು ಅವುಗಳ ಮೂಲ ಸ್ವರೂಪ ಕೆಡದಂತೆ ತಕ್ಷಣದಲ್ಲಿ ತಯಾರು ಮಾಡುತ್ತಿದ್ದರು. ವೇಷಭೂಷಣದ ಸಲುವಾಗಿ ದೊಡ್ಡಾಟ ನಡೆಯುವುದು ತಡವಾಯಿತು ಎಂದೆನಿಸಿಕೊಳ್ಳದಂತೆ ಆಯಾ ಪಾತ್ರಗಳನ್ನು ರೆಡಿಮಾಡಿ ನಿಲ್ಲಿಸಿ ಬಿಡುತ್ತಿದ್ದರು.

ಮೇಳದವರು ದೆಹಲಿ, ಬೆಂಗಳೂರು, ಉಡುಪಿ, ಮೈಸೂರು,ಧಾರವಾಡ, ಹಂಪಿ, ಲಕ್ಕುಂಡಿ, ಹೀಗೆ ಮುಂತಾದ ಕಡೆಗಳಲ್ಲಿ ತಮ್ಮ ಆಟಗಳನ್ನು ಪ್ರಯೋಗಿಸುವ ವೇಳೆಯಲ್ಲಿ ತಮ್ಮ ಕೈಚಳಕದಿಂದ ಆಟಕ್ಕೆ ತೊಂದರೆಯಾಗದಂತೆ ಪಾತ್ರಧಾರಿಗಳನ್ನು

ಕನಿಷ್ಟ ಎರಡು ತಾಸಿಗೆ ಮುಂಚೆಯೆ ತಯಾರು ಮಾಡುತ್ತಿದ್ದರು. ಎಲ್ಲ ಪಾತ್ರಧಾರಿಗಳಿಗೆ ವೇಷ-ಭೂಷಣಗಳನ್ನು ತೊಡಿಸಿದ ನಂತರ ಹಿಮ್ಮೇಳದಲ್ಲಿ ಬಂದು ಸೇರಿ ತಾಳವನ್ನು ನುಡಿಸುತ್ತ 'ಕೋಚ್' ಎಳೆಯುವ ಕೆಲಸವನ್ನೂ ಮಾಡುತ್ತಿದ್ದರು.

ಹೀಗೆ ದೊಡ್ಡಾಟದಲ್ಲಿ ಪಾತ್ರಧಾರಿಗಳಾಗಿ, ವೇಷಭೂಷಣಕಾರರಾಗಿ, ಹಿಮ್ಮೇಳದವರಾಗಿ ವಿಭಿನ್ನ ಭೂಮಿಕೆಯನ್ನು ಸಮರ್ಥವಾಗಿ ನಿಭಾಯಿಸಿ ಯಶಸ್ವಿಯಾದ ಹಿರಿಯ ಜನಪದ ಕಲಾವಿದ ಮಾರುತೆಪ್ಪನವರು ಸುಮಾರು ಮೂವತ್ತೈದು ವರ್ಷಗಳಿಂದ ರಂಗಕಲಾ ಸೇವೆಯನ್ನು ನಿಸ್ವಾರ್ಥದಿಂದ ಮಾಡುತ್ತಾ ಬಂದಿದ್ದಾರೆ. ಈಗಲೂ ಕೂಡ ಜನಪದ ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಇವರ ಕಲೆಯನ್ನು, ನಿಸ್ವಾರ್ಥ ಸೇವೆಯನ್ನು, ಜನಪದದ ಬಗೆಗಿನ ಕಳಕಳಿಯನ್ನು ಗುರುತಿಸಿ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನು ನೀಡಿ ಗೌರಿವಿಸಿವೆ.

## ಯಮನೂರಸಾಬ ಜಂದಿಸಾಬ ನದಾಫ

ದೊಡ್ಡಾಟದ ಕಥೆಗಾರ ಹಾಗೂ ಹಿಮ್ಮೇಳದವರೆಂದೇ ಪ್ರಸಿದ್ಧರಾದ ಯಮನೂರಸಾಬ ಅವರು ರೋಣ ತಾಲೂಕಿನ ಜಕ್ಕಲಿ ಗ್ರಾಮದವರು. ತಂದೆ ಜಂದಿಸಾಬ, ತಾಯಿ ಅಲ್ಲಾಬಿ ಅವರ ಮಗನಾಗಿ 1950ರಲ್ಲಿ ಜನಿಸಿದರು. ಇವರು ಮೂರನೆಯ ತರಗತಿಯವರೆಗೆ ಓದಿದ್ದಾರೆ. ಮನೆಯ ಆರ್ಥಿಕ ಪರಿಸ್ಥಿತಿಯಿಂದ ಓದು ಮುಂದುವರಿಸಲು ಆಗದೆ ಕೂಲಿಯ ಕೆಲಸಕ್ಕೆ ನಿಂತರು. ಅಲ್ಲದೆ ಮನೆಯಲ್ಲಿ ತಂದೆಯವರ ಕೈ ಕೆಳಗೆ ಕೆಲಸ ಮಾಡಲು ಆರಂಭಿಸಿದರು. ಗ್ರಾಮದ ಜನಪದ ಕಲೆಗಳಾದ ಹೆಜ್ಜೆಯ ಮೇಳ, ಕರಡಿ ಮಜಲು, ದೊಡ್ಡಾಟ ಮುಂತಾದ ಕಲೆಗಳಲ್ಲಿ ಆಸಕ್ತಿವಹಿಸಿ ಬಾಲ್ಯದಲ್ಲಿಯೇ ಮೊಹರಂ ದಿನದಂದು ನಡೆಯುವ ಹೆಜ್ಜೆಯನ್ನು ಮತ್ತು ಕರಬಲ್ ಹಾಡುಗಳನ್ನು ಕಲಿತರು ಗ್ರಾಮದ ದೊಡ್ಡಾಟದ ಮದ್ದಲಿಯ ಪಟುಗಳೆಂದೆ ಪ್ರಸಿದ್ಧರಾದ ಹಸನಸಾಬರ ಸಾಮಿಪ್ಯ ಬೆಳೆದು ಅವರಿಂದ ಕರಡಿ ಬಾರಿಸುವುದನ್ನು ಕಲಿತು "ತಾಂಬ್ರಧ್ವಜ ಮೈರ ಧ್ವಜ' ಆಟದ ಸ್ತ್ರೀ ಪಾತ್ರದೊಂದಿಗೆ ದೊಡ್ಡಾಟದ ರಂಗವನ್ನು ಪ್ರವೇಶಿಸಿದರು.

ಸಾಮಾನ್ಯ ಸ್ತ್ರೀ ಪಾತ್ರದೊಂದಿಗೆ ಪ್ರಾರಂಭಗೊಂಡ ಅವರ ರಂಗಸೇವೆ ಹತ್ತಾರು ದೊಡ್ಡಾಟಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸುವಂತಾಯಿತು. 'ಶೂರ ಶಂಬರಾಸೂರ'ದಲ್ಲಿ ರತಿದೇವಿಯ ಪಾತ್ರ ಇವರಿಗೆ ತುಂಬಾ ಚೆನ್ನಾಗಿ ಒಪ್ಪುತ್ತಿತ್ತು. ಈ ಪಾತ್ರದಿಂದ ಇವರು ಜನರ ಮೆಚ್ಚುಗೆಗೆ ಪಾತ್ರರಾದರಲ್ಲದೆ ಮುಂದೆ ಹಲವಾರು

ದೊಡ್ಡಾಟಗಳಲ್ಲಿ ಪ್ರಮುಖ ಪಾತ್ರಗಳನ್ನು ಗಿಟ್ಟಿಸಿಕೊಂಡರು. 'ಶೂರ ಪದ್ಮಾಸುರ'ದಲ್ಲಿ ಶಂಕುಪಾಲ, 'ಭೂಕೈಲಾಸ'ದಲ್ಲಿ ಇಂದ್ರಜಿತು, 'ವೀರ ಅಭಿಮನ್ಯು'ದಲ್ಲಿ –ಧರ್ಮರಾಜ, 'ಐರಾವಣ ಮೈರಾವಣ'ದಲ್ಲಿ ಐರಾವಣ, 'ಕುರುಕ್ಷೇತ್ರ'ದಲ್ಲಿ ಕರ್ಣ ಹೀಗೆ ಉತ್ತಮ ಪ್ರಮುಖ ವಿಭಿನ್ನ ಪುರುಷ ಪಾತ್ರಗಳನ್ನು ಅಭೂತ ಪೂರ್ವವಾಗಿ ನಿರ್ವಹಿಸಿ ಜನಪ್ರಿಯತೆಯನ್ನು ಗಳಿಸಿದ ಹಿರಿಯ ಜನಪದ ಕಲಾವಿದರಲ್ಲಿ ಇವರು ಒಬ್ಬರು. 'ಸುರ ಪದ್ಮಾಸುರ' ದೊಡ್ಡಾಟದಲ್ಲಿಯ ಪ್ರಮುಖ ಪಾತ್ರವಾದ ಶಂಕುಪಾಲನ ಪಾತ್ರವನ್ನು ನಿರ್ವಹಿಸುವುದರಲ್ಲಿ ಬಹಳಷ್ಟು ಯಶಸ್ವಿಯನ್ನು ಪಡೆದಿದ್ದಾರೆ.

ನಲ್ವತ್ತೈದು ವರ್ಷಗಳ ದೊಡ್ಡಾಟದ ಅನುಭವವಿರುವ ಇವರು ಈಗಲೂ ದೊಡ್ಡಾಟಗಳ ಬಣ್ಣದ ಮನೆಗೆ ಹೋಗಿ ಪಾತ್ರಧಾರಿಗಳಿಗೆ ಮಾತಿನ ಲಯಗಳನ್ನು, ಕುಣಿತಗಳನ್ನು ಹಾಗೂ ಅಭಿನಯಗಳನ್ನು ಹೇಳಿ ಕೊಡುತ್ತಾರೆ. ಒಮ್ಮೊಮ್ಮೆ ತಾವೇ ಕಥೆಗಾರರಾಗಿ ಕೆಲಸ ನಿರ್ವಹಿಸಿದ್ದುಂಟು.

ಕರಡಿ ಮಜಲಿನಲ್ಲಿ ದಿಮ್ಮು ಮತ್ತು ಚೌಗಡಿ ಬಾರಿಸುವುದರಲ್ಲಿಯೂ ಪ್ರವೀಣರು. ಪ್ರತಿ ವರ್ಷವೂ ನಡೆಯುವ ಮೊಹರಮ್ ಹಬ್ಬದಲ್ಲಿ ಹೆಜ್ಜೆ ಮೇಳವನ್ನು ತಯಾರಿಸಿ ವಿವಿಧ ಬಗೆಯ ಹೂವಿನ ಗುಚ್ಛಗಳನ್ನು ತಯಾರಿಸಿ, ಮನಮೋಹಕವಾಗಿ ಹೆಜ್ಜೆಯ ಮೇಳವನ್ನು ತಾಳಕ್ಕೆ ತಕ್ಕಂತೆ ಕುಣಿಸುವ ಕಾರ್ಯಕ್ರಮವನ್ನು ನಿರ್ವಹಿಸಿ ಕೂಡಿದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸುಮಾರು ಐವತ್ತೆಂಟನೆಯ ವಯಸ್ಸಿನಲ್ಲಿಯೂ ಇವರಲ್ಲಿದ್ದ ಜನಪದ ಕಲೆಗಳ ಬಗೆಗಿನ ಆಸಕ್ತಿ ಇನ್ನೂ ಕಡಿಮೆಯಾಗಿಲ್ಲ. ಜನಪದ ಕಲೆಗಳ ಬಗೆಗೆ ಯುವಕರಲ್ಲಿ ಆಸಕ್ತಿಯನ್ನು ತುಂಬಿ ಅವುಗಳ ಉಳಿವಿಗೆ ಸದಾ ಶ್ರಮಿಸುತ್ತ ಬಂದಿರುವ ಹಿರಿಯ ಜನಪದ ಕಲಾವಿದರಾದ ಯಮನೂರಸಾಬರಿಗೆ ಸ್ಥಳೀಯ ಸಂಘ-ಸಂಸ್ಥೆಗಳು ಹಲವಾರು ಮಾನ-ಸನ್ಮಾನಗಳನ್ನಿತ್ತು ಗೌರವಿಸಿವೆ.

## ರಾಮಣ್ಣ ನಾಗಪ್ಪ ಶೆಡ್ಡಿ

ಜನಪದ ಕಲೆಗಳನ್ನು ಕರಗತ ಮಾಡಿಕೊಳ್ಳಲು ಓದು-ಬರಹ ಬರಬೇಕೆಂದಿಲ್ಲ. ಓದು-ಬರಹ ಬರದಿದ್ದರೂ ರಾಮಣ್ಣನವರು ತಾನೊಬ್ಬ ದೊಡ್ಡಾಟದ ಕಲಾವಿದನಾಗಿ; ದೊಡ್ಡಾಟಗಳನ್ನು ಕಲಿಸುವ ಕಥೆಗಾರನಾಗಿ ಹತ್ತು ಹಲವಾರು ದೊಡ್ಡಾಟಗಳನ್ನು ಕಲಿಸಿ ಜನಪ್ರಿಯತೆಯನ್ನು ಪಡೆದಿದ್ದಾರೆ. ತಂದೆ ನಾಗಪ್ಪ, ತಾಯಿ ಚೆನ್ನಬಸಮ್ಮನವರ ಮಗನಾಗಿ 1958ರಲ್ಲಿ ಜನಿಸಿದ ಇವರು ಕುರುವಿನ ಶೆಟ್ಟಿ ಸಮುದಾಯಕ್ಕೆ ಸೇರಿದವರು. ಮನೆತನದ ತೊಂದರೆಯಿಂದಾಗಿ ಶಾಲೆಗೆ ಹೋಗಲೇ ಇಲ್ಲ. ಓದು-ಬರಹ ಗಂಧವನ್ನೆ

ಅರಿಯದವರಾದರು. ತಮ್ಮ ಹದಿನೈದನೆಯ ವಯಸ್ಸಿನಲ್ಲಿಯೇ ತಂದೆಯ ಜೊತೆಗೂಡಿ ಹೊಸ ಬನಶಂಕರಿ ಗುಡಿಯ ಬಣ್ಣದ ಮನೆಯಲ್ಲಿ ನಡೆಯುತ್ತಿದ್ದ ದೊಡ್ಡಾಟದ ರಂಗ ತರಬೇತಿಯನ್ನು ನೋಡಲು ಹೋಗುತ್ತಿದ್ದರು. ಒಂದು ದಿನ ಕಥೆಗಾರರಾದ ಮಲ್ಲಪ್ಪ ಮಹಾಂತಗೊಂಡ ಅವರು ಹುಡುಗನ ಆಸಕ್ತಿಯನ್ನು ಕಂಡು 'ತ್ರಿಪೂರ ಸಂಹಾರ' ದೊಡ್ಡಾಟದ ಕೇವಲ ಹನ್ನೆರಡು ಮಾತುಗಳುಳ್ಳ ಮಾಲಿನಿಯ ಪಾತ್ರವನ್ನು ಮಾಡಲು ಹೇಳಿದರು. ಅಂದಿನಿಂದ ಯುವಕ ರಾಮಣ್ಣ ಆ ಎಲ್ಲ ಮಾತುಗಳನ್ನು ಬೇರೆಯವರಿಂದ ಹೇಳಿಸಿಕೊಂಡು ಕಂಠಪಾಟ ಮಾಡಿ ಮರುದಿನವೆ ತಾಲೀಮಿನಲ್ಲಿ ಕಥೆಗಾರ ಮಲ್ಲಪ್ಪನವರಿಗೆ ಮಾತುಗಳನ್ನು ಅಭಿನಯದೊಂದಿಗೆ ಒಪ್ಪಿಸಿದರು. ಹುಡುಗನ ಪ್ರತಿಭೆಯನ್ನು ಕಂಡ ಕಥೆಗಾರರು 'ಲಕ್ಷಣಿ ಕಲ್ಯಾಣ'ದಲ್ಲಿ ಜಾಂಬವತಿಯ ಪಾತ್ರವನ್ನು, 'ಭಕ್ತಮಾರ್ಕಂಡೇಯ'ದಲ್ಲಿ ಶ್ಯಾಮಲನ ಪಾತ್ರವನ್ನು, 'ಗಿರಿಜಾ ಕಲ್ಯಾಣ'ದಲ್ಲಿ ರತಿಯ ಪಾತ್ರವನ್ನು ಕೊಟ್ಟರು. ತೆಳ್ಳನೆಯ ದೇಹದ ದುಂಡು ಮುಖದ ನೀಟಾದ ಮೂಗಿನ ಯುವಕ ರಾಮಣ್ಣನಿಗೆ ಈ ಸ್ತ್ರೀ ಪಾತ್ರಗಳು ತುಂಬಾ ಒಪ್ಪುತ್ತಿದ್ದವು.

ಮಲ್ಲಪ್ಪ ಮಹಾಂತಗೊಂಡರಿಂದ ದೊಡ್ಡಾಟದ ವಿವಿಧ ಕುಣಿತಗಳನ್ನು, ಹನಮಂತಪ್ಪ ಗಣಪಾ ಅವರಿಂದ ದೊಡ್ಡಾಟದ ಹಾಡುಗಾರಿಕೆಯ ಗತ್ತುಗಳನ್ನು ಕಲಿತರು. ಮೇಲಾಗಿ ಪುರುಷ ಪಾತ್ರಧಾರಿಗಳು ತಮ್ಮ ಸಭಾದ ಮಾತುಗಳನ್ನು ಹೇಗೆ ಹೇಳಬೇಕು ಮತ್ತು ಇತರೆ ಮಾತುಗಳನ್ನು ಯಾವ ರೀತಿ ಆಡಬೇಕು ಎಂಬುದನ್ನು ಕರಗತ ಮಾಡಿಕೊಂಡಿದ್ದ ಯುವಕ ರಾಮಣ್ಣ ಕಥೆಗಾರನಾಗುವ ಎಲ್ಲ ಗುಣಾಂಶಗಳನ್ನು ಅಳವಡಿಸಿಕೊಂಡನು. ಒಮ್ಮೆ ಕಥೆಗಾರನಾದ ಹನಮಂತಪ್ಪನವರು ಬಣ್ಣದ ಮನೆಗೆ ಬರಲಿಲ್ಲ ಅವರ ದಾರಿಯನ್ನು ಕಾದು ಕಾದು ಕೊನೆಗೆ ಮಲ್ಲಪ್ಪನವರು ರಾಮಣ್ಣನನ್ನು ಕರೆದು ಅವನ ಕೈಯಲ್ಲಿ ತಾಳಗಳನ್ನು ಕೊಟ್ಟು "ಕಥೆಯನ್ನು ಮುಂದುವರೆಸು" ಎಂದು ಹೇಳಿದರು. ಇಷ್ಟು ಹೇಳುವುದಷ್ಟೆ ತಡ ಯಾವುದೇ ತೊಂದರೆ ಇಲ್ಲದೆ ಆಟವನ್ನು ಮುಂದುವರೆಸಿಕೊಂಡು ಯಶಸ್ವಿಯಾದರು. ಅಂದಿನಿಂದ ಇಂದಿನವರೆಗೂ ಕಥೆಗಾರರಾಗಿಯೇ ಕೆಲಸ ಮಾಡುತ್ತಿದ್ದಾರೆ. ದೊಡ್ಡಾಟದ ಬಗೆಗೆ ಅಪಾರ ಅನುಭವವುಳ್ಳ ರಾಮಣ್ಣ ತಾನೇ ಕಥೆಗಾರನಾಗಿ 'ದಕ್ಷಬ್ರಹ್ಮ' ಆಟವನ್ನು ಪ್ರಾರಂಭಿಸಿದರು. ಈ ಆಟದಲ್ಲಿ ರಾಮಣ್ಣನವರ ತಂದೆ ನಾಗಪ್ಪನವರು ದಕ್ಷನ ಪಾತ್ರವನ್ನು ಮಾಡುತ್ತಿದ್ದರು. ಮಗ ಕಥೆಗಾರನಾಗಿ ತಂದೆಗೆ ತರಬೇತಿಯನ್ನು ನೀಡಬೇಕು. ಹೀಗೆ ತರಬೇತಿಯನ್ನು ನೀಡಿ ದೊಡ್ಡಾಟವನ್ನು ಪ್ರಯೋಗಿಸುವ ದಿನದಂದು ಕಲಾವಿದರು ಮತ್ತು ಹಿರಿಯ ಕಥೆಗಾರರು 'ಈಟ ಹುಡುಗಾ ಏನ ಕಲಿಸ್ಯಾನ

ನೋಡುಣ ಬರ್ರಿ” ಎಂದು ಆಟವನ್ನು ನೋಡಲು ಬಂದರು. ಗಣಸ್ತುತಿಯ ಹಾಡನ್ನು ಕೇಳಿಯೆ ದಿಗ್ಭ್ರಮೆಗೊಂಡ ಎಲ್ಲರೂ ಆಟ ಮುಗಿಯುವವರೆಗೆ ನೋಡಿ, ಆಟ ಮುಗಿದ ಮೇಲೆ ರಂಗದ ಮೇಲೆ ಬಂದು ರಾಮಣ್ಣನನ್ನು ತಬ್ಬಿಕೊಂಡು. ‘ಬಲಾ, ಕಲಿಸಬಹುದಪಾ’ ಎಂಬ ಮೆಚ್ಚುಗೆಯ ಮಾತುಗಳನ್ನು ಹೇಳಿ ಅವನ ಬೆನ್ನನ್ನು ಚಪ್ಪರಿಸಿ ಆಶೀರ್ವದಿಸಿದರು. ಮಗನ ಯಶಸ್ಸನ್ನು ಕಂಡ ತಂದೆ ನಾಗಪ್ಪನವರಿಗೆ ಎಲ್ಲಿಲ್ಲದ ಸಂತೋಷವಾಯಿತು.

ಬೆಟಗೇರಿಯ ಹಿರಿಯರ ಮೆಚ್ಚುಗೆಗೆ ಪಾತ್ರನಾದ ರಾಮಣ್ಣ ತಮ್ಮ ಸಣ್ಣ ವಯಸ್ಸಿನಲ್ಲಿಯೆ ‘ಗಿರಿಜಾ ಕಲ್ಯಾಣ’, ‘ಲಕ್ಷಣಿ ಕಲ್ಯಾಣ’ ಮುಂತಾದ ದೊಡ್ಡಾಟಗಳನ್ನು ಕಲಿಸಿ ಅದರಲ್ಲಿ ಯಶಸ್ವಿಯನ್ನು ಕಂಡು ತಾನು ಒಬ್ಬ ಉತ್ತಮ ಕಥೆಗಾರನೆಂಬುದನ್ನು ತೋರಿಸಿಕೊಟ್ಟರು. ಈಗಲೂ ಸಹ ಹೊಸ ಬನಶಂಕರಿ ಮೇಳದವರು ಪ್ರಯೋಗಿಸುವ ಪ್ರತಿಯೊಂದು ದೊಡ್ಡಾಟಗಳಿಗೆ ಇವರೆ ಕಥೆಗಾರರಾಗಿರುತ್ತಾರೆ. ಇವರ ತರಬೇತಿಯಲ್ಲಿ ತಯಾರಾದ ಕೆಲವೊಂದು ದೊಡ್ಡಾಟಗಳು ಬೆಂಗಳೂರು, ರಾಯಚೂರು, ಕೊಪ್ಪಳ, ಮುಂತಾದ ಊರುಗಳಲ್ಲಿ ಪ್ರದರ್ಶನಗೊಂಡಿವೆ.

ರಾಮಣ್ಣನವರು ಕೇವಲ ದೊಡ್ಡಾಟದ ಕಲಾವಿದ, ಕಥೆಗಾರರಷ್ಟೆ ಅಲ್ಲದೆ ಭಜನೆಯ ಪದಗಳನ್ನು ಸಹ ಅಷ್ಟೆ ಸುಶ್ರಾವ್ಯವಾಗಿ ರಾತ್ರಿ ಬೆಳತನಕ ಹಾಡಬಲ್ಲ ವಿಶಿಷ್ಟ ಜನಪದ ಕಲಾವಿದ. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೆ ದೊಡ್ಡಾಟದ ರಂಗವನ್ನು ಪ್ರವೇಶಿಸಿ ಸುಮಾರು ಮೂವತ್ತು ವರ್ಷಗಳವರೆಗೆ ಅವಿರತವಾಗಿ ತಮ್ಮ ಸೇವೆಯನ್ನು ರಂಗಕ್ಕೆ ಸಲ್ಲಿಸಿ ಜಾನಪದದ ಹಿರಿಯ ಕಲಾವಿದರೆನಿಸಿಕೊಂಡಿದ್ದಾರೆ. ಇಂಥ ಅಭಿಜಾತ ಕಲಾವಿದನಿಗೆ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನಿತ್ತು ಗೌರವಸಿವೆ.

## ಲಕ್ಷ್ಮಪ್ಪ ವೀರಪ್ಪ ಗಡಾದ

ಗದುಗಿನ ಬೆಟಗೇರಿಯ ‘ಹೊಸ ಬನಶಂಕರಿ ದೊಡ್ಡಾಟ ಮೇಳ’ದ ಹಿರಿಯ ಕಲಾವಿದರಲ್ಲಿ ಲಕ್ಷ್ಮಪ್ಪನವರು ಒಬ್ಬರು. ಇವರು ಬಣ್ಣದ ಬೆನಕಪ್ಪನವರ ಸಮಕಾಲೀನರು. ತಂದೆ ವೀರಪ್ಪ, ತಾಯಿ ಹಂಪವ್ವ ಇವರ ಮಗನಾಗಿ 1925ರಲ್ಲಿ ಜನಿಸಿದರು. ನಾಲ್ಕನೆಯ ತರಗತಿಯವರೆಗೆ ಓದಿ, ಮನೆಯ ಆರ್ಥಿಕ ತೊಂದರೆಯಿಂದಾಗಿ ಮುಂದೆ ಓದಲಿಕ್ಕಾಗದೆ ನೇಕಾರಿಕೆಯನ್ನು ಕಲಿತು ಅದನ್ನೆ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡರು. ಕುರುವಿನ ಶೆಟ್ಟಿ ಸಮುದಾಯಕ್ಕೆ ಸೇರಿದ ಇವರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ದೊಡ್ಡಾಟದ ಪಾತ್ರಗಳನ್ನು ಮಾಡಲು

ಪ್ರಾರಂಭಿಸಿದರು. ಇವರ ಗುರುಗಳಾದ ಚೌಡಪ್ಪ ಮಹಾಂತಗೊಂಡ, ಗುರಪಾದಪ್ಪ ನಾರಾಯಣಕೇರಿ ಹಾಗೂ ತಂದೆ ವೀರಪ್ಪನವರು ತುಂಬಾ ಸ್ನೇಹಿತರು. ವೀರಪ್ಪನವರು ಸಹ ದೊಡ್ಡಾಟಗಳಲ್ಲಿ ಪ್ರಮುಖ ಪಾತ್ರಗಳನ್ನು ಅಭಿನಯಿಸಿ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದವರು. ತಂದೆಯಂತೆ ತಾವು ದೊಡ್ಡಾಟದಲ್ಲಿ ಜನಪ್ರಿಯತೆಯನ್ನು ಪಡೆಯಬೇಕೆಂಬುದು ಲಕ್ಷ್ಮಪ್ಪನವರು ಬಾಲ್ಯದಿಂದಲು ಕಂಡ ಕನಸು.

'ಹೊಸ ಬನಶಂಕರಿ ದೊಡ್ಡಾಟ ಮೇಳ'ದವರು ಯುವಕರಿಗೆ ಪ್ರಾಧಾನ್ಯತೆಯನ್ನು ಕೊಡುವ ಉದ್ದೇಶದಿಂದ, ಕತೆಗಾರರಾದ ಗುರುಪಾದಪ್ಪ ನಾರಾಯಣಕೇರಿ ಮತ್ತು ಚೌಡಪ್ಪ ಮಹಾಂತಗೊಂಡ ಅವರ ಮುಖಂಡತ್ವದಲ್ಲಿ 'ದಕ್ಷಬ್ರಹ್ಮ' ಆಟವನ್ನು ಪ್ರಾರಂಭಿಸಿದರು. ಆಟಕ್ಕೆ ಸಂಬಂಧಿಸಿದಂತೆ ಎಲ್ಲ ಪಾತ್ರಗಳಿಗೆ ಪಾತ್ರಧಾರಿಗಳ ಆಯ್ಕೆ ನಡೆದು ಆಟದ ತಾಲೀಮು ಭರ್ಜರಿಯಾಗಿ ನಡೆಯುತ್ತಿದ್ದ ವೇಳೆಯಲ್ಲಿ ಚೌಡಪ್ಪನವರಿಗೆ ದಕ್ಷಬ್ರಹ್ಮನ ಪಾತ್ರ ಮಾಡುವವನಲ್ಲಿ ಏನೋ ಒಂದು ಕೊರತೆಯನ್ನು ಕಂಡು ತಮ್ಮ ಸ್ನೇಹಿತರಾದ ವೀರಪ್ಪನವರ ಮನೆಗೆ ಬಂದು, "ನಿಮ್ಮ ಹುಡುಗನನ್ನು ದೊಡ್ಡಾಟದಲ್ಲಿ ಪಾತ್ರ ಮಾಡಲು ಕರೆದುಕೊಂಡು ಹೋಗುತ್ತೇನೆ" ಎಂದವರೆ ಅವರ ಒಪ್ಪಿಗೆಯನ್ನು ಪಡೆದು ಲಕ್ಷ್ಮಪ್ಪನನ್ನು ಆಟದ ಮನೆಗೆ ಕರೆದುಕೊಂಡು ಬಂದು "ಲೆ, ಹುಡುಗಾ ಇವತ್ತು ಈ ತಾಲೀಮನ್ನು ಗಮನವಿಟ್ಟು ನೋಡು, ನಾಳೆಯಿಂದ ನೀನೆ ದಕ್ಷಬ್ರಹ್ಮ" ಎಂದು ಹೇಳಿ ತಾಲೀಮು ಮುಂದುವರೆಸಿದರು. ಹದಿನೆಂಟನೆಯ ವಯಸ್ಸಿನ ಯುವಕನಾದ ಲಕ್ಷ್ಮಪ್ಪನು ಲಕ್ಷಗೊಟ್ಟು ಪಾತ್ರವನ್ನು ವೀಕ್ಷಿಸಿ, ಪಾತ್ರದ ಮಾತಿನ ಶೈಲಿ, ಕುಣಿತಗಳನ್ನು ನೋಡಿ ಮನನ ಮಾಡಿಕೊಂಡು ಮರುದಿನ ಆಟದ ಮನೆಗೆ ಬಂದು ಸಾಭಿನಯದ ಮೂಲಕ ಆ ಪಾತ್ರವನ್ನು ನಿರ್ವಹಿಸಲಾಗಿ, ಚೌಡಪ್ಪನವರು ಲಕ್ಷ್ಮಪ್ಪನ ಪ್ರತಿಭೆಯನ್ನು ಕಂಡು "ಇನ್ನು ಮುಂದೆ ಈ ಪಾತ್ರ ನೀನೆ ಮಾಡಬೇಕು" ಎಂದು ಹೇಳಲಾಗಿ, ಒಳ್ಳೆಯ ಹುರುಪು-ಹುಮ್ಮಸ್ಸಿನಿಂದ ಆ ಪಾತ್ರವನ್ನು ಜನಮೆಚ್ಚುವಂತೆ ಅಭಿನಯಿಸಿದರು. ಅಂದಿನಿಂದ ಇವರು ಮೇಳದ ಖಾಯಂ ಪಾತ್ರಧಾರಿ ಸದಸ್ಯರಾದರು. ಮುಂದೆ ಮೇಳದವರು ಪ್ರಯೋಗಿಸುವ ಎಲ್ಲ ದೊಡ್ಡಾಟಗಳ ಪ್ರಮುಖ ಪಾತ್ರಗಳು ಇವರ ಪಾಲಿಗೆ ಮೀಸಲಾದವು. ಹೀಗೆ ತಮ್ಮ ಕನಸು ನನಸಾಗುವ ಕಾಲ ಬಂತೆಂದು ತುಂಬಾ ಸಂತೋಷಪಟ್ಟರು.

'ಹೊಸ ಬನಶಂಕರಿ ಮೇಳ'ದವರು ಪ್ರಯೋಗಿಸುತ್ತಿದ್ದ ದಕ್ಷಬ್ರಹ್ಮದಲ್ಲಿ ದಕ್ಷಬ್ರಹ್ಮನ ಪಾತ್ರ, 'ಲಕ್ಷಣಿ ಕಲ್ಯಾಣ'ದಲ್ಲಿ ಕೌರವನ ಪಾತ್ರ, 'ಭಕ್ತ ಮಾರ್ಕಂಡೇಯ'ದಲ್ಲಿ ಮಾರ್ಕಂಡೇಯನ ಪಾತ್ರ, 'ಶಂಭರಾಸುರ'ದಲ್ಲಿ ಶಂಭರಾಸುರನ ಪಾತ್ರ, 'ವೀರ

ಅಭಿಮನ್ಯುವಿನ ಕಾಳಗ'ದಲ್ಲಿ ಅರ್ಜುನನ ಪಾತ್ರ, 'ರಾಮಾಯಣ'ದಲ್ಲಿ ಲಕ್ಷ್ಮಣನ ಪಾತ್ರ ಹೀಗೆ ಪ್ರತಿಯೊಂದು ದೊಡ್ಡಾಟದಲ್ಲಿಯೂ ಪ್ರಮುಖ ಪಾತ್ರಗಳನ್ನೆ ನಿರ್ವಹಿಸಿದ ಇವರು ಅಷ್ಟೆ ಚಾಕು-ಚಕ್ಯತೆಯಿಂದ ಅಭಿನಯಿಸಿ ಜನರ ಮೆಚ್ಚುಗೆಗೆ ಪಾತ್ರರಾದರು. ದಕ್ಷಬ್ರಹ್ಮ ಆಟದಲ್ಲಿ ವೀರಭದ್ರನಿಗೂ ಮತ್ತು ದಕ್ಷಬ್ರಹ್ಮನಿಗೂ ವಾಗ್ವಾದ ನಡೆಯುವ ಸನ್ನಿವೇಶದಲ್ಲಿ ಇವರ ಕಂಚಿನ ಕಂಠದಿಂದ ಹೊರಡುವ ಮಾತುಗಳನ್ನು ಕೇಳಿದ ಪ್ರೇಕ್ಷಕರು ಚಪ್ಪಾಳೆಯನ್ನು ತಟ್ಟುತ್ತಾ 'ಬಲಹರೇss' ಎಂದು ಕೂಗುತ್ತಿದ್ದರು. ಅಷ್ಟು ಚೆನ್ನಾಗಿ ಆ ಪಾತ್ರವನ್ನು ನಿರ್ವಹಿಸುತ್ತಿದ್ದರು. ಅದರಂತೆ 'ಲಕ್ಷಣಿ ಕಲ್ಯಾಣ'ದ ಸನ್ನಿವೇಶ ಒಂದರಲ್ಲಿ ಕೌರವನ ಪಾತ್ರ ಮಾಡುತ್ತಿದ್ದ ಇವರು, ಹೆಂಡತಿಯಾದ ಭಾನುಮತಿಯು ಬಂದು ಮಗಳಾದ ಲಕ್ಷಣಿಯನ್ನು ಜಾಂಬವತಿಯ ಮಗನಾದ ಶಾಂಬನಿಗೆ ಕೊಟ್ಟು ಮದುವೆಯ ಮಾಡೋಣ ಎಂದು ಪರಿಪರಿಯಿಂದ ಬೇಡಿ ಕೌರವೇಂದ್ರನನ್ನು ಒಪ್ಪಿಸುವ ಈ ಸನ್ನಿವೇಶದಲ್ಲಿ ಕೌರವನ ಪಾತ್ರದಿಂದ ಮಾತನಾಡುವ ಇವರ ಮಾತಿನ ಶೈಲಿ, ಹಾವ-ಭಾವ, ಪ್ರತಿಯೊಂದು ಮಾತಿಗೂ ಹೆಗಲ ಮೇಲಿರುವ ಗಧೆಯನ್ನು ತೆಗೆದು ಕೃಷ್ಣನ ಹಾಗೂ ಯಾದವರ ಮೇಲಿರುವ ಸಿಟ್ಟನ್ನು ತೋರ್ಪಡಿಸುತ್ತ, ಗಧೆಯನ್ನು ಮೇಲೆತ್ತಿ 'ಹಲಲಲಾ' ಎಂದು ಬಲಗಾಲನ್ನು ಮೇಲೆತ್ತಿ ಗಧೆಯೊಂದಿಗೆ ರಂಗಭೂಮಿಯನ್ನು ಒತ್ತುವ ಆ ದೃಶ್ಯವನ್ನು ಪ್ರೇಕ್ಷಕರು ಮಂತ್ರ ಮುಗ್ಧರಾಗಿ ನೋಡುತ್ತಿದ್ದರು. ಹೀಗೆ ಇವರ ಪ್ರತಿಯೊಂದು ಪಾತ್ರಗಳನ್ನು ಕಂಡ ಪ್ರೇಕ್ಷಕರು ಈಗಲೂ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಇವರು ಪಾತ್ರಗಳನ್ನು ಮಾಡುತ್ತಿರುವ ವೇಳೆಯಲ್ಲಿ ಧ್ವನಿವರ್ಧಕಗಳು ಇರುತ್ತಿರಲಿಲ್ಲ ಆದರೂ ಕೂಡಿದ ಪ್ರೇಕ್ಷಕರಿಗೆಲ್ಲ ಕೇಳುವಂತೆ ತಮ್ಮ ಕಂಚಿನ ಕಂಠದಿಂದ ಮಾತುಗಳನ್ನು ಹೇಳುತ್ತಿದ್ದರು.

ಹಿರಿಯ ಕಲಾವಿದರಾದ ಲಕ್ಷ್ಮಪ್ಪನವರಿಗೆ ಎಂಭತ್ತು ವರ್ಷ ತುಂಬಿದರೂ ದೊಡ್ಡಾಟಗಳಲ್ಲಿ ಪಾತ್ರ ಮಾಡುವ ಅವರ ಹುಮ್ಮಸ್ಸು ಇನ್ನೂ ಕಡಿಮೆಯಾಗಿಲ್ಲ. ಮೇಳದವರು ಪಾತ್ರ ಮಾಡಲು ಕೊಟ್ಟರೆ ಈಗಲೂ ಅಷ್ಟೇ ದಕ್ಷತೆಯಿಂದ ಪಾತ್ರವನ್ನು ನಿರ್ವಹಿಸಬಲ್ಲೆ ಎನ್ನುತ್ತಾರೆ. ಇವರ ದೊಡ್ಡಾಟದ ಮಾತುಗಳನ್ನು ಕೇಳಿದರೆ ಸಾಕು ಕೇಳುಗರ ಮೈ ಪುಳಕಿತಗೊಂಡು ಕೂದಲುಗಳು ನವಿರೇಳುತ್ತವೆ. ಇಂಥ ಅಭಿಜಾತ ಹಿರಿಯ ಜನಪದ ಕಲಾವಿದರ ಪ್ರತಿಭೆಯನ್ನು ಗುರುತಿಸಿ ನಾಡಿನ ಜನರು ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನಿತ್ತು ಗೌರವಿಸಿವೆ.

# ವೆಂಕಣ್ಣ ನರಸಪ್ಪ ಕಾಮಾರ್ತಿ

ದೊಡ್ಡಾಟಗಳ ಹಾರ್ಮೋನಿಯಮ್ ಪಟುಗಳೆಂದೆ ಪ್ರಸಿದ್ಧರಾದ ವೆಂಕಣ್ಣ ಕಾಮಾರ್ತಿಯವರು ಗದುಗಿನ ಬೆಟಗೇರಿಯವರು. ತಂದೆ ನರಸಪ್ಪ, ತಾಯಿ ಬುಡ್ಡಮ್ಮನವರ ಮೂರನೆಯ ಮಗನಾಗಿ 1934ರಲ್ಲಿ ಜನಿಸಿದರು. ಕೇವಲ ಐದನೆ ತರಗತಿಯವರೆಗೆ ಓದಿ ಇವರು, ಮನೆಯ ಆರ್ಥಿಕ ತೊಂದರೆಯಿಂದ ಕಲಿಯುವುದನ್ನು ಬಿಟ್ಟು ನೇಕಾರಿಕೆಯ ಕೆಲಸಕ್ಕೆ ತೊಡಗಿದರು. ಕುರುವಿನಶೆಟ್ಟಿ ಸಮುದಾಯಕ್ಕೆ ಸೇರಿದ ಇವರು ಮೂಲತಃ ಆಂಧ್ರಪ್ರದೇಶದ ಅದೋಣಿ ತಾಲೂಕಿನ ಎಮ್ಮಿಗನೂರಿನವರು. ದುಡಿಯಲಿಕ್ಕೆಂದು ನಗರೂರಿಗೆ ಬಂದರು. ಅಲ್ಲಿ ಇವರ ಅಣ್ಣನಾದ ಶೀಲಪ್ಪ ಕೆಂಚಗುಡಿಯವರು ಒಂದು ದೊಡ್ಡಾಟದ ಕಂಪನಿಯನ್ನು ಕಟ್ಟಿಕೊಂಡು ಮನೆಯಲ್ಲಿಯೇ ತರಬೇತಿ ನೀಡುತ್ತಿದ್ದರು. ಅಲ್ಲದೆ ಮನೆಯಲ್ಲಿಯೇ ದೊಡ್ಡಾಟಕ್ಕೆ ಬೇಕಾದ ವೇಷ-ಭೂಷಣಗಳಿಂದ್ಹಿಡಿದು ಆಟಕ್ಕೆ ಬೇಕಾದ ಸಂಗೀತ ಸಾಮಗ್ರಿಗಳೆಲ್ಲವನ್ನು ಇಟ್ಟಿದ್ದರು.

ಶೀಲಪ್ಪ ಕೆಂಚಗುಂಡಿಯವರು 'ಗಿರಿಜಾ ಕಲ್ಯಾಣ' ದೊಡ್ಡಾಟದ ತರಬೇತಿಯನ್ನು ತಮ್ಮ ಮನೆಯಲ್ಲಿಯೇ ಹಗಲು-ರಾತ್ರಿಯೆನ್ನದೆ ಪ್ರತಿನಿತ್ಯ ನೀಡುತ್ತಿದ್ದರು. ಪ್ರತಿದಿನ ದೊಡ್ಡಾಟದ ತರಬೇತಿಯನ್ನು ನೋಡಲೆಂದು ಬರುತ್ತಿದ್ದ ಹನ್ನೆರಡು ವರ್ಷದ ವೆಂಕಣ್ಣ ಎಲ್ಲವನ್ನು ಸೂಕ್ಷ್ಮವಾಗಿ ಆಸಕ್ತಿಯಿಂದ ವೀಕ್ಷಿಸುತ್ತಿದ್ದ. ಆಟವನ್ನು ಪ್ರದರ್ಶಿಸುವ ದಿನ ಸಮೀಪಿಸುತ್ತಿದ್ದಂತೆ ಪಾರ್ವತಿಯ ಪಾತ್ರಧಾರಿಯವನು ಬಾರದೆ ಇದ್ದಾಗ ಶೀಲಪ್ಪನವರು ವೆಂಕಣ್ಣನನ್ನು ಕರೆದು ಪಾರ್ವತಿಯ ಪಾತ್ರವನ್ನು ಮಾಡುವಂತೆ ಹೇಳಿದರು. ಅದಕ್ಕೆ ಒಪ್ಪಿದ ವೆಂಕಣ್ಣ ಕೇವಲ ಮೂರು ದಿನಗಳಲ್ಲಿ ಆ ಪಾತ್ರದ ಮಾತುಗಳನ್ನು ಮತ್ತು ಕುಣಿತಗಳನ್ನು ಕಲಿತು, ದೊಡ್ಡಾಟ ಪ್ರದರ್ಶನದಲ್ಲಿ ಸುಂದರವಾಗಿ ಅಭಿನಯಿಸಿ, ನೋಡುಗರ ಮೆಚ್ಚುಗೆಗೆ ಪಾತ್ರರಾದರು.

ವೆಂಕಣ್ಣನವರಿಗೆ ದೊಡ್ಡಾಟದಲ್ಲಿ ಪಾತ್ರಧಾರಿಗಳಾಗಿ ಅಭಿನಯಿಸುವುದಕ್ಕಿಂತ ಹಾರ್ಮೋನಿಯಂ ಕಲಿಯುವುದರಲ್ಲಿ ಬಹಳ ಆಸಕ್ತಿ ಇತ್ತು. ಶೀಲಪ್ಪನವರ ಮನೆಯಲ್ಲಿ ಕೈಪೇಟಿ ಮತ್ತು ಕಾಲಪೇಟೆಗಳೆರಡು ಇದ್ದವು. ತಾಲೀಮು ನಡೆದ ವೇಳೆಯಲ್ಲಿ ವೆಂಕಣ್ಣನವರು ಹಾರ್ಮೋನಿಯಂ ಮಾಸ್ತರ ಪಕ್ಕದಲ್ಲಿಯೆ ಕುಳಿತು ಆಟದ ಯಾವ ಹಾಡು ಯಾವ ಪಟ್ಟಿಯಿಂದ ಪ್ರಾರಂಭವಾಗುತ್ತದೆ. ಯಾವ ನುಡಿಗೆ ಯಾವ ಯಾವ ಪಟ್ಟಿಗಳು ಬಳಕೆಯಾಗುತ್ತವೆ ಎಂಬುದನ್ನು ಕೂಲಂಕುಶವಾಗಿ ನೋಡಿಕೊಂಡು

ಬಿಡುವಿನ ವೇಳೆಯಲ್ಲಿ ಅವುಗಳನ್ನು ನುಡಿಸಲು ಪ್ರಯತ್ನಿಸುತ್ತಿದ್ದರು. ಇವರ ಆಸಕ್ತಿಯನ್ನು ಕಂಡು ಶೀಲಪ್ಪನವರು ತಮಗೆ ಬಿಡುವಿದ್ದಾಗ ಹಾರ್ಮೋನಿಯಂ ನುಡಿಸುವುದನ್ನು ಹೇಳಿಕೊಡತೊಡಗಿದತರು. ಬರಬರುತ್ತ ವೆಂಕಣ್ಣ ಎಮ್ಮಿಗನೂರಿನ ನೀಲಕಂಠೇಶ್ವರ ಗುಡಿಯಲ್ಲಿ ದಿನನಿತ್ಯ ಭಜನೆಯ ಪದಗಳನ್ನು ಹಾಡುತ್ತಿದ್ದಲ್ಲಿಗೆ ಹೋಗಿ ಹಾರ್ಮೋನಿಯಂ ನುಡಿಸುತ್ತಿದ್ದರು. ಕೆಲವು ದಿನಗಳ ನಂತರ ಶೀಲಪ್ಪನವರ ದೊಡ್ಡಾಟಗಳಿಗೂ ಹಾರ್ಮೋನಿಯಂ ನುಡಿಸಿ ಯಶಸ್ವಿಯಾದರು. ಹೀಗೆ ದೊಡ್ಡಾಟದ ಹಾರ್ಮೋನಿಯಂ ಮಾಸ್ತರ ಆಗಿ ಮುಂದುವರೆದರು.

ಎಮ್ಮಿಗನೂರಿನ ಶೀಲಪ್ಪನವರ ದೊಡ್ಡಾಟ ಮಂಡಳಿಗೆ ಹಾರ್ಮೋನಿಯಂ ಮಾಸ್ತರಾಗಿ ಅನೇಕ ದೊಡ್ಡಾಟಗಳ ಪ್ರದರ್ಶನ ನೀಡಿ ಯಶಸ್ವಿ ಹಾರ್ಮೋನಿಯಂ ಮಾಸ್ತರ ಆಗಿ ಮಿಂಚಿದರು. ಕಾರಣಾಂತರಗಳಿಂದ ಈ ದೊಡ್ಡಾಟ ಮಂಡಳಿ ನಿಂತು ಹೋಯಿತು. ಹಾಗೂ ಊರಲ್ಲಿ ನೇಕಾರಿಕೆಯಿಂದ ಮನೆತನ ನಡೆಯದಿದ್ದಾಗ ಆ ಊರನ್ನು ಬಿಟ್ಟು ತಂಗಿಯ ಊರಾದ ಗದಗ–ಬೆಟಗೇರಿಗೆ ಬಂದು ನೆಲೆಸಿದರು ಮತ್ತು ನೇಕಾರಿಕೆಯನ್ನು ಮುಂದುವರೆಸಿದರು. ಪರಊರಿನಲ್ಲಿ ಹೆಚ್ಚಿಗೆ ಯಾರ ಪರಿಚಯುವು ಇಲ್ಲದ ವೆಂಕಣ್ಣನವರಿಗೆ ಬೇಸರವಾದಾಗ ದೊಡ್ಡಾಟದ ಮಾತುಗಳನ್ನಾಡುತ್ತಿದ್ದರು ಹಾಗೂ ಹಾಡುಗಳನ್ನು ಹಾಡುತ್ತಿದ್ದರು. ಇದನ್ನು ಕೇಳಿದ ಭೀಮಣ್ಣ ಶೆಟ್ಟಿಯವರು ಇವರ ಪರಿಚಯ ಮಾಡಿಕೊಂಡರು. ಇಬ್ಬರೂ ತಮ್ಮ ಅನುಭವ–ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ ಒಳ್ಳೆಯ ಸ್ನೇಹಿತರಾದರು. ಒಮ್ಮೆ 'ಹೊಸ ಬನಶಂಕರಿ' ಮೇಳದವರು 'ಲಕ್ಷಣಿ ಕಲ್ಯಾಣ' ದೊಡ್ಡಾಟವನ್ನು ಮೂರು ತಿಂಗಳವರೆಗೆ ಪ್ರಾಕ್ಟೀಸ್ ಮಾಡಿ ಪ್ರದರ್ಶನದ ದಿನಾಂಕ ಗೊತ್ತು ಮಾಡಿ ಇನ್ನೇನು ಆಟವನ್ನು ಪ್ರದರ್ಶಿಸಬೇಕು ಎಂದು ಕಾಲಪೆಟ್ಟಿಗೆಯನ್ನು ಎಬ್ಬಿಸಿ ಗಣಸ್ತುತಿಯನ್ನು ಮಾಡಬೇಕೆನ್ನುವಷ್ಟರಲ್ಲಿ ಖಾಯಂ ಪೇಟಿ ಬಾರಿಸುವವನು ಕೈಕೊಟ್ಟು ಹೋಗಿ ಬಿಟ್ಟಿದ್ದ. ಇದನ್ನು ತಿಳಿದ ಬೆನಕಪ್ಪ ಬಣ್ಣದವರಿಗೆ ಮುಂದೇನೆಂದು ದಿಕ್ಕು ತೋಚದಾದಾಗ ಅಲ್ಲಿಯೇ ಇದ್ದ ಭೀಮಣ್ಣ ಶೆಟ್ಟಿಯವರು ಮುಂದೆ ಬಂದು ತಮಗೆ ಪರಿಚಯವಿದ್ದ ಹಾರ್ಮೋನಿಯಂ ಮಾಸ್ತರ ವೆಂಕಣ್ಣನವರ ಬಗ್ಗೆ ಬೆನಕಪ್ಪನವರಿಗೆ ಹೇಳಿದರು. ಅವರನ್ನು ತಕ್ಷಣವೆ ಕರೆದುಕೊಂಡು ಬರುವಂತೆ ಭೀಮಪ್ಪನವರಿಗೆ ಹೇಳಿದರು. ವೆಂಕಣ್ಣನವರನ್ನು ಕರೆದುಕೊಂಡು ಬಂದು ಪರಿಚಯಿಸಿದರು. ಬೆನಕಪ್ಪನವರು ಮೊದಲು ಗಣಸ್ತುತಿ ಬಾರಿಸುವಂತೆ ಹೇಳಿದರು. ತಕ್ಷಣವೆ ಬಿಳಿ ಐದನೆಯ ಪಟ್ಟಿಗೆ ಸೂರನ್ನು ಹಿಡಿದು ಬಾರಿಸಲು ಪ್ರಾರಂಭಿಸಿ ಗಣಸ್ತುತಿಯನ್ನು ಚೆನ್ನಾಗಿ ನುಡಿಸಿ ಮುಗಿಸಿದರು.

ಇದನ್ನು ಕಂಡ ಬೆನಕಪ್ಪನವರು ಖುಷಿಯಿಂದ "ಮುಂದಿನ ಎಲ್ಲ ಪದಗಳಿಗೆ ನೀವೆ ಬಾರಿಸಿರಿ" ಎಂದು ಹೇಳಿದಾಗ ವೆಂಕಣ್ಣನವರು ಹುರುಪಿನಿಂದ ಆಟದ ಎಲ್ಲ ಪದಗಳಿಗೂ ಪೇಟಿಯನ್ನು ನುಡಿಸಿ ಯಶಸ್ವಿಯಾದನಂತರ ಮೇಳದ ಖಾಯಂ ಹಾರ್ಮೋನಿಯಂ ಮಾಸ್ತರಾಗಿ ಉಳಿದುಕೊಂಡರು.

'ಹೊಸ ಬನಶಂಕರಿ ದೊಡ್ಡಾಟ ಮೇಳ'ದವರು ದೆಹಲಿ, ಬೆಂಗಳೂರು, ಮೈಸೂರು, ಉಡುಪಿ, ಧಾರವಾಡ ಮುಂತಾದ ಕಡೆಗಳಲ್ಲಿ ಆಟಗಳನ್ನು ಪ್ರದರ್ಶಿಸುವಾಗ ಇವರೆ ಹಾರ್ಮೋನಿಯಂ ಮಾಸ್ತರರಾಗಿ ಕೆಲಸ ನಿರ್ವಹಿಸಿದ್ದಾರೆ. ಈಗಲೂ ಮೇಳದ ಯಾವುದೇ ಆಟವಿರಲಿ ಅವುಗಳಿಗೆಲ್ಲ ಇವರೆ ಪೇಟಿಯನ್ನು ನುಡಿಸುತ್ತಾರೆ. ದೊಡ್ಡಾಟಗಳ ಪೇಟಿ ಮಾಸ್ತರರಾಗಿ ಸುಮಾರು ಐವತ್ತು ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿದ ಇವರಿಗೆ ಕೆಲವು ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳಿಂದ ಗೌರವಿಸಿವೆ.

## ಶರಣಪ್ಪ ಹನಮಪ್ಪ ಕಬ್ಬೇರ (ಬೆನಕಲ್)

ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿ ಗ್ರಾಮದಲ್ಲಿ ತಂದೆ ಹನಮಪ್ಪ, ತಾಯಿ ಅಂದಮ್ಮ ಇವರ ಮಗನಾಗಿ 1947 ಜೂನ ಒಂದರಂದು ಜನಿಸಿದ ಶರಣಪ್ಪನವರು ಅಂಬಿಗೇರ ಸಮುದಾಯಕ್ಕೆ ಸೇರಿದವರು. ಜಕ್ಕಲಿಯಲ್ಲಿಯೆ ಎರಡನೆಯ ವರ್ಗದವರೆಗೆ ಓದಿ ಇನ್ನೇನು ಮೂರನೆಯ ವರ್ಗಕ್ಕೆ ಪ್ರವೇಶ ಪಡೆಯಬೇಕು ಎನ್ನುವಷ್ಟರಲ್ಲಿ ಅದೇ ವರ್ಷ ಅಖಂಡ ಬರಗಾಲ ಬಿದ್ದು, ಮನೆಯ ಬಡತನದಿಂದಾಗಿ ಓದನ್ನು ನಿಲ್ಲಿಸಿ ಕೂಲಿನಾಲಿ ಮಾಡಲು ಪ್ರಾರಂಭಿಸಿದರು. ಹೀಗೆ ಬಡತನದ ಕಷ್ಟ ಪರಿಸ್ಥಿತಿಯಲ್ಲಿಯೇ ಇವರ ಬಾಲ್ಯ ಜೀವನ ಆರಂಭವಾಯಿತು.

ತಮ್ಮ ಹತ್ತನೆಯ ವಯಸ್ಸಿನಲ್ಲಿಯೇ ದೊಡ್ಡಾಟದ ಗೀಳನ್ನು ಶರಣಪ್ಪನವರು ಮೈಗೂಡಿಸಿಕೊಂಡರು. ಮೊದಮೊದಲು ದೊಡ್ಡಾಟಗಳಿಗೆ ಬಳಸಲು ಕಾಲಪೆಟ್ಟಿಗೆ ಇರಲಿಲ್ಲ. ಕೈ ಪೇಟಿಯನ್ನೆ ಆಟ ನಡೆದ ವೇಳೆಯಲ್ಲಿ ಒಂದು ಮೇಜಿನ ಮೇಲಿಟ್ಟು, ಒಬ್ಬ ಸಣ್ಣ ಹುಡುಗನನ್ನು ಅದರ ಬಾತಿ ಒತ್ತಲು ತೆಗೆದುಕೊಳ್ಳುತ್ತಿದ್ದರು. ಈ ಬಾತಿ ಒತ್ತುವ ಕೆಲಸದಿಂದ ಶರಣಪ್ಪನವರು ರಂಗ ಪ್ರವೇಶ ಮಾಡಿದರೆನ್ನಬೇಕು. ದೊಡ್ಡಾಟ ನಡೆದ ವೇಳೆಯಲ್ಲಿ ಹಾಡುವ ಸಮಯಬಂದಾಗ ಹತ್ತು ವರ್ಷದ ಬಾಲಕನಾದ ಶರಣಪ್ಪ ತನ್ನ ಎರಡು ಕೈಗಳಿಂದ ಕೈ ಪೇಟಿಯ ಬಾತಿಯನ್ನು ಒತ್ತುತ್ತಿದ್ದ. ಒಮ್ಮೊಮ್ಮೆ ಪಾತ್ರಧಾರಿಗಳು ರಂಗಭೂಮಿಗೆ ಬರುವುದು ತಡವಾದರೆ ಸಾಕು ಕಥೆಗಾರ ಈ ಬಾಲಕನನ್ನು ಎತ್ತಿಕೊಂಡು ಹೋಗಿ ಸಿಂಹಾಸನದ ಮೇಲೆ ಕುಳ್ಳಿರಿಸುತ್ತಿದ್ದ. ಆಗ ಸಾರಥಿಯು ಬಂದು "ಈ ರಂಗ ಮಂದಿರಕ್ಕೆ ಬಂದವರು ಅದಾರು, ತಮ್ಮ ನಾಮಾಂಕಿತವಾದರೂ ಏನು? ಅಂದಚಂದದಿಂದ ಈ ಸಭೆಗೆ ಹೇಳುವಂತವರಾಗಿರಿ"

ಎಂದೆನ್ನುವುದಷ್ಟೆ ತಡ, ಸಿಂಹಾಸನದ ಮೇಲೆ ಕುಳಿತ ಬಾಲಕ ಶರಣಪ್ಪ ಮೊದಲೆ ಕಥೆಗಾರನಿಂದ ಕಲಿತ ಮಾತುಗಳನ್ನು ಹೇಳಲು ಪ್ರಾರಂಭಿಸಿ "ಎಲೈ ಸಾರಥಿ ಹೊಲಸ ನಾರತಿ, ನನ್ನ ಆರ್ಭಟಕ್ಕೆ ತಗಣಿ ಚಿಕ್ಕಾಡುಗಳು ನಾಗೊಂದಿ ಸೇರಿದವು. ಭಲರೇ ಎಲೈ ಸಾರಥಿ ನನ್ನ ಆರ್ಭಟಕ್ಕೆ ನಾಯಿ-ನರಿಗಳು ಸಂಧಿಗೆ ಬಿದ್ದು ಓಡಿ ಹೋದವು... ಮತ್ತೆ ನನ್ನ ಆರ್ಭಟಕ್ಕೆ ಚಹಾದಂಗಡಿಯ ಕಪ್ಪಾ-ಬಸಿಗಳು ಠಳ-ಠಳ ಎಂದು ಒಡಿದು ಹೋದವು, ಮತ್ತೆ ನನ್ನ ಆರ್ಭಟಕ್ಕೆ ಮದ್ಲಿಕಾರ ಹಿಮ್ಮೇಳ-ಮುಮ್ಮೇಳದವರು ದಿಕ್ಕೆಟ್ಟು ಓಡಿದರು ಇಂಥ ವೀರಾಧಿ ವೀರನಾದ ನನ್ನನ್ನು ಅದಾರೆಂದು ಕೇಳುವವನು ನೀನವನಾರಲೈ ನರನೆ ಪರಮ ಕಿಂಕರನೆ" ಎಂದು ಹೇಳುತ್ತಿದ್ದಂತೆಯೇ ಪ್ರೇಕ್ಷಕರು ಗೊಳ್ಳೆಂದು ನಗುತ್ತಿದ್ದರು. ಅಷ್ಟರಲ್ಲಿಯೆ ಪಾತ್ರಧಾರಿಗಳು ರಂಗಕ್ಕೆ ಬರುತ್ತಿದ್ದರು. ಮುಂದೆ ಆಟ ಪ್ರಾರಂಭವಾಗುತ್ತಿತ್ತು. ಮತ್ತೆ ಬಾಲಕ ಶರಣಪ್ಪ ಕೈಪೇಟೆಯ ಬಾತಿ ಹಾಕಲು ಅಣಿಯಾಗುತ್ತಿದ್ದ. ಹೀಗೆ ಸಣ್ಣ ವಯಸ್ಸಿನಲ್ಲಿಯೇ ರಂಗದ ಮೇಲೆ ಧೈರ್ಯದಿಂದ ಮಾತನಾಡುವುದನ್ನು ಕಲಿತ.

ಒಂದು ದೊಡ್ಡಾಟ ಪ್ರದರ್ಶನಗೊಳ್ಳಬೇಕಾದರೆ ಕನಿಷ್ಟ ಮೂರು ತಿಂಗಳ ಪೂರ್ವ ತಯಾರಿ ಬೇಕು. ಮೊದಲನೆಯ ಒಂದು ತಿಂಗಳು ಮಾತಿನ ಶೈಲಿಯನ್ನು, ಎರಡನೆಯ ತಿಂಗಳು ಮಾತಿಗೆ ತಕ್ಕಂತೆ ಹಾವ-ಭಾವದೊಂದಿಗೆ ಕುಣಿತವನ್ನು ಕಲಿತು, ಮೂರನೆಯ ತಿಂಗಳು ಮುಗಿಯುತ್ತಿದ್ದಂತೆ ಕಲಾವಿದರೆಲ್ಲ ತಮ್ಮ ತಮ್ಮ ಹಾಡು, ಕುಣಿತ, ಅಭಿನಯದಲ್ಲಿ ಪಳಗಿದವರಾಗಿ ದೊಡ್ಡಾಟ ಪ್ರದರ್ಶನಕ್ಕೆ ಸಿದ್ಧರಾಗುತ್ತಾರೆ. ಹೀಗೆ ಪ್ರತಿನಿತ್ಯ ಬಣ್ಣದ ಮನೆಯಲ್ಲಿ ತಾಲೀಮು ನೋಡಲು ಬರುವ ಸದಭಿರುಚಿಯ ಕಲಾವಿದರು ಮುಂದಿನ ಆಟಕ್ಕೆ ತಯಾರಾಗುತ್ತಾರೆ. ಅದರಂತೆ ಶರಣಪ್ಪನವರು ಮೊದಲು ಕೈ ಪೇಟೆಯ ಬಾತಿ ಒತ್ತಲು ಪ್ರಾರಂಭಿಸಿ ಬಿಡುವಿನ ವೇಳೆಯಲ್ಲಿ ಹಾಸ್ಯದ ಮಾತುಗಳನ್ನು ಹೇಳಿ ರಂಗದ ಅನುಭವವನ್ನು ಮೈಗೂಡಿಸಿಕೊಂಡು, ತಮ್ಮೂರಿನಲ್ಲಿ ಮುಂದೆ ನಡೆಯುವ ಆಟಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸುವ ಕಲಾವಿದನಾಗಿ ಬೆಳೆದು ಹಲವಾರು ದೊಡ್ಡಾಟಗಳಲ್ಲಿ ವಿಭಿನ್ನ ತೆರನಾದ ಪಾತ್ರಗಳನ್ನು ಮಾಡಿ ಜನ ಮೆಚ್ಚುಗೆಯನ್ನು ಪಡೆದರು.

ದೊಡ್ಡಾಟದ ಗುರುಗಳಾದ ಫಕೀರಸಾಬ ನದಾಫ ಅವರಿಂದ ರಂಗ ತರಬೇತಿಯನ್ನು ಪಡೆದ ಶರಣಪ್ಪನವರು ದೊಡ್ಡಾಟದ ಪುರುಷ ಪಾತ್ರಗಳನ್ನು ಮಾಡುವುದರಲ್ಲಿ ಎತ್ತಿದ ಕೈ ಎಂದೆ ಹೇಳಬೇಕು. 'ಶಂಬರಾಸುರ' ಆಟದಲ್ಲಿ ಮನ್ಮಥ, 'ಸುರ ಪದ್ಮಾಸುರ' ಆಟದಲ್ಲಿ ಷಣ್ಮುಖ, 'ಭೂಕೈಲಾಸ'ದಲ್ಲಿ ಇಂದ್ರಜಿತು, 'ತಾಂಬ್ರಧ್ವಜ' ಮತ್ತು ಮಯೂರಧ್ವಜ'ದಲ್ಲಿ ಅರ್ಜುನ, 'ಐರಾವಣ-ಮೈರಾವಣ'ದಲ್ಲಿ ಮೈರಾವಣ ಹೀಗೆ ವಿಭಿನ್ನ ಪ್ರಮುಖ ಪಾತ್ರಗಳನ್ನು ನಿರ್ವಹಿಸಿ ಜನಮೆಚ್ಚುಗೆಯನ್ನು ಪಡೆದಿರುವರು. ಸುಮಾರು ಮೂವತ್ತು ವರ್ಷಗಳ ಕಾಲ ದೊಡ್ಡಾಟದಲ್ಲಿ ಪಾತ್ರಗಳನ್ನು ಮಾಡಿ

ಅಪಾರ ಅನುಭವವನ್ನು ಪಡೆದಿರುವ ಹಿರಿಯ ಜನಪದ ಕಲಾವಿದರು. ಇಷ್ಟೆ ಅಲ್ಲದೆ 'ಕೃಷ್ಣ ಪಾರಿಜಾತ'ದಲ್ಲಿ ಧೂತಿಯಾಗಿ ಹಲವಾರು ವರ್ಷಗಳವರೆಗೆ ಸೇವೆ ಸಲ್ಲಿಸಿ, ಪಾರಿಜಾತದ ಮೇಳವನ್ನು ಕಟ್ಟಿಕೊಂಡು ಬಮ್ಮಸಾಗರ, ನರೆಗಲ್ಲ, ಕೋಡಿಕೊಪ್ಪ ಹಾಗೂ ಗದಗದಲ್ಲಿ ಪ್ರದರ್ಶಿಸಿ ಜನಮೆಚ್ಚುಗೆಯನ್ನು ಪಡೆದಿದ್ದಾರೆ. ಮೇಲಾಗಿ ಕರಡಿ ಮಜಲಿನಲ್ಲಿ ದಿಮ್ಮು ಬಾರಿಸುವ ಅನುಭವವು ಸಹ ಇವರಿಗಿದೆ. ಹೀಗೆ ಹಳ್ಳಿಯ ಹಲವಾರು ಜನಪದ ಕಲೆಗಳನ್ನು ಮೈಗೂಡಿಸಿಕೊಂಡಿರುವ ಶರಣಪ್ಪನವರು ಸ್ಥಳೀಯ ಸಂಘ-ಸಂಸ್ಥೆಗಳಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಅಷ್ಟೆ ಅಲ್ಲದೆ ಕರ್ನಾಟಕ ಸರಕಾರವು "ಸುವರ್ಣ ಕರ್ನಾಟಕ" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಅರವತ್ತೆರಡರ ಹರೆಯದ ಹಿರಿಯ ಜನಪದ ಕಲಾವಿದರಾದ ಶರಣಪ್ಪನವರು ಮನೆಯಲ್ಲಿ ಸುಮ್ಮನೆ ಕುಳಿತುಕೊಳ್ಳದೆ ಹಳ್ಳಿಯಲ್ಲಿ ಯುವಕರಿಗೆ ದೊಡ್ಡಾಟದ ತರಬೇತಿಯನ್ನು ನೀಡಿ ದೊಡ್ಡಾಟ ಕಲೆಯನ್ನು ಉಳಿಸಿ-ಬೆಳೆಸಲು ಶ್ರಮಿಸುತ್ತಿದ್ದಾರೆ. ಇವರ ಶ್ರಮ ಸಾರ್ಥಕವಾಗಲಿ.

## ಶೇಖಪ್ಪ ಹನಮಪ್ಪ ರಂಗಣ್ಣವರ

ಶೇಖಪ್ಪ ಹನಮಪ್ಪ ರಂಗಣ್ಣವರ ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿ ಗ್ರಾಮದವರು. ಜಕ್ಕಲಿ ಗ್ರಾಮ ಗದಗ ಜಿಲ್ಲೆಯ ದೊಡ್ಡಾಟಗಳ ಕೇಂದ್ರವೆಂದೇ ಹೆಸರುವಾಸಿಯಾದ ಗ್ರಾಮ. ಇಲ್ಲಿ ಸಾಕಷ್ಟು ಹಿರಿಯ ದೊಡ್ಡಾಟ ಕಲಾವಿದರು ಸಿಕ್ಕುತ್ತಾರೆ. ಅಂಥ ಕಲಾವಿದರಲ್ಲಿ ಶೇಖಪ್ಪನವರು ಒಬ್ಬರು. ತಂದೆ ಹನಮಪ್ಪ, ತಾಯಿ ದುರಗವ್ವನವರ ಮಗನಾಗಿ 1944ರಲ್ಲಿ ಜನಿಸಿದರು. ವಾಲ್ಮೀಕಿ ಸಮುದಾಯಕ್ಕೆ ಸೇರಿದ ಇವರು ಮನೆಯ ಬಡತನದ ಕಾರಣದಿಂದ ಶಿಕ್ಷಣವನ್ನು ಕಲಿಯಲಾಗದೆ ತಂದೆ ಹನಮಪ್ಪನವರಂತೆ ಹೊಲಮನೆ ಕೆಲಸಗಳನ್ನು ಮಾಡುತ್ತ ಬಂದರು. ಯುವಕರಾದ ನಂತರ ಗ್ರಾಮದ ಹಿರಿಯ ಒಕ್ಕಲಿಗರ ಮನೆಯಲ್ಲಿ ದುಡಿಯಲು ಹೋಗುತ್ತಿದ್ದರು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೇ ದೊಡ್ಡಾಟಗಳನ್ನು ಮೈಗೂಡಿಸಿಕೊಂಡರು.

ಜಕ್ಕಲಿ ಗ್ರಾಮದಲ್ಲಿ ದೊಡ್ಡಾಟ ಕಲಿಸಲಿಕ್ಕೆಂದು ಒಮ್ಮೆ ಸುರಕೋಡಿನ ಅಯ್ಯಪ್ಪ ಅರಹುಣಸಿ ಮಾಸ್ತರು ಬಂದರು. ಗ್ರಾಮದ ಯುವಕಲಾವಿದರನ್ನು ಕೂಡಿಸಿ ದೊಡ್ಡಾಟದ ಗತ್ತು, ಹಾಡು, ಕುಣಿತಗಳನ್ನು ಒಂದು ವಾರ ಕಲಿಸಿ ಅವರಿಂದ ಒಂದು ಆಟವನ್ನು ಪ್ರದರ್ಶಿಸಬಹುದು ಎಂಬುದನ್ನು ಮನಗಂಡು 'ವನಖಂಡ ಯುದ್ಧಖಂಡ' ಎಂಬ

ದೊಡ್ಡಾಟವನ್ನು ಯುವಕಲಾವಿದರಿಗೆ ಕಲಿಸಲು ಆರಂಭಿಸಿದರು. ಮಾಸ್ತರಾದ ಅಯ್ಯಪ್ಪನವರು ಯುವಕರ ದೇಹದ ಚಹರೆ ಪಟ್ಟಿಯನ್ನು ನೋಡಿ ಆಟ (ನಾಟಕ)ದ ಪಾತ್ರಗಳನ್ನು ಹಂಚಿದರು. ಆದರೆ ಆಟದ ಪ್ರಮುಖ ಪಾತ್ರವಾದ ರಾವಣನ ಪಾತ್ರಕ್ಕೆ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಆಲೋಚಿಸುತ್ತಿರುವಾಗ, ಪ್ರತಿದಿನ ರಾತ್ರಿ ತಪ್ಪದೆ ತಾಲೀಮಿಗೆ ಬರುತ್ತಿದ್ದ ಶೇಖಪ್ಪನನ್ನು ಕಂಡು "ತಮ್ಮಾ ನೀನು ಎತ್ತರಕ ಮೈ ತುಂಬಿಕೊಂಡು ಬೇಸಿದಿ, ರಾವಣನ ಪಾತ್ರಕ್ಕೆ ಹೇಳಿ ಮಾಡಿಸಿದ್ಹಂಗ ಅದಿ" ಎಂದು ಮೂವತ್ತು ವಯಸ್ಸಿನ ಶೇಖಪ್ಪನನ್ನು ಒಪ್ಪಿಸಿ ಅವತ್ತೆ ತಾಲೀಮು ಮಾಡಲು ಹೇಳಿದರು. ಮೊದಲೆ ಆ ಕಲೆಯ ಗೀಳಿನಲ್ಲಿದ್ದ ಯುವಕ ಶೇಖಪ್ಪ ರಾವಣನ ಪಾತ್ರ ಮಾಡಲು ಒಪ್ಪಿ ಗುರುಗಳು ಹೇಳಿದ ಮಾತಿನ ಶೈಲಿಯನ್ನು ಮಾತುಗಳನ್ನು ಹೇಳಲು ಪ್ರಾರಂಭಿಸಿಯೇ ಬಿಟ್ಟರು. ಹೀಗೆ ಪ್ರತಿದಿನ ರಾತ್ರಿ ತಾಲೀಮು ತಿಂಗಳಾನುಗಟ್ಟಲೆ ನಡೆದು ಇನ್ನೇನು ಎಲ್ಲ ಪಾತ್ರಧಾರಿಗಳು ಮಾತುಗಳನ್ನು, ಕುಣಿತಗಳನ್ನು ಕಲಿತಿದ್ದಾರೆ, ಅಲ್ಲದೆ ಮುಮ್ಮೇಳ ಹಿಮ್ಮೇಳದವರು ಹಾಡುಗಳನ್ನು ಕಲಿತು ಸರಾಗವಾಗಿ ಹಾಡಬಲ್ಲರು ಎಂಬುದು ಮಾಸ್ತರಿಗೆ ಭರವಸೆಯಾದಾಗ ಆಟವನ್ನು ಪ್ರದರ್ಶಿಸುವ ದಿನವನ್ನು ಗೊತ್ತು ಮಾಡುತ್ತಾರೆ. ಆ ದಿನ ಗ್ರಾಮಸ್ತರಿಗಂತೂ ಹಬ್ಬದ ದಿನವಾಗಿ ಪರಿಣಮಿಸುತ್ತದೆ.

ದೊಡ್ಡಾಟ ಪ್ರದರ್ಶನದ ದಿನ ಗ್ರಾಮಸ್ಥರೆಲ್ಲರೂ ಸಂಜೆಯ ಹೊತ್ತಿಗೆ ಆಟ ನಡೆಯುವ ಅಟ್ಟದ ಮುಂದೆ ಬಂದು ಕುಳಿತುಕೊಳ್ಳುತ್ತಾರೆ. ಅತ್ತ ಪಾತ್ರಧಾರಿಗಳು ಆಟದ ಮನೆಯಿಂದ ಮುಖಕ್ಕೆ ಬಣ್ಣ ಹಚ್ಚಿಕೊಂಡು ವೇಷಭೂಷಣಗಳನ್ನು ಧರಿಸಿಕೊಂಡು ಅಟ್ಟಕ್ಕೆ ಬರುತ್ತಾರೆ. "ಶ್ರೀ ಗೌರಿವರ ಪುತ್ರ ಸತತ ಶುಭ ಚರಿತ. ಕೊಡು ಎಮಗೆ ವರವಽಽ" ಎಂಬ ಹಾಡಿನೊಂದಿಗೆ ಆಟ ಪ್ರಾರಂಭವಾಗುತ್ತದೆ. ನಂತರ ಪಾತ್ರಧಾರಿಗಳು ರಂಗಕ್ಕೆ ಬಂದು ಸಭಾದ ಮಾತನ್ನು ಹೇಳಿ ನಾಟಕದ ಸನ್ನಿವೇಶವನ್ನು ಮುಂದುವರೆಸುತ್ತಾರೆ. ಬಯಲಾಟಗಳ ರಂಗ ಮಂಟಪ ವೈಶಿಷ್ಟ್ಯಮಯವಾಗಿರುತ್ತದೆ. ಅಂದರೆ ಗ್ರಾಮದ ನಡುವಿನ ಬಯಲಲ್ಲಿ ಒಂದು ಪಕ್ಕಕ್ಕೆ ಚೌಕಾಕಾರವಾಗಿ ಸಮಮಟ್ಟದಲ್ಲಿ ನಾಲ್ಕು ಎತ್ತರದ ಕಂಬಗಳನ್ನು ಹುಗಿದು, ಆ ಕಂಬಗಳಿಗೆ ನಾಲ್ಕು ಬಂಡಿಯ ಗಾಲಿಗಳನ್ನಿಟ್ಟು ಅವುಗಳ ತೋಳಿನ ಮಧ್ಯದಲ್ಲಿ ನಾಲ್ಕು ದಪ್ಪನೆಯ ತೊಲೆಗಳನ್ನು ಜೋಡಿಸಿ ಅದರ ಮೇಲೆ ತೊಲೆಗಳನ್ನು ಜೋಡಿಸಿ ಅಟ್ಟವನ್ನು ನಿರ್ಮಿಸಿಕೊಳ್ಳುತ್ತಾರೆ. ಈ ತೊಲೆ ಜೋಡಿಸಿದ ಅಟ್ಟದ ಮೇಲೆಯೇ ಆಟ ಪ್ರದರ್ಶನಗೊಳ್ಳುತ್ತದೆ. 'ವನಖಂಡ ಯುದ್ಧಖಂಡ' ಆಟ ನಡೆದ ವೇಳೆಯಲ್ಲಿ ದೃಶ್ಯ ಒಂದರಲ್ಲಿ ಅಂದರೆ ರಾವಣನ ತಂಗಿ ಶೂರ್ಪನಕಿ ಲಕ್ಷಣನಿಂದ ಮೂಗು ಮತ್ತು ಮೊಲೆಗಳನ್ನು ಕೊಯ್ದುಕೊಂಡು ಅಪಮಾನದಿಂದ ಆಕ್ರೋಶಗೊಂಡು ಒದರುತ್ತ

ಅಣ್ಣನಾದ ರಾವಣಾಸುರನಿಗೆ ಬಂದು ಹೇಳುವ ದೃಶ್ಯ. ಆ ವೇಳೆಯಲ್ಲಿ ರಾವಣನ ಪಾತ್ರವನ್ನು ನಿರ್ವಹಿಸುತ್ತಿದ್ದ ಶೇಖಪ್ಪನವರು ತಂಗಿ ಶೂರ್ಪನಕಿಯ ಸ್ಥಿಯಯನ್ನು ಕಂಡು ಭಾವಪರವಶವಾಗಿ ಹುಮ್ಮಸ್ಸಿನಿಂದ "ಹುರ್ ಹಲಹಲಾಽಽ" ಎಂದು ಗಧೆಯನ್ನು ಹಿಡಿದು ಮೇಲಕ್ಕೆ ಜಿಗಿದು ಬಲಗಾಲಿನಿಂದ ಅಟ್ಟದ ತೊಲೆಯನ್ನು ಒದ್ದರೆ ಅಟ್ಟದ ಬಲಿಷ್ಟವಾದ ತೊಲಿಯೇ ಮುರಿದು ಬಿದ್ದಿತು. ಆಟವನ್ನು ನೋಡುತ್ತಿದ್ದ ಪ್ರೇಕ್ಷಕರು ಬೆಪ್ಪು ಬೆರಗಾಗಿ ಏನೋ ಅನಾಹುತ ನಡೆದೆ ಹೋಯಿತೆಂದು ಅಟ್ಟಕ್ಕೆ ಮುಗಿಬಿದ್ದರೆ ಇನ್ನೂ ಕೆಲವರು ಶೇಖಪ್ಪನವರ ಕಾಲನ್ನು ಹಿಡಿದು "ಕಾಲಿಗೆ ಏನೂ ಆಗಿಲ್ಲವಲ್ಲ" ಎಂದು ಮುಟ್ಟಿ ನೋಡಿ ಹೋದರು. ಮತ್ತೆ ಆಗಿಂದಾಗ್ಗೆ ಮತ್ತೊಂದು ತೊಲೆಯನ್ನು ತರಿಸಿ ಮುರಿದ ತೊಲೆಯನ್ನು ತೆಗೆದು ಹೊಸ ತೊಲೆಯನ್ನು ಅದಕ್ಕೆ ಜೋಡಿಸಿ ಆಟವನ್ನು ಪ್ರಾರಂಭಿಸಿದರು. ಅಂದರೆ ಶೇಖಪ್ಪನವರು ಭಾವಪರವಶದಿಂದ ಪಾತ್ರವೇ ತಾವಾಗಿ ಆ ಪಾತ್ರವನ್ನು ನಿರ್ವಹಿಸುವ ಅವರ ಪ್ರತಿಭೆಯನ್ನು ಮೆಚ್ಚುವಂಥದ್ದು.

ಶೇಖಪ್ಪನವರಿಗೆ ಓದು-ಬರಹ ಬರದಿದ್ದರೂ ಸಹ ಆಟದ ಎಲ್ಲ ಮಾತುಗಳನ್ನು ನೆನಪಿಟ್ಟುಕೊಂಡು, ತಲೆಗೆ ಕಿರೀಟ, ಭುಜಕ್ಕೆ ಭುಜ ಕಿರೀಟ, ಎದೆ ಕವಚ, ಮುಂಗೈ ಕಿರೀಟ ಮತ್ತು ಮುಖಕ್ಕೆ ಕಲ್ಲಿಮೀಸೆ ಧರಿಸಿಕೊಂಡು "ತೋಮ್ ತಕ್ ಜನ, ತೋಮ್ ತಕ್ ಜನ್" ಎಂಬ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ರಾವಣ ಪಾತ್ರಧಾರಿಯಾಗಿ ರಂಗಕ್ಕೆಬಂದರೆ ಸಾಕು "ನಟ ಭಯಂಕರ ಬಂದ" ಎಂದು ಹೇಳುತ್ತಿದ್ದರು. ಹೀಗೆ ರಾವಣನ ಪಾತ್ರವನ್ನು ನೋಡುಗರ ಮನದಾಳದಲ್ಲಿ ನಿಲ್ಲುವಂತೆ ಅಭಿನಯಿಸುತ್ತಿದ್ದರು.

ಅಯ್ಯಪ್ಪ ಮಾಸ್ತರರ ಅಚ್ಚುಮೆಚ್ಚಿನ ಶಿಷ್ಯರಾದ ಶೇಖಪ್ಪನವರು ದೊಡ್ಡಾಟದ ಅಭಿನಯ, ತಾಳ, ಲಯ ಕುಣಿತ ಹಾಗೂ ಹಾಡುಗಾರಿಕೆಗಳನ್ನು ಕಲಿತು ಒಬ್ಬ ಜನಪ್ರಿಯ ಜನಪದ ಕಲಾವಿದರೆನಿಸಿದರು. ಬಲಿಷ್ಟ ಮತ್ತು ತುಸು ಎತ್ತರದ ವ್ಯಕ್ತಿಯಾದುದರಿಂದ ರೌದ್ರ-ಭಯಂಕರವಾದ ಪಾತರಗಳು ಇವರಿಗೆ ಒಪ್ಪುತ್ತಿದ್ದವು. ಹೀಗಾಗಿ ಇವರು 'ಗಿರಿಜಾ ಕಲ್ಯಾಣ'ದಲ್ಲಿ -ತಾರಕಾಸುರ, 'ಕರ್ಣಪರ್ವ'ದಲ್ಲಿ-ದುರ್ಯೋಧನ, 'ಐರಾವಣ ಮೈರಾವಣ'ದಲ್ಲಿ-ಕರಧ್ವಜ, 'ಯಯಾತಿ'ಯಲ್ಲಿ-ವಿಜಯ ಸಿಂಹ, 'ರಾವಣನ ಜನನ-ಮರಣ'ದಲ್ಲಿ-ರಾವಣ ಹೀಗೆ ಪ್ರತಿಯೊಂದು ದೊಡ್ಡಾಟಗಳಲ್ಲಿ ಖಳನಾಯಕನ ಪಾತ್ರಗಳನ್ನೆ ನಿರ್ವಹಿಸಿದ್ದಾರೆ. ಸುಮಾರು ಮೂವತ್ತು ವರ್ಷ ಅನುಭವ ಇರುವ ಇವರು ಈಗಲೂ ಆ ಪಾತ್ರಗಳನ್ನು ನಿರ್ವಹಿಸುತ್ತಾರೆ. ಆ ಮಾತಿನ ಶೈಲಿ, ಕುಣಿತಗಳ ಲಯ ಇನ್ನೂ ಮಾಸಿಲ್ಲವೆಂದೇ ಹೇಳಬೇಕು.

ಅಭಿಜಾತ ಕಲಾವಿದರಾದ ಶೇಖಪ್ಪನವರು ಗ್ರಾಮದಲ್ಲಿ ಯುವಕರಿಗೆ ದೊಡ್ಡಾಟಗಳ ತಾಲೀಮು ನಡೆಸುವ ವೇಳೆಯಲ್ಲಿ ಪ್ರತಿದಿನ ರಾತ್ರಿ ಬಣ್ಣದ ಮನೆಗೆ ಹೋಗಿ ಯುವಕರಿಗೆ ತಮ್ಮ ಅಭಿನಯದ ಅನುಭವಗಳನ್ನು ಹೇಳಿ, ಮಾತಿನ ಶೈಲಿಯನ್ನು, ತಾಳಕ್ಕೆ ತಕ್ಕಂತೆ ಹೇಗೆ ಕುಣಿಯಬೇಕು ಎಂಬುದನ್ನು ಹೇಳಿ ಕೊಡುತ್ತಾರೆ. ಇಂಥ ಕಲಾವಿದನಿಗೆ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳೊಂದಿಗೆ ಗೌರವ ಪ್ರಶಸ್ತಿಗಳನ್ನು ನೀಡಿ ಗೌರವಿಸಿದ್ದಾರೆ.

## ಹನಮಪ್ಪ ಭೀಮಪ್ಪ ಕರಿ

ಗದಗ ಜಿಲ್ಲೆಯ ಲಕ್ಕುಂಡಿ ಒಂದು ಐತಿಹಾಸಿಕ ಸ್ಥಳ. ಅಷ್ಟೆ ಅಲ್ಲ ಇದೊಂದು ಜನಪದ ಕಲೆಗಳ ತವರು. ಇಲ್ಲಿ ಉತ್ತರ ಕರ್ನಾಟಕದ ಹಲವಾರು ಜನಪದ ಕಲೆಗಳನ್ನು ಉಳಿಸಿ ಬೆಳೆಸುತ್ತ ಬಂದ ಊರಿದು. ಇಂಥ ಹಳ್ಳಿಯಲ್ಲಿ 1952ರಲ್ಲಿ ಜನಿಸಿದ ಹನಮಪ್ಪ ಭೀಮಪ್ಪ ಕರಿಯವರು, ತಮ್ಮ ಬಾಲ್ಯದಲ್ಲಿಯೆ ಹಲವಾರು ಜನಪದ ಕಲೆಗಳಿಗೆ ಮಾರುಹೋಗಿ, ಅವುಗಳನ್ನು ತಾವೂ ಕಲಿಯಬೇಕೆಂಬ ಮಹದಾಸೆಯಿಂದ ಹಗಲು ಹೊಲದಲ್ಲಿ ಕೆಲಸ ಮಾಡಿ, ಸಂಜೆಯ ಹೊತ್ತಿನಲ್ಲಿ ಗುಡಿಗುಂಡಾರದಲ್ಲಿ ಕಲಿಸುತ್ತಿದ್ದ ದೊಡ್ಡಾಟದ ಪಾತ್ರಗಳನ್ನು ಹಾಗೂ ಅದರ ಕುಣಿತ, ಹಾಡು ಮುಂತಾದವುಗಳಿಗೆ ಮನಸೋತ ಬಾಲಕ ಹನಮಪ್ಪನಿಗೆ, ದೊಡ್ಡಾಟವನ್ನು ಕಲಿಸುತ್ತಿದ್ದ ಕತೆಗಾರ ದ್ಯಾಮಣ್ಣ ನಿಡಗುಂದಿ ಮಾಸ್ತರರು 'ಸತ್ಯವಾನ ಸಾವಿತ್ರಿ' ಆಟದಲ್ಲಿ ಬರುವ ಅಗ್ನಿಶರ್ಮನ ಪಾತ್ರವನ್ನು ನಿರ್ವಹಿಸಲು ಹೇಳಿ, ಆ ಪಾತ್ರದ ಮಾತುಗಳನ್ನು ಬರೆದುಕೊಟ್ಟರು. ಅಂದಿನಿಂದಲೇ ಇವರ ಕಲಾಸೇವೆ ಪ್ರಾರಂಭವಾಯಿತು. ಆ ಪಾತ್ರವನ್ನು ಅಭೂತಪೂರ್ವವಾಗಿ ನಿರ್ವಹಿಸಿದ ಬಾಲಕ ಹನಮಪ್ಪನಿಗೆ ಕತೆಗಾರ ದ್ಯಾಮಪ್ಪನವರಿಂದ ಶಹಬಾಸಗಿರಿ ದೊರೆಯಿತು. ಮತ್ತೆ ಬಾಲಕ ಹನುಮಪ್ಪನಿಗೆ ಅದೇ ನಾಟಕದ ಚಿತ್ರಗುಪ್ತನ ಪಾತ್ರವು ಲಭಿಸಿತು. 'ಸತ್ಯವಾನ ಸಾವಿತ್ರಿ'ಯ ಆಟದಿಂದ ಪ್ರಾರಂಭವಾದ ಇವರ ಕಲಾಸೇವೆ ಮುಂದೆ ಇವರನ್ನು ಒಬ್ಬ ಕತೆಗಾರನನ್ನಾಗಿಯೂ ಹಾಗೂ ಹಾರ್ಮೋನಿಯಮ್ ಮಾಸ್ತರನನ್ನಾಗಿಯೂ ಮಾಡಿತು.

ಕತೆಗಾರ ದ್ಯಾಮನಪ್ಪನವರು ತಾವು ಹಾಡಲಿಕ್ಕೆ ಕುಳಿತರೆ ಕೆಲವೊಮ್ಮೆ ಸೂರ ಹಿಡಿಯಲಿಕ್ಕೆ ಹನಮಪ್ಪನವರಿಗೆ ಹೇಳುತ್ತಿದ್ದರು. ಹೀಗೆ ಸೂರ ಹಿಡಿಯಲು ಕೂರುತ್ತಿದ್ದ ಇವರು ಬರಬರುತ್ತ ದೊಡ್ಡಾಟಕ್ಕೆ ಬೇಕಾದ ಹಾಡುಗಳನ್ನು ನುಡಿಸುವಷ್ಟು ಕಲಿತು

ಮುಂದೆ ಅದರಲ್ಲಿ ಪಳಗಿದವರಾಗಿ ಸ್ವತಃ ತಾವೇ ಹಾರ್ಮೋನಿಯಂ ಬಾರಿಸುವುದರಲ್ಲಿ ಮನನರಾಗಿ ಬಿಟ್ಟರು. ಗುರುಗಳಾದ ದ್ಯಾಮಪ್ಪ ನಿಡಗುಂದಿಯವರ ಮಗ ಲಕ್ಷ್ಮಣ ಎಂಬುವನು ಹನುಮಪ್ಪನವರ ಸಮವಯಸ್ಕನಿದ್ದನು. ಆದ್ದರಿಂದ ಇವರಿಬ್ಬರು ಕೂಡಿಕೊಂಡು ಬಿಡುವಿನ ವೇಳೆಯಲ್ಲಿ ದ್ಯಾಮಪ್ಪನವರಿಂದ ದೊಡ್ಡಾಟದ ಕುಣಿತಗಳನ್ನು ಹಾಗೂ ಆಟದ ಸಂಭಾಷಣೆಯ ಶೈಲಿಯನ್ನು ಕಲಿತರು. ಅಷ್ಟಕ್ಕೆ ಕಲಿಕೆಯ ದಾಹ ಇಂಗಲಿಲ್ಲ. ದ್ಯಾಮಪ್ಪನವರು ದೊಡ್ಡಾಟ ಕಲಿಸುವುದರಲ್ಲಿ ಮಾತ್ರವಲ್ಲದೆ ಗೀಗೀ ಪದಗಳನ್ನು ಹಾಗೂ ಭಜನಾ ಪದಗಳನ್ನು ಸಹ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಹೀಗೆ ಬಹಳಷ್ಟು ನೈಪುಣ್ಯತೆಯನ್ನು ಪಡೆದ ಗುರುಗಳಿಂದ ಅವುಗಳನ್ನೆಲ್ಲ ಕಲಿತು ಹಾಡುವುದರಲ್ಲಿಯೂ ಪಳಗಿದವನಾದನು.

ವಿದ್ಯಾರ್ಜನೆಗೆ ಒಳ್ಳೆಯ ಗುರುವಿನ ಅವಶ್ಯಕತೆ ಒಬ್ಬ ವಿದ್ಯಾರ್ಥಿಗೆ ಎಷ್ಟು ಮುಖ್ಯವೋ, ಒಬ್ಬ ಗುರುವಿಗೂ ಒಳ್ಳೆಯ ಶಿಷ್ಯ ಸಿಗುವುದು ಕೂಡ ಬಹಳ ಮುಖ್ಯ. ಒಬ್ಬ ಗುರುವಿಗೆ ಅನೇಕ ಶಿಷ್ಯರಿರಬಹುದು ಆದರೆ ಗುರುವಿನ ಮೆಚ್ಚಿನ ಅಥವಾ ಅರ್ಹ ಶಿಷ್ಯರಾಗುವುದು ಎಲ್ಲ ವಿದ್ಯಾರ್ಥಿಗಳಿಗೂ ಸಾಧ್ಯವಿಲ್ಲ. ವಿದ್ಯಾರ್ಥಿಯ ಕಲಿಕೆಯ ದಾಹ, ಅರಿತುಕೊಳ್ಳುವ ವೇಗ, ವಿದೇಯತೆ ಎಲ್ಲವು ಗುರುವಿಗೆ ಮೆಚ್ಚಿಗೆಯಾದಾಗ ಮಾತ್ರ ತಮ್ಮಲ್ಲಿಯ ಸರ್ವ ವಿದ್ಯೆಯನ್ನು ಆ ಶಿಷ್ಯನಿಗೆ ಧಾರೆಯೆರೆಯುತ್ತಾರೆ. ಇಂಥ ಅವಿನಾಭಾವ ಸಂಬಂಧ ಗುರುಗಳಾದ ದ್ಯಾಮಣ್ಣನವರ ಮತ್ತು ಬಾಲಕ ಹನಮಪ್ಪನ ನಡುವೆ ಇತ್ತು. ಬಾಲಕನಾದ ಹನಮಪ್ಪ 'ರಾಜಾ ಸತ್ಯಹರಿಶ್ಚಂದ್ರ' ಆಟದಲ್ಲಿ ಲೋಹಿತಾಶ್ವನ ಪಾತ್ರವನ್ನು ಸಹ ನಿರ್ವಹಿಸುತ್ತಿದ್ದರು. ಪಾತ್ರಗಳು ಸನ್ನಿವೇಶಕ್ಕೆ ರಸಾಭಾಸವಾಗದಂತೆ ನವರಸಪೂರ್ಣವಾಗಿ ಅಭಿನಯಿಸುವ ಕಲೆಯನ್ನು ತನ್ನ ಗುರುಗಳಾದ ದ್ಯಾಮಣ್ಣನವರಿಂದ ಕಲಿತೆ ಎಂದು ಹೃದಯ ತುಂಬಿ ಹೇಳುತ್ತಾರೆ. ಅಳುವ ಸನ್ನಿವೇಶ ಬಂದರೆ ಅತ್ತೆ ಆ ಪಾತ್ರವನ್ನು ಮಾಡುತ್ತಿದ್ದರು. ಆಟವನ್ನು ನೋಡುತ್ತಿದ್ದ ಜನರ ಕಣ್ಣಲ್ಲಿ ನೀರು ಬರಬೇಕು ಅಷ್ಟು ತಲ್ಲೀನತೆಯಿಂದ ಪಾತ್ರವನ್ನು ನಿರ್ವಹಿಸುತ್ತಿದ್ದರು.

ದ್ಯಾಮಣ್ಣ ಗುರುಗಳು ತೀರಿಹೋದ ಬಳಿಕ ಇನ್ನೇನು ಊರಲ್ಲಿ ದೊಡ್ಡಾಟ ಕಲೆಯೇ ಮುಗಿದು ಹೋಯಿತು ಎಂದೆನ್ನುತ್ತಿದ್ದ ಊರ ಜನರಿಗೆ ಹನಮಪ್ಪನವರು ಗುರುಗಳಿಂದ ಕಲಿತು ಕರಗತವಾದ ಕಲೆ ಮುಂದುವರೆಯ ಬೇಕು ಗುರುಗಳ ಹೆಸರು ಉಳಿಯಬೇಕು ಎಂಬ ಮಹದಾಸೆಯಿಂದ ಗುರುಗಳ ಮಗನಾದ ಲಕ್ಷ್ಮಣ ಮತ್ತು ಊರಿನ ಯುವಕರನ್ನು ಕಲೆ ಹಾಕಿ 'ಸತ್ಯಹರಿಶ್ಚಂದ್ರ' ಆಟವನ್ನು ಪ್ರಾರಂಭಿಸಿ

ತರಬೇತಿಯನ್ನು ಕೊಟ್ಟು, ತಾವು ಹಾರ್ಮೋನಿಯಂ ಬಾರಿಸುವುದಕ್ಕೆ, ಲಕ್ಷ್ಮಣ ಹಾಡುಗಾರಿಕೆಗೆ ನಿಂತು ಯುವಕರಿಗೆ ತರಬೇತಿಯನ್ನು ಕೊಟ್ಟು ಸತ್ಯಹರಿಶ್ಚಂದ್ರ ಆಟವನ್ನು ಯಶಸ್ವಿಗೊಳಿಸಿದರು. ಊರ ಪ್ರಮುಖರು ಇಬ್ಬರನ್ನು ಅದೇ ರಂಗಭೂಮಿಯ ಮೇಲೆ ಸನ್ಮಾನಿಸಿ "ಈ ಕಲೆಯು ನಿರಂತರವಾಗಿ ನಡೆಯಲಿ ಇದಕ್ಕೆ ತಗಲುವ ಖರ್ಚು-ವೆಚ್ಚವನ್ನು ನಾವು ಊರವರು ಬರಿಸುತ್ತೇವೆ" ಎಂದು ಪ್ರೋತ್ಸಾಹಿಸಲು ಹನಮಪ್ಪನವರು ಪ್ರತಿವರ್ಷ ಜಾತ್ರೆಯ ವೇಳೆಗೆ ಒಂದೊಂದು ದೊಡ್ಡಾಟವನ್ನು ಊರ ಯುವಕರಿಗೆ ತರಬೇತಿ ನೀಡಿ ರಂಗಕ್ಕೆ ತರಲು ಪ್ರಾರಂಭಿಸಿದರು. ಹೀಗೆ ಇವರು ಪ್ರದರ್ಶಿಸಿದ ಆಟಗಳು 'ಸತ್ಯವಾನ ಸಾವಿತ್ರಿ', 'ಹನುಮಂತನ ಲಿಂಗಧಾರಣ', 'ಚಿತ್ರಕೇತು ಮಹಾರಾಜ', 'ರಾಜಾ ಹರಿಶ್ಚಂದ್ರ', 'ಸಭಾ ಪರ್ವ', 'ಕುರುಕ್ಷೇತ್ರ' ಮುಂತಾದ ಆಟಗಳನ್ನು ಪ್ರಯೋಗಿಸಿ ಜನಮೆಚ್ಚುಗೆಯನ್ನು ಪಡೆದುದಲ್ಲದೆ ಜನಪದ ಕಲೆಯನ್ನು ಉಳಿಸಿ-ಬೆಳೆಸಲು ಪ್ರಯತ್ನಿಸಿದರು.

ಹನಮಪ್ಪನವರು ಮೊದಮೊದಲು ನಟರಾಗಿ ಪ್ರಯೋಗಿಸುತ್ತಿದ್ದ 'ಸತ್ಯಹರಿಶ್ಚಂದ್ರ' ಆಟದಲ್ಲಿ ಹರಿಶ್ಚಂದ್ರನ ಪಾತ್ರವನ್ನು ನಿರ್ವಹಿಸುತ್ತಿದ್ದರು. ನಂತರ ಹಾರ್ಮೋನಿಯಮ್ ಮಾಸ್ತರನ ಕೊರತೆಯ ನಿಮಿತ್ಯ ತಾವು ಹಾರ್ಮೋನಿಯಮ್ ನುಡಿಸುವುದಕ್ಕೆ ಕುಳಿತು ಆಯಾ ದೊಡ್ಡಾಟಗಳ ಪ್ರಸಂಗಕ್ಕೆ, ಸನ್ನಿವೇಶಗಳಿಗೆ ತಕ್ಕಂತೆ ಆನಂದ ಭೈರವಿ, ಶಂಕರಾಭರಣ, ಭೈರವಿ ಮುಂತಾದ ರಾಗಳಿಗೆ ಹೊಂದುವ ಹಾಗೆ ಪದ್ಯಗಳನ್ನು ತಾವೇ ರಚಿಸಿ ಹಿಮ್ಮೇಳದವರಿಗೆ ತರಬೇತಿ ನೀಡಿ ಆಟವನ್ನು ಯಶಸ್ವಿಗೊಳಿಸತೊಡಗಿದರು.

ಹನಮಪ್ಪನವರು ದೊಡ್ಡಾಟ ಹೇಳಿಕೊಡುವುದರಲ್ಲಿ ಹಾರ್ಮೋನಿಯಂ ನುಡಿಸುವುದರಲ್ಲಿ, ಗೀತರಚನೆ ಮಾಡುವುದರಲ್ಲಿ, ಲಯಬದ್ಧವಾಗಿ ಹಾಡುವುದರಲ್ಲಿ, ನಿಪುಣರಾದಂತೆಲ್ಲ ಊರಜನರು ಇವರನ್ನು 'ದೊಡ್ಡಾಟದ ಮಾಸ್ತರ' ಎಂದೆ ಕರೆಯಲಾರಂಭಿಸಿದರು. ತಮ್ಮದೆ ಆದ ಒಂದು ಕಲಾಮೇಳವನ್ನು ಸಿದ್ಧಪಡಿಸಬೇಕು ಎಂದು ಹನಮಪ್ಪನವರು ಓದಿದ ಪದವೀಧರರಾದಂತಹ ಅನೇಕ ಯುವಕರನ್ನು ಕಲೆಹಾಕಿ 'ದೊಡ್ಡಾಟದ ಯುವಕರ ಮೇಳ'ವನ್ನು ತಯಾರು ಮಾಡಿದರು. ಅವರಿಗೆ ದಿನನಿತ್ಯ ಸಂಜೆಯ ವೇಳೆಯಲ್ಲಿ ಬಣ್ಣದ ಮನೆಯಲ್ಲಿ ಕುಣಿತ, ಸಂಭಾಷಣೆ, ಸಂಗೀತ ಹಾಗೂ ಹಾವಭಾವಗಳನ್ನು ಕಲಿಸಿ ತಂಡವನ್ನು ತಯಾರಿಮಾಡಿದರು. ಒಂದು ಆಟವನ್ನು ರಂಗಕ್ಕೆ ತರಬೇಕಾದರೆ ಅದಕ್ಕೆ ತಗಲುವ ವೇಷಭೂಷಣಗಳ ಆಭರಣದ, ಬಣ್ಣದ ಮುಂತಾದವುಗಳ ಖರ್ಚುವೆಚ್ಚ ಕನಿಷ್ಟ 10 ಸಾವಿರದಷ್ಟು, ಇದನ್ನು

ನಿಭಾಯಿಸುವುದು ಹನಮಪ್ಪನವರಿಗೆ ಕಷ್ಟವಾಯಿತು. ಆದರೂ ಎದೆಗುಂದದೆ ಊರಲ್ಲಿ ಪಟ್ಟಿಹಾಕಿ ಯಶಸ್ವಿ ಕಲಾಮೇಳವನ್ನು ತಯಾರು ಮಾಡಿದರು. ಈ ಕಲಾಮೇಳವು ತಮ್ಮ ಊರಿನಲ್ಲಿ ಉತ್ತಮ ಪ್ರದರ್ಶನಗಳನ್ನು ನೀಡುತ್ತ ಯಶಸ್ವಿಯಾದಂತೆಲ್ಲ ಅಕ್ಕಪಕ್ಕದ ಊರಿನವರು ತಮ್ಮ ಊರಿನ ಜಾತ್ರಾಮಹೋತ್ಸವಗಳಿಗೆ ಈ ಮೇಳದವರಿಂದ ದೊಡ್ಡಾಟದ ಪ್ರದರ್ಶನಕ್ಕೆ ಆಹ್ವಾನಿಸತೊಡಗಿದರು. ಎಲಿಸಿರುಂದದಲ್ಲಿ ಇವರ ತಂಡ ಅತೀ ಹೆಚ್ಚು ಪ್ರದರ್ಶನಗಳನ್ನು ನೀಡಿದೆ.

ಹನಮಪ್ಪನವರ ಕಲಾಪ್ರತಿಭೆಯನ್ನು ಮೆಚ್ಚಿ ಅಕ್ಕಪಕ್ಕದ ಊರಿನವರು ತಮ್ಮ ಊರಿಗೆ ಕರೆಸಿ ದೊಡ್ಡಾಟದ ತರಬೇತಿಯನ್ನು ತಮ್ಮ ಊರ ಯುವಕರಿಗೂ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದರು. ಹೀಗೆ ತಮ್ಮ ಕಲಾಸೇವೆಯ ಕ್ಷೇತ್ರ ವಿಸ್ತಾರವಾಗುತ್ತ ಹೋದಂತೆ ಜನಪದ ಕಲೆಯ ಉಳಿವಿಗಾಗಿ ಶ್ರಮಿಸುವ ತುಡಿತ ಹೆಚ್ಚುತ್ತಾ ಹೋಯಿತು. ಇವರ ಜನಪದ ಕಲಾಸೇವೆಯನ್ನು ಮೆಚ್ಚಿ ಅನೇಕ ಸಂಘ-ಸಂಸ್ಥೆಗಳು ಸನ್ಮಾನ ಮಾಡಿ ಪ್ರಶಸ್ತಿಯನ್ನು ನೀಡಿವೆ. ಭಾರತೀಯ ಪುರಾತತ್ವ ಇಲಾಖೆಯವರು ಸತತ ಏಳುದಿನಗಳವರೆಗೆ ಇವರ ದೊಡ್ಡಾಟಗಳನ್ನು ಪ್ರದರ್ಶನಮಾಡಿ ಇವರಿಗೆ ಸನ್ಮಾನಿಸಿದ್ದಾರೆ. ಬೇಲೇರಿಯಲ್ಲಿ 'ಭೀಮಾರ್ಜುನರ ಗರ್ವಭಂಗ' ಮತ್ತು ನಾಗರಾಳದಲ್ಲಿ 'ಸುಗಂಧ ಪುಷ್ಪ ಹರಣ' ಎಂಬ ದೊಡ್ಡಾಟಗಳು ಪ್ರದರ್ಶನಗೊಂಡು ಜನಮೆಚ್ಚುಗೆಯನ್ನು ಪಡೆದವಷ್ಟೇ ಅಲ್ಲ ಸ್ಥಳೀಯ ಸಂಸ್ಥೆಯವರಿಂದ ಸನ್ಮಾನವು ದೊರೆಯಿತು. ಹೀಗೆ ಹೋದಲ್ಲೆಲ್ಲ ಉತ್ತಮ ಪ್ರದರ್ಶನ ನೀಡಿ ದೊಡ್ಡಾಟದ ಉಳಿವಿಗಾಗಿ ಶ್ರಮಿಸಿದ್ದಾರೆ.

ಹನಮಪ್ಪನವರು ದೊಡ್ಡಾಟವೊಂದರಲ್ಲಿಯೇ ಅಲ್ಲದೆ ಗೀಗಿ ಪದಗಳನ್ನು ಮತ್ತು ಭಜನೆಗಳನ್ನು ತುಂಬಾ ಸುಶ್ರಾವ್ಯವಾಗಿ ಹಾಡುತ್ತಾರೆ. ಶಲವಡಿ, ಲಕ್ಕುಂಡಿ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಜಾತ್ರಾಮಹೋತ್ಸವಗಳಲ್ಲಿ ಮೊದಲನೆಯ ದಿನ ಇವರ ತಂಡದವರಿಂದ ದೊಡ್ಡಾಟ ಪ್ರದರ್ಶನಗೊಂಡರೆ ಮರುದಿನ ಇವರ ಹಾಡುಗಳನ್ನು ಕೇಳುವ ಅದೃಷ್ಟ ಜನರಿಗಿರುತ್ತದೆ. ತಮ್ಮ ಮಧುರ ಕಂಠದಿಂದ ಗೀಗಿ ಪದಗಳನ್ನು, ಭಜನೆಗಳನ್ನು ಹಾಡಿ ಜನರ ಮೆಚ್ಚುಗೆಯನ್ನು ಗಳಿಸಿದ್ದಾರೆ.

ಹೀಗೆ ಜನಪದ ಕಲಾಸೇವೆಯಿಂದ ಜನರ ಮೆಚ್ಚುಗೆಗೆ ಪಾತ್ರರಾದ ಹನಮಪ್ಪನವರ ಕಲಾಸೇವೆ ಹೀಗೆ ನಿರಂತರವಾಗಿ ಮುಂದುವರೆಯಲಿ ಜನಪದ ಕಲೆಯ ಉಳಿವಿಗಾಗಿ ಶ್ರಮಿಸಲಿ ಎಂದು ಆಶಿಸೋಣ.

# ಹನಮಪ್ಪ ರಂಗಪ್ಪ ಕೆಳಗಡಿ

ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿ ಗ್ರಾಮ ಜನಪದ ಕಲೆಗಳ ತವರೂರೆಂದೆ ಪ್ರಸಿದ್ಧವಾಗಿದೆ. ಈ ಗ್ರಾಮದಲ್ಲಿ ಸುಮಾರು ಏಳೆಂಟು ದೊಡ್ಡಾಟದ ಮೇಳಗಳಿವೆ. ಯಾವುದೇ ಮೇಳದವರು ದೊಡ್ಡಾಟವನ್ನು ಪ್ರಾರಂಭಿಸಲಿ ಆ ಮೇಳದ ದೊಡ್ಡಾಟಕ್ಕೆ ಹಾರ್ಮೋನಿಯಂ ನುಡಿಸುವ ಏಕೈಕ ಹಿರಿಯ ಕಲಾವಿದ ಹನಮಪ್ಪ ಕೆಳಗಡಿಯವರು. ಇವರು ಹುಟ್ಟಿದ್ದು 1943 ಫೆಬ್ರವರಿ ಒಂದರಂದು ಇವರ ತಂದೆ ರಂಗಪ್ಪ, ತಾಯಿ ಫಕೀರವ್ವ, ವಾಲ್ಮೀಕಿ ಸಮುದಾಯಕ್ಕೆ ಸೇರಿದ ಇವರು ಆರನೆಯ ತರಗತಿಯವರೆಗೆ ಓದಿದ್ದಾರೆ. ಆರ್ಥಿಕ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲದ ಕಾರಣ ತಮ್ಮ ಓದನ್ನು ನಿಲ್ಲಿಸಿ ಒಕ್ಕಲುತನಕ್ಕೆ ನಿಂತರು.

ಚಿಕ್ಕವರಿದ್ದಾಗಿನಿಂದಲೂ ಗ್ರಾಮದಲ್ಲಿ ನಡೆಯುವ ಭಜನಿ ಪದಗಳನ್ನು ಹಾಗೂ ಆಗಾಗ ಪ್ರದರ್ಶನಗೊಳ್ಳುತ್ತಿದ್ದ ನಾಟಕಗಳನ್ನು ನೋಡಿ ಅವುಗಳಿಂದ ಪ್ರೇರಿತರಾಗಿ ತಾನು ಒಬ್ಬ ಕಲಾವಿದನಾಗಬೇಕೆಂಬ ಹಂಬಲ ಅವರನ್ನು ಕಾಡುತ್ತಿತ್ತು. ಒಮ್ಮೆ ಸಾಮಾಜಿಕ ನಾಟಕವನ್ನು ಕಲಿಸಲೆಂದು ಅಬ್ಬಿಗೇರಿಯಿಂದ ಪರಪ್ಪ ಸುಂಕದ ಎನ್ನುವ ಮಾಸ್ತರರು ಜಕ್ಕಲಿಗೆ ಬಂದರು. ಗ್ರಾಮದ ಯುವಕರನ್ನು ಕಲಾ ಆಸಕ್ತರನ್ನು ಕಲೆ ಹಾಕಿ ನಾಟಕವನ್ನು ಕಲಿಸುತ್ತಿದ್ದರು. ಆ ವೇಳೆಯಲ್ಲಿ ನಾಟಕದ ತಾಲೀಮು ನೋಡಲೆಂದು ಪ್ರತಿದಿನ ಹನಮಪ್ಪ ಅಲ್ಲಿಗೆ ಹೋಗುತ್ತಿದ್ದನು. ಇವರ ಗಮನ ಪಾತ್ರಗಳನ್ನು ಮಾಡುವವರ ಮೇಲೆ ಇರುತ್ತಿರಲಿಲ್ಲ. ಬದಲಾಗಿ ಸುಂಕದ ಪರಪ್ಪನವರು ಬಾರಿಸುತ್ತಿದ್ದ ಪೇಟಿಯ ಮೇಲಿರುತ್ತಿತ್ತು. ಹುಡಗನ ಸೂಕ್ಷ್ಮ ದೃಷ್ಟಿಯನ್ನು ಗಮನಿಸಿದ ಪರಪ್ಪ ಮಾಸ್ತರು "ಏ ತಮ್ಮಾ, ನಾ ನಾಟಕಾ ಕಲ್ಸಾಕತ್ತಿ ಬಹಳ ದಿನಾ ಆತು, ನೀನು ಪ್ರತಿದಿನ ನನ್ನ ಪಕ್ಕ ಕುಂತ ನಾ ಬಾರಸುದನ್ನ ನೋಡತಿ, ನೀನು ಕಲಿಬೇಕಂತ ಮಾಡಿಯೇನSS" ಅಂದರು. ಮೊದಲೆ ಪೇಟಿ ಬಾರಿಸಬೇಕಂತ ಹಂಬಲದಲ್ಲಿದ್ದ ಹನಮಪ್ಪ ತಟ್ಟನೆ "ಹ್ಞೂಂರ್ರೀ ಕಲಿಬೇಕಂತ ಮಾಡೇನ್ರಿ" ಅಂದೆಬಿಟ್ಟ, ಸುಂಕದ ಮಾಸ್ತರ ಕೂಡ ಹುಡುಗನಿಗೆ ನಿರಾಸೆ ಮಾಡದೆ ತಮ್ಮ ಬಿಡುವಿನ ವೇಳೆಯಲ್ಲಿ ಹನಮಪ್ಪನಿಗೆ ಹಾರ್ಮೋನಿಯಂ ಕಲಿಸಲು ಪ್ರಾರಂಭಿಸಿ, ಸುಮಾರು ರಾಗಗಳನ್ನು ಕಲಿಸಿಕೊಟ್ಟರು. ಹುಡುಗ ಹನುಮಪ್ಪ ಅತಿ ಆಸಕ್ತಿಯಿಂದ ಕಲಿತ. ನಾಟಕದ ತಾಲೀಮು ಮುಗಿದು ಪ್ರದರ್ಶನಗೊಳ್ಳುವಷ್ಟರಲಿಯೇ ಅದೇ ನಾಟಕದ ಕೆಲವೊಂದು ಹಾಡುಗಳನ್ನು ಬಾರಿಸುವಷ್ಟು ಹನಮಪ್ಪ ತಯಾರಾಗಿ ಬಿಟ್ಟ.

ಹನಮಪ್ಪನವರು ತಮ್ಮ ಇಪ್ಪತ್ನಾಲ್ಕನೆಯ ವಯಸ್ಸಿನಲ್ಲಿಯೇ ಸುಂದರವಾಗಿ ಹಾರ್ಮೋನಿಯಂ ನುಡಿಸುವುದನ್ನು ಕಲಿತು, ಹಳ್ಳಿಯಲ್ಲಿ ಭಜನಾ ಮೇಳದವರು ಹಾಡುವ ಹಾಡುಗಳಿಗೆ ಸಾತು ನೀಡುತ್ತ ಬಂದರು. ಮುಂದೆ ದೊಡ್ಡಾಟದ ಹಾಡುಗಳಿಗೂ ಸಾತು ನೀಡಲು ಪ್ರಾರಂಭಿಸಿದರು. ದೊಡ್ಡಾಟಗಳ ಹಾಡುಗಳು ಬಿಳಿ ಆರನೆಯ ಪಟ್ಟಿಯಿಂದ ಪ್ರಾರಂಭವಾಗಿ ಕೋಮಲ ಸ್ವರಕ್ಕೆ ಹೋಗಿ ಮುಕ್ತಾಯವಾಗುತ್ತವೆ. ಮುಮ್ಮೇಳದವರು ತಾಳವನ್ನು ಬಡಿಯುತ್ತ 'ರೇ' ಸ್ವರದಲ್ಲಿ ಹಾಡನ್ನು ಪ್ರಾರಂಭಿಸಿದರೆ ಅದಕ್ಕೆ ತಕ್ಕಂತೆ ಹಿಮ್ಮೇಳದವರು ಪ್ರಾರಂಭಿಸುತ್ತಾರೆ. ಹೀಗೆ ಒಂದು ಹಾಡನ್ನು ಹಿಮ್ಮೇಳ-ಮುಮ್ಮೇಳದೊಂದಿಗೆ ಬಾರಿಸುತ್ತ ಕೊನೆಗೆ ದ್ವಿಗುಣಕ್ಕೆ ಬಂದಾಗ ಹಿಮ್ಮೇಳದ ಕೋಚ್ ಏಳೆಯುವವನ ತೀವ್ರ ಸ್ವರಕ್ಕೆ ಸ್ವರವನ್ನು ಹಿಡಿದು ಅವನು "ಹೋತಯ್ಯ" ಎಂದಾಕ್ಷಣವೇ ಅಲ್ಲಿಗೆ ಹಾಡನ್ನು ಮುಗಿಸಿ ಪಾತ್ರಧಾರಿಗಳ ಕುಣಿತಕ್ಕೆ ತಕ್ಕ ಚೀಜನ್ನು ತಕ್ಷಣ ಹಿಡಿದು ತಾಳಕ್ಕೆ ತಕ್ಕಂತೆ ಬಾರಿಸಿ, ಕುಣಿತವು ಮುಗಿಯುತ್ತಿದ್ದಂತೆ, ಮೇಳದವರ ಬೋಲುಗಳಿಗೆ ಪೇಟಿಯ ಸ್ವರವನ್ನು ಹೊಂದಿಸಬೇಕು ಈ ಎಲ್ಲ ಕ್ರಿಯೆ ನಡೆಯುವುದು ಕೇವಲ ಐದು ನಿಮಿಷದ ಹಾಡಿಗೆ ಮಾತ್ರ. ಮೇಲಾಗಿ ಮದ್ದಳೆಯವನ ತಾಳಕ್ಕೆ ತಕ್ಕಂತೆ ಹಾರ್ಮೋನಿಯಂ ನುಡಿಸಬೇಕು. ಇವೆಲ್ಲವನ್ನು ತೂಗಿಸಿಕೊಂಡು ಹೋಗುವುದಕ್ಕೆ ಹಾರ್ಮೋನಿಯಂ ಮಾಸ್ತರ ಒಳ್ಳೆಯ ಪಂಡಿತನಾಗಿರಬೇಕು. ಅಂದರೆ ಮಾತ್ರ ಪ್ರದರ್ಶನ ಯಶಸ್ವಿಗೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಶೃತಿ ಕೆಟ್ಟು, ಹಾಡು ಕೆಟ್ಟು ಕೇಳುಗರಿಗೆ ಬೇಸರ ಮೂಡಿಸುವ ಸನ್ನಿವೇಶಗಳೆ ಹೆಚ್ಚಾಗಿರುತ್ತವೆ. ಆದರೆ ಹನಮಪ್ಪನವರು ಒಳ್ಳೆಯ ನುರಿತ ಯಶಸ್ವಿ ಹಾರ್ಮೋನಿಯಂ ಪಟುಗಳಾಗಿದ್ದರಿಂದ ಅಪಸ್ವರದ ಛಾಯೆ ಎಲ್ಲಿಯೂ-ಎಂದೂ ಕಂಡು ಬಂದಿಲ್ಲ. ದೊಡ್ಡಾಟ ಯಾವುದೇ ಆಗಿರಲಿ, ದೊಡ್ಡಾಟದ ಯಾವುದೇ ಹಾಡಾಗಿರಲಿ ಅದಕ್ಕೆ ತಕ್ಕಂತೆ ಸ್ವರ ಸಂಯೋಜಿಸಿ ಅತಿ ರಮ್ಯವಾದ ರೀತಿಯಲ್ಲಿ ಕೇಳುಗರ ಮನಸ್ಸಿಗೆ ಇಂಪಾಗುವಂತೆ ಹಾರ್ಮೋನಿಯಂ ನುಡಿಸುವಂಥವರು.

ಇಂಥ ಅಗಾಧ ಪ್ರತಿಭೆಯುಳ್ಳ ಹನಮಪ್ಪನವರು ಪೇಟಿಯನ್ನು ನುಡಿಸಲು ಪ್ರಾರಂಭಿಸಿದರೆ ಸಾಕು ಮುಮ್ಮೇಳ-ಹಿಮ್ಮೇಳದವರು ಬೇಸರವಿಲ್ಲದೆ ಆಟದ ಹಾಡುಗಳನ್ನು ಹಾಡುತ್ತಿದ್ದರು. ಈ ರೀತಿ ದೊಡ್ಡಾಟದ ಹಾಡುಗಳಿಗೆ ಪೇಟಿಯನ್ನು ನುಡಿಸುವ ಮಾಸ್ತರರು ತೀರಾ ಕಡಿಮೆ. ತಮ್ಮ ಮೂತ್ತನೆಯ ವಯಸ್ಸಿನಲ್ಲಿಯೇ ತುಂಬಾ ಅಚ್ಚುಕಟ್ಟಾಗಿ ಹರ್ಮೋನಿಯಂ ಬಾರಿಸಲು ಪ್ರಾರಂಭಿಸಿದ ಹನಮಪ್ಪನವರು ಈಗಲೂ ದೊಡ್ಡಾಟಗಳಿಗೆ ಹಾರ್ಮೋನಿಯಂ ಸಾತ್ ನೀಡುತ್ತಿದ್ದಾರೆ. ಅರವತ್ತೈದು ವರ್ಷ ತುಂಬಿದರೂ ಕಲೆಯ ಮೇಲಿನ ಪ್ರೇಮ ಕಡಿಮೆ ಆಗಿಲ್ಲ. ಶ್ರಾವಣ ಮಾಸದಲ್ಲಿ

ಮತ್ತು ಬಿಡುವಿನ ವೇಳೆಯಲ್ಲಿ ಕಳಕಪ್ಪನ ಗುಡ್ಡ, ಇಳಕಲ್ ಮಾಹಾಂತಸ್ವಾಮಿ ಮಠಕ್ಕೆ ತಿಂತಿನಿ ಮೌನೇಶ್ವರ ದೇವಾಲಯಕ್ಕೆ, ಭೀಮರಾಯನ ಗುಡಿಗೆ ಹೀಗೆ ಹತ್ತಾರು ಕಡೆಗೆ ತಮ್ಮ ಭಜನಾ ಮೇಳವನ್ನು ಕಟ್ಟಿಕೊಂಡು ಹೋಗಿ ತಮ್ಮ ಭಕ್ತಿಯ ಭಜನಾ ಸೇವೆಯನ್ನು ಮಾಡಿ ಬರುತ್ತಾರೆ.

ಹೀಗೆ ತಮ್ಮ ಜೀವನದುದ್ದಕ್ಕೂ ಜನಪದ ಕಲೆಯನ್ನು ಉಳಿಸಿ-ಬೆಳೆಸಲು ಪ್ರಯತ್ನಿಸಿದ ಈ ಹಿರಿಯ ಜೀವಿಗೆ ಸ್ಥಳೀಯ ಸಂಘ-ಸಂಸ್ಥೆಗಳು ಹಲವಾರು ಬಾರಿ ಮಾನ-ಸನ್ಮಾನಗಳನ್ನು ನೀಡಿ ಗೌರವಿಸಿವೆ.

## ಹಸನಸಾಬ ಫಕೀರಸಾಬ ನದಾಫ್

ದೊಡ್ಡಾಟದಲ್ಲಿ ಮದ್ದಲಿಯನ್ನು ಬಾರಿಸುವುದರಲ್ಲಿ ನಿಸ್ಸೀಮರೆಂದೆನಿಸಿದ ಹಾಗೂ ಮದ್ದಲಿಯ ಹಸನಸಾಬರೆಂದೆ ಜನಪ್ರಿಯರಾದ ಇವರು ರೋಣ ತಾಲೂಕಿನ ಜಕ್ಕಲಿ ಗ್ರಾಮದವರು. ತಂದೆ ಫಕೀರಸಾಬ, ತಾಯಿ ಹುಸೇನಬಿ ಅವರ ಮಗನಾಗಿ 25-10-1932ರಲ್ಲಿ ಸ್ವಗ್ರಾಮವಾದ ಜಕ್ಕಲಿಯಲ್ಲಿ ಜನಿಸಿದರು. ಮೂರನೆಯ ತರಗತಿಯವರೆಗೆ ಓದಿ, ಮನೆಯ ಆರ್ಥಿಕ ತೊಂದರೆಯಿಂದ ಮುಂದಿನ ವ್ಯಾಸಂಗವನ್ನು ಮೊಟಕುಗೊಳಿಸಿ ತಂದೆಯೊಡನೆ ಕೂಲಿಗಾಗಿ ದುಡಿಯಲು ಹೋಗುತ್ತಿದ್ದರು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೇ ದೊಡ್ಡಾಟಗಳಿಗೆ ಮದ್ದಲಿ ಬಾರಿಸುವುದನ್ನು ಕಲಿತರು.

ಸುರಕೋಡಿನ ಅರಹುಣಸಿ ಅಯ್ಯಪ್ಪನವರು ಜಕ್ಕಲಿ ಗ್ರಾಮದ ಯುವಕಲಾವಿದರನ್ನು ಕೂಡಿಸಿಕೊಂಡು ದೊಡ್ಡಾಟವನ್ನು ಕಲಿಸಲು ಪ್ರಾರಂಭಿಸಿದರು. ಆ ವೇಳೆಯಲ್ಲಿ ಬಣ್ಣದ ಮನೆಗೆ ದಿನನಿತ್ಯವೂ ಹೋಗುತ್ತಿದ್ದ ಹಸನಸಾಬ ಅವರು ಮದ್ದಲಿಯನ್ನು ಬಾರಿಸುವ ಅಂದಪ್ಪ ತುರಾಯಿಯವರ ಪಕ್ಕದಲ್ಲಿ ಕುಳಿತುಕೊಂಡು ಅವರು ಬಾರಿಸುವ ಪೆಟ್ಟುಗಳನ್ನು ಗಮನದಲ್ಲಿಟ್ಟು ವೀಕ್ಷಿಸುತ್ತಿದ್ದನು. ಒಂದು ದಿನ ತಾಲೀಮು ನಡೆದ ವೇಳೆಯಲ್ಲಿ ಬೇಸರಗೊಂಡ ಅಂದಪ್ಪ ತುರಾಯಿಯವರು ದಿನನಿತ್ಯ ತಮ್ಮ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದ ಹುಸೇನಸಾಬನಿಗೆ "ಎಲೆ ಹುಡುಗಾ ಈ ಪದಾ ಮುಗಿಯುವವರೆಗೆ ಸ್ವಲ್ಪ ಟೀಕಾ ಹಿಡಿ" ಎಂದು, ಹೇಳಿ ಹೋದರು. 'ಹುಡುಕುವ ಬಳ್ಳಿ ಕಾಲಿಗೆ ತೊಡಕಿತು' ಎಂಬಂತೆ ಹುಮ್ಮಸ್ಸಿನಿಂದ ಮದ್ದಲಿಯ ಮುಂದೆ ನಿಂತು ತಾಲೀಮಿನ ಆಟದ ಹಾಡಿಗೆ ತಾಳ ತಪ್ಪದಂತೆ ಟೀಕಾ ಹಿಡಿದು ಹಾಡು ಮುಗಿಯುವವರೆಗೆ ಬಾರಿಸಿದ. ಬಣ್ಣದ ಮನೆಯ ಹೊರಗೆ ನಿಂತು ಬಾರಿಸುವುದನ್ನು ಕೇಳಿದ ಅಂದಪ್ಪನವರು ಒಳಗೆ ಬಂದು "ಬಲೆ ಹುಡುಗಾ ಚೆನ್ನಾಗಿ ಬಾರಿಸಿದೆ" ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ "ಈ ಆಟ ಮುಗಿಯುರೊಳಗಾಗಿ

ನೀ ಈ ಮದ್ದಲಿ ಬಾರಿಸುವುದನ್ನು ಕಲಿತುಕೊ" ನಾನು ಕಲಿಸುತ್ತೇನೆ ಎಂದರು.

ಗುರುಗಳಾದ ಅಂದಪ್ಪ ತುರಾಯಿಯವರಿಂದ ಮದ್ದಲಿ ಬಾರಿಸುವುದನ್ನು ಕಲಿತ ಹುಸೇನಸಾಬರವರು ಕರಡಿಮಜಲಿನ ಕರಡಿಯನ್ನು ಸಹ ಬಾರಿಸುವುದರಲ್ಲಿ ಎತ್ತಿದ ಕೈ ಎಂದೇ ಹೇಳಬೇಕು. ಕರಡಿ ಮಜಲಿನಲ್ಲಿ 10 ಮಾತ್ರೆಯ ಜಂಪಾ 12 ಮಾತ್ರೆಯ ರೂಪತಾಳ, 16 ಮಾತ್ರೆಯ ಆದಿತಾಳ 6 ಮಾತ್ರೆಯ ಹರಜಂಪಾತಾಳಗಳನ್ನು ಸರಾಗವಾಗಿ ಬಾರಿಸಿ ಆಯಚೇರಿವರೆಗೆ ಬಾರಿಸುವುದನ್ನು ಕರಗತ ಮಾಡಿಕೊಂಡಿದ್ದಾರೆ. ಗ್ರಾಮದ ಮದುವೆಯ ಗುಗ್ಗಳ ಕಾರ್ಯಕ್ರಮದಲ್ಲಿ ಮತ್ತು ಜಾತ್ರಾಕಾರ್ಯಕ್ರಮಗಳಲ್ಲಿ ತಮ್ಮ ಮಜಲಿನ ಮೇಳದವರೊಂದಿಗೆ ಕರಡಿಯನ್ನು ನುಡಿಸಿ ಜನ ಮೆಚ್ಚುಗೆಯನ್ನು ಪಡೆದಿರುವರು. ಅದಲ್ಲದೆ ಜಕ್ಕಲಿಯ ಸುತ್ತಮುತ್ತಲಿನ ಊರುಗಳಿಗೆ ತಮ್ಮ ಮಜಲನ್ನು ಕರೆದುಕೊಂಡು ಹೋಗಿ ಅಲ್ಲಿಯ ಸಭೆ-ಸಮಾರಂಭಗಳಲ್ಲಿ ಬಾರಿಸಿ ಜನರ ಮೆಚ್ಚಿಗೆಯನ್ನು ಪಡೆದುಕೊಂಡಿರುವರು.

ಸುರಕೋಡಿನ ಅರಹುಣಸಿ ಅಯ್ಯಪ್ಪನವರಿಂದ ಪ್ರಾರಂಭಗೊಂಡ ದೊಡ್ಡಾಟದ ಸಂಪ್ರದಾಯ ಹೆಮ್ಮರವಾಗಿ ಬೆಳೆದು ಜಕ್ಕಲಿಯಲ್ಲಿ ಎಂಟು ದೊಡ್ಡಾಟದ ಮಂಡಳಿಗಳು ತಲೆಯೆತ್ತಿ ನಿಂತಿವೆ.

1) ಭುವನೇಶ್ವರಿ ದೊಡ್ಡಾಟ ಮಂಡಳಿ

2) ಬನಶಂಕರಿ ದೇವಸ್ಥಾನ ದೊಡ್ಡಾಟ ಮಂಡಳಿ

3) ಗ್ರಾಮದೇವತೆ ದೊಡ್ಡಾಟ ಮಂಡಳಿ

4) ದುರಗಮ್ಮದೇವಿ ದೊಡ್ಡಾಟ ಮಂಡಳಿ

5) ಕೆಂಚಮ್ಮದೇವಿ ದೊಡ್ಡಾಟ ಮಂಡಳಿ

6) ಕಲ್ಮೇಶ್ವರ ದೊಡ್ಡಾಟ ಮಂಡಳಿ

7) ಬಸವೇಶ್ವರ ದೊಡ್ಡಾಟ ಮಂಡಳಿ

8) ಹುಚ್ಚೇಶ್ವರ ದೊಡ್ಡಾಟ ಮಂಡಳಿ.

ಈ ದೊಡ್ಡಾಟ ಮಂಡಳಿಯವರು ವರ್ಷಕ್ಕೊಮ್ಮೆ ಇಲ್ಲವೆ ಎರಡು ವರ್ಷಕ್ಕೊಮ್ಮೆ ಆಟವನ್ನು ಪ್ರಯೋಗಿಸುತ್ತಿರುವ ವೇಳೆಯಲ್ಲಿ ಪ್ರತಿ ಆಟಕ್ಕೂ ಇವರೇ ಬೇಸರವಿಲ್ಲದೆ

ಮದ್ದಲಿಯನ್ನು ಬಾರಿಸುತ್ತಿದ್ದರು. ಆಟದ ಪ್ರತಿ ಸನ್ನಿವೇಶದಲ್ಲಿ ಬರುವ ಹಾಡಿಗೆ ಹಾಡು ಮುಗಿಯುತ್ತಿದ್ದಂತೆಯೇ ಕುಣಿತ ಪ್ರಾರಂಭವಾಗುತ್ತಿತ್ತು. ಇವೆಲ್ಲಕ್ಕೂ ತಕ್ಷಣ ಬೋಲುಗಳನ್ನು ಬದಲಿಸಿ ಪಾತ್ರಧಾರಿಗಳ ಹೆಜ್ಜೆಗೆ ತಕ್ಕಂತೆ ಮದ್ದಲಿಯನ್ನು ಬಾರಿಸುವುದು ವಿಶಿಷ್ಟವಾಗಿರುತ್ತಿತ್ತು. ಒಮ್ಮೊಮ್ಮೆ ಕುಣಿತದಲ್ಲಿ ಶ್ರೇಯಸ್ಸು ಪಡೆದ ಪಾತ್ರಧಾರಿಗಳು ಮದ್ದಲಿಯವನನ್ನು ದಣಿಸಲೆಂದು ಇಲ್ಲವೆ ಮದ್ದಲಿಯವನು ಪಾತ್ರಧಾರಿಯನ್ನು ದಣಿಸೋಣವೆಂದು ಸುಮ್ಮಸುಮ್ಮನೆ ಸ್ಪರ್ಧೆ ಬೆಳೆಯುತ್ತಿತ್ತು. ಅದರಲ್ಲೂ ಸ್ತ್ರೀ ಪಾತ್ರಧಾರಿಗಳು ಬೇರೆ ಬೇರೆ ಕುಣಿತಗಳನ್ನು ಕುಣಿದು ಒಂದನೆಯ ಮೆಟ್ಟಿಲಿನಿಂದ ಮೂರನೆಯ ಮೆಟ್ಟಿಲಿನತನಕ ಕುಣಿದು ಕುಪ್ಪಳಿಸುವಷ್ಟರಲ್ಲಿ ಮದ್ದಲಿಯವ ನಾಲ್ಕನೆಯ ಮೆಟ್ಟಲಕ್ಕೆ ಪ್ರವೇಶಿಸುತ್ತಿದ್ದಂತೆ ತಾಳಿನವರು ಇಲ್ಲವೆ ಕಥೆಗಾರ ಸೂಚನೆಯನ್ನು ಕೊಟ್ಟು ನಿಲ್ಲಿಸಿ ಬಿಡುತ್ತಿದ್ದನು. ಇಂತಹದರಲ್ಲಿ ಹಸನಸಾಬರು ತುಂಬಾ ಪಳಗಿದವರಾಗಿದ್ದರು.

ದೊಡ್ಡಾಟಗಳ ಕುಣಿತಕ್ಕೆ ಹಾಗೂ ಹಾಡುಗಳಿಗೆ ಹೆಚ್ಚಾಗಿ ಬಿಲಂದಿ, ಕಚತಾಳ, ತ್ರಿತಾಳ, ರೂಪತಾಳ, ಆದಿತಾಳ, ಜಂಪಾ ಇಲ್ಲವೆ ಅರಜಂಪಾ ತಾಳಗಳನ್ನು ಬಳಸಿಕೊಳ್ಳುವುದುಂಟು. ಈ ತಾಳಗಳನ್ನು ಹಸನಸಾಬರು ಒಳ್ಳೆಯ ಸರಾಗವಾಗಿ ಪಾತ್ರಧಾರಿಗಳು ಮತ್ತು ಹಿಮ್ಮೇಳ-ಮುಮ್ಮೇಳದವರು ಮೇಲಾಗಿ ಆಟವನ್ನು ನೋಡಲು ಬಂದ ಪ್ರೇಕ್ಷಕರು ಮೆಚ್ಚುವಂತೆ ನುಡಿಸುವುದೇ ಇವರ ವೈಶಿಷ್ಟ್ಯವೆಂದು ಹೇಳಬಹುದು. ಕೆಲವೊಂದು ದೊಡ್ಡಾಟಗಳಲ್ಲಿ ಹೂ ಬಿಡಿಸುವ, ಅಥವಾ ಬಾವಿಗೆ ಹೋಗಿ ನೀರು ತರುವ ಸನ್ನಿವೇಶಗಳು ಬರುತ್ತವೆ. ಈ ಸನ್ನಿವೇಶಗಳಲ್ಲಿ ಮದ್ದಲಿ ಬಾರಿಸುವವನ ಪಾತ್ರ ಬಹಳ ಮುಖ್ಯವಾಗಿರುತ್ತದೆ. ವಾರಿಗಿ ಗೆಳೆತಿಯರೆಲ್ಲರು ಕೂಡಿಕೊಂಡು ಕೈಯಲ್ಲಿ ಹೂವಿನ ಬುಟ್ಟಿಯನ್ನು ಹಿಡಿದುಕೊಂಡು ರಂಗವನ್ನು ಪ್ರವೇಶಿಸಿ ಬುಟ್ಟಿಯನ್ನು ಇಟ್ಟು ಹೂವಿನ ವನದಲ್ಲಿ ತಿರುಗಾಡಿ ಹೂವನ್ನು ಕೀಳಬೇಕು ಇಂತಹ ವೇಳೆಯಲ್ಲಿ ಮದ್ದಲಿ ಮತ್ತು ತಾಳದವರು ಗತ್ತನ್ನು ಹಿಡಿದು ದಕಕ್, ದಕಕ್, ದಕಕ್ ಎಂದು ಬಾರಿಸುತ್ತಿದ್ದಂತೆ ಸ್ತ್ರೀ ಪಾತ್ರಧಾರಿಗಳು ಮದ್ದಲಿಯವನ ತಾಳಕ್ಕೆ ತಕ್ಕಂತೆ ಕುಣಿದು ಹೂವನ್ನು ಕಿತ್ತುಕೊಳ್ಳುವ ದೃಶ್ಯ ದೊಡ್ಡಾಟಗಳಲ್ಲಿ ತುಂಬಾ ಮನೋಹರವಾಗಿರುತ್ತದೆ. ಪ್ರೇಕ್ಷಕರು ಈ ದೃಶ್ಯವನ್ನು ತೆರೆದ ಮನದಿಂದ ನೋಡುತ್ತಿರುತ್ತಾರೆ. ಇಂಥ ವೇಳೆಯಲ್ಲಿ ಮದ್ದಲಿಯವನ ಕೈ ಸೋತು ಮದ್ದಲಿಯನ್ನು ನಿಲ್ಲಿಸಿಬಿಟ್ಟರೆ ಸಾಕು, ಪ್ರೇಕ್ಷಕರು ಪಾತ್ರಧಾರಿಗಳನ್ನು ಬೈಯುವುದಿಲ್ಲ ಮದ್ದಲಿಯವನನ್ನು ಬೈಯುತ್ತಾರೆ. ಇಂತಹ ಸಂದರ್ಭದಲ್ಲಿ ಹುಸೇನಸಾಬರು ಇತ್ತ ಪಾತ್ರಧಾರಿಗಳಿಗೆ ದಣಿವಾಗದಂತೆ ಅತ್ತ ಪ್ರೇಕ್ಷಕರ ಮನ ಕರಗುವಂತೆ ಬೇರೆ ಬೇರೆ ಗತ್ತುಗಳನ್ನು ಬಾರಿಸಿ ಜನರ ಹಾಗೂ

ಪಾತ್ರಧಾರಿಗಳ ಮೆಚ್ಚುಗೆಗೆ ಪಾತ್ರರಾದವರು.

ಹುಸೇನಸಾಬರು ಮದ್ದಲಿ ನುಡಿಸುವದೆಂದರೆ ಅದು ಪ್ರೇಕ್ಷಕರ ಮನಸ್ಸಿಗೆ ಹಬ್ಬವಿದ್ದಂತೆ ಅವರೇ ಹೇಳುವಂತೆ 'ಈ ನಮ್ಮ ದೊಡ್ಡಾಟದ ಕುಣಿತಗಳು ಮದ್ದಲಿಯ ಈ ಪೆಟ್ಟುಗಳು ನಮ್ಮ ಶಾಸ್ತ್ರೀಯ ನಾಟ್ಯಶಾಲೆಗೆ ಮೂಲವಾಗಿರಬಹುದು" ಎಂದು ಅಭಿಪ್ರಾಯ ಪಡುತ್ತಾರೆ.

ಸುಮಾರು ಐವತ್ತು ವರ್ಷಗಳಿಂದ ನಿರಂತರವಾಗಿ ಕೇವಲ ಮದ್ದಲಿಯನ್ನು ನುಡಿಸಿ ಜನಪ್ರಿಯತೆಯನ್ನು ಪಡೆದ ಹಸನಸಾಬರು ಈ ಕಲೆಯ ಉಳಿವಿಗಾಗಿ ಶಿಷ್ಯರನ್ನು ಸಹ ತಯಾರಿಸಿ ಕಲೆಯು ಉಳಿಯುವಂತೆ ಮಾಡಿದ್ದಾರೆ. ಇಂಥ ಜನಪ್ರಿಯ ಹಿರಿಯ ಕಲಾವಿದನಿಗೆ ಸ್ಥಳೀಯ ಸಂಘ–ಸಂಸ್ಥೆಗಳು ಮಾನ–ಸನ್ಮಾನಗಳನ್ನು ನೀಡಿ ಗೌರವಿಸಿವೆ.

## ಹುಚ್ಚಪ್ಪ ನಾಗಪ್ಪ ಗೊಟೂರ

ಗದಗ–ಬೆಟಗೇರಿಯ ಹೊಸ ಬನಶಂಕರಿ ಗುಡಿಯ ದೊಡ್ಡಾಟ ಮೇಳದ ಸಾಮಾನ್ಯ ಕಲಾವಿದರಾದ ಹುಚ್ಚಪ್ಪನವರು 1950ರಲ್ಲಿ ಜನಿಸಿದರು. ಇವರ ತಂದೆ ನಾಗಪ್ಪ ಹಾಗೂ ತಾಯಿ ಈರಮ್ಮ. ಕುರುವಿನ ಶೆಟ್ಟಿ ಸಮಾಜಕ್ಕೆ ಸೇರಿದ ಇವರು ಓದಿದ್ದು ನಾಲ್ಕನೆಯ ತರಗತಿಯವರೆಗೆ. ಮನೆಯ ಹಣಕಾಸಿನ ತೊಂದರೆಯಿಂದಾಗಿ ಮುಂದೆ ಓದಲಾಗದೆ ನೆಯ್ಗೆಯ ಕೆಲಸಕ್ಕೆ ನಿಂತರು. ಮಾವನಾದ ಲಕ್ಷಪ್ಪನವರು ದೊಡ್ಡಾಟದ ತಾಲೀಮಿಗೆಂದು ಬಣ್ಣದ ಮನೆಗೆ ಹೋಗುತ್ತಿದ್ದರು. ತಾಲೀಮು ನೋಡಲೆಂದು ಹುಚ್ಚಪ್ಪನವರು ಸಹ ಅವರ ಜೊತೆಗೆ ಹೋಗುತ್ತಿದ್ದರು. ದಿನನಿತ್ಯ ಮಾವ ಲಕ್ಷ್ಮಪ್ಪನವರು ನಿರ್ವಹಿಸುತ್ತಿದ್ದ ದಕ್ಷಬ್ರಹ್ಮನ ಪಾತ್ರವನ್ನು ನೋಡಿ ನಾನು ಏಕೆ ಮಾವನಂತೆ ಪಾತ್ರಗಳನ್ನು ಮಾಡಬಾರದೆಂದುಕೊಳ್ಳುತ್ತಿದ್ದ ಹುಚ್ಚಪ್ಪನಿಗೆ ಒಂದು ಅವಕಾಶ ತಾನಾಗಿಯೇ ಒದಗಿ ಬಂತು. ಮೇಳದವರು 'ದಕ್ಷಬ್ರಹ್ಮ' ಆಟವನ್ನು ಆಡಿ ಮುಗಿಸಿದ ಮರು ವರುಷವೇ 'ಲಕ್ಷಣಿ ಕಲ್ಯಾಣ' ಆಡಲು ಪ್ರಾರಂಭಿಸಿದರು. ಆ ಆಟದಲ್ಲಿ ವಜ್ರದೃಷ್ಟಿಯ ಪಾತ್ರವನ್ನು ಮಾಡುವ ಹುಡುಗ ಬರಲಿಲ್ಲ. ದಿನಾಲು ಅವನಿಗಾಗಿ ಕಾದು ಕಾದು ಬೇಸತ್ತು ಕಥೆಗಾರ ಬೇರೆ ಹುಡುಗನನ್ನು ಆ ಪಾತ್ರಕ್ಕೆ ತೆಗೆದುಕೊಳ್ಳಬೇಕು ಎಂದು ವಿಚಾರಿಸಿದರು. ಆಗ ಪ್ರತಿದಿನ ತಾಲೀಮು ನೋಡಲು ಬರುತ್ತಿದ್ದ ಹುಚ್ಚಪ್ಪನವರ ಬಗ್ಗೆ ವಿಚಾರ ಬಂದು, ಅಲ್ಲಿಯೆ ಇದ್ದ ಅವನನ್ನು ಎಬ್ಬಿಸಿ "ತಮ್ಮಾ, ಈ ಪಾತ್ರವನ್ನು ನೀನು ಮಾಡು" ಎಂದರು. ಅಷ್ಟನ್ನುವುದೆ ತಡ ಮೊದಲೆ

ಆಸಕ್ತಿ ಇದ್ದ ಹುಚ್ಚಪ್ಪನವರು ತಟ್ಟನೆ ಒಪ್ಪಿಯೆ ಬಿಟ್ಟರು. ದಿನನಿತ್ಯ ಆಟವನ್ನು ನೋಡಿ ಆ ಪಾತ್ರದ ಮಾತುಗಳು ಮತ್ತು ಹಾವ-ಭಾವಗಳನ್ನರಿತಿದ್ದ ಹುಚ್ಚಪ್ಪನವರು ಸರಳವಾಗಿ ಅಭಿನಯದ ಮೂಲಕ ಆ ಪಾತ್ರದ ಮಾತುಗಳನ್ನು ಹೇಳಿ ಕಥೆಗಾರರಿಗೆ ಒಪ್ಪಿಸಿದರು. ಅಂದಿನಿಂದ ಆ ಪಾತ್ರ ಇವರಿಗೆ ಮೀಸಲಾಯಿತು. ಹೀಗೆ ಆ ಪಾತ್ರದಿಂದಲೆ ಜನಪದ ರಂಗಭೂಮಿಯನ್ನು ಪ್ರವೇಶಿಸಿದರು.

'ಹೊಸ ಬನಶಂಕರಿ ದೊಡ್ಡಾಟ ಮೇಳ'ದವರು ಪ್ರಯೋಗಿಸುತ್ತಿದ್ದ 'ತ್ರಿಸರಾಸುರ'ದಲ್ಲಿ ಕರಾಸೂರ, 'ದಕ್ಷಬ್ರಹ್ಮ'ದಲ್ಲಿ ಭೃಗುಋಷಿ, 'ಭಕ್ತಮಾರ್ಕಂಡೇಯ'ದಲ್ಲಿ ಪರಮೇಶ್ವರ ಮತ್ತೊಮ್ಮೆ ಕಾಳ ಪಾತ್ರ ಹೀಗೆ ಹಲವಾರು ಭಿನ್ನ-ವಿಭಿನ್ನ ಪಾತ್ರಗಳನ್ನು ನಿರ್ವಹಿಸಿ ಜನಪ್ರಿಯತೆಯನ್ನು ಪಡೆದಿದ್ದಾರೆ. ಮೇಳದವರು ದೆಹಲಿಯಲ್ಲಿ 'ತ್ರಿಸರಾಸುರ ಸಂಹಾರ' ಆಟವನ್ನು ಪ್ರಯೋಗಿಸುತ್ತಿದ್ದ ವೇಳೆಯಲ್ಲಿ ಇವರು ಕರಾಸುರನ ಪಾತ್ರವನ್ನು ಮಾಡಿದ್ದರು. ಆ ಪಾತ್ರದಲ್ಲಿ ಇವರ ಭಯಂಕರವಾದ ಧ್ವನಿಯೊಂದಿಗೆ ಹೇಳುವ ಮಾತುಗಳಿಗೆ ಹಾಗೂ ಕುಣಿತಕ್ಕೆ ಜನರು ಬೆಚ್ಚಿ ಬೀಳುತ್ತಿದ್ದರು. ಅಂತೆಯೇ ಚಪ್ಪಾಳೆ ಹಾಗೂ ಕೇಕೆಯನ್ನು ಹಾಕುತ್ತ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸುತ್ತಿದ್ದರು. 'ದಕ್ಷಬ್ರಹ್ಮ' ಆಟವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, 'ಲಕ್ಷಣಿ ಕಲ್ಯಾಣ'ವನ್ನು ಉಡುಪಿಯಲ್ಲಿ, 'ತ್ರಿಸರಾಸುರ ಸಂಹಾರ'ವನ್ನು ಉಡುಪಿ ಮತ್ತು ಹೊರನಾಡಿನಲ್ಲಿ ಪ್ರದರ್ಶಿಸಿ ಜನಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ಮೈಸೂರಿನ ದಸರಾ ಮಹೋತ್ಸವಗಳಲ್ಲಿ, ಹಂಪೆ ಹಾಗೂ ಲಕ್ಕುಂಡಿ ಉತ್ಸವಗಳಲ್ಲಿ ಭಾಗವಹಿಸಿ ತಮ್ಮ ಕಲೆಯ ಪ್ರದರ್ಶನ ಮಾಡಿದ್ದಾರೆ.

ಸುಮಾರು ಮೂವತ್ತೈದು ವರ್ಷಗಳಿಂದ ಜನಪದ ರಂಗಭೂಮಿಯ ಸೇವೆಯನ್ನು ಮಾಡುತ್ತ ಬಂದ ಇವರಿಗೆ ಜನತೆಯ ಮೆಚ್ಚುಗೆ ಅಪಾರವಾಗಿ ದೊರೆತಿದೆ. ಅಲ್ಲದೆ ಇವರ ಸೇವೆಯನ್ನು ಗುರುತಿಸಿ ಅನೇಕ ಸಂಘ-ಸಂಸ್ಥೆಗಳು ಮಾನ-ಸನ್ಮಾನಗಳನ್ನು ನೀಡಿ ಗೌರವಿಸಿವೆ.

## ಹುಸೇನಸಾಬ ರಾಜಾಸಾಬ ಬಾಲೇಸಾಬನವರ

ಮೂಡಲಪಾಯ ದೊಡ್ಡಾಟಗಳ ಹನಮಂತನೆಂದೆ ಪ್ರಸಿದ್ಧಿ ಪಡೆದ ಹುಸೇನಸಾಬರು ರೋಣ ತಾಲೂಕಿನ ಜಕ್ಕಲಿ ಗ್ರಾಮದವರು. ತಂದೆ ರಾಜಾಸಾಬ, ತಾಯಿ ಹುಸೇನಬಿಯವರ ಮಗನಾಗಿ 1952 ಜೂನ್ 26ರಂದು ಜನಿಸಿದರು. ಜಕ್ಕಲಿಯಲ್ಲಿಯೆ ನಾಲ್ಕನೆಯ ತರಗತಿಯವರೆಗೆ ಓದಿ ಮನೆತನದ ತೊಂದರೆಯಿಂದ

ಮುಂದೆ ಓದಲಿಕ್ಕಾಗದೆ ತಂದೆಯೊಡನೆ ಕೂಲಿಯ ಕೆಲಸಕ್ಕೆ ಸೇರಿದರು. ಗ್ರಾಮದ ಜನಪದ ಕಲೆಗಳಿಗೆ ಮಾರು ಹೋಗಿ ಅವುಗಳನ್ನು ಕಲಿಯಬೇಕೆಂಬ ಹಂಬಲದಿಂದ ಒಂದೊಂದೆ ಕಲೆಯನ್ನು ಕಲಿಯುತ್ತ ಬಂದರು. ಮೊದಲು ಮೊಹರಮ್ಮಿನ ಹೆಜ್ಜೆ ಮೇಳದ ಕುಣಿತಗಳನ್ನು ಕಲಿತರು. ನಂತರ ಕರಡಿ ಮಜಲನ್ನು ಕಲಿತರು. ಬಾಲಕ ಹುಸೇನಸಾಬರ ಪ್ರತಿಭೆಯನ್ನು ಗುರುಗಳಾದ ಹಸನಸಾಬರು ಗುರುತಿಸಿ ತಮಗೆ ತಿಳಿದ ಚರ್ಮವಾದ್ಯವಿದ್ಯೆಯನ್ನು ಕಲಿಸಿದರು.

ಜಕ್ಕಲಿ ಗ್ರಾಮದಲ್ಲಿ ಪ್ರತಿವರ್ಷ ಜಾತ್ರೆಗೆ ದೊಡ್ಡಾಟವಾಡುವುದು ವಾಡಿಕೆ. ಅದಕ್ಕಾಗಿ ದೊಡ್ಡಾಟಗಳ ತಾಲೀಮು ಸದಾಕಾಲ ನಡೆದೇ ಇರುತ್ತದೆ. ಇಂಥ ತಾಲೀಮುಗಳನ್ನು ನೋಡಲು ಪ್ರತಿದಿನವು ತಪ್ಪದೆ ಹುಸೇನಸಾಬ ಬರುತ್ತಿದ್ದರು. ಕಥೆಗಾರ ಪರಸಪ್ಪ ಕಬ್ಬೇರವರು 'ಶೂರ ಪದ್ಮಾಸುರ' ದೊಡ್ಡಾಟದ ತಾಲೀಮು ನಡೆಸುತ್ತಿದ್ದಾಗ, ತಾಲೀಮು ನೋಡುತ್ತಿದ್ದ ಹುಸೇನಸಾಬ ತಾನು ಪಾತ್ರ ಮಾಡುವುದಾಗಿ ಪರಸಪ್ಪನವರನ್ನು ಕೇಳಿದಾಗ, ಬಾಲಕನ ಆಸಕ್ತಿಯನ್ನು ಕಂಡು ಆಟದಲ್ಲಿ ಬರುವ ಪರಮೇಶ್ವರನ ಪಾತ್ರವನ್ನು ಮಾಡಲು ಹೇಳಿದರು. ಆ ಪಾತ್ರವನ್ನು ಒಳ್ಳೆಯ ರೀತಿಯಲ್ಲಿ ಅಭಿನಯಿಸಿ ಜನರ ಮೆಚ್ಚುಗೆಯನ್ನು ಪಡೆದರು. ಹೀಗೆ ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೆ ಜನಪದ ರಂಗವನ್ನು ಪ್ರವೇಶಿಸಿದರು.

'ಭೂಕೈಲಾಸ' ದೊಡ್ಡಾಟದಲ್ಲಿಯ ಹನಮಂತನ ಪಾತ್ರವನ್ನು ಪ್ರೇಕ್ಷಕನ ಮನದಾಳದಲ್ಲಿ ಅಚ್ಚಳಿಯದೆ ಉಳಿಯುವಂತೆ ತುಂಬಾ ಸುಂದರವಾಗಿ ಅಭಿನಯಿಸಿದ್ದಾರೆ. ಹನುಮಂತನ ವೇಷಭೂಷಣಗಳನ್ನು ಧರಿಸಿಕೊಂಡು ಮಂಗ ಚೇಷ್ಟೆಯನ್ನು ಮಾಡುತ್ತ ಕುಣಿಯುತ್ತ ರಂಗದ ಮೇಲೆ ಬಂದು ತಮ್ಮ ಮಾತುಗಳನ್ನು ಪ್ರಾರಂಭಿಸುತ್ತಿದ್ದಂತೆ ಪ್ರೇಕ್ಷಕರು ಆಸಕ್ತಿಯಿಂದ ಕೇಳುತ್ತಿದ್ದರು. ಸಣ್ಣ-ಸಣ್ಣ ಮಕ್ಕಳು ಬೆಪ್ಪು ಬೆರಗಾಗಿ ಪಾತ್ರವನ್ನು ವೀಕ್ಷಿಸುತ್ತ 'ಕಿಸಕ್ ಕಿಸಕ್' ಎಂದು ಹಲ್ಲು ಕಿರಿಯುತ್ತ ಹನುಮನ ಪಾತ್ರಧಾರಿಯನ್ನು ಕೆಣಕಿಸುತ್ತಿದ್ದರು. ಅದಕ್ಕೆ ಕಪಿ ಚೇಷ್ಟೆಯನ್ನು ಮಾಡುತ್ತ ಪ್ರೇಕ್ಷಕರ ಮನರಂಜಿಸುತ್ತಿದ್ದ. ರಂಗವನ್ನು ಪ್ರವೇಶಿಸುವಾಗ ಮತ್ತು ಅಲ್ಲಿಂದ ನಿರ್ಗಮಿಸುವಾಗ 'ರಾಮSS ರಾಮSS ಜೈ ಶ್ರೀರಾಮ" ಎನ್ನುವದನ್ನು ಕೇಳಿದ ಮಕ್ಕಳು ಕೂಡ ಅದನ್ನೆ ಪುನರಾವರ್ತಿಸುತ್ತಿದ್ದರು. ಹೀಗೆ ಅಷ್ಟೊಂದು ನೈಜವಾಗಿ ಅಭಿನಯಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ಹುಸೇನಸಾಬರು ದೊಡ್ಡಾಟಗಳಲ್ಲಿ ಮಾಡಿದ್ದು ಎರಡು-ಮೂರು ಪಾತ್ರಗಳನ್ನು ಮಾತ್ರ ಆದರೆ ಅವರು ಜನಪ್ರಿಯತೆಯನ್ನು ಪಡೆದಿರುವುದು ಅಪಾರ. ಇದು ಅಲ್ಲದೆ

ಇವರು ಬಯಲಾಟಗಳ ರಾಜನೆಂದೆ ಹೆಸರು ಪಡೆದ ಶ್ರೀಕೃಷ್ಣ ಪಾರಿಜಾತದಲ್ಲಿ ಶ್ರೀಕೃಷ್ಣನ ಪಾತ್ರವನ್ನು ಸಹ ಅಷ್ಟೇ ಶ್ರದ್ಧೆಯಿಂದ ಅಭಿನಯಿಸಿ ಜನಮನ ರಂಜಿಸಿದ್ದಾರೆ. ಉತ್ತರ ಕರ್ನಾಟಕದ ಹಲವಾರು ಜನಪದ ಕಲೆಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದ ಹುಸೇನಸಾಬರು ಸುಮಾರು ಮೂವತ್ತು ವರ್ಷಗಳಿಂದ ಕನ್ನಡ ಜನಪದ ಕಲೆಯ ಸೇವೆಯನ್ನು ಮಾಡುತ್ತ, ಕಲೆಯನ್ನು ಉಳಿಸಿ-ಬೆಳೆಸಲು ಪ್ರಯತ್ನಿಸುತ್ತಿದ್ದಾರೆ. ಇಂಥ ಹಿರಿಯ ಜನಪದ ಕಲಾವಿದನ ಕಲಾಸೇವೆಯನ್ನು ಗುರುತಿಸಿ ಹಲವಾರು ಇಲಾಖೆಗಳು ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳು ಮಾನ-ಸಮ್ಮಾನಗಳನ್ನು ನೀಡಿ ಗೌರವಿಸಿವೆ.

# ವೀರಪ್ಪ ಕಾಳಪ್ಪ ಮನವಾಚಾರಿ

ವೀರಪ್ಪ ಮಾಸ್ತರರೆಂದೆ ಜನಪ್ರಿಯತೆಯನ್ನು ಪಡೆದ ವೀರಪ್ಪ ಮನವಾಚಾರಿಯವರು ಗದಗ ಜಿಲ್ಲೆಯ ನರಗುಂದ ತಾಲೂಕಿನ ಕೊಣ್ಣೂರು ಗ್ರಾಮದವರು. 1944ರಲ್ಲಿ ಜನಿಸಿದ ಇವರು ಓದಿದ್ದು ಕನ್ನಡ ಏಳನೆಯ ತರಗತಿಯವರೆಗೆ ಮುಂದೆ ಮನೆತನದ ಕುಲಕಸುಬಾದ ಬಡಿಗತನವನ್ನು ತಂದೆ ಕಾಳಪ್ಪನವರಿಂದ ಕಲಿತು ಅದನ್ನೆ ವೃತ್ತಿಯನ್ನಾಗಿ ಪ್ರಾರಂಭಿಸಿದರು. ಕೊಣ್ಣೂರು ಗ್ರಾಮವು ಜನಪದ ಸಂಸ್ಕೃತಿಯ ಬೀಡಾಗಿದ್ದು, ಅಲ್ಲಿ ಹತ್ತು ಹಲವಾರು ಜನಪದ ಕಲೆಗಳು ಸಿಕ್ಕುತ್ತವೆ. ಈ ವಾತಾವರಣದಲ್ಲಿಯೆ ಬೆಳೆದ ವೀರಪ್ಪನವರು ಗ್ರಾಮದ ಹಲವಾರು ಜನಪದ ಕಲೆಗಳನ್ನು ಕಲಿಯುತ್ತ ಬೆಳೆದರು. ಮೇಲಾಗಿ ವಂಶಪಾರಂಪರ್ಯವಾಗಿ ಬಂದ ಸಂಗೀತ ಜ್ಞಾನವನ್ನು ತಮ್ಮ ತಂದೆಯವರಿಂದಲೆ ಕಲಿತರು. ಜೊತೆಯಲ್ಲೆ ಹಾರ್ಮೋನಿಯಂ ನುಡಿಸುವುದನ್ನು ಮತ್ತು ಕರಡಿ ಮಜಲಿನ ಕರಡಿ ಬಾರಿಸುವುದನ್ನು ಶಾಸ್ತ್ರೀಯವಾಗಿ ಕಲಿತುಕೊಂಡರು. ತಂದೆಯ ಗರಡಿಯಲ್ಲಿ ಬೆಳೆದ ಇವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೆ ಈ ಜನಪದ ಕಲೆಗಳ ಸೇವೆಯಲ್ಲಿ ತೊಡಗಿದರು.

ಕರಡಿಯನ್ನು ಶಾಸ್ತ್ರೀಯವಾಗಿ ಕಲಿತ ವೀರಪ್ಪನವರು ಆದಿ, ಜಂಪಾ, ಬುಲಂದಿ ಹೀಗೆ ಎಂಟು ಅಕ್ಷರ, ಹತ್ತು ಅಕ್ಷರ, ಹದಿನಾರು ಅಕ್ಷರ ತಾಳಗಳನ್ನು ಒಂದನೆಯ ಕಾಲಿನಿಂದ ಹಿಡಿದು ಮೂರು, ಪ್ರಸಂಗ ಬಿದ್ದರೆ ನಾಲ್ಕನೆಯ ಕಾಲಿನವರೆಗೆ ಬಾರಿಸುವಷ್ಟು ಪಳಗಿದವರಾಗಿದ್ದಾರೆ. ಕರಡಿ ಮಜಲನ್ನು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಮದುವೆಯ ಸಮಾರಂಭದಲ್ಲಿ ಹಾಗೂ ಗುಗ್ಗಳ ಕಾರ್ಯದಲ್ಲಿ ಬಾರಿಸುವುದು ರೂಢಿಯಲ್ಲಿದೆ. ಮದುವೆಯ ಮನೆಯವರು ವೀರಪ್ಪನವರಿಗೆ ವಿಳ್ಯೆಯನ್ನು ನೀಡಿ ಮದುವೆಯ ಸಮಾರಂಭಕ್ಕೆ ಆಹ್ವಾನಿಸಿದಾಗ, ತಮ್ಮ ಮೇಳದವರೊಂದಿಗೆ ಮದುವೆಯ ಹಂದರಕ್ಕೆ ಬಂದು ಶೃತಿ, ಶಹನಾಯಿ, ತಾಳ, ದಿಮ್ಮು, ಮತ್ತು ಚೌಗಡಿ ಬಾರಿಸುವವರೊಂದಿಗೆ

ಕರಡಿಯನ್ನು ನುಡಿಸಲು ಪ್ರಾರಂಭಿಸುತ್ತಿದ್ದರು. ಮದುವೆಯ ಹಂದರ ಇವರ ಕರಡಿಯ ಗಿರ್ಗಟದ ಧ್ವನಿಯಲ್ಲಿ ತುಂಬಿ ಹೋಗುತ್ತಿತ್ತು. ಮದುವೆಯ ಹಂದರದಲ್ಲಿ ಕೂಡಿದ ಬೀಗರು-ಬಿಜ್ಜರು ಇವರ ಕರಡಿಯ ತಾಳ, ಲಯ, ಗತ್ತುಗಳನ್ನು ಕೇಳಿ ಬೆಪ್ಪು-ಬೆರಗಾಗಿ ನಿಲ್ಲುತ್ತಿದ್ದರು. ಮದುವೆಯ ಮನೆಯಲ್ಲಿ ನಡೆಯುವ ಹತ್ತು ಹಲವಾರು ಕಾರ್ಯಗಳಾದ ಹಾಲಗಂಬ ತರುವುದು, ಬೀಗರನ್ನು ಎದುರುಗೊಂಡು ಮದುವೆಯ ಹಂದರಕ್ಕೆ ಅವರನ್ನು ಕರೆತರುವುದು ಹೀಗೆ ಮುಂತಾದ ಕಾರ್ಯಕ್ರಮಗಳಲ್ಲಿ ಸ್ವಲ್ಪವು ಬೇಸರವಿಲ್ಲದೆ ನಿರಂತರವಾಗಿ ತಮ್ಮ ತಂಡದವರೊಂದಿಗೆ ಕರಡಿಯನ್ನು ನುಡಿಸುವುದರಲ್ಲಿ ನಿಸ್ಸೀಮರು.

ವೀರಪ್ಪನವರು ತಮ್ಮ ವಂಶಪಾರಂಪರ್ಯವಾಗಿ ಕಲಿತ ಈ ಜನಪದ ಕಲೆಯನ್ನು ಸುಮಾರು ಮೂವತ್ತೈದು ವರ್ಷಗಳಿಂದ ಶ್ರದ್ಧೆ-ನಿಷ್ಠೆಗಳಿಂದ ಈ ಕಲೆಯನ್ನು ಉಳಿಸಿ-ಬೆಳೆಸಲು ಪ್ರಯತ್ನಿಸುತ್ತಿದ್ದಾರೆ. ಅಲ್ಲದೆ ಸುಮಾರು ಐವತ್ತಕ್ಕಿಂತಲೂ ಹೆಚ್ಚು ಶಿಷ್ಯರನ್ನು ತಯಾರಿಸಿದ ಕೀರ್ತಿ ಇವರದಾಗಿದೆ. ಕೊಣ್ಣೂರು ಸುತ್ತಮುತ್ತಲಿನ ಪ್ರತಿಯೊಂದು ಊರುಗಳಲ್ಲಿ ನಡೆಯುವ ಧರ್ಮಕಾರ್ಯಗಳಲ್ಲಾಗಲಿ, ಜಾತ್ರಾಮಹೋತ್ಸವಗಳಲ್ಲಾಗಲಿ, ಮದುವೆಯ ಸಮಾರಂಭಗಳಲ್ಲಾಗಲಿ ತಮ್ಮ ತಂಡವನ್ನು ಕರೆದುಕೊಂಡು ಹೋಗಿ ಕರಡಿ ಮಜಲನ್ನು ಬಾರಿಸಿ ಅಲ್ಲಿಯ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ವೀರಪ್ಪನವರು ಕೇವಲ ಕರಡಿಯ ಮಜಲಿಗಷ್ಟೆ ಸೀಮಿತವಾಗಿರದೆ ಹಳ್ಳಿಯ ಹಬ್ಬ ಹರಿದಿನಗಳಲ್ಲಿ ನಡೆಯುವ ಸಣ್ಣಾಟ, ದೊಡ್ಡಾಟ ಇಲ್ಲವೆ ನಾಟಕಗಳಿಗೆ ಹಾರ್ಮೋನಿಯಂ ನುಡಿಸಿ ಆಯಾ ಆಟ-ನಾಟಕಗಳ ನಿರ್ದೇಶನವನ್ನೂ ಸಹ ನೀಡುವ ಕುಶಲಕರ್ಮಿಗಳಾಗಿದ್ದಾರೆ. ಮೇಲಾಗಿ ತಮ್ಮ ಮನೆತನದ ಕಸುಬಾದ ಬಡಿಗತನ ವೃತ್ತಿಯಲ್ಲಿಯೂ ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆ.

ಬಹುಮುಖ ಪ್ರತಿಭೆಯುಳ್ಳ ವೀರಪ್ಪ ಮನವಾಚಾರಿಯವರು ತಮ್ಮ ಗ್ರಾಮದ ವಿವಿಧ ಜನಪದ ಕಲೆಗಳನ್ನು ಉಳಿಸಿ-ಬೆಳೆಸಲು ಶಿಷ್ಯ ವೃಂದವನ್ನು ತಯಾರಿಸಿದ್ದಾರೆ. ತಮ್ಮ ಸುದೀರ್ಘ ಸೇವೆಯನ್ನು ಜನಪದ ಕಲೆಗಳ ಉಳಿವಿಗಾಗಿ ಮುಡಿಪಾಗಿಟ್ಟಿದ್ದಾರೆ. ಇಂಥ ಹಿರಿಯ ಜನಪದ ಕಲಾವಿದರಿಗೆ ದೊರೆಯಬೇಕಾದ ಮಾನ-ಸನ್ಮಾನಗಳು ದೊರೆತಿಲ್ಲ. ಇನ್ನಾದರೂ ಇವರ ಕಲಾಸೇವೆಯನ್ನು ಗುರುತಿಸಬೇಕಾಗಿದೆ.

# ಸಾಲವ್ವ ಹನಮಪ್ಪ ಲಮಾಣಿ

ಲಂಬಾಣಿ ಒಗಟು, ಹಾಡು-ಕುಣಿತಗಳಲ್ಲಿ ಜನಪ್ರಿಯತೆಯನ್ನು ಪಡೆದಿರುವ ಸಾಲವ್ವ ಲಮಾಣಿಯವರು ಗದುಗಿನ ಕಬಲಾಯತಕಟ್ಟಿತಾಂಡಾದ ನಿವಾಸಿಗಳು. ತಂದೆ ನಾಗಸಿಂಗ್ ನಾಯಕ ಮತ್ತು ತಾಯಿ ಪಂಬ್ಲವ್ವ ಇವರ ಮಗಳಾಗಿ 1953ರಲ್ಲಿ ದೋಣಿ ತಾಂಡಾದಲ್ಲಿ ಜನಿಸಿದರು. ಇವರು ಸಾಲಿಯನ್ನು ಕಲಿಯದಿದ್ದರು ಬಾಲ್ಯದಲ್ಲಿಯೆ ತಾಯಿಯಿಂದ ತಮ್ಮ ಸಮುದಾಯದ ಹಲವಾರು ಹಾಡುಗಳನ್ನು ಕಲಿತರು. ಜೊತೆಯಲ್ಲಿಯೆ ಕೆಲವೊಂದು ಕುಣಿತಗಳನ್ನು ಸಹ ಕಲಿತರು. ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೆ ಕಬಲಾಯತಕಟ್ಟಿ ತಾಂಡಾದ ಹನಮಪ್ಪನವರನ್ನು ಮದುವೆಯಾಗಿ ತವರು ಮನೆಯನ್ನು ಬಿಟ್ಟು ಗಂಡನಮನೆಗೆ ಬಂದ ನಂತರ ಕಬಲಾಯತಕಟ್ಟಿ ತಾಂಡಾದ ಹಿರಿಯ ಜನಪದ ಕಲಾವಿದೆಯಾದ ಧರ್ಮವ್ವ ದೊಡಮನಿಯವರಲ್ಲಿ ತಮ್ಮ ಸಮುದಾಯಕ್ಕೆ ಸಂಬಂಧಪಟ್ಟ ಹತ್ತು ಹಲವಾರು ಕುಣಿತಗಳನ್ನು ಹಾಡುಗಳನ್ನು ಹಾಗೂ ಒಡಪುಗಳನ್ನು ಕಲಿತರು.

ಲಂಬಾಣಿಗಳು ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಒಗಟುಗಳು ಅಪಾರವಾದ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕೂಡಿವೆ. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಒಗಟುಗಳನ್ನು ಹೇಳುವ ಮತ್ತು ಅವುಗಳನ್ನು ಒಡೆಯುವ ಸಂಪ್ರದಾಯ ಇವರರಲ್ಲಿದೆ. ಮದುವೆ, ಹಬ್ಬ-ಹರಿದಿನಗಳ ಮನರಂಜನೆಯ ಸಂದರ್ಭಗಳಲ್ಲಿ ತಾಂಡಾದ ಮಹಿಳೆಯರು ಪುರುಷರು ಹಾಗೂ ಚಿಕ್ಕ ಮಕ್ಕಳು ಊಟವಾದ ಬಳಿಕ ಒಂದು ಕಡೆ ಕೂಡಿ ಒಗಟುಗಳನ್ನು ಹೇಳುವುದು ಹಾಗೂ ಅವುಗಳ ಅರ್ಥವನ್ನು ಬಿಡಿಸಿ ಹೇಳುವುದರಲ್ಲಿ ತೊಡಗುತ್ತಾರೆ. ಇಂಥ ವೇಳೆಯಲ್ಲಿ ಸಾಲವ್ವನವರು ತಾವೇ ಕಟ್ಟಿದ ನೂರಾರು ಒಗಟುಗಳನ್ನು ಹೇಳುತ್ತಾರೆ. ಇಂಥ ಒಗಟುಗಳನ್ನು ರಚಿಸಲು ಅಪಾರವಾದ ಅನುಭವ ಹಾಗೂ ಜ್ಞಾನವುಳ್ಳವರಿಗೆ ಮಾತ್ರ ಸಾಧ್ಯ. ಇವರೆ ರಚಿಸಿದ (ಕಟ್ಟಿದ)ಒಗಟುಗಳು ಹೀಗಿವೆ-

1) ಕುವಾರಿರೊ ಪೇಲೊ ಜೋಡಾಕೂಣ್-ಚೂಡೊ

(ಕುಮಾರಿಯ ಮೊದಲ ಗಂಡನಾರು) -ತೋಳುಬಳೆ.

2) ಪರಮಲ ಕೇತಿ ಪ್ರಭು ಆಯೋ-ಖಣಾ ಮೇಲ ಜಕೊ

(ಪರಲೋಕದಿಂದ ಬಂದ ಪ್ರಭು) -ಹಚ್ಚೆ

ಹೀಗೆ ಸಾಲವ್ವನವರು ಕೇವಲ ತಮ್ಮ ಭಾಷೆಯ ಒಗಟುಗಳನ್ನಷ್ಟೆ ಹೇಳುವುದಿಲ್ಲ ಬದಲಾಗಿ ಕನ್ನಡದಲ್ಲಿಯೂ ಹೇಳುತ್ತಾರೆ.

ಉದಾಹರಣೆಗೆ

**ಬಳ್ಳಿಯ ಮೇಲೊಂದು ಹೂವು**
**ಹೂವು ಬಳ್ಳಿಯನ್ನೆ ನುಂಗುತ್ತದೆ.**

**–ದೀಪ**

ಇಂಥ ಒಗಟುಗಳನ್ನು ಹೇಳುವುದರಲ್ಲಿ ಪಳಗಿದವರಾದ ಇವರು ತಮ್ಮ ಸಮುದಾಯದ ವಿಶಿಷ್ಟ ವೇಷಭೂಷಣಗಳನ್ನು ತಯಾರಿಸುವುದರಲ್ಲಿಯೂ ಪಳಗಿದವರಾಗಿದ್ದಾರೆ. ಅದರಲ್ಲೂ ಗುಂಗಟೋ, ಚೂಡಿ ಕಾಟಲಿ, ಕವಿಯಾ, ಗುಗ್ಗರಿ, ಟೋಪಲಿ ತಯಾರಿಸುವುದರಲ್ಲಿಯೂ ನಿಸ್ಸೀಮರಾಗಿದ್ದಾರೆ. ಚಾರ್ ಹಾತ ಕುಣಿತ, ದಪ್ಪಿನ ಕುಣಿತ, ಗಜರಾ ಮುಂತಾದ ಕುಣಿತಗಳಲ್ಲಿ ಇಪ್ಪತ್ತರಿಂದ ಮೂವತ್ತು ಮಹಿಳೆಯರು ಕೂಡಿಕೊಂಡು ವಿಶೇಷ ವೇಷಭೂಷಣಗಳನ್ನು ಧರಿಸಿಕೊಂಡು ತಂಡೋಪತಂಡವಾಗಿ ಕುಣಿಯುವುದರಲ್ಲಿ ಸಾಲವ್ವನವರು ಪ್ರಮುಖರು. ವಿವಿಧ ಬಗೆಯ ಕುಣಿತಗಳನ್ನು ಕುಣಿದು ಜನರ ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ.

**ನಾಯಕ್ ಚೋಟಾ ಕರಿಯಾ ಮುಂಡಿಗೋಕೊ**
**ಕೋನಿಯೇ ಬಾಯಿ**
**ಕೋನಿಕಾ ಕೇಚಿ ಕಾರಬಾರಿ ಚೋಟಾ**
**ಕರಿಯಾ ಮುಂಡಿ ಗೋಕೊ**
**ಕೋನಿಯೇ ಬಾಯಿ**

ಇಂಥ ಅದೇಷ್ಟೋ ಹಾಡುಗಳನ್ನು ಸಾಲವ್ವನವರು ರಾತ್ರಿ ಬೆಳತನಕ ಹಾಡುತ್ತಾರೆ. ಹಾಡುಗಳಿಗೆ ತಕ್ಕಂತೆ ತಮ್ಮ ತಂಡದವರೊಂದಿಗೆ ಕುಣಿಯುತ್ತ ನೋಡುಗರ ಮನಸೂರೆಗೊಳ್ಳುತ್ತಾರೆ. ತಮ್ಮ ತಾಂಡಾದ ಹತ್ತಿಪ್ಪತ್ತು ಮಹಿಳೆಯರ ತಂಡವನ್ನು ಕಟ್ಟಿಕೊಂಡು ತಾಂಡಾದ ಪಕ್ಕದ ಹಳ್ಳಿಗಳಿಗೆ ಹೋಗಿ ಅಲ್ಲಿಯ ಬೀದಿ ಬೀದಿಗಳಲ್ಲಿ

**ಮಳಿಬರಲಿ ಮಳಿರಾಜ**
**ಕೆರೆ ಬಾವಿ ತುಂಬಲಿ ಮಳಿರಾಜ॥**

**ಕೂರಿಗಿ ಹಾಸಲಿ ಬಡಿಗೆರಜ್ಜ**
**ಎರಿ ಹೊಲ ಬಿತ್ತಲಿ ಮಳಿರಾಜ**

ನಮ್ಮ ಸವಕಾರ ಮನಿಮುಂದ ಸೇದುಬಾವಿ
ಅವರ್ದೆಂತಿ ಕೊಳ್ಳಾಗೈತಿ ಗೆಜ್ಜಿ ಟೀಕಿ
ಆಕಿ ಗೆಜ್ಜಿ ಟೀಕಿ ಕೊಡುಮಟ ಬಿಡುದಿಲ್ಲ
ನಮ್ಮ ಸವಕಾರ ತಿಂತಾನ ಎಲಿಯಡಕಿ
ನಾವು ಸುಣ್ಣ ಕೊಡುಮಟ ಬಿಡುದಿಲ್ಲ॥

ಎಂದು ಹಾಡುತ್ತ ಮಳೆಯನ್ನು ಕರೆಯುವರು. ಹೀಗೆ ಲಂಬಾಣಿ ಮಹಿಳೆಯರು ಹಾಡುವುದರಿಂದ ಮಳೆ ಬರುತ್ತದೆ ಎಂಬ ನಂಬಿಕೆ ನಮ್ಮ ಜನಪದರಲ್ಲಿದೆ. ಇಂಥ ಹಾಡುಗಳನ್ನು ಕನ್ನಡ ಭಾಷೆಯಲ್ಲಿ ಸಂದರ್ಭಕ್ಕೆ ತಕ್ಕಂತೆ ಕಟ್ಟಿ ಹಾಡುವುದರಲ್ಲಿ ಸಾಲವ್ವನವರು ತುಂಬಾ ಪಳಗಿದವರಾಗಿದ್ದಾರೆ.

ಲಂಬಾಣಿ ಜನಪದ ಕಲೆಗಳನ್ನು ತಮ್ಮ ಜೀವನದುದ್ದಕ್ಕೂ ಉಳಿಸಿ ಬೆಳೆಸಲು ಪ್ರಯತ್ನಿಸಿದ ಸಾಲವ್ವನವರು ಗದುಗಿನ ಸುತ್ತಮುತ್ತಲಿನ ತಾಂಡಾದಲ್ಲಿಯೇ ಹಿರಿಯ ಕಲಾವಿದೆ ಎನಿಸಿದ್ದಾರೆ.

## ರಾಮಪ್ಪ ಹಾಮಪ್ಪ ಲಮಾಣಿ

ಲಂಬಾಣಿ ಭಜನೆಪದಗಳನ್ನು ಹಾಡುವುದರಲ್ಲಿಯೂ ಸಂಗೀತ ಸಾಮಾಗ್ರಿಗಳನ್ನು ನುಡಿಸುವುದರಲ್ಲಿಯೂ ಜನಪ್ರಿಯತೆಯನ್ನು ಪಡೆದ ರಾಮಪ್ಪ ಲಮಾಣಿಯವರು ಗದುಗಿನ ಕಬಲಾತಕಟ್ಟಿ ತಾಂಡಾದವರು. ತಂದೆ ಹಾಮಪ್ಪ, ತಾಯಿ ಹಕನವ್ವನವರ ಮಗನಾಗಿ 1952ರಲ್ಲಿ ಜನಿಸಿದರು. ಮನೆತನದ ತೊಂದರೆಯಿಂದಾಗಿ ಶಾಲೆಯನ್ನು ಕಲಿಯಲಾಗದೆ ಹೋಯಿತು, ಬಾಲ್ಯದಲ್ಲಿಯೆ ತಾಂಡಾದ ಜನಪದ ವಾತಾವರಣದಲ್ಲಿ ಬೆಳೆದ ರಾಮಪ್ಪನವರು ಅಲ್ಲಿಯ ಹಲವಾರು ತಮ್ಮದೆ ಆದ ಹಾಡು-ಕುಣಿತಗಳಿಗೆ ಮತ್ತು ನುಡಿಸುವ ವಾದ್ಯಗಳಿಗೆ ಮಾರುಹೋಗಿ ಅವನ್ನು ಕಲಿಯಬೇಕೆಂಬ ಉತ್ಕಟ ಆಸೆ ಮೂಡಿತು. ಅಂತೆಯೇ ತಾಂಡಾದ ಯುವಕರಿಗೆ ತರಬೇತಿಯನ್ನು ನೀಡುತ್ತಿದ್ದ ಥಾವರಪ್ಪ ಜಯರಾಮಪ್ಪ ದೊಡಮನಿಯವರನ್ನು ಕಂಡು ತಾನು ಕೂಡ ಈ ಜನಪದ ಕಲೆಗಳನ್ನು ಕಲಿಯಬೇಕೆಂಬ ಬಯಕೆಯನ್ನು ತಿಳಿಸಿದಾಗ, ಹುಡುಗನ ಆಸಕ್ತಿಯನ್ನು ಕಂಡ ಥಾವರೆಪ್ಪನವರು ತಮಗೆ ತಿಳಿದ ಜನಪದ ಕಲೆಗಳನ್ನು ರಾಮಪ್ಪನಿಗೆ ಕಲಿಸಿಕೊಡಲು ಒಪ್ಪಿದರು. ಹೀಗೆ ತಮ್ಮ ಹದಿನೈದನೆಯ ವಯಸ್ಸಿನಲ್ಲಿಯೆ ತಾಂಡೆಯಲ್ಲಿ ನಡೆಯುವ ಹಾಡು-ಕುಣಿತಗಳನ್ನು, ಬಾರಿಸುವ ಹಲಿಗೆ ನಗಾರಿಗಳನ್ನು ಕಲಿಯಲು ಪ್ರಾರಂಭಿಸಿ, ಅವುಗಳನ್ನು ಕರಗತ ಮಾಡಿಕೊಂಡರು.

ಲಂಬಾಣಿ ಜನಪದ ಹಾಡುಗಳು ತುಂಬಾ ವಿಶಿಷ್ಟವಾದವುಗಳು ಇವುಗಳ ಲಯ ಮತ್ತು ನಾದ ಮಾಧುರ್ಯತೆಗಳು ಕೇಳುಗರ ಮನಸ್ಸನ್ನು ಸೆಳೆಯುತ್ತವೆ. 'ಥಾಲಿ ಭಜನೆ' ಎಂದರೆ ಗಂಗಾಳನ್ನು ಬಡಿಯುತ್ತ ಹಾಡುವ ಹಾಡುಗಳು ಇಲ್ಲಿ ಗಂಗಾಳವೆ ಪ್ರಧಾನವಾಗಿರುವುದರಿಂದ ಇಂಥ ಹಾಡುಗಳಿಗೆ ಥಾಲಿ ಭಜನೆ ಎಂದು ಕರೆಯುವುದು ರೂಢಿ. ಈ ಮೇಳದಲ್ಲಿ ಹತ್ತರಿಂದ ಇಪ್ಪತ್ತು ಮಂದಿ ಇರುತ್ತಾರೆ. ರಾಮಪ್ಪನವರು ಥಾಲಿಯನ್ನು ಬೇರೆ ಬೇರೆ ಗತ್ತುಗಳಲ್ಲಿ ಬಾರಿಸುತ್ತ ಹಾಡುಗಳನ್ನು ಹಾಡುವುದರಲ್ಲಿ ಪಳಗಿದವರಾಗಿದ್ದಾರೆ. 'ಡಗ್ಗಾ ಭಜನಿ' ಇದು ಲಂಬಾಣಿಗಳ ಮತ್ತೊಂದು ಭಜನಿ. ಈ ಹಾಡುಗಳನ್ನು ಹಾಡುವಾಗ ಡಗ್ಗಾದ ಗತ್ತುಗಳೆ ಪ್ರಧಾನವಾಗಿರುವುದರಿಂದ ಇದಕ್ಕೆ ಈ ಹೆಸರು. ಈ ಮೇಳದಲ್ಲಿ ಮೂರರಿಂದ ಐದು ಜನ ಥಾಲಿ (ಗಂಗಾಳ)ಯವರು, ಎಂಟ್ಹತ್ತು ಜನ ಸಣ್ಣ ತಾಳದವರು, ಇಬ್ಬರು ಗುಮಾರಿನವರು ಇರುತ್ತಾರೆ. ಮುಮ್ಮೇಳದವನು ಎದ್ದು ನಿಂತು ಸಣ್ಣ ತಾಳಗಳನ್ನು ಕೈಯಲ್ಲಿ ಹಿಡಿದು 'ರಾಮರಾವ್ ಮಾರಾಜಕಿ ಜೈ, ಸೇವಾಲಾಲ ಮಾರಾಜಕಿ ಜೈ, ಮರಿಯಮ್ಮ ಮಾಯಕಿ ಜೈ' ಎಂದು ಜೈಕಾರ ಹಾಕುತ್ತ ವಿಶಿಷ್ಟ ಲಯದಲ್ಲಿ ಕುಣಿಯುತ್ತ ಅದಕ್ಕೆ ತಕ್ಕಂತೆ ತಾಳಗಳನ್ನು ನುಡಿಸುತ್ತ ಹಾಡಲು ಪ್ರಾರಂಭಿಸುತ್ತಾನೆ. ಅದರಂತೆ ಹಿಮ್ಮೇಳದವರು ಥಾಳಿ, ತಾಳ, ಗುಮರಗಳನ್ನು ಬಾರಿಸುತ್ತ ಹಾಡುತ್ತಾರೆ. ಹೀಗೆ ಹಾಡುವ ಇವರ ಹಾಡುಗಳು ವಿಶೇಷ ನಾದ, ತಾಳ, ಲಯಗಳೊಂದಿಗೆ ಕೇಳುಗರ ಮನಸ್ಸನ್ನು ಸೆರೆಹಿಡಿಯುತ್ತವೆ. ಹಾಡು ಮುಗಿಯುತ್ತಿದ್ದಂತೆ ಇನ್ನೂ ಕೇಳಬೇಕೆಂದೆನಿಸುತ್ತದೆ. ಇಂಥ ಹಾಡುಗಳನ್ನು ಹಾಡುವುದರಲ್ಲಿ ರಾಮಪ್ಪನವರು ತುಂಬಾ ಪಳಗಿದವರಾಗಿದ್ದಾರೆ. ತಮ್ಮ ಮುಂದಾಳತ್ವದಲ್ಲಿ ವಿವಿಧ ಬಗೆಯ, ವಿವಿಧ ಗತ್ತಿನ ಹಾಡುಗಳನ್ನು ಹಾಡಿ ಕೇಳುಗರ ಮನಸ್ಸನ್ನು ಸೆರೆಹಿಡಿಯುವುದಲ್ಲಿ ಯಶಸ್ವಿಯಾಗಿದ್ದಾರೆ.

ಲಂಬಾಣಿ ತಾಂಡಾದವರ ಇನ್ನೊಂದು ವಿಶೇಷವೆಂದರೆ ಹೋಳಿ ಹುಣ್ಣಿಮೆಯ ದಿನ ರಾತ್ರಿ-ಬೆಳತನಕ ಕುಣಿಯುತ್ತ ಕೋಲಾಟದ ಪದಗಳನ್ನು ಹಾಡುವುದು. ಈ ಮೇಳದಲ್ಲಿ ಒಬ್ಬ ನಗಾರಿಯವನು, ಒಬ್ಬ ಹಲಗಿಯವನು, ಇಪ್ಪತ್ತರಿಂದ ಮೂವತ್ತು ಜನರು ಕೋಲಾಟದವರು ಇರುತ್ತಾರೆ. ಕೋಲಾಟದವರೆಲ್ಲ ವರ್ತುಳಾಕಾರದಲ್ಲಿ ನಿಲ್ಲುತ್ತಾರೆ. ಅವರ ನಡುವೆ ನಗಾರಿ ಬಾರಿಸುವ ಮತ್ತು ಹಲಗಿ ಬಾರಿಸುವನು. ತಮ್ಮ ವಿಶಿಷ್ಟ ತಾಳ ಲಯದ ಗತ್ತುಗಳನ್ನು ಬಾರಿಸಲು ಪ್ರಾರಂಭಿಸುತ್ತಾರೆ. ಆ ಗತ್ತುಗಳಿಗೆ ತಕ್ಕಂತೆ ಕೋಲಾಟದವರು ಕಿರುಗಾಲ ಕುಣಿತವನ್ನು ಪ್ರಾರಂಭಿಸುತ್ತಾರೆ. ಹೀಗೆಯೇ ವರ್ತುಳಾಕಾರದಲ್ಲಿ ಎರಡು-ಮೂರು ಸುತ್ತು ಕುಣಿದು, ಅದೇ ಕುಣಿತಗಳನ್ನು ಕುಣಿಯುತ್ತ ತಾಂಡಾದ ಬೀದಿ- ಬೀದಿ ಅಲೆಯುತ್ತ ಮನೆ-ಮನೆಗೆ ಹೋಗಿ ಕಾಮಣ್ಣನ

ಪಟ್ಟಿಯನ್ನು ತೆಗೆದುಕೊಂಡು ಬರುತ್ತಾರೆ. ಕಾಮಣ್ಣನನ್ನು ಸುಟ್ಟ ಮರುದಿನ ಬೇಟೆಯನ್ನು ಮಾಡಿ ತಾಂಡಾದ ಜನರೆಲ್ಲರೂ ಹೋಳಿಹುಣ್ಣಿಮೆಯ ಕರಿಯನ್ನು ಹರಿಯುತ್ತಾರೆ. ಈ ಕೋಲಾಟದ ಪರಂಪರೆಯನ್ನು ಉಳಿಸಿ-ಬೆಳೆಸಲು ರಾಮಣ್ಣನವರು ಯುವಕರಿಗೆ ಹುರುದುಂಬಿಸಿ ಅವರಿಗೆ ತರಬೇತಿಯನ್ನು ನೀಡಿ ಈ ಜನಪದ ಕಲೆಯು ಉಳಿಯುವಂತೆ ಮಾಡಿದ್ದಾರೆ.

ರಾಮಪ್ಪನವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೆ ಕಬಲಾಯತಕಟ್ಟಿ ತಾಂಡಾದ ಜನಪದ ಕಲೆಗಳಾಗ ಥಾಲಿ ಭಜನೆ, ಡಗ್ಗಾ ಭಜನೆ, ಜಮರ್ಕಿ ಭಜನೆ ಹಾಗೂ ಹೋಳಿ ಹಬ್ಬದ ಕುಣಿತ ಮೊದಲಾದವುಗಳಲ್ಲಿ ಪರಿಣಿತರಾದ ಇವರು ಇವುಗಳನ್ನು ಉಳಿಸಿ-ಬೆಳೆಸಲು ಪ್ರಯತ್ನಿಸಿ, ಅವು ನಿರಂತರವಾಗಿ ಮುಂದುವರೆಯುವಂತೆ ಮಾಡಿದ್ದಾರೆ.

## ದೇವಕ್ಕ ಗುರುಬಸಪ್ಪ ಈಟಿ

ಸೋಬಾನೆ ದೇವಕ್ಕನೆಂದೆ ಜನಪ್ರಿಯತೆಯನ್ನು ಪಡೆದ ದೇವಕ್ಕ ಈಟಿಯವರು ಗದುಗಿನ ಲಕ್ಕುಂಡಿ ಗ್ರಾಮದವರು. ತಂದೆ ಗುರಿಕಾರ ಸಿದ್ದಪ್ಪ, ತಾಯಿ ಬಾಲಮ್ಮ ಇವರ ಮಗಳಾಗಿ 1938ರಲ್ಲಿ ಜನಿಸಿದರು. ಕುರುಬ ಸಮುದಾಯಕ್ಕೆ ಸೇರಿದ ಇವರು ಸಾಲೆಯ ಮೆಟ್ಟಿಲನ್ನೆ ಏರಿಲ್ಲ. ಬಾಲ್ಯದಲ್ಲಿಯೆ ಮನೆಗೆಲಸವನ್ನು ಮಾಡುತ್ತ ತಮ್ಮ ಹಳ್ಳಿಯ ಜನಪದ ಹಾಡುಗಳಿಗೆ ಮಾರುಹೋಗಿ ಅವುಗಳನ್ನು ತಾನೂ ಏಕೆ ಕಲಿಯಬಾರದು ಎಂಬ ಲವಲವಿಕೆಯಿಂದ ಅವುಗಳನ್ನು ಕಲಿಯಲಾರಂಭಿಸಿದಳು. ಬಾಲಕಿ ದೇವಕ್ಕ ಹಾಡುವ ಹಾಡುಗಳನ್ನು ಕೇಳಿದ ನೀಲವ್ವ ಸದಗುಂಡಿಯವರು ಮೆಚ್ಚಿಕೊಂಡು ತಮಗೆ ಬರುವ ಜನಪದದ ಎಲ್ಲ ಹಾಡುಗಳನ್ನು ದೇವಕ್ಕನಿಗೆ ಕಲಿಸಿದರು. ಬಾಲಕಿ ದೇವಕ್ಕ ಶ್ರದ್ಧೆಯಿಂದ ಅವರು ಕಲಿಸಿದ ಎಲ್ಲ ಹಾಡುಗಳನ್ನು ಕಲಿತು, ತಮ್ಮ ನೆನಪಿನಂಗಳದಲ್ಲಿ ಇಟ್ಟುಕೊಂಡಿದ್ದಾರೆ.

ಮದುವೆಯ ಮನೆಯವರು ದೇವಕ್ಕನನ್ನು ಹಾಗೂ ಅವರ ಸಂಗಡಿಗರನ್ನು ವಿಳ್ಯೆವಕೊಟ್ಟು ಕರೆದುಕೊಂಡು ಹೋಗುತ್ತಾರೆ. ಮದುವೆಯ ಮನೆಯಲ್ಲಿ ಕಾರ್ಯ ಪ್ರಾರಂಭವಾಗುವುದು ಲಗ್ನದ ಗಂಟು ಕಟ್ಟುವುದರಿಂದ. ತದನಂತರ ಒಳಕಲ್ಲ ಪೂಜೆ, ಬೀಸುಕಲ್ಲ ಪೂಜೆ, ಸಾವಗಿ ಮಣಿ ಪೂಜೆ ಹಾಗೂ ಲಕ್ಷ್ಮಿ ಪೂಜೆ ಮಾಡುತ್ತಾರೆ. ಹೀಗೆ ಪೂಜೆ ನಡೆದ ವೇಳೆಯಲ್ಲಿ ಆಯಾ ಪೂಜೆಗೆ ತಕ್ಕಂತಹ ಹಾಡುಗಳನ್ನು ದೇವಕ್ಕನವರು ಸುಶ್ರಾವ್ಯವಾಗಿ ತಮ್ಮ ಸಂಗಡಿಗರೊಂದಿಗೆ ಹಾಡುತ್ತಾರೆ.

ವನಚಿತ್ರದೊರಳಿಗೆ
ಬನದಿಂದ ಯಾಲಕ್ಕಿ ತಳಸುವರ।
ಸುವ್ವಿ ಸುವ್ವಿ ಸುವ್ವಾಲೆ

ಅಗ್ಗುಗಲ್ಲ ಒಯ್ದು
ನುಗ್ಗು ಬಂಗಾರ ಮಾಡಿ
ನೆಲಕ ಬಂಗಾರ ಹರಿವ್ಯಾರ। ಸುವ್ವಿ ಸುವ್ವಿ ಸುವ್ವಾಲೆ

ಹೀಗೆ ಹಾಡುಗಳನ್ನು ಹಾಡಲು ಪ್ರಾರಂಭಿಸಿ ಮದುವೆಯ ಮೊದಲ ದಿನದ ಕಾರ್ಯಕ್ರಮ ಮುಗಿಯುವವರೆಗೂ ಸುಶ್ರಾವ್ಯವಾಗಿ ಹಾಡಿ ಕೇಳುಗರಿಗೆ ಮುದ ನೀಡುತ್ತಾರೆ. ಅಂತೆಯೆ ವಿಳ್ಯೆದ ಕಾರ್ಯಕ್ರಮವನ್ನು ಮಾಡುವಾಗ ಅದಕ್ಕೆ ಸಂಬಂಧಿಸಿದಂತ ಹಾಡುಗಳನ್ನು ಕಾರ್ಯಕ್ರಮ ಮುಗಿಯುವವರೆಗೂ ಹಾಡುತ್ತಿದ್ದರು.

ನೆನಿ ಅಕ್ಕಿ ನೆನಿಗಡಲಿ ಗೊಣಿಯ ಬಾಳಿಯ ಹಣ್ಣ
ಉಡಿಯನು ತುಂಬಿರೆ ಜಾನಕಿಗೆ।
ಮಡದಿ ಪಾರ್ವತಾದೇವಿ ಸಡಗರದಿಂದಲಿ
ಉಡಿಯನು ತುಂಬಿರೆ ಜಾನಕಿಗೆ।

ದಂಬದಾಳಂಬರಿ ಹಣ್ಣ ನಿಂಬು ಕರ್ಜೂರ ಹಣ್ಣ
ಉಡಿಯನು ತುಂಬಿರೆ ಜಾನಕಿಗೆ।
ಮಡದಿ ಪಾರ್ವತಾದೇವಿ ಸಡಗರದಿಂದಲಿ
ಉಡಿಯನು ತುಂಬಿರೆ ಜಾನಕಿಗೆ।

ಹೀಗೆ ಇಂಪಾಗಿ ದೇವಕ್ಕನವರು ತಮ್ಮ ಸಂಗಡಿಗರೊಂದಿಗೆ ಹಾಡಲು ಪ್ರಾರಂಭಿಸಿದರೆ ದನಿವಿಲ್ಲದಂತೆ ಹಾಡಿ ಜನಮನವನ್ನು ತನಿಸುತ್ತಿದ್ದರು. ಒಳ್ಳು-ಒನಕೆಯ ಪೂಜೆ, ಲಗ್ನ ಕಟ್ಟಿಸುವುದು, ಹಂದರಗಂಬ ತರುವುದು, ಐರಾಣಿ ತರುವುದು, ಗಂಗಿ ಪೂಜೆ ಮಾಡುವುದು, ಬಾಸಿಂಗ ತರುವುದು, ಅಕ್ಕಸಾಲಿಗರ ಮನೆಯಿಂದ ತಾಳಿ ತಂದು ಅದನ್ನು ಪೋಣಿಸುವುದು, ಎಣ್ಣೆ ಬೀರುವುದು, ಮದುಮಕ್ಕಳ ಪಾದ ತೊಳೆಯುವುದು ಹೀಗೆ ಮದುವೆಯ ಹತ್ತು ಹಲವಾರು ಕಾರ್ಯಕ್ರಮಗಳು ನಿರಂತರವಾಗಿ ಮೂರು ದಿನಗಳವರೆಗೆ ನಡೆಯುತ್ತಿದ್ದವು. ಹೀಗೆ ನಡೆಯುವ ಪ್ರತಿಯೊಂದು ಕಾರ್ಯಕ್ಕೂ ಸಂಬಂಧಿಸಿದಂತಹ ಹಾಡುಗಳನ್ನು ದೇವಕ್ಕನವರು ಹಾಡಿ ಜನಮೆಚ್ಚುಗೆಯನ್ನು ಪಡೆದು ಮದುವೆ ಮನೆಯವರು ಕೊಟ್ಟ ಉಡುಗೊರೆಯನ್ನು ಸ್ವೀಕರಿಸುತ್ತಿದ್ದರು.

ಹಿರಿಯ ಜನಪದ ಕಲಾವಿದೆಯಾದ ದೇವಕ್ಕನವರು ಕೇವಲ ಸೋಬಾನದ ಹಾಡುಗಳನ್ನು ಮಾತ್ರ ಹಾಡುವುದಿಲ್ಲ ಬದಲಾಗಿ ಗೀಗೀ ಪದಗಳನ್ನು, ಲಾವಣಿ ಪದಗಳನ್ನು ಸಹ ಹಾಡುತ್ತಾರೆ. ಮನೆಯಲ್ಲಿ ಬೀಸುವಾಗ ಬೀಸುಕಲ್ಲಿನ ಪದಗಳನ್ನು ಮತ್ತು ನಾಮಕರಣ ಸಮಾರಂಭದಲ್ಲಿ ಜೋಗುಳದ ಪದಗಳನ್ನು ಸಹ ಅಷ್ಟೇ ಸುಮಧುರವಾಗಿ ಹಾಡುತ್ತಾರೆ. ಹೀಗೆ ವಿವಿಧ ಜನಪದ ಹಾಡುಗಳನ್ನು ಹಾಡುವವರು ತುಂಬಾ ವಿರಳ. ಗದುಗಿನ ಸುತ್ತಮುತ್ತಲಿನ ಹಳ್ಳಿ-ಪಟ್ಟಣಗಳಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಗೀಗೀ ಪದಗಳನ್ನು, ಲಾವಣಿ ಪದಗಳನ್ನು ತಮ್ಮ ಸಂಗಡಿರೊಂದಿಗೆ ರಾತ್ರಿ-ಬೆಳತನಕ ಹಾಡಿ ಜನಮೆಚ್ಚುಗೆಯನ್ನು ಸಹ ಪಡೆದುಕೊಂಡು ಚಿರಪರಿಚಿತರಾಗಿದ್ದಾರೆ.

## ಸುಬ್ಬವ್ವ ಭೀಮಸಿಂಗ ಕಾರಬಾರಿ

ಲಂಬಾಣಿ ಹಾಡುಗಳನ್ನು ಹಾಡುವುದರಲ್ಲಿಯೂ, ಲಂಬಾಣಿ ಕುಣಿತಗಳನ್ನು ಕುಣಿಯುವುದರಲ್ಲಿಯೂ ವಿಶೇಷ ಪರಣಿತಿಯನ್ನು ಪಡೆದಿರುವ ಸುಬ್ಬವ್ವನವರು ಗದುಗಿನ ಕಬಲಾಯತಕಟ್ಟಿ ತಾಂಡಾದ ನಿವಾಸಿಗಳು. ತಂದೆ ಈಟಪ್ಪ, ತಾಯಿ ಧರ್ಮವ್ವನವರ ಮಗಳಾಗಿ 1956ರಂದು ಗದುಗಿನ ನಾಗಾವಿ ತಾಂಡೆಯಲ್ಲಿ ಜನಿಸಿದರು. ಓದು ಬರಹ ಬಾರದ ಇವರು ತಮ್ಮ ನೆನಪಿನಂಗಳದಲ್ಲಿ ನೂರಾರು ಪದಗಳನ್ನು ಹಿಡಿದಿಟ್ಟುಕೊಂಡಿದ್ದಾರೆ. ಇವರ ಹದಿನೆಂಟನೆಯ ವಯಸ್ಸಿನಲ್ಲಿಯೆ ತಂದೆ ಈಟಪ್ಪನವರು ಕಬಲಾಯತಕಟ್ಟಿ ತಾಂಡಾದ ನಿವಾಸಿಯಾದ ಭೀಮಸಿಂಗ ಕಾರಬಾರಿಯವರ ಜೊತೆ ಮದುವೆಮಾಡಿ ಕೊಟ್ಟರು. ಗಂಡನ ಮನೆಗೆ ಬಂದ ಸುಬ್ಬವ್ವನವರು ಧರ್ಮವ್ವ ದೊಡ್ಡಮನಿಯವರಿಂದ ಕಲಿತ ಹಾಡುಗಳನ್ನು ಹಾಡಲು ಪ್ರಾರಂಭಿಸಿದರು. ಇವರ ಕಲೆಗೆ ಗಂಡನ ಮನೆಯಲ್ಲಿಯೂ ಮನ್ನಣೆದೊರೆಯಿತು.

ಉತ್ತರ ಕರ್ನಾಟಕದ ತಾಂಡಾಗಳಲ್ಲಿ ಲಂಬಾಣಿಗಳು ಹಾಡುವ ಜನಪದ ಗೀತೆಗಳು ಗುಜರಾತ ಮತ್ತು ರಾಜಸ್ಥಾನ ಲೋಕಗೀತೆಗಳ ಲಯವನ್ನು ಹೋಲುತ್ತವೆ. ಅಲ್ಲದೆ ಅದೇ ವಿವಿಧ ಲಯಗಳಲ್ಲಿಯೆ ಕನ್ನಡದ ಹಾಡುಗಳನ್ನು ಸಹ ಹಾಡುತ್ತಾರೆ. ಲಂಬಾಣಿ ಸ್ತ್ರೀಯರು ಹಳ್ಳಿಗಳ ಮನೆ ಮನೆಗೆ ಬಂದು ಕೈಬೀಸಿ ಹಾಡಿದರೆ ಮಳೆ ಆಗುತ್ತದೆ ಎಂಬ ನಂಬಿಕೆ ನಮ್ಮ ಜನಪದಿಯರಲ್ಲಿದೆ. ಹೀಗಾಗಿ ಲಂಬಾಣಿ ಸ್ತ್ರೀಯರು ಜೊತೆ ಜೊತೆಯಾಗಿ ಹಳ್ಳಿಗಳಿಗೆ ಬಂದು

ಮಳಿ ಬರಲಿ ಮಳಿರಾಜಽಽ
ಕೆರಿ ಬಾವಿ ತುಂಬಲಿ ಮಳಿರಾಜ
ಕೂರಿಗಿ ಹಾಸಲಿ ಬಡಿಗರಜ್ಜ
ಎರಿ ಹೊಲ ಬಿತ್ತಲಿ ಮಳಿರಾಜ॥

ಎಂದು ಹಾಡುತ್ತ ಮಳೆಯನ್ನು ಕರೆಯುವರು. ಅದರಂತೆ ಎರಡು ಮೂರು ದಿನಗಳಲ್ಲಿ ಮಳೆಯು ಸಹ ಬರುತ್ತದೆ. ಇಂಥ ಹಾಡುಗಳನ್ನು ಹಾಡುವುದರಲ್ಲಿ ಸುಬ್ಬವ್ವನವರು ಪಳಗಿದವರಾಗಿದ್ದಾರೆ. ಅಲ್ಲದೆ ಲಂಬಾಣಿ ಕುಣಿತಗಳಾದ 'ಚಾರ್ ಹಾತ್ ಕುಣಿತ' ಇದರಲ್ಲಿ ಮೂವತ್ತರಿಂದ ನಲವತ್ತು ಮಂದಿ ಹೆಣ್ಣು ಮಕ್ಕಳು ತಮ್ಮ ವಿಶೇಷ ಉಡುಗೆ ತೊಡುಗೆಗಳನ್ನು ಹಾಕಿಕೊಂಡು ಮನೆಯ ಮುಂದಿನ ಅಂಗಳಕ್ಕೆ ಬಂದು "ಜಡ್ಡಿನಕ್ ನಕ್ ನಕ್, ಜಡ್ಡಿನಕ್ ನಕ್ ನಕ್" ಎಂಬ ಗತ್ತನ್ನು ಬಾರಿಸುವ ಹಲಗಿಯವನ ಗತ್ತಿಗೆ ಕುಣಿಯುವ ಈ ಕುಣಿತ ಬಹಳಷ್ಟು ಮನ ಮೋಹಕವಾಗಿರುತ್ತದೆ. ಇದರಲ್ಲಿ ಪ್ರಮುಖ ಪಾತ್ರವಹಿಸುವವರು ಸುಬ್ಬವ್ವನವರು. ಹಲಗಿಯವನ ವಿವಿಧ ಗತ್ತುಗಳಿಗೆ ತಕ್ಕಂತೆ ಇಡೀ ತಂಡವನ್ನು ನಡೆಸುವವರೆ ಇವರು. ಹಲಗೆಯವನು ಬಾರಿಸುವ ಗತ್ತು ಬದಲಾದಂತೆ ಮೊದಲಿನ ಕುಣಿತವನ್ನು ಬಿಟ್ಟು ಮತ್ತೊಂದು ಕುಣಿತಕ್ಕೆ ಬದಲಾಗುವ ಕುಣಿತವನ್ನು ಸಂಕೇತಿಸುವವರೆ ಸುಬ್ಬವ್ವನವರು. ಹೀಗೆ ಹತ್ತು ಹಲವಾರು ಕುಣಿತಗಳನ್ನು ರೂಢಿಸಿಕೊಂಡಿರುವ ಸುಬ್ಬವ್ವನವರು ಮಣ್ಣೆತ್ತಿನ ಅಮವಾಸೆ, ನವರಾತ್ರಿಯ ದಿನಗಳಲ್ಲಿ, ದೀಪಾವಳಿ ಹಬ್ಬದಲ್ಲಿ ವಿಶೇಷವಾಗಿ ಹಾಡುವುದು ಮತ್ತು ತಮ್ಮ ತಂಡದವರನ್ನೊಡಗೂಡಿ ರಾತ್ರಿ-ಬೆಳತನಕ ಕುಣಿದು ಜನರ ಮೆಚ್ಚುಗೆಯನ್ನು ಸಹ ಪಡೆದುಕೊಂಡಿದ್ದಾರೆ. ತಮ್ಮ ಭಾಷೆಯ ಹಾಡುಗಳನ್ನು ಹಾಡುವುದರ ಜೊತೆಗೆ ಕನ್ನಡದ ಹಾಡುಗಳನ್ನು ತಮ್ಮ ಹಾಡಿನ ಲಯದಲ್ಲಿಯೆ ಹಾಡುವ ಗತಿಯನ್ನು ಇವರು ರೂಢಿಸಿಕೊಂಡಿದ್ದಾರೆ. ಒಮ್ಮೊಮ್ಮೆ ಹಳ್ಳಿಗಳಿಗೆ ತಮ್ಮ ತಂಡವನ್ನು ಕರೆದುಕೊಂಡು ಹೋದ ವೇಳೆಯಲ್ಲಿ ಜನರನ್ನು ರಂಜಿಸಲು ಕನ್ನಡದ ಹಾಡನ್ನು ತಮ್ಮ ಮೂಲ ದಾಟಿಯಲ್ಲಿ ಹಾಡಿ ಅಲ್ಲಿಯ ಜನರ ಮೆಚ್ಚುಗೆಯನ್ನು ಸಹ ಗಳಿಸಿಕೊಂಡವರು.

ಲಂಬಾಣಿ ಸ್ತ್ರೀಯರ ವೇಷಭೂಷಣ ತುಂಬಾ ವಿಶೇಷವಾಗಿರುತ್ತವೆ. ಗುಂಗಟೊ, ಚೂಡಿ, ಕಾಟಲಿ ಕವಿಯಾ, ಗುಗ್ಗರಿ, ಟೋಪಲಿ ಮುಂತಾದವುಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಗುಂಗಟೊದ ಕಸೂತಿ ಹಾಕುವುದರಲ್ಲಿ ಮತ್ತು ಗುಗ್ಗರಿ ಟೋಪಲಿ ಮುಂತಾದವುಗಳಿಗೆ ಕಸೂತಿ ಹಾಕಿ, ಅವುಗಳು ತುಂಬಾ ಶೋಭಾಯಮಾನವಾಗಿ ಕಾಣುವಂತೆ ಮಾಡುವುದರಲ್ಲಿ ಸುಬ್ಬವ್ವನವರು ತುಂಬಾ ಪಳಗಿದವರಾಗಿದ್ದಾರೆ.

ಲಂಬಾಣಿ ಜನಪದ ಕಲೆಗಳನ್ನು ತನ್ನ ಜೀವನದ ಉಸಿರಾಗಿಸಿಕೊಂಡಿರುವ ಸುಬ್ಬವ್ವನವರು ಈಗಲೂ ತಮ್ಮ ಬಿಡುವಿನ ವೇಳೆಯಲ್ಲಿ ತಾಂಡಾದ ಯುವತಿಯರಿಗೆ ಜನಪದ ಹಾಡುಗಳನ್ನು ಹೇಳಿಕೊಡುವುದರಲ್ಲಿ ತೊಡಗಿದ್ದಾರೆ. ಹೀಗೆ ಜನಪದ ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ.

## ಕಲಾವಿದರ ವಿಳಾಸಗಳು.

1) ಈರಣ್ಣ ವಿರುಪಾಕ್ಷಪ್ಪ ಐಲಿ
ಮು-ಬೆಟಗೇರಿ ರಾಜಾಜಿ ರಸ್ತೆ
ತಾ. ಗದಗ. ಜಿ. ಗದಗ
2) ಈಶ್ವರಪ್ಪ ಬಸಪ್ಪ ಕುರ್ತಕೋಟಿ
ಮು-ಜಕ್ಕಲಿ. ತಾ-ರೋಣ
ಜಿ-ಗದಗ
3) ಉಮೇಶಪ್ಪ ಜಗನ್ನಾಥಪ್ಪ ಆಂಬ್ರದ
ಮು-ಬೆಟಗೇರಿ. ರಜಪೂತ ಓಣಿ
ತಾ. ಗದಗ. ಜಿ. ಗದಗ
4) ಗಣಪತಸಾ ರೇವಣಸಾ ಅರವಟಗಿ
ಮು-.ಬೆಟಗೇರಿ. ಮಜ್ಜಗಿ ಓಣಿ
ತಾ. ಗದಗ. ಜಿ. ಗದಗ
5) ಚನ್ನಪ್ಪ ವೀರಪ್ಪ ಅಂಗಡಿ
ಮು-ಅಡವಿಸೋಮಾಪುರ
ತಾ. ಗದಗ. ಜಿ. ಗದಗ
6) ಜಗನ್ನಾಥಪ್ಪಾ ಶಿವಪ್ಪ ಅಂಬ್ರದ
ಮು-ಕೆ.ಎಚ್.ಡಿ.ಸಿ.ನೇಕಾರ ಕಾಲನಿ ನರಸಾಪೂರ.
ತಾ. ಗದಗ. ಜಿ. ಗದಗ
7) ದೇವಕ್ಕ ಗುರುಬಸಪ್ಪ ಈಟಿ
ಮು-ಲಕ್ಕುಂಡಿ
ತಾ. ಗದಗ. ಜಿ. ಗದಗ
8) ನಾಗಪ್ಪ ಮಾರೆಪ್ಪ ದುರಗಮರ್ಗಿ
ಮು-ರಾಜೀವಗಾಂಧಿನಗರ
ಸುಡುಗಾಡಸಿದ್ದರ ಕಾಲನಿ. ಗದಗ
ತಾ. ಗದಗ. ಜಿ. ಗದಗ
9) ಫಕೀರಪ್ಪ ವಿರುಪಾಕ್ಷಪ್ಪ ಕೆಂಚಗೊಂಡಿ

ಮು-ಬೆಟಗೇರಿ. ಸಂಕಪ್ಪಜ್ಜನ ಮಠದ ಹತ್ತಿರ
ತಾ. ಗದಗ. ಜಿ. ಗದಗ
10) ಫಕೀರಪ್ಪ ಹನಮಪ್ಪ ತುರಾಯದ
ಮು-ಜಕ್ಕಲಿ. ತಾ-ರೋಣ
ಜಿ-ಗದಗ
11) ಪುಂಡಲೀಕಪ್ಪ ರಾಮಚಂದ್ರಪ್ಪ ಬಣ್ಣದ
ಮು-ಬೆಟಗೇರಿ ಪೆಂಡಾರಿಓಣಿ
ತಾ. ಗದಗ. ಜಿ. ಗದಗ
12) ಬಡೇಸಾಬ ಹುಚ್ಚುಸಾಬ ನದಾಫ್
ಮು-ಜಕ್ಕಲಿ ತಾ-ರೋಣ
ಜಿ-ಗದಗ
13) ಬಸಪ್ಪ ದುಡಮಪ್ಪ ಸರಲಾ
ಮು-ಬೆಟಗೇರಿ. ಜೂಜಗಾರ ಓಣಿ
ತಾ. ಗದಗ. ಜಿ. ಗದಗ
14) ಬಸವಂತಪ್ಪ ಸಂಗಪ್ಪ ಕರ್ಕಿಕಟ್ಟಿ
ಮು-ಬೆಳವಣಿಕೆ. ತಾ-ರೋಣ
ಜಿ-ಗದಗ
15) ಬಾಬುಸಾಬ ಹುಸೇನಸಾಬ ಯಮನೂರ
ಮು-ಬೆಟಗೇರಿ. ಹೊಸಗರಡಿ ಓಣಿ
ತಾ. ಗದಗ. ಜಿ. ಗದಗ
16) ಮಲ್ಲಿಕಾರ್ಜುನ ನಾಗಪ್ಪ ಪೂಜಾರ
ಮು-ಹಾತಲಗೇರಿ
ತಾ. ಗದಗ. ಜಿ. ಗದಗ
17) ಮಾರುತೆಪ್ಪ ಪರಮೇಶ್ವರಪ್ಪ ಹಿಂಡಿ
ಮು-ಬೆಟಗೇರಿ ಹೊಸಗರಡಿ ಓಣಿ.
ತಾ. ಗದಗ. ಜಿ. ಗದಗ
18) ಮಾರುತೆಪ್ಪ ಬಲವಂತಪ್ಪ ಭಜಂತ್ರಿ
ಬೆಟಗೇರಿ. ಭಜಂತ್ರಿಓಣಿ
ತಾ. ಗದಗ. ಜಿ. ಗದಗ
19) ಯಮನೂರಸಾಬ ಜಿಂದಿಸಾಬ ನದಾಫ್
ಮು-ಜಕ್ಕಲಿ. ತಾ-ರೋಣ
ಜಿ-ಗದಗ
20) ಯಲ್ಲಪ್ಪ ಮಾರೆಪ್ಪ ದುರಗಮರ್ಗಿ

ರಾಜೀವಗಾಂಧಿನಗರ-ಗದಗ
ತಾ. ಗದಗ. ಜಿ. ಗದಗ
21) ಯಲ್ಲಪ್ಪ ದುರಗಪ್ಪ ವಿಭೂತಿ
ರಾಜೀವಗಾಂಧಿನಗರ, ಗದಗ
ತಾ. ಗದಗ. ಜಿ. ಗದಗ
22) ಯಲ್ಲಪ್ಪ ಈರಪ್ಪ ತಾಳಿ
ಮು-ಬೆಳವಣಿಕೆ. ತಾ-ರೋಣ
ಜಿ-ಗದಗ
23) ರಾಮಣ್ಣ ಸಿದ್ದಪ್ಪ ಜೋಗೇರ
ಮು-ಮುಳಗುಂದ
ತಾ. ಗದಗ. ಜಿ. ಗದಗ
24) ರಾಮಣ್ಣ ನಾಗಪ್ಪ ಶೆಡ್ಡಿ
ಮು-ಬೆಟಗೇರಿ. ರಂಗಪ್ಪಜ್ಜನ ರಸ್ತೆ.
ತಾ. ಗದಗ. ಜಿ. ಗದಗ
25) ರಾಮಪ್ಪ ದ್ಯಾಮಪ್ಪ ಕೊರವರ
ಮು-ದೋಣಿ. ತಾ-ಮುಂಡರಗಿ
ತಾ. ಗದಗ. ಜಿ. ಗದಗ
26) ರಾಮಪ್ಪ ಲಕ್ಷ್ಮಪ್ಪ ಸಣ್ಣದಾಸರು (ಮೋಡಿಕಾರ್)
ರಾಜೀವಗಾಂಧಿನಗರ-ಗದಗ
ತಾ. ಗದಗ. ಜಿ. ಗದಗ
27) ರಾಮಪ್ಪ ಬಸಪ್ಪ ಕಡ್ಡಿ
ಮು-ಕೊಣ್ಣೂರ. ತಾ-ನರಗುಂದ
ಜಿ-ಗದಗ
28) ರಾಮಪ್ಪ ಹಾಮಪ್ಪ ಲಮಾಣಿ
ಮು-ಕಬಲಾಯತಕಟ್ಟಿ ತಾಂಡಾ
ಪೊ-ಅತ್ತಿಕಟ್ಟಿ
ತಾ. ಗದಗ. ಜಿ. ಗದಗ
29) ಲಕ್ಷ್ಮಪ್ಪ ವೀರಪ್ಪ ಗಡಾದ
ಮು-ಬೆಟಗೇರಿ. ಹೊಸಪೇಟೆ ಚೌಕ
ತಾ. ಗದಗ. ಜಿ. ಗದಗ
30) ಲಕ್ಷ್ಮವ್ವ ಗಿರಿಯಪ್ಪ ಗೌಳಿ
ಮು-ಲಕ್ಕುಂಡಿ
ತಾ. ಗದಗ. ಜಿ. ಗದಗ

31) ವೀರಪ್ಪ ಮಹದೇವಪ್ಪ ಹಿಂಜೆಡಿ
ಗಂಗಾಪುರಪೇಟೆ-ಗದಗ
ತಾ. ಗದಗ. ಜಿ. ಗದಗ

32) ವೀರಪ್ಪ ದುರಗಪ್ಪ ಗಡ್ಡದ
ರಾಜೀವಗಾಂಧಿನಗರ-ಗದಗ
ತಾ. ಗದಗ. ಜಿ. ಗದಗ

33) ವಿರುಪಾಕ್ಷಪ್ಪ ಬಸಪ್ಪ ಕೊಳ್ಳಿ
ಮು-ಮಾಳವಾಡ. ತಾ-ರೋಣ
ಜಿ-ಗದಗ

34) ವೀರಪ್ಪ ಕಾಳಪ್ಪ ಮನವಾಚಾರಿ
ಮು-ಕೊಣ್ಣೂರು. ತಾ-ನರಗುಂದ
ಜಿ-ಗದಗ

35) ವೆಂಕಣ್ಣ ನರಸಪ್ಪ ಕಾಮಾರ್ತಿ
ಮು-ಬೆಟಗೇರಿ. ನೇಕಾರ ಕಾಲನಿ
ತಾ. ಗದಗ. ಜಿ. ಗದಗ

36) ಶರಣಪ್ಪ ಹನಮಪ್ಪ ಕಬ್ಬೇರ
ಮು-ಜಕ್ಕಲಿ. ತಾಲೂಕ-ರೋಣ
ಜಿ-ಗದಗ

37) ಶರಣಪ್ಪ ವಿರುಪಾಕ್ಷಪ್ಪ ಭಜಂತ್ರಿ
ಮು-ಬೆಟಗೇರಿ, ಕನ್ಯಾಳ ಅಗಸಿ
ತಾ. ಗದಗ. ಜಿ. ಗದಗ


38) ಶೇಖಪ್ಪ ಹನಮಪ್ಪ ರಂಗಣ್ಣವರ
ಮು-ಜಕ್ಕಲಿ. ತಾ-ರೋಣ
ಜಿ-ಗದಗ

39) ಸಾಲವ್ವ ಹನಮಪ್ಪ ಲಮಾಣಿ
ಮು-ಕಬಲಾಯತಕಟ್ಟಿ ತಾಂಡಾ
ಅಂಚೆ-ಅತ್ತಿಕಟ್ಟಿ
ತಾ. ಗದಗ. ಜಿ. ಗದಗ

40) ಸುಬ್ಬವ್ವ ಭೀಮಸಿಂಗ ಕಾರಬಾರಿ
ಮು-ಕಬಲಾಯತಕಟ್ಟಿ ತಾಂಡಾ
ಪೊ-ಅತ್ತಿಕಟ್ಟಿ
ತಾ. ಗದಗ. ಜಿ. ಗದಗ

41) ಸುಲೋಚನಾ ವಿಶ್ವನಾಥ ಅರಸಿದ್ಧಿ

ಮು–ಲಕ್ಕುಂಡಿ
ತಾ. ಗದಗ. ಜಿ. ಗದಗ
42) ಹನಮಪ್ಪ ಭೀಮಪ್ಪ ಕರಿ
ಮು–ಲಕ್ಕುಂಡಿ
ತಾ. ಗದಗ. ಜಿ. ಗದಗ
43) ಹಸನಸಾಬ ಫಕೀರಸಾಬ ನದಾಫ್
ಮು–ಜಕ್ಕಲಿ ತಾ–ರೋಣ
ಜಿ–ಗದಗ
44) ಹನಮಪ್ಪ ಯಮನಪ್ಪ ರಂಗಣ್ಣವರ
ಮು–ಜಕ್ಕಲಿ ತಾ–ರೋಣ
ಜಿ–ಗದಗ
45) ಹನಮಪ್ಪ ಸತ್ಯಪ್ಪ ಮುರ್ಲಾಪೂರ
ಮು–ಹಾತಲಗೇರಿ
ತಾ. ಗದಗ. ಜಿ. ಗದಗ
46) ಹನಮಪ್ಪ ರಂಗಪ್ಪ ಕೆಳಗಡಿ
ಮು–ಜಕ್ಕಲಿ ತಾ–ರೋಣ
ಜಿ–ಗದಗ
47) ಹುಚ್ಚಪ್ಪ ನಾಗಪ್ಪ ಗೋಟೂರ
ಮು–ಬೆಟಗೇರಿ. ಹೊಸಪೇಟೆ ಚೌಕ್
ತಾ. ಗದಗ. ಜಿ. ಗದಗ
48) ಹುಲಗಪ್ಪ ಮುದುಕಪ್ಪ ಭಜಂತ್ರಿ
ಮು–ಮುಂಡರಗಿ
ತಾ. ಗದಗ. ಜಿ. ಗದಗ
49) ಹುಸೇನಸಾಬ ರಾಜಾಸಾಬ ಬಾಲೇಸಾಬನವರ
ಮು–ಜಕ್ಕಲಿ ತಾ–ರೋಣ
ಜಿ–ಗದಗ
50) ಹುಲಗಪ್ಪ ಗಂಗಪ್ಪ ಸಣ್ಣದಾಸರು
ಮು–ರಾಜೀವಗಾಂಧಿನಗರ–ಗದಗ
ತಾ. ಗದಗ. ಜಿ. ಗದಗ



ಜಾನಪದದ ಸರ್ವಾಂಗೀಣವೂ, ತಲಸ್ಪರ್ಶಿಯೂ ಆದ ಅಧ್ಯಯನ ಇಂದಿನ ತುರ್ತು. ಬದಲಾದ ಕಾಲಮಾನ, ವಸಾಹತೋತ್ತರ ಜಿಜ್ಞಾಸೆ, ಆಧುನಿಕತೆಗಳ ಆಯಾಮಗಳನ್ನು ಮೀರಿದ ದೇಶಿ ಹುಡುಕಾಟ ಹಿಂದೆಂದಿಗಿಂತಲೂ ಇಂದು ಪ್ರಸ್ತುತ.

ಆ ನೆಲೆಯಲ್ಲಿ ಅಕಾಡೆಮಿ ಭಿನ್ನ ಆಲೋಚನೆಗಳಿಂದ ತನ್ನನ್ನು ಪುನಃ ರೂಪಿಸಿಕೊಳ್ಳುತ್ತಿದೆ. ಗ್ರಾಮೀಣ ಜಾನಪದದ ಬೆನ್ನೆಲುಬಾದ ಕಲಾವಿದರಿಗೆ ವೇದಿಕೆಗಳನ್ನು ಕಲ್ಪಿಸಿಕೊಡುವುದರ ಜೊತೆ ಜಾನಪದದ ಬೌದ್ಧಿಕ ಅಸ್ತಿತ್ವಕ್ಕೂ ಯತ್ನಿಸಲಾಗಿದೆ. ಆ ದಿಕ್ಕಿನಲ್ಲಿ ಅಕಾಡೆಮಿ ಹಮ್ಮಿಕೊಳ್ಳುವ ವಿಚಾರಸಂಕಿರಣಗಳು ಗಮನಾರ್ಹ. ಆಗಾಗಿ ಅಕಾಡೆಮಿ ಅವ್ಯಾಹತವಾಗಿ ಕ್ರಿಯಾಶೀಲವಾಗಿದೆ.

30 ಜಿಲ್ಲೆಗಳ ಕಲಾವಿದರ ಪರಿಚಯದ ಮಾಲಿಕೆಗಳು ಅಕಾಡೆಮಿಯ ಸ್ತುತ್ಯ ಪ್ರಕಟಣೆಗಳಾಗಿವೆ. ದೇಶೀಯತೆಯ ವಕ್ತಾರರಾದ, ಸಾಂಸ್ಕೃತಿಕ ರಾಯಭಾರಿಗಳಾದ ಈ ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಉದ್ದೇಶದ ಈ ಮಾಲಿಕೆ ಜನಪದರಿಗೆ ಹಾಗೂ ಜನಪದಕ್ಕೆ ನಿಜವಾಗಿಯೂ ಸಲ್ಲಿಸಿದ ಗೌರವವಾಗಿದೆ.

**ಡಾ. ಎಸ್. ಪ್ರಸಾದಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

